ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಕಟಣೆ

Azim Premji University

# ಪಾಠಶಾಲಾ

## ಒಳಗು - ಹೊರಗು

ಸಂಚಿಕೆ 23 | ಮಾರ್ಚ್ 2025 | ತ್ರೈಮಾಸಿಕ



# ಪಾಠಶಾಲಾ

## ಒಳಗು - ಹೊರಗು

**ಮಾರ್ಚ್ 2025 | ಸಂಚಿಕೆ 23**



## ಸಂಪಾದಕರ ತಂಡ

- **ಪ್ರತಿಭಾ ಕಟಿಯಾರ್ (ಮುಖ್ಯ ಸಂಪಾದಕರು)**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಆಮ್ವಾಲಾ ತರಲಾ, ಸಹಸ್ರಧಾರಾ ರಸ್ತೆ
  ಡೆಹರಾಡೂನ್, ಉತ್ತರಾಖಂಡ್ - 248001
  pratibha.katiyar@azimpremjifoundation.org

- **ಶೆಫಾಲಿ ತ್ರಿಪಾಠೀ ಮೆಹ್ತಾ (ಸಹ ಸಂಪಾದಕರು)**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಸರ್ವೆ ನಂ. 66, ಬೂರುಗುಂಟೆ ಗ್ರಾಮ
  ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
  ಬೆಂಗಳೂರು - 562125
  shefali.mehta@apu.edu.in

- **ಸಂಪಾದಕರ ಕಛೇರಿ**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಸರ್ವೆ ನಂ. 66, ಬೂರುಗುಂಟೆ ಗ್ರಾಮ
  ಚಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
  ಬೆಂಗಳೂರು - 562125
  publications@apu.edu.in

- **ಗೌತಮ್ ಪಾಂಡೆ**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಭೋಪಾಲ್, ಮಧ್ಯಪ್ರದೇಶ
  gautam@azimpremjifoundation.org

- **ಸುನೀಲ್ ಕುಮಾರ್ ಸಾಹ್**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ರಾಯ್ಪುರ, ಛತ್ತೀಸ್ಗಢ
  sunil@azimpremjifoundation.org

- **ಜಗಮೋಹನ್ ಸಿಂಗ್ ಕಠೈತ್**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಡೆಹರಾಡೂನ್, ಉತ್ತರಾಖಂಡ
  jagmohan@azimpremjifoundation.org

- **ದೀಪಕ್ ಕುಮಾರ್ ರಾಯ್**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಭೋಪಾಲ್, ಮಧ್ಯಪ್ರದೇಶ
  deepak.rai@azimpremjifoundation.org

- **ಸಿದ್ದಾರ್ಥ ಕುಮಾರ್ ಜೈನ್**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಭೋಪಾಲ್, ಮಧ್ಯ ಪ್ರದೇಶ
  siddharth.jain@azimpremjifoundation.org

- **ರಜನಿ ದ್ವಿವೇದಿ**
  ಅಸ್ಸಾಂ ವ್ಯಾಲಿ ಸ್ಕೂಲ್
  ತೇಜ್ಪುರ, ಅಸ್ಸಾಂ
  rajni.dwivedi@azimpremjifoundation.org

- **ಕಮಲೇಶ್ ಚಂದ್ರ ಜೋಶಿ**
  ಅಜೀಂ ಪ್ರೇಮ್‌ಜಿ ಫೌಂಡೇಷನ್
  ಉಧಮ್ ಸಿಂಗ್ ನಗರ, ಉತ್ತರಾಖಂಡ
  kamlesh@azimpremjifoundation.org

- **ರಾಘವೇಂದ್ರ ಹೇರ್ಳೆ ಜಿ.**
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಬೆಂಗಳೂರು
  Raghavendra.herle@azimpremjifoundation.org

- **ಅನುವಾದ ಸಂಪಾದಕರು**
  ಮಧುಕರ ಎಸ್ ಪುಟ್ಟಿ (ಕನ್ನಡ)
  ರಾಜೇಶ್ ಉತ್ಸಾಹೀ (ಹಿಂದಿ)
  ಶೆಫಾಲಿ ತ್ರಿಪಾಠೀ ಮೆಹ್ತಾ (ಇಂಗ್ಲಿಷ್)
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಬೆಂಗಳೂರು

- **ಪ್ರಕಾಶನ ತಂಡ**
  ಮೀರಾ ಪ್ರಭು
  ಶಹನಾಜ್ ಬೇಗಂ
  ಲೋಕರಾಮ್ ವಿ. ಜಿ.
  ಸಂಬಿತ್ ಮಹಾಪಾತ್ರ
  ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
  ಬೆಂಗಳೂರು

- **ವಿನ್ಯಾಸ**
  ಪುಟವಿನ್ಯಾಸ (ಹಿಂದಿ): ಗಣೇಶ್ ಗ್ರಾಫಿಕ್ಸ್, ಭೋಪಾಲ, ಮಧ್ಯ ಪ್ರದೇಶ
  ಪುಟವಿನ್ಯಾಸ (ಕನ್ನಡ ಮತ್ತು ಇಂಗ್ಲಿಷ್): ಎಮ್‌ಎಪಿ ಸಿಸ್ಟಮ್ಸ್, ಬೆಂಗಳೂರು

- **ಮುದ್ರಣ**
  ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು



ಪಾಠಶಾಲಾ ಒಳಗು-ಹೊರಗು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಪ್ರಕಟವಾಗುವ, ಪ್ರಾಥಮಿಕ ಶಿಕ್ಷಣವನ್ನು ಕುರಿತಾದ ಒಂದು ತ್ರೈಮಾಸಿಕ ಪತ್ರಿಕೆ. ಈ ಪತ್ರಿಕೆಯು ದೇಶದಾದ್ಯಂತ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮತ್ತು ಹಿರಿಯ ಪ್ರಾಥಮಿಕ ಹಂತಗಳ ಸರ್ಕಾರಿ ಶಾಲಾ ಶಿಕ್ಷಕರಿಗೆ ಅಭ್ಯಾಸ ಆಧಾರಿತ ಲೇಖನಗಳನ್ನು ಒದಗಿಸಲು ಪ್ರಯತ್ನಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ 2020, ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಬುನಾದಿ ಹಂತಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳೊಂದಿಗೆ ಹೊಂದಿಕೊಂಡಿರುವ ಪರಿಣಾಮಕಾರಿ ಬೋಧನಾ ವಿಧಾನಗಳ ಮೇಲೆ ಬೆಳಕು ಚೆಲ್ಲುವ ದೃಷ್ಟಿಕೋನಗಳು, ಅನುಭವಗಳು, ಪರ್ಯಾಲೋಚನೆಗಳು ಮತ್ತು ತರಗತಿ ಪ್ರಕ್ರಿಯೆಗಳನ್ನು ಶಿಕ್ಷಕರು ಹಂಚಿಕೊಳ್ಳಲು ಇರುವ ಒಂದು ವೇದಿಕೆ ಇದು. ಈ ಪತ್ರಿಕೆಯು ಮೊದಲು ಹಿಂದಿಯಲ್ಲಿ ಪ್ರಕಟಗೊಂಡು, ನಂತರ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದಿಸಲ್ಪಡುತ್ತದೆ.

# ಸಂಪಾದಕೀಯ

ಶಿಕ್ಷಣವನ್ನು ಪ್ರಕ್ರಿಯೆ ಮತ್ತು ಫಲಿತಗಳಾಗಿ ನೋಡಬಹುದಾದರೂ, ಶೈಕ್ಷಣಿಕ ಸಾಧನೆಯನ್ನು ಕೇವಲ ಅಂಕಗಳು ಅಥವಾ ಗ್ರೇಡ್‌ಗಳಿಂದ ಅಳೆಯಲು ಸಾಧ್ಯವಿಲ್ಲ. ಶೈಕ್ಷಣಿಕ ಸಾಧನೆಯಲ್ಲಿ ಮಕ್ಕಳು ತಮ್ಮ ಸಾಮರ್ಥ್ಯಗಳು ಮತ್ತು ಆಸಕ್ತಿಗಳಿಗೆ ತಕ್ಕಂತೆ ಕಲಿಯುವುದು ಸೇರಿದೆ. ಉತ್ತಮ ಶೈಕ್ಷಣಿಕ ಸಾಧನೆಗೆ, ಸಾಮಾಜಿಕ ಮತ್ತು ಮಾನವೀಯ ಮೌಲ್ಯಗಳು ಒಳಗೊಂಡಿರುವ ಶಿಕ್ಷಣ, ಮತ್ತು ಅತ್ಯುತ್ತಮ ಬೋಧನಾ ವಿಧಾನಗಳು, ಉತ್ತಮ ಗುಣಮಟ್ಟದ ಪಠ್ಯಗಳು ಅವಶ್ಯಕ. ಶಿಕ್ಷಣದಲ್ಲಿ ಸಫಲರಾಗುವುದು ಎಂದರೆ ಏನರ್ಥ ಎಂಬುದನ್ನು ಶಿಕ್ಷಕರು, ಪೋಷಕರು ಮತ್ತು ಜೊತೆಗೆ ಸಮಾಜವೂ ಕೂಡ ಅರಿತುಕೊಳ್ಳಬೇಕಿದೆ. ಇಂತಹ ಶಿಕ್ಷಣವು ಸಾಂವಿಧಾನಿಕ ಮೌಲ್ಯಗಳ ಅಚ್ಚಿನಲ್ಲಿ ರೂಪುಗೊಂಡ ಶಿಕ್ಷಣದ ಉದ್ದೇಶಗಳಿಂದ ನಿರ್ಧರಿಸಲ್ಪಟ್ಟಿರುತ್ತದೆ.

ಅರಿತೋ ಅರಿಯದೆಯೋ, ಮೌಲ್ಯಾಂಕನ ಎಂಬ ಸೂಕ್ಷ್ಮ ಮತ್ತು ಸೃಜನಶೀಲ ಪ್ರಕ್ರಿಯೆಯು ಕ್ರಮೇಣ ಪರೀಕ್ಷೆ, ಫಲಿತಾಂಶ, ಭಯ ಮತ್ತು ಸ್ಪರ್ಧೆಯಾಗಿ ಬದಲಾಗುತ್ತಿದೆ ಎಂಬುದು ಕಳವಳಕಾರಿ ವಿಷಯವಾಗಿದೆ. ಸಾಮಾನ್ಯವಾಗಿ, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಎಲ್ಲರೂ ಮಾರ್ಚ್ ತಿಂಗಳಿನಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಗಳು ಹಾಗೂ ಅದರ ಫಲಿತಾಂಶಗಳ ಚಕ್ರವ್ಯೂಹದಲ್ಲಿ ಸಿಲುಕಿರುವ ಸಮಯದಲ್ಲಿ, ಈ ಮುಖ್ಯವಾದ ವಿಷಯವನ್ನು ಕುರಿತು ಚರ್ಚಿಸುವುದು ಸೂಕ್ತ.

ಒಂದು ವರ್ಷದ ಅವಧಿಯಲ್ಲಿ ಮಕ್ಕಳು ಎಷ್ಟು ಕಲಿತಿದ್ದಾರೆ ಮತ್ತು ಅರ್ಥ ಮಾಡಿಕೊಂಡಿದ್ದಾರೆ ಎಂದು ತಿಳಿಯುವುದೇ ಮೌಲ್ಯಾಂಕನದ ಉದ್ದೇಶ. ಸೂಚಿತ ಕಲಿಕಾ ಫಲಗಳನ್ನು ಆಧಾರವಾಗಿಟ್ಟುಕೊಂಡು ನಡೆಯುವ ಈ ಪ್ರಕ್ರಿಯೆಯು, ಕಲಿಕೆಯಲ್ಲಿರುವ ಅಂತರಗಳನ್ನೂ ಗುರುತಿಸಲು ಸಹಾಯ ಮಾಡುತ್ತದೆ. ಮಕ್ಕಳು ಏನನ್ನು ಕಲಿತರೋ ಮತ್ತು ಅರ್ಥ ಮಾಡಿಕೊಂಡರೋ ಅದನ್ನು ಉತ್ಸವದಂತೆ ಆಚರಿಸಬೇಕಿತ್ತು ಮತ್ತು ಕಲಿಯಲು ಏನು ಬಾಕಿ ಉಳಿದಿದೆಯೋ ಅದು ಮುಂದಿನ ಹಂತಕ್ಕೆ ತಯಾರಿ ಆಗಿರಬೇಕಿತ್ತು. ಅನೇಕ ಶಾಲೆಗಳಲ್ಲಿ ಶಿಕ್ಷಕರ ಸ್ವಯಂಪ್ರೇರಿತ ಪ್ರಯತ್ನಗಳಿಂದಾಗಿ ಹೀಗೆ ನಡೆಯುತ್ತಲೂ ಇದೆ.

ಅನೇಕ ಶಿಕ್ಷಕರು ಸ್ವಯಂಪ್ರೇರಣೆಯಿಂದ ಮತ್ತು ಮಕ್ಕಳ ಕುರಿತು ತಮ್ಮ ದಾಯಿತ್ವದ ಪ್ರಜ್ಞೆಯಿಂದಾಗಿ ಯಾವಾಗಲೂ ಹೊಸ ಪ್ರಯೋಗವನ್ನು ಮಾಡುತ್ತಲೇ ಇರುತ್ತಾರೆ. ಪ್ರತಿ ಮಗುವಿನ ಸಾಮಾಜಿಕ, ಆರ್ಥಿಕ ಮತ್ತು ಭಾವನಾತ್ಮಕ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುತ್ತಲೇ ಆ ಮಗುವಿನ ಪ್ರಗತಿ-ಪತ್ರವನ್ನು (progress card) ಶಿಕ್ಷಕರು ತಮ್ಮ ಮನಸ್ಸಿನಲ್ಲೇ ದಾಖಲು ಮಾಡಿಕೊಳ್ಳುತ್ತಿರುತ್ತಾರೆ. ಅಲ್ಲದೇ ಅದು ಪ್ರತಿದಿನ ಪರಿಷ್ಕರಣೆಯಾಗುತ್ತಿರುತ್ತದೆ. ಇದನ್ನು ಆಧಾರವಾಗಿಟ್ಟುಕೊಂಡು ಶಿಕ್ಷಕರು ತಮ್ಮ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಾರೆ ಮತ್ತು ಅವುಗಳಲ್ಲಿ ಬದಲಾವಣೆ ಮಾಡುತ್ತಿರುತ್ತಾರೆ. ಅನೇಕ ರಾಜ್ಯಗಳಲ್ಲಿ, ಶಿಕ್ಷಣ ಇಲಾಖೆಗಳು ಸಹ ಶಿಕ್ಷಕರ ಈ ಜಿಜ್ಞಾಸೆಯನ್ನು ಅರ್ಥ ಮಾಡಿಕೊಳ್ಳಲಾರಂಭಿಸಿವೆ ಮತ್ತು ಅವರ ಪ್ರಯತ್ನಗಳಲ್ಲಿ ಪಾಲ್ಗೊಂಡು ಕೈಜೋಡಿಸುತ್ತಲೂ ಇವೆ. ಈ ತಿಳಿವಳಿಕೆಯನ್ನು ಸಾಮಾಜಿಕ ತಿಳಿವಳಿಕೆಯಾಗಿ ವಿಸ್ತರಿಸಲು ಹೊಸ ಪ್ರಯತ್ನಗಳ ಅಗತ್ಯವಿದೆ. ಇದರಿಂದ ಕಲಿಕೆಯು ಮೌಲ್ಯಾಂಕನದ ಭಯದಿಂದ ಮುಕ್ತವಾಗುತ್ತದೆ ಮತ್ತು ಕಲಿಯುವ ಖುಷಿ ಹಾಗೂ ಸೃಜನಶೀಲತೆಗೆ ಮೌಲ್ಯಾಂಕನ ಒಂದು ಅಡ್ಡಿಯಾಗುವುದಿಲ್ಲ.

'ಪಾಠಶಾಲಾ ಒಳಗು - ಹೊರಗು' ಪತ್ರಿಕೆಯ ಈ ಸಂಚಿಕೆಯಲ್ಲಿ ಕೆಲವು ಪ್ರಮುಖ ವಿಮರ್ಶೆಗಳನ್ನು ಮತ್ತು ಕಾರ್ಯವಿಧಾನಗಳನ್ನು ಚರ್ಚಿಸಲಾಗಿದೆ. 'ಪಾಠಶಾಲಾ' ಶಾಲೆಗಳಲ್ಲಿ ಆದ ಬುನಾದಿ ಮಟ್ಟದ ಅನುಭವಗಳಿಗೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿರುವ ಶಾಲಾ ಶಿಕ್ಷಣ ಕೇಂದ್ರಿತ ಪತ್ರಿಕೆ ಎನ್ನುವುದು ನಿಮಗೆ ತಿಳಿದಿದೆ. ಹಾಗಾಗಿ ಈ ಸಂಚಿಕೆಯಲ್ಲಿ ನೀವು ಶಿಕ್ಷಕರ ಅನುಭವಗಳನ್ನು ಮತ್ತು ಅದರಿಂದ ರೂಪಿಸಿದ ಕೆಲವು ಬೋಧನಾ ಯೋಜನೆಗಳನ್ನು ಓದುತ್ತೀರಿ. ಇಷ್ಟಲ್ಲದೆ ಈ ಪತ್ರಿಕೆಯಲ್ಲಿ 'ಶಿಕ್ಷಕರ ದಿನಚರಿಯಿಂದ', 'ಪುಸ್ತಕಗಳೊಂದಿಗೆ ಸ್ನೇಹ', 'ಭರವಸೆ ಮೂಡಿಸುವ ಶಿಕ್ಷಕರು' ಮತ್ತು 'ಚಟುವಟಿಕೆ ಸಮಯ'ದಂತಹ ಸ್ಥಿರ ಅಂಕಣಗಳೂ ಇವೆ. ಇವುಗಳನ್ನು ನಾವು ಹಿಂದಿನ ಸಂಚಿಕೆಯಿಂದ ಪ್ರಾರಂಭಿಸಿದ್ದೇವೆ. ಇನ್ನು ನಿಮ್ಮ ಪತ್ರಗಳ ವಿಶೇಷ ಅಂಕಣ ಮತ್ತು 'ಸಂಪಾದಕೀಯ' ಎಂಬ ವಿಭಾಗಗಳಂತೂ ಹೇಗೂ ಇದ್ದೇ ಇರುತ್ತವೆ.

ಕಳೆದ 22ನೇ ಸಂಚಿಕೆಯು ಸಮನ್ವಯ ಶಿಕ್ಷಣ ಕುರಿತಾದ ವಿಶೇಷಾಂಕವಾಗಿತ್ತು. ಈ ಸಂಚಿಕೆಯನ್ನು ನೀವು ಆಪ್ತವಾಗಿ ಸ್ವೀಕರಿಸಿದ್ದಕ್ಕಾಗಿ ಮತ್ತು ಆ ಸಂಚಿಕೆಯಲ್ಲಿ ಚರ್ಚಿಸಿದ ವಿಷಯವಸ್ತುಗಳ ಉಪಯುಕ್ತತೆಯನ್ನು ಬೆಂಬಲಿಸಿದ್ದಕ್ಕಾಗಿ ನಾವು ನಿಮಗೆ ಕೃತಜ್ಞರಾಗಿದ್ದೇವೆ. ಈ ಸಂಚಿಕೆಯಲ್ಲಿರುವ ಲೇಖನಗಳು ಮತ್ತು ಅಂಕಣಗಳು ತರಗತಿಯಲ್ಲಿನ

ಬೋಧನೆ, ಶಾಲಾ ಪ್ರಕ್ರಿಯೆಗಳು ಮತ್ತು ಶಿಕ್ಷಣದ ತಿಳುವಳಿಕೆಯನ್ನು ಇನ್ನಷ್ಟು ಸುಧಾರಿಸುವಲ್ಲಿ ಸಹಕರಿಸುತ್ತವೆ ಎಂದು ಆಶಿಸುತ್ತೇವೆ. ನಿಮ್ಮ ಎಲ್ಲಾ ಪತ್ರಗಳು ಮತ್ತು ಭರಪೂರ ಪ್ರತಿಕ್ರಿಯೆಗಳು ನಮ್ಮ ಶಕ್ತಿಯನ್ನು ಹೆಚ್ಚಿಸಿವೆ. ನಿಮಗಿರುವ ಅಗತ್ಯಗಳಿಗೆ ಅನುಗುಣವಾಗಿ, ಉಪಯುಕ್ತ ವಿಷಯವಸ್ತುಗಳನ್ನು ಒದಗಿಸಲು ಮತ್ತು ಶಿಕ್ಷಕರ ಅನುಭವಗಳನ್ನು ಹಂಚಿಕೊಳ್ಳಲು ಈ ಪತ್ರಿಕೆಯನ್ನು ಒಂದು ವೇದಿಕೆಯಾಗಿ ಪರಿಷ್ಕರಿಸಿ ಅರಳಿಸುವಲ್ಲಿ ನಿಮ್ಮೆಲ್ಲರ ಸಹಕಾರ ಎಂದಿಗೂ ಇತ್ತು. ಅಂತೆಯೇ ಇನ್ನು ಮುಂದೆಯೂ ಸಹ ನಿರೀಕ್ಷಿಸುತ್ತೇವೆ.

ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳ ಅವಧಿಯಲ್ಲಿನ ಶಾಲೆಗಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ 23ನೇ ಸಂಚಿಕೆಯನ್ನು ರೂಪಿಸಲು ಪ್ರಯತ್ನಿಸಲಾಗಿದೆ. ಈ ಸಂಚಿಕೆಯಲ್ಲಿ, ಮೌಲ್ಯಾಂಕನವನ್ನು ನೋಡುವ ಬಗೆ ಹೇಗೆ ಎಂಬುದರ ಕುರಿತು ಸ್ಪಷ್ಟತೆಯನ್ನು ನೀಡುವ ಕೆಲವು ಲೇಖನಗಳನ್ನು ನೀವು ಕಾಣಬಹುದು.

ಬೋಧನಾ ವಿಧಾನಗಳಲ್ಲಿ ಮೌಲ್ಯಾಂಕನವನ್ನು ಹೇಗೆ ಬಳಸುವುದು, ಮಕ್ಕಳ ಕಲಿಕೆಗೆ ನೆರವಾಗುವಂತೆ ಬೇಸಿಗೆ ಶಿಬಿರಗಳನ್ನು ಹೇಗೆ ಆಯೋಜಿಸುವುದು, ವಾರ್ಷಿಕ ಪರೀಕ್ಷೆಗಳ ಸಮಯದಲ್ಲಿ ನಿಗದಿಪಡಿಸಿದ ಕಲಿಕೆಯ ಫಲಿತಾಂಶಗಳಿಗಿಂತ ಸ್ವಲ್ಪ ಹಿಂದೆ ಉಳಿದಿರುವ ಮಕ್ಕಳಿಗಾಗಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಹೇಗೆ ನೆರವಾಗುವುದು, ಇವೆಲ್ಲವುಗಳಿಗಾಗಿ ಯಾವ ಯೋಜನೆ ರೂಪಿಸುವುದು, ಯಾವ ತರಹ ಅವರನ್ನು ಒಳಗೊಳ್ಳುವುದು ಇತ್ಯಾದಿಗಳ ಬಗ್ಗೆ ಅನುಭವದಿಂದ ಬಂದಿರುವ ಲೇಖನಗಳೂ ಸಹ ಇದರಲ್ಲಿ ಸೇರಿವೆ.

ಇದಲ್ಲದೆ ಈ ಸಂಚಿಕೆಯಲ್ಲಿ ಗಣಿತ, ಹಿಂದಿ, ವಿಜ್ಞಾನ, ಆರಂಭಿಕ ಬಾಲ್ಯ ಶಿಕ್ಷಣ(Early Childhood Education-ಇಸಿಇ) ಕುರಿತ ಅನುಭವ ಆಧಾರಿತ ಲೇಖನಗಳಿವೆ. 'ಭರವಸೆ ಮೂಡಿಸುವ ಶಿಕ್ಷಕರು' ಎಂಬ ಅಂಕಣದಲ್ಲಿ, ಈ ಬಾರಿ ನೀವು ಕರ್ನಾಟಕದ ಶಿಕ್ಷಕರಾದ ವಿಶ್ವನಾಥ್ ಗುಂಡಿಗೆರೆ ಅವರ ಕೆಲವು ಅನುಭವಗಳನ್ನು ಮತ್ತು ಅವರ ಹೊಸ ಕಾರ್ಯವಿಧಾನಗಳು ಮಕ್ಕಳ ಕಲಿಕೆಯನ್ನು ಹೇಗೆ ಉತ್ತಮಗೊಳಿಸಿದವು ಎಂಬುದನ್ನು ಓದುತ್ತೀರಿ. 'ಶಿಕ್ಷಕರ ದಿನಚರಿಯಿಂದ' ಎಂಬ ಅಂಕಣದಲ್ಲಿ, ಈ ಬಾರಿ ಉತ್ತರಪ್ರದೇಶ, ಬಿಹಾರ, ರಾಜಸ್ಥಾನ ಮತ್ತು ಉತ್ತರಾಖಂಡದ ಕೆಲವು ಶಿಕ್ಷಕರ ತರಗತಿ ಆಧಾರಿತ ಅನುಭವಗಳ ವಿವರವು ನಿಮಗೆ ಅವಶ್ಯಕ ಮತ್ತು ಉಪಯುಕ್ತವಾಗಿದೆ ಎಂದುಕೊಂಡಿದ್ದೇವೆ. ಈ ಬಾರಿ 'ಪುಸ್ತಕಗಳೊಂದಿಗೆ ಸ್ನೇಹ' ವಿಭಾಗದಲ್ಲಿ ನೀವು 'ಗಾಂವ್ ಕಾ ಬಚ್ಚಾ' ಮತ್ತು 'ಲರ್ನಿಂಗ್ ಥ್ರೂ ಆರ್ಟ್' ಎಂಬ ಪುಸ್ತಕಗಳೊಂದಿಗೆ ಸ್ನೇಹ ಮಾಡುವಿರಂತೆ. 'ಗಾಂವ್ ಕಾ ಬಚ್ಚಾ' ಒಂದು ಕಥೆ ಪುಸ್ತಕವಾಗಿದ್ದರೆ, 'ಲರ್ನಿಂಗ್ ಥ್ರೂ ಆರ್ಟ್' ಎಂಬುದು ಪಾಠ ಮಾಡುವ ಸಮಯದಲ್ಲಿ ಅನುಸರಿಸುವ ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿದೆ.

'ಚಟುವಟಿಕೆ ಸಮಯ' ಅಂಕಣದಲ್ಲಿ ಈ ಬಾರಿಯೂ ಚಟುವಟಿಕೆಗಳಿವೆ. ಈ ಚಟುವಟಿಕೆಗಳನ್ನು ನೀವು, ಮಕ್ಕಳು ಇಬ್ಬರೂ ಆನಂದಿಸಬಹುದು. ಕಲಿಕೆಯು ಇದರ ಜೊತೆಗಂತೂ ನಡೆದೇ ಇರುತ್ತದೆ. 'ಸಂಪಾದಕರಿಗೆ ಪತ್ರ' ಅಂಕಣಕ್ಕೆ ಪತ್ರಗಳ ಮೂಲಕ ಹರಿದು ಬರುತ್ತಿರುವ ನಿಮ್ಮ ಪ್ರೀತಿಗೆ ನಾವು ಬಹಳವೇ ಆಭಾರಿಯಾಗಿದ್ದೇವೆ.

ಪರಿಣತ ಶಿಕ್ಷಕರ ಒಳನೋಟಗಳನ್ನು ಹಂಚಿಕೊಳ್ಳುವ ಮತ್ತು ಕಾಪಿಡುವ ಉದ್ದೇಶದ ಈ ಪತ್ರಿಕೆಗೆ ನಿಮ್ಮ ತರಗತಿ ಆಧಾರಿತ ಅನುಭವಗಳನ್ನುಳ್ಳ ಲೇಖನಗಳ ಜೊತೆಗೆ ಈ ಆವೃತ್ತಿಯ ಬಗ್ಗೆ ನಿಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಕೂಡಾ ಹಂಚಿಕೊಳ್ಳಬೇಕೆಂದು ವಿನಂತಿಸುತ್ತಿದ್ದೇವೆ.

ಓದುತ್ತಿರಿ ಮತ್ತು ಸಂಪರ್ಕದಲ್ಲಿರಿ.

ಶುಭ ಹಾರೈಕೆಗಳೊಂದಿಗೆ,

ಪ್ರತಿಭಾ ಕಟಿಯಾರ್

ಪ್ರಧಾನ ಸಂಪಾದಕರು

ಅನುವಾದ: ಆಶಾ ಸಿಂಗ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಪರಿವಿಡಿ


ಸಂಪಾದಕೀಯ

1. **ಉತ್ತಮ ಕಲಿಕೆಗೆ ಸಜ್ಜುಗೊಳಿಸುವ ಮೌಲ್ಯಾಂಕನ** 7
   ಕೈಲಾಶ್ ಚಂದ್ರ ಕಾಂಡ್‌ಪಾಲ್

2. **ಉತ್ತರಪತ್ರಿಕೆಗಳ ಅಧ್ಯಯನದ  ಮೂಲಕ ಹೊಸ ಶೈಕ್ಷಣಿಕ ಅವಧಿಗೆ ಸಿದ್ಧತೆ** 10
   ಜಗಮೋಹನ್ ಸಿಂಗ್ ಕಠೈತ್

3. **ಬೇಸಿಗೆ ಶಿಬಿರಗಳು ಮತ್ತು ರಜೆಯ ಸಮಯದಲ್ಲಿ ಬೋಧನೆ-ಕಲಿಕೆ** 14
   ಶೋಭನ್ ಸಿಂಗ್ ನೇಗಿ

4. **ವಿದ್ಯಾರ್ಥಿಗಳ ಕಲಿಕೆಯ ಮೇಲೆ ಬೇಸಿಗೆ ಶಿಬಿರಗಳ ಪರಿಣಾಮ** 18
   ಮುನೀರ್

5. **ವಿದ್ಯಾರ್ಥಿಗಳ ಮನೋಸ್ಥೈರ್ಯ ಮತ್ತು ಕಲಿಕೆ:<br>ಶಿಕ್ಷಕರ ದೃಷ್ಟಿಕೋನ** 23
   ರಾಜು ಪಟೇಲ್

6. **ತರಗತಿಯಲ್ಲಿ ಪಾತ್ರಾಭಿನಯದ ಮೂಲಕ ಕಲಿಕೆ** 26
   ಆಶಾ ಸಿಂಗ್

7. **ವಿಜ್ಞಾನದಲ್ಲಿ ಮಕ್ಕಳ ಕುತೂಹಲವನ್ನು ಬೆಳೆಸುವುದು** 30
   ಅಮೃತಾ ಮಾಸಿಹ್

8. **ಗಣಿತದ ಕುರಿತು ಬಹು-ಸಂವೇದಿ ದೃಷ್ಟಿಕೋನ** 34
   ಸೋನಿಯಾ ಕುಂದು

9. **ಆರಂಭಿಕ ವರ್ಷಗಳಲ್ಲಿ ಪೋಷಕರ ಪಾತ್ರ** 38
   ಅಮೃತಾ ಮುರಳಿ

10. **ಎಲ್ಲ ಮಕ್ಕಳಿಗೂ ಕಲಿಯಲು ಸಮಾನ ಅವಕಾಶವಿರಬೇಕು** 42
    ಛೋಟೆ ಲಾಲ್ ತನ್ವರ್

# ಪರಿವಿಡಿ

**ಅಂಕಣಗಳು**

**11. ಶಿಕ್ಷಕರ ದಿನಚರಿಯಿಂದ** 45
ಜೈ ಶೇಖರ್
ಮೀನಾಕ್ಷಿ ಗೌರ್
ನಂದಿನಿ ಕುಮಾರಿ
ಉಪಮಾ ರಾಣಿ

**12. ಭರವಸೆ ಮೂಡಿಸುವ ಶಿಕ್ಷಕರು - ವಿಶ್ವನಾಥ್ ಜಿ ಎಸ್** 50
ರಾಘವೇಂದ್ರ ಹೇರ್ಳೆ

**13. ಪುಸ್ತಕಗಳೊಂದಿಗೆ ಸ್ನೇಹ** 53
ಅನಿತಾ ಧ್ಯಾನಿ
ವಿಜಯ್ ರವಿಕುಮಾರ್

**14. ಚಟುವಟಿಕೆ ಸಮಯ** 56

**15. ಸಂಪಾದಕರಿಗೆ ಪತ್ರ** 58

- ಲೇಖನದಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರದ್ದಾಗಿರುತ್ತವೆ. ಅವು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ದೃಷ್ಟಿ ಅಥವಾ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.
- ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಶೈಕ್ಷಣಿಕ ಮತ್ತು ಲಾಭರಹಿತ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಆದರೆ, ಬಳಸುವ ಮುನ್ನ ಕಡ್ಡಾಯವಾಗಿ ಲೇಖಕರ ಮತ್ತು ಪ್ರಕಾಶಕರ ಅನುಮತಿಯನ್ನು ಪಡೆಯಬೇಕು ಮತ್ತು ಬಳಸುವಾಗ ಮೂಲ ಲೇಖನವನ್ನು ಉಲ್ಲೇಖಿಸಬೇಕು.
- ಮಕ್ಕಳ ಗುರುತನ್ನು ಕಾಪಾಡುವ ದೃಷ್ಟಿಯಿಂದ ಅವರ ಹೆಸರುಗಳನ್ನು ಬದಲಾಯಿಸಲಾಗಿದೆ.

# ಉತ್ತಮ ಕಲಿಕೆಗೆ ಸಜ್ಜುಗೊಳಿಸುವ ಮೌಲ್ಯಾಂಕನ

ಕೈಲಾಶ್ ಚಂದ್ರ ಕಾಂಡ್‌ಪಾಲ್

**ಮೌಲ್ಯಾಂಕನವು ಕಲಿಕೆಗೆ ಅಡ್ಡಿಯಾಗುವುದಿಲ್ಲ; ಅದು ಕಲಿಕೆಯನ್ನು ಬೆಂಬಲಿಸುತ್ತದೆ. ಇದು ವಿದ್ಯಾರ್ಥಿಗಳ ಪ್ರಗತಿಯನ್ನು ಕಾಲಾನಂತರದಲ್ಲಿ ನಿರಂತರವಾಗಿ ಗಮನಿಸುವ ಮೂಲಕ ಕಲಿಕೆಯನ್ನು ಉತ್ತೇಜಿಸುತ್ತದೆ. ಕಲಿಕಾ ಫಲಿತಾಂಶಗಳನ್ನು ಉತ್ತಮಗೊಳಿಸಲು, ನಾವು ಸಂಪೂರ್ಣ ಮೌಲ್ಯಾಂಕನ ಪ್ರಕ್ರಿಯೆಯ ಜೊತೆಗೆ ಶಿಕ್ಷಕರು ಎದುರಿಸುವ ಸವಾಲುಗಳನ್ನು ಅರ್ಥಮಾಡಿಕೊಳ್ಳಬೇಕು. ಈ ಒಳನೋಟವು ಮೌಲ್ಯಾಂಕನಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಬೋಧನೆ ಮತ್ತು ಕಲಿಕೆಗೆ ನಿಜವಾದ ಬೆಂಬಲ ನೀಡುವಂತೆ ಮಾಡುತ್ತದೆ.**

ಶಾಲಾ ಶಿಕ್ಷಣದ ದೃಷ್ಟಿಕೋನದಲ್ಲಿ, ಮೌಲ್ಯಾಂಕನವು ಪಠ್ಯಕ್ರಮದ ಅವಿಭಾಜ್ಯ ಅಂಗವಾಗಿದೆ. ಕಲಿಕೆಯ ಫಲಿತಾಂಶಗಳಿಗೆ ಅನುಗುಣವಾಗಿ ತರಗತಿಯ ಪ್ರಕ್ರಿಯೆಗಳು ಎಷ್ಟು ಚೆನ್ನಾಗಿ ನಡೆದಿವೆ ಮತ್ತು ಅವು ಎಂಥ ಪರಿಣಾಮಗಳನ್ನು ಬೀರಿವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಇದರ ಹಿಂದಿನ ಉದ್ದೇಶವಾಗಿದೆ. ಅಸಲಿಗೆ, ಮಕ್ಕಳನ್ನು ಅನುತ್ತೀರ್ಣ ಅಥವಾ ಉತ್ತೀರ್ಣರನ್ನಾಗಿ ಮಾಡುವುದನ್ನು ಮೀರಿದ ಉದ್ದೇಶವನ್ನು ಮೌಲ್ಯಾಂಕನವು ಹೊಂದಿದೆ. ಪಠ್ಯಕ್ರಮ ಮತ್ತು ವ್ಯಾಸಂಗ ಕ್ರಮದ ನೆರವಿನಿಂದ ಕಲಿಕೆಯ ಯಾವ ಉದ್ದೇಶಗಳನ್ನು ತಲುಪಲು ಹೊರಡಲಾಗಿತ್ತೋ ಅಲ್ಲಿಯವರೆಗೆ ತಲುಪಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಇದರ ಮೂಲ ಉದ್ದೇಶವಾಗಿದೆ. ಎಷ್ಟು ಮಕ್ಕಳು ಅಲ್ಲಿಗೆ ತಲುಪಿದರು, ಎಷ್ಟು ಮಕ್ಕಳು ಎಷ್ಟು ದೂರದಲ್ಲಿ ಉಳಿದುಹೋದರು ಹಾಗೂ ಅವರು ತಮ್ಮ ಗಮ್ಯಸ್ಥಾನವನ್ನು ತಲುಪಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು ಎಂಬುದನ್ನು ಅರಿತುಕೊಳ್ಳುವುದು ಮತ್ತು ಈ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಕಲಿಕೆಯ ಯೋಜನೆಯಲ್ಲಿ ಪರಿವರ್ತನೆಗಳನ್ನು ತರುವುದು ಮೌಲ್ಯಾಂಕನವು ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಮೌಲ್ಯಾಂಕನವು ಈ ಪ್ರಕ್ರಿಯೆಯಲ್ಲಿನ ಸೃಜನಶೀಲತೆ ಮತ್ತು ಸಕಾರಾತ್ಮಕತೆಯನ್ನು ಅರ್ಥೈಸಿಕೊಳ್ಳುವುದು ಬಹಳ ಅವಶ್ಯಕ.

ಈಗ 5 ಮತ್ತು 8ನೇ ತರಗತಿಗಳಿಗೆ 'ನೋ-ಡಿಟೆನ್ಶನ್ ಪಾಲಿಸಿ'ಯನ್ನು ತೆಗೆದುಹಾಕುವ ಕುರಿತು ಚರ್ಚೆಯಾಗುತ್ತಿದೆ. ಹಾಗಂತ, ಮಕ್ಕಳನ್ನು ಈಗ ಅನುತ್ತೀರ್ಣಗೊಳಿಸಬಹುದಾಗಿದೆ ಎಂಬುದು ಇದರ ಅರ್ಥವೆಂದು ಭಾವಿಸಿದರೆ, ಅದು ತಪ್ಪಾದೀತು. ಅಸಲಿಗೆ, ಶೈಕ್ಷಣಿಕ ಫಲಿತಾಂಶಗಳಲ್ಲಿ ಹಿಂದುಳಿದಿರುವ ಮಕ್ಕಳಿಗೆ, ಹೊಸ ಶೈಕ್ಷಣಿಕ ವರ್ಷವು ಪ್ರಾರಂಭವಾಗುವ ಮುನ್ನ ಇನ್ನಷ್ಟು ಉತ್ತಮವಾಗಿ ಕಲಿಸಲು ಇನ್ನೂ ಸ್ವಲ್ಪ ಸಮಯವನ್ನು ನೀಡುವುದು ಇದರ ಉದ್ದೇಶವಾಗಿದೆ. 'ನೋ-ಡಿಟೆನ್ಶನ್ ಪಾಲಿಸಿ'ಯ ಪರವಾಗಿ ಮತ್ತು ವಿರುದ್ಧವಾಗಿ ಅದೆಷ್ಟೋ ವಾದಗಳು ಇರಬಹುದು. ಆದರೆ ಪ್ರತಿ ಮಗುವೂ ಕಲಿಯಬಹುದಾಗಿದೆ ಹಾಗೂ ಕಲಿಯುವುದು ಪ್ರತಿ ಮಗುವಿನ ಹಕ್ಕು ಎಂಬುದನ್ನು ಗಮನಿಸುವುದು ಇಲ್ಲಿ ಬಹಳ ಮುಖ್ಯವಾಗಿದೆ. ಉತ್ತೀರ್ಣ-ಅನುತ್ತೀರ್ಣ, ಕಡಿಮೆ ಅಥವಾ ಹೆಚ್ಚಿನ ಅಂಕಗಳ ವಿಷಯವು ಸಂಪೂರ್ಣವಾಗಿ ಭಿನ್ನವಾಗಿದೆ. ಅಷ್ಟಾದರೂ, ತಳಮಟ್ಟದಲ್ಲಿ ಕೆಲಸ ಮಾಡುವ ಶಿಕ್ಷಕರು ಎದುರಿಸುತ್ತಿರುವ ಅನೇಕ ಸವಾಲುಗಳಿದ್ದು, ಅವುಗಳನ್ನು ಅರ್ಥ ಮಾಡಿಕೊಳ್ಳದ ಹೊರತು ವಿಷಯವು ಸಂಪೂರ್ಣವಾಗಿ ಸ್ಪಷ್ಟವಾಗಲು ಸಾಧ್ಯವಿಲ್ಲ. ವಯಸ್ಸಿನ ಆಧಾರದ ಮೇಲೆ ಮಕ್ಕಳನ್ನು ತರಗತಿಗಳಿಗೆ ದಾಖಲಿಸಿಕೊಳ್ಳುವುದು, ಬೇರೆಬೇರೆ ಸಾಮರ್ಥ್ಯದ ಮಟ್ಟಗಳು ಹಾಗೂ ಹಿನ್ನೆಲೆಯನ್ನು ಹೊಂದಿರುವ ಮಕ್ಕಳಿಗೆ ಕಲಿಸುವುದು ಮತ್ತು ಹಿಂದಿನ ತರಗತಿಗಳ ಪಠ್ಯಕ್ರಮವನ್ನು ಪೂರ್ಣಗೊಳಿಸುತ್ತಲೇ ಅವರನ್ನು ಹೊಸ ತರಗತಿಗೆ ಯೋಗ್ಯರನ್ನಾಗಿಸುವುದು ಮುಂತಾದ ಸವಾಲುಗಳನ್ನು ಶಿಕ್ಷಕರು ಎದುರಿಸಬೇಕಾಗುತ್ತದೆ. ಶಿಕ್ಷಕರು ವರ್ಷವಿಡೀ ಇಂತಹ ಸವಾಲುಗಳ ಮೇಲೆ ಕೆಲಸ ಮಾಡುತ್ತಲೇ ಇರುತ್ತಾರೆ. ವಾರ್ಷಿಕ ಪರೀಕ್ಷೆಯ ನಂತರ ರಿಪೋರ್ಟ್ ಕಾರ್ಡಿನಲ್ಲಿ ದಾಖಲಾದ ಅಂಕಗಳ ಹೊರತಾಗಿಯೂ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಸತತ ಮತ್ತು ಸಮಗ್ರ ಮೌಲ್ಯಮಾಪನದ ತಿಳುವಳಿಕೆಯನ್ನು ಒಳಗೊಂಡಿರುವ ನಿಖರವಾದ ಶೈಕ್ಷಣಿಕ ಪ್ರಗತಿಯನ್ನು ಅರಿತುಕೊಂಡಿರುತ್ತಾರೆ.

> ಮೌಲ್ಯಮಾಪನದ ಕುರಿತಾದ ತಮ್ಮ ಗ್ರಹಿಕೆ ಹಾಗೂ ಮಗುವಿನ ಕಲಿಕೆಯ ಪ್ರಗತಿಯ ಕುರಿತಾದ ಅರಿವಿನ ನಡುವೆಯೇ, ಸ್ಪರ್ಧೆಯ ಹೊರೆ ಅಥವಾ ವೈಫಲ್ಯದ ಭೀತಿಗಿಂತ ಮಕ್ಕಳ ಕಲಿಕೆಯನ್ನು ಖಾತರಿಪಡಿಸುವ ಶಿಕ್ಷಣದ ದೃಷ್ಟಿಕೋನವು ಶಿಕ್ಷಕರಿಗಿರುತ್ತದೆ.

ಈ ಬಗ್ಗೆ ಚಿಂತನೆಯನ್ನೇ ಮಾಡಲಾಗಿಲ್ಲ ಎಂದಲ್ಲ. ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಮೌಲ್ಯಾಂಕನದ ಪರಿಕಲ್ಪನೆಯಲ್ಲಿ, ರಚನಾತ್ಮಕ ಮೌಲ್ಯಾಂಕನ (formative assessment) ಮತ್ತು ಸಂಕಲನಾತ್ಮಕ ಮೌಲ್ಯಾಂಕನ (summative assessment) ದಂತಹ ಪದಗಳು ಪ್ರಚಲಿತದಲ್ಲಿವೆ ಹಾಗೂ ಅವುಗಳನ್ನು ಕಾರ್ಯರೂಪಕ್ಕೆ ಇಳಿಸುವ ಉದ್ದೇಶವೂ ಇದರಲ್ಲಿ ಒಳಗೊಂಡಿದೆ. ಈಗ ಮೌಲ್ಯಾಂಕನಕ್ಕೆ ಸಂಬಂಧಿಸಿದ ವಾಸ್ತವಿಕ ಅರಿವು ಮತ್ತು ಸಂವೇದನೆ ಎಲ್ಲಿ ಕಾಣೆಯಾಗುತ್ತದೆ



ಚಿತ್ರ 1 : ತಾವು ಕಲಿತದ್ದನ್ನು ಮತ್ತು ಅರ್ಥ ಮಾಡಿಕೊಂಡದ್ದನ್ನು ಬರೆಯುತ್ತಿರುವ ವಿದ್ಯಾರ್ಥಿಗಳು.

ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪಠ್ಯಕ್ರಮದ ಮಹತ್ವದ ಅಂಗವಾದ ಮೌಲ್ಯಾಂಕನದ ಮೂಲಕ ಶಿಕ್ಷಣದ ಉದ್ದೇಶಗಳನ್ನು ಸಾಧಿಸುವ ಪ್ರಯತ್ನಗಳನ್ನು ರಚನಾತ್ಮಕವಾಗಿಸುವುದು ಹೇಗೆ, ಪರೀಕ್ಷೆಯ ಭಯ ಮತ್ತು ಅಂಕಗಳ ಸ್ಪರ್ಧೆಯ ಹೊರತಾಗಿ ನಿಜವಾದ ಅರ್ಥದಲ್ಲಿ ಕಲಿಕೆಯನ್ನು ಅದರ ಕೇಂದ್ರದಲ್ಲಿರುವಂತೆ ಮಾಡುವುದು ಹೇಗೆ ಎಂಬುದು ಶಾಲಾ ಶಿಕ್ಷಣ ವ್ಯವಸ್ಥೆಯ ಕಾರ್ಯವಾಗಿದೆ. ಇದರೊಂದಿಗೆ, ಕಲಿಕೆಯಲ್ಲಿ ಇನ್ನೂ ಏನು ಬಾಕಿ ಉಳಿದಿದೆ ಮತ್ತು ಆ ಬಾಕಿಯನ್ನು ತಲುಪುವುದು ಹೇಗೆ ಎಂಬುದನ್ನು ಕೂಡ ಅರ್ಥ ಮಾಡಿಕೊಳ್ಳಬೇಕಾಗಿದೆ.

ಇದಕ್ಕಾಗಿ, ಇಂದಿನ ದೃಷ್ಟಿಕೋನದಲ್ಲಿ, ಮೌಲ್ಯಾಂಕನದ ಸಂಪೂರ್ಣ ಪ್ರಕ್ರಿಯೆಯನ್ನು ಮತ್ತು ತಿಳುವಳಿಕೆಯನ್ನು ತರಗತಿಯ ಮಟ್ಟದಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ತರಗತಿಗೆ ಸಂಬಂಧಿಸಿದ ವಿಷಯಗಳನ್ನು ಅರಿತುಕೊಳ್ಳುವಲ್ಲಿ ಮಗುವಿನ ಸಾಮರ್ಥ್ಯ ಮತ್ತು ಕಲಿಕೆಯ ಫಲಿತಗಳಲ್ಲಿ ಆಗಿರುವ ಪ್ರಗತಿ ಅಥವಾ ಅಲ್ಲಿ ಎದುರಾಗುವ ಅಡಚಣೆಯನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳುವುದು ರಚನಾತ್ಮಕ ಮೌಲ್ಯಾಂಕನದ ಉದ್ದೇಶವಾಗಿದೆ. ಆದರೆ ತಳಮಟ್ಟದ ರಚನಾತ್ಮಕ ಮೌಲ್ಯಾಂಕನಗಳಲ್ಲಿ ಇದು ಕಂಡುಬರುವುದಿಲ್ಲ.

ಪ್ರಸ್ತುತ, ರಚನಾತ್ಮಕ ಮೌಲ್ಯಾಂಕನದಿಂದ ಪಡೆದ ಅಂಕಗಳನ್ನು ದಾಖಲಿಸಿಕೊಂಡು ಶೈಕ್ಷಣಿಕ ವರ್ಷದ ಕೊನೆಗೆ ಪರೀಕ್ಷಾ ಅಂಕಪಟ್ಟಿಯಲ್ಲಿ ಬರೆಯುವವರೆಗಿನ ಪ್ರಕ್ರಿಯೆಯಷ್ಟೇ ಕಂಡುಬರುತ್ತದೆ. ರಚನಾತ್ಮಕ ಮೌಲ್ಯಾಂಕನದಲ್ಲಿ ಮಕ್ಕಳು ಕೊಟ್ಟಿರುವ ಉತ್ತರಗಳನ್ನು ವಿಶ್ಲೇಷಿಸುವುದೂ ಇಲ್ಲ ಅಥವಾ ಅವುಗಳಿಂದ ರೂಪುಗೊಂಡ ಅರಿವನ್ನು ಕಲಿಕೆ-ಕಲಿಸುವಿಕೆಯಲ್ಲಿ ಬಳಸುವುದೂ ಇಲ್ಲ.

ಈಗ ನಾವು ಸಂಕಲನಾತ್ಮಕ ಮೌಲ್ಯಾಂಕನದ ಕುರಿತು ಮಾತನಾಡೋಣ. ಶಾಲಾ ಶಿಕ್ಷಣದ ವಿಷಯಗಳಲ್ಲಿ ಒಳಗೊಂಡಿರುವ ಪರಿಕಲ್ಪನೆಗಳು ಪ್ರತ್ಯೇಕವಾಗಿಲ್ಲ ಅಥವಾ ಏಕಾಂಗಿಯಾಗಿಲ್ಲ. ಒಂದೆಡೆ, ಅವು ಇತರ ಪರಿಕಲ್ಪನೆಗಳೊಂದಿಗೆ ಸಂಬಂಧ ಹೊಂದಿದ್ದರೆ, ಮತ್ತೊಂದೆಡೆ, ಅವು ಶಾಲಾ ಪಠ್ಯಕ್ರಮದಲ್ಲಿ ಅನುಸರಿಸುವ ತರಗತಿಗಳ ಪ್ರಗತಿಪರ ಸಂಕೀರ್ಣತೆಯೊಂದಿಗೆ ನಿರಂತರತೆಯನ್ನು ಹೊಂದಿವೆ. ಮತ್ತೊಂದೆಡೆ, ಅವು ಶಾಲಾ ಪಠ್ಯಕ್ರಮದಲ್ಲಿ ಮುಂದಿನ ತರಗತಿಗಳಲ್ಲಿ ಹೆಚ್ಚುತ್ತಿರುವ ಸಂಕೀರ್ಣತೆಯೊಂದಿಗೆ ಮುಂದುವರಿಯುತ್ತವೆ. ಇದೇ ರೀತಿ, ವಿಷಯಗಳು ಸಹ ಗಡಿಗಳಿಂದ ಬಂಧಿತವಾಗಿರುವುದಿಲ್ಲ, ಆದರೆ ಅವು ಅಂತರ್ ಸಂಬಂಧವನ್ನು ಹೊಂದಿರುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಶೈಕ್ಷಣಿಕ ಅವಧಿಯ ಕೊನೆಯಲ್ಲಿ ಪ್ರತಿ ತರಗತಿಯಲ್ಲಿ ಮಾಡಲಾಗುವ ಮೌಲ್ಯಾಂಕನವು ಕೇವಲ ಸಂಕಲನಾತ್ಮಕ ಮೌಲ್ಯಾಂಕನವಾಗಿ ಉಳಿಯುವುದಿಲ್ಲ, ಅದರ ಬದಲಿಗೆ ಮುಂದಿನ ತರಗತಿಯ ಶಿಕ್ಷಕರಿಗೆ ಮಗುವಿನ ಕಲಿಕೆಯ ಮಟ್ಟವನ್ನು ಅರ್ಥಮಾಡಿಕೊಳ್ಳಲು ಇದು ಪರಿಣಾಮಕಾರಿ ಸಾಧನವಾಗಬಹುದು. ತನ್ನ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟದ ಬಗ್ಗೆ ಕಾಳಜಿ ವಹಿಸುವ ಶಿಕ್ಷಕರು ಈ ಬಗ್ಗೆ ಎಚ್ಚರ ವಹಿಸುವ ಅಗತ್ಯವಿದೆ.

ರಚನಾತ್ಮಕ ಮೌಲ್ಯಾಂಕನವನ್ನು ಅದರ ವಾಸ್ತವಿಕ ರೂಪದಲ್ಲಿ ಅನುಷ್ಠಾನಗೊಳಿಸುವ ಅವಶ್ಯಕತೆ ಪ್ರಬಲವಾಗಿದೆ. ಶಾಲೆಯಲ್ಲಿ, ಇದನ್ನು ಎರಡು ಹಂತಗಳಲ್ಲಿ ಮಾಡಬಹುದಾಗಿದೆ. ಮೊದಲನೆಯದಾಗಿ, ಪ್ರಶ್ನೆಪತ್ರಿಕೆ ತಯಾರಿಕೆಯ ಪ್ರಕ್ರಿಯೆಯ ಸಮಯದಲ್ಲಿ; ಹಾಗೂ ಎರಡನೆಯದಾಗಿ, ಪರೀಕ್ಷೆಯ ನಂತರ ಮಕ್ಕಳ ಉತ್ತರಗಳನ್ನು ಪರಿಶೀಲಿಸುವ ಮೂಲಕ. ರಚನಾತ್ಮಕ ಮೌಲ್ಯಾಂಕನಕ್ಕೆ ಪ್ರಶ್ನೆಪತ್ರಿಕೆಯನ್ನು ತಯಾರಿಸುವಾಗ, ಯಾವ ಪ್ರಶ್ನೆಯ ಮೂಲಕ ಯಾವ ಸಾಮರ್ಥ್ಯಗಳನ್ನು ಮತ್ತು ಕಲಿಕೆಯ ಯಾವ ಫಲಿತಾಂಶವನ್ನು ಪರೀಕ್ಷಿಸಬೇಕಿದೆ ಹಾಗೂ ಯಾವ ಜ್ಞಾನಗ್ರಹಣದ ಮಟ್ಟದಲ್ಲಿ ಪರೀಕ್ಷಿಸಬೇಕಿದೆ ಎಂಬುದರ ಬಗ್ಗೆ ಶಿಕ್ಷಕರು ಅರಿವನ್ನು ಹೊಂದಿರಬೇಕಾಗುತ್ತದೆ. ಅದೇ ಪ್ರಕಾರದಲ್ಲಿ, ವಿದ್ಯಾರ್ಥಿಗಳ ಉತ್ತರಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ, ಆ ಸಾಮರ್ಥ್ಯಗಳು ಮತ್ತು ಕಲಿಕೆಯ ಫಲಿತಾಂಶಗಳಲ್ಲಿ ಆಗಿರುವ ಪ್ರಗತಿ ಅಥವಾ ಕಲಿಕೆಯಲ್ಲಿ ಅವರು ಎದುರಿಸುತ್ತಿರುವ ಅಡಚಣೆಗಳನ್ನು ವಿಶ್ಲೇಷಿಸುವುದು ಅವಶ್ಯಕ ಎನ್ನುವುದನ್ನೂ ನೆನಪಿಟ್ಟುಕೊಳ್ಳಬೇಕಾಗುತ್ತದೆ. ವಿಭಿನ್ನ ಸಾಮರ್ಥ್ಯಗಳು



ಚಿತ್ರ 2 : ಕಲಿಕೆಯನ್ನು ಆನಂದಿಸುತ್ತಿರುವ ವಿದ್ಯಾರ್ಥಿಗಳು.

ಮತ್ತು ಪರಿಕಲ್ಪನೆಯನ್ನು ಆಧರಿಸಿದ ಕಲಿಕೆಯ ಫಲಿತಾಂಶಗಳಲ್ಲಿ ಮಗುವಿನ ಪ್ರಗತಿ ಏನಾಗಿದೆ ಹಾಗೂ ಅದಕ್ಕೆ ಯಾವ ಸಾಮರ್ಥ್ಯವನ್ನು ಸಾಧಿಸುವಲ್ಲಿ ಎಲ್ಲಿ ಸಮಸ್ಯೆಯಾಗುತ್ತಿದೆ ಎಂಬುದು ಮಗುವಿನ ಉತ್ತರಗಳ ಸೂಕ್ಷ್ಮ ವಿಶ್ಲೇಷಣೆಯಿಂದ ಸ್ಪಷ್ಟವಾಗುತ್ತದೆ. ನಾವು ಇದನ್ನು ಮಾಡಿದರೆ, ಮಗುವಿಗೆ ಕಲಿಕೆಯಲ್ಲಿ ಅಗತ್ಯವಿರುವ ಸಹಾಯವನ್ನು ನೀಡಲು ಸಾಧ್ಯವಾಗುತ್ತದೆ. ಅಂತಹ ವಿಶ್ಲೇಷಣೆಯಿಂದ ರೂಪುಗೊಂಡ ಜ್ಞಾನವನ್ನು ಕಲಿಕೆ-ಕಲಿಸುವಿಕೆಯ ಪ್ರಕ್ರಿಯೆಯಲ್ಲಿ ಬಳಸುವುದರಿಂದ ಮಗುವಿಗೆ ಇನ್ನಷ್ಟು ಉತ್ತಮವಾದ ಕಲಿಕೆಯ ಅವಕಾಶವು ಸೃಷ್ಟಿಯಾಗುತ್ತದೆ ಹಾಗೂ ಗುಣಮಟ್ಟದ, ಸಮನ್ವಯದ ಮತ್ತು ಸಮಾನತೆಯಿಂದ ಕೂಡಿರುವ ಶಾಲಾ ಶಿಕ್ಷಣವು ರೂಪುಗೊಳ್ಳುತ್ತದೆ.

ಮೌಲ್ಯಾಂಕನವು ಕಲಿಕೆಗಾಗಿರಬೇಕೇ ಹೊರತು, ಏನನ್ನು ಕಲಿಯಲಾಗಿದೆಯೋ ಅದನ್ನು ಅಳೆಯಲು ಅಲ್ಲ ಎಂಬುದನ್ನು ಇಲ್ಲಿಯವರೆಗೆ ಮಾಡಲಾದ ಮೌಲ್ಯಾಂಕನದ ಕುರಿತಾದ ಸಂಪೂರ್ಣ ಚರ್ಚೆಯು ಸಾಬೀತುಪಡಿಸುತ್ತದೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಾಲಾ ಆಧಾರಿತ ಮೌಲ್ಯಮಾಪನದ ಆಧಾರದಲ್ಲಿ ಸಿದ್ಧಪಡಿಸಿದ ಹಾಗೂ ಪೋಷಕರಿಗೆ ನೀಡಲಾಗುವ ಪ್ರಗತಿ ಪತ್ರವನ್ನು ಹೊಸ ಸ್ವರೂಪದಲ್ಲಿ ನೀಡಲು ಶಿಫಾರಸು ಮಾಡಿದೆ. ಈ ಪ್ರೋಗ್ರೆಸ್ ಕಾರ್ಡ್ ಅನ್ನು 360 ಡಿಗ್ರಿ ಮತ್ತು ಬಹು ಆಯಾಮದ ಕಾರ್ಡ್ ಆಗಿ ಪರಿಕಲ್ಪಿಸಲಾಗಿದ್ದು, ಇದು ಪ್ರತಿ ವಿದ್ಯಾರ್ಥಿಯ ಜ್ಞಾನಗ್ರಹಣದ, ಭಾವಭರಿತ ಮತ್ತು ಮನೋಚಾಲಕ ಅಭಿವೃದ್ಧಿಯ ಸೂಕ್ಷ್ಮತೆಯಿಂದ ಸಿದ್ಧಪಡಿಸಲಾದ ವಿವರವಾದ ವಿಶ್ಲೇಷಣೆ ಮತ್ತು ವಿಶಿಷ್ಟತೆಯನ್ನು ಹೊಂದಿರುತ್ತದೆ. ಶೈಕ್ಷಣಿಕ ಪರಿಭಾಷೆಯಲ್ಲಿ ಹೇಳುವುದಾದರೆ, ಶಿಕ್ಷಣವನ್ನು ಸರ್ವಾಂಗೀಣ ಅಭಿವೃದ್ಧಿಯಾಗಿ ನೋಡುವುದು ಈ ರೀತಿಯ ಮೌಲ್ಯಾಂಕನದ ಉದ್ದೇಶವಾಗಿದೆ. ಸತತ ಮತ್ತು ಸಮಗ್ರ ಮೌಲ್ಯಾಂಕನವು ಈ ದಿಸೆಯಲ್ಲಿ ಅಂಥದ್ದೇ ಒಂದು ಪ್ರಯತ್ನವಾಗಿದೆ. ಇಂದಿನ ಸನ್ನಿವೇಶದಲ್ಲಿ, ಈ ಮಟ್ಟದ ಸಿದ್ಧತೆಯು ನಮ್ಮ ಶಾಲಾ ಶಿಕ್ಷಣದಲ್ಲಿ ಕಾಣುವುದಕ್ಕೆ ಸಿಗುತ್ತಿಲ್ಲವಾದರೂ, ನಾವು ಈ ದಿಕ್ಕಿನಲ್ಲಿ ಬಲವಾದ ಹೆಜ್ಜೆಗಳನ್ನು ಇಡಬೇಕಾಗಿದೆ ಮತ್ತು ಇದನ್ನು ಈ ಪರೀಕ್ಷಾ ಋತುವಿನಿಂದಲೇ ಪ್ರಾರಂಭಿಸಬಹುದಾಗಿದೆ.

ಮೊದಲನೇ ಹೆಜ್ಜೆಯಾಗಿ, ಮೌಲ್ಯಾಂಕನ ಪ್ರಕ್ರಿಯೆಯನ್ನು ತರಗತಿಯ ಪ್ರಕ್ರಿಯೆಯೊಂದಿಗೆ ಸಂಯೋಜಿಸಬೇಕು. ಶಿಕ್ಷಕರು ತಮ್ಮ ವಿಷಯ-ಸಂಬಂಧಿತ ಪರಿಕಲ್ಪನೆಗಳು, ಸಾಮರ್ಥ್ಯಗಳು ಮತ್ತು ಕಲಿಕೆಯ ಫಲಿತಾಂಶಗಳ ಜ್ಞಾನಗ್ರಹಣದ ಮಟ್ಟವನ್ನು ಅರ್ಥ ಮಾಡಿಕೊಳ್ಳುವ ಮೂಲಕ ಮೌಲ್ಯಾಂಕನವನ್ನು ಪ್ರಕ್ರಿಯೆಗೊಳಿಸಬೇಕು. ಮೌಲ್ಯಾಂಕನಕ್ಕಾಗಿ ಯೋಜಿಸುವಾಗ, ಮಗುವು ತಾನು ಹೊಂದಿರುವ ಸಾಮರ್ಥ್ಯಗಳನ್ನು ಪ್ರಯೋಗಿಸಲು, ವಿಶ್ಲೇಷಿಸಲು ಮತ್ತು ತಾರ್ಕಿಕವಾಗಿ ಯೋಚಿಸಲು ಸಾಧ್ಯವಾಗುವುದನ್ನು ಖಚಿತಪಡಿಸಿಕೊಳ್ಳಲು ಶಿಕ್ಷಕರು ಪ್ರಯತ್ನಿಸಬೇಕು. ಶಿಕ್ಷಕರಾದ ನಾವು ಮೌಲ್ಯಾಂಕನದ ಕುರಿತಾದ ಸ್ಪಷ್ಟ ತಿಳುವಳಿಕೆ ಮತ್ತು ದೃಷ್ಟಿಕೋನವನ್ನು ಹೊಂದಿದ್ದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಆರಂಭಿಕ ಹಂತದಲ್ಲಿ, ಮೌಲ್ಯಾಂಕನವನ್ನು ಮೌಖಿಕ ಮತ್ತು ಲಿಖಿತ ರೂಪಗಳೆರಡಲ್ಲೂ ಮಾಡಿದರೆ ಒಳ್ಳೆಯದು. ಏಕೆಂದರೆ ಇದು ಪರಿಕಲ್ಪನೆಯನ್ನು ಕಲಿಯುವಲ್ಲಿ ಆಗಿರುವ ಪ್ರಗತಿಯನ್ನು ಅಥವಾ ಅದರಲ್ಲಿ ಎದುರಾಗುತ್ತಿರುವ ಸಮಸ್ಯೆಯನ್ನು ನಿಖರವಾಗಿ ನಿರ್ಣಯಿಸುವಂತೆ ಮಾಡುವುದನ್ನು ಸಾಧ್ಯವಾಗಿಸುತ್ತದೆ.

> **“ಪ್ರತಿ ಮಗುವೂ ಕಲಿಯಬಲ್ಲದು ಮತ್ತು ಕಲಿಕೆ ಪ್ರತಿ ಮಗುವಿನ ಹಕ್ಕು ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳುವುದು ಅತಿ ಅವಶ್ಯಕವಾಗಿದೆ”**

ಶಾಲಾ ಶಿಕ್ಷಣದಲ್ಲಿ ಮೌಲ್ಯಾಂಕನದ ಹೊಸ ದೃಷ್ಟಿಕೋನವನ್ನು ಸ್ಥಾಪಿಸುವುದು ಬಹಳ ಅವಶ್ಯಕವಾಗಿದೆ. ಮೌಲ್ಯಾಂಕನವನ್ನು ಕಲಿಕೆಗೆ ನೆರವಾಗುವ ಸಾಧನವಾಗಿ ಸ್ಥಾಪಿಸಿದಾಗ, ಮಕ್ಕಳು ಪರೀಕ್ಷೆಯ ಭೀತಿಯಿಂದ ಮುಕ್ತರಾಗುತ್ತಾರೆ ಹಾಗೂ ಶಾಲಾ ವ್ಯವಸ್ಥೆಯಲ್ಲಿ ಆನಂದಮಯವಾದ ಕಲಿಕೆಯ ಪ್ರಾರಂಭಕ್ಕೆ ಅದು ಬುನಾದಿಯಾಗುತ್ತದೆ. ತಮ್ಮ ತರಗತಿಯಲ್ಲಿ ನಡೆಯುತ್ತಿರುವ ಮೌಲ್ಯಾಂಕನದ ಮರುಪರಿಶೀಲನೆ ನಡೆಸುವುದು ಮತ್ತು ಮೌಲ್ಯಾಂಕನವನ್ನು ಅದರ ಮೂಲ ಭಾವನೆಗೆ ಅನುಗುಣವಾಗಿ ಸ್ಥಾಪಿಸಲು ಪ್ರಯತ್ನಿಸುವುದು, ಇವಿಷ್ಟನ್ನು ಅದನ್ನು ಮುನ್ನಡೆಸುವ ಶಿಕ್ಷಕರಿಂದ ನಿರೀಕ್ಷಿಸಲಾಗುತ್ತದೆ. ಖಂಡಿತಾಗಿಯೂ ಒಂದು ಒಳ್ಳೆಯ ಮೌಲ್ಯಾಂಕನ ಪ್ರಕ್ರಿಯೆಯಿಂದಲೇ ಒಳ್ಳೆಯ ಕಲಿಕೆ ಮತ್ತು ಕಲಿಸುವಿಕೆ ಸಾಧ್ಯವಾಗುತ್ತದೆ.




**ಕೈಲಾಶ್ ಚಂದ್ರ ಕಾಂಡ್ಪಾಲ್** ಅವರು ದೀರ್ಘಕಾಲದಿಂದ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ಅವರು ಮಧ್ಯಪ್ರದೇಶದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕೆಲಸ ಮಾಡಿದ್ದಾರೆ. ಬಿಹಾರ, ಉತ್ತರಾಖಂಡದಲ್ಲಿ ಫೌಂಡೇಷನ್‌ನ ರಾಜ್ಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಸದ್ಯ ಅವರು ಜಾರ್ಖಂಡ್ ರಾಜ್ಯದ ಫೌಂಡೇಷನ್‌ನ ಮುಖ್ಯಸ್ಥರಾಗಿ ಸಕ್ರಿಯರಾಗಿದ್ದಾರೆ. ಓದುವ-ಬರೆಯುವ ಅವರ ಆಸಕ್ತಿ ಹಾಗೂ ಸದಾ ಹೊಸದನ್ನು ಕಲಿಯುವ ತುಡಿತವು ಅವರನ್ನು ನಿರಂತರವಾಗಿ ಸಕ್ರಿಯವಾಗಿರಿಸುತ್ತದೆ. ಅವರು ಉತ್ತರಾಖಂಡದಿಂದ ಪ್ರಕಟವಾಗುವ ನಿಯತಕಾಲಿಕೆಗಳಾದ, 'ಶೈಕ್ಷಿಕ್ ಪ್ರವಾಹ್' ಮತ್ತು 'ಉಮ್ಮೀದ್ ಜಗಾತೆ ಶಿಕ್ಷಕ್'ನ ಸಂಪಾದಕರೂ ಆಗಿದ್ದಾರೆ.

**ಸಂಪರ್ಕ:** kandpal@azimpremjifoundation.org


ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

## ಸಂದರ್ಭ : ವಾರ್ಷಿಕ ಪರೀಕ್ಷೆಗಳು

# ಉತ್ತರಪತ್ರಿಕೆಗಳ ಅಧ್ಯಯನದ ಮೂಲಕ ಹೊಸ ಶೈಕ್ಷಣಿಕ ಅವಧಿಗೆ ಸಿದ್ಧತೆ

**ಜಗಮೋಹನ್ ಸಿಂಗ್ ಕಠೈತ್**

**ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ವಿಶ್ಲೇಷಿಸುವುದರಿಂದ, ಶಿಕ್ಷಕರಿಗೆ ಬೋಧನೆ ಮತ್ತು ಮನೆಪಾಠಕ್ಕಾಗಿ ಪ್ರಾಯೋಗಿಕ, ಪರಿಣಾಮಕಾರಿ ಮತ್ತು ಸೃಜನಾತ್ಮಕ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಹೊಸ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟಗಳು ಮತ್ತು ಅಗತ್ಯಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳದೆ ಶಿಕ್ಷಕರು ಪರಿಣಾಮಕಾರಿ ಬೋಧನಾ ಯೋಜನೆಗಳನ್ನು ರಚಿಸಲು ಸಾಧ್ಯವಿಲ್ಲ.**

ಬಹುತೇಕ ರಾಜ್ಯಗಳಲ್ಲಿ, ಶೈಕ್ಷಣಿಕ ಅವಧಿಯು ಮಾರ್ಚ್‌ನಲ್ಲಿ ಕೊನೆಗೊಳ್ಳುತ್ತದೆ ಮತ್ತು ಹೊಸ ಅವಧಿಯು ಹೆಚ್ಚು ಕಡಿಮೆ ಏಪ್ರಿಲ್‌ನಲ್ಲಿ ಪ್ರಾರಂಭವಾಗುತ್ತದೆ. ಈ ಅವಧಿಯಲ್ಲಿ, ವಿದ್ಯಾರ್ಥಿಗಳು ನಿತ್ಯದ ತರಗತಿಯ ಅಧ್ಯಯನಗಳಿಂದ ತಾವು ಮುಕ್ತರು ಎಂದು ಭಾವಿಸುತ್ತಾರೆ ಮತ್ತು ಅವರಲ್ಲಿ ಹೊಸ ತರಗತಿಗಳಿಗೆ ಸೇರಿಕೊಳ್ಳುವ ಉತ್ಸುಕತೆ ಇರುತ್ತದೆ. ಮಕ್ಕಳು ಹೊಸ ಪಠ್ಯಪುಸ್ತಕಗಳನ್ನು ಪರಿಚಯಿಸಿಕೊಳ್ಳುತ್ತಿರುತ್ತಾರೆ, ಅದರಲ್ಲಿನ ನವನವೀನ ಚಿತ್ರಗಳನ್ನು ನೋಡುತ್ತಿರುತ್ತಾರೆ ಹಾಗೂ ಹೊಸ ಪುಸ್ತಕಗಳನ್ನು ಬೈಂಡ್ ಹಾಕಿ ಶೃಂಗರಿಸುತ್ತಿರುತ್ತಾರೆ. ಮತ್ತೊಂದೆಡೆ, ಶಿಕ್ಷಕರು ನೂತನ ತರಗತಿಗಳಿಗೆ ಮಕ್ಕಳ ಪ್ರವೇಶ ಮತ್ತು ದಾಖಲಾತಿಯ ಔಪಚಾರಿಕತೆಯ ಪ್ರಕ್ರಿಯೆಗಳಲ್ಲಿ ನಿರತರಾಗಿರುತ್ತಾರೆ. ಈ ಸಮಯದಲ್ಲಿ, ವಿದ್ಯಾರ್ಥಿಗಳಾಗಲೀ ಅಥವಾ ಶಿಕ್ಷಕ-ಶಿಕ್ಷಕಿಯರಾಗಲೀ ಪಠ್ಯಕ್ರಮವನ್ನು (syllabus) ಪೂರ್ಣಗೊಳಿಸುವ ಯಾವುದೇ ಒತ್ತಡದ ಪ್ರಭಾವಕ್ಕೆ ಒಳಗಾಗುವುದಿಲ್ಲ.

ಪ್ರಸ್ತುತ ತರಗತಿಯ ನಿರೀಕ್ಷಿತ ವಿಷಯದ ಮೇಲೆ ಕೆಲಸ ಮಾಡುವ ಒತ್ತಡದಿಂದ ಮುಕ್ತವಾಗಿ, ಹಿಂದಿನ ತರಗತಿಗಳ ನಿರೀಕ್ಷಿತ ಸಾಮರ್ಥ್ಯಗಳ ಮೇಲೆ ಮಕ್ಕಳೊಂದಿಗೆ ಕೆಲಸ ಮಾಡಲು ಶಿಕ್ಷಕರಿಗೆ ಇದು ಉತ್ತಮ ಸಮಯವಾಗಿದೆ. ಈ ರೀತಿಯಾಗಿ, ಅವರು ಪ್ರಸ್ತುತ ತರಗತಿಗೆ ಸರಿಹೊಂದುವಂತೆ ಮಕ್ಕಳನ್ನು ಸಿದ್ಧಪಡಿಸಲು ಪ್ರಯತ್ನಿಸುತ್ತಾರೆ. ವಿವಿಧ ರಾಜ್ಯಗಳ ಶಿಕ್ಷಣ ಇಲಾಖೆಗಳು ಸಹ ಈ ಅವಧಿಯಲ್ಲಿ ಈ ಉದ್ದೇಶಕ್ಕಾಗಿ ಅನೇಕ ರೀತಿಯ ಯೋಜನೆಗಳನ್ನು ಜಾರಿಗೆ ತರುತ್ತವೆ. ಉದಾಹರಣೆಗೆ, ಉತ್ತರಾಖಂಡದ ಶಿಕ್ಷಣ ಇಲಾಖೆಯು ಏಪ್ರಿಲ್‌ನಿಂದ ಜೂನ್‌ವರೆಗೆ ಮಿಷನ್




ಚಿತ್ರ 1 : ಹೊಸ ತರಗತಿಯಲ್ಲಿ ಒಟ್ಟಿಗೆ ಹೊಸತನ್ನು ಕಲಿಯುತ್ತಿರುವುದು.

ಕೋಶಿಶ್’ (Mission Koshish) ಕಾರ್ಯಕ್ರಮವನ್ನು ನಡೆಸುತ್ತದೆ. ಹೊಸ ತರಗತಿಗೆ ನಿಗದಿಪಡಿಸಿರುವ ಕನಿಷ್ಠ ಸಾಮರ್ಥ್ಯಗಳನ್ನು ಸಾಧಿಸಲು, ನಾನಾ ಬಗೆಯ ದಿನನಿತ್ಯದ ಪ್ರಯತ್ನಗಳಿಂದ ಹೊರಬಂದು ಸೃಜನಶೀಲ ಪ್ರಯತ್ನಗಳಿಗೆ ಮುಂದಾಗುವುದು ಇದರ ಹಿಂದಿನ ಉದ್ದೇಶವಾಗಿದೆ. ಈ ಸಾಮರ್ಥ್ಯಗಳು ಸುಭದ್ರ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತವೆ.

ಈ ಮೇಲಿನ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು, ಕೆಲವು ಕಾರ್ಯಯೋಜನೆಗಳನ್ನು ಲೇಖನದಲ್ಲಿ ಸೂಚಿಸಲಾಗಿದೆ. ಈ ಸಮಯದಲ್ಲಿ ನೂತನ ತರಗತಿಗಳಿಗೆ ಮಕ್ಕಳನ್ನು ಸಜ್ಜುಗೊಳಿಸಲು ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಪರಿಣಾಮಕಾರಿಯನ್ನಾಗಿಸಲು ಶಿಕ್ಷಕರು ಏನೇನು ಮಾಡಬೇಕು ಎಂಬುದನ್ನು ಇವು ವಿವರಿಸುತ್ತವೆ.

## 1. ಉತ್ತರ ಪತ್ರಿಕೆಗಳ ವಿಶ್ಲೇಷಣೆ ಮತ್ತು ಬೋಧನೆಯಲ್ಲಿ ಬಳಕೆ

ಸಾಮಾನ್ಯವಾಗಿ, ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸುವ, ಇಲ್ಲವೇ ಅನುತ್ತೀರ್ಣಗೊಳಿಸುವ ಮತ್ತು ಅವರನ್ನು ಒಂದು ತರಗತಿಯಿಂದ ಇನ್ನೊಂದು ತರಗತಿಗೆ ವರ್ಗಾಯಿಸುವ ಅಥವಾ ಅದೇ ತರಗತಿಯಲ್ಲಿ ಉಳಿಸಿಕೊಳ್ಳುವ ಉದ್ದೇಶಕ್ಕಾಗಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗಳನ್ನು ಬಳಸಲಾಗುತ್ತದೆ. ಶೇಕಡಾ 33ರಿಂದ 40ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದ ಮಕ್ಕಳನ್ನು ಮುಂದಿನ ತರಗತಿಗೆ ಸೇರಿಸಿಕೊಳ್ಳಲಾಗುತ್ತದೆ. ಇದನ್ನು ಹೊರತುಪಡಿಸಿ, ಈ ವಾರ್ಷಿಕ ಪರೀಕ್ಷೆಗಳಿಂದಾಗಲೀ ಅಥವಾ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಬರೆಯುವ ಉತ್ತರ ಪತ್ರಿಕೆಗಳಿಂದಾಗಲೀ ಯಾವುದೇ ಪ್ರಯೋಜನವಿಲ್ಲ. ಒಂದು ವೇಳೆ ಶಿಕ್ಷಕರಿಗೆ ಪ್ರತಿ ವಿಷಯದಲ್ಲೂ ತಮ್ಮ ವಿದ್ಯಾರ್ಥಿಗಳ ಸಾಮರ್ಥ್ಯದ ಮಟ್ಟದ ಕುರಿತಂತೆ ಸ್ಪಷ್ಟವಾದ ತಿಳುವಳಿಕೆ ಇದ್ದಿದ್ದರೆ, ಅವರು ಈ ಕಲಿಸುವ-ಕಲಿಯುವ ಪ್ರಕ್ರಿಯೆಗಳನ್ನು ಅವರ ಮಟ್ಟಕ್ಕೆ ತಕ್ಕಂತೆ ಉತ್ತಮವಾಗಿ ಹೊಂದಿಸಿಕೊಳ್ಳಬಹುದಾಗಿದೆ. ಆದ್ದರಿಂದ ಮಕ್ಕಳ ಉತ್ತರ ಪತ್ರಿಕೆಗಳನ್ನು ವಿಶ್ಲೇಷಿಸಿ, ಅವರ ಕಲಿಕೆಯ ಮಟ್ಟವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಹಾಗೂ ಅದಕ್ಕೆ ಪೂರಕವಾಗಿ ಅವಶ್ಯಕವಾಗಿರುವ ಕಲಿಸುವ ಪ್ರಕ್ರಿಯೆಗೆ ಪರಿಣಾಮಕಾರಿ ಸೃಜನಶೀಲ ವಿಧಾನಗಳನ್ನು ಬಳಸಿಕೊಳ್ಳಲು ಇದು ಉತ್ತಮ ಅವಕಾಶವಾಗಿದೆ. ಈ ಕೆಳಗಿನಂತೆ ಉತ್ತರ ಪತ್ರಿಕೆಗಳ ವಿಶ್ಲೇಷಣೆ ಮಾಡಬಹುದು:


1.1 ಬಹುತೇಕ ಮಕ್ಕಳು ಉತ್ತರಿಸದೇ ಇರುವ ಪ್ರಶ್ನೆಗಳನ್ನು ಎಲ್ಲಕ್ಕಿಂತ ಮೊದಲು ಗುರುತಿಸಿಕೊಳ್ಳಬೇಕು. ಇದು ಯಾವ ಪರಿಕಲ್ಪನೆಗಳು ಹೆಚ್ಚಿನ ಮಕ್ಕಳಿಗೆ ಅರ್ಥವಾಗಿಲ್ಲ ಎಂಬುದರ ಚಿತ್ರಣವನ್ನು ಶಿಕ್ಷಕರಿಗೆ ನೀಡುತ್ತದೆ. ಈ ಪರಿಕಲ್ಪನೆಗಳಿಗಾಗಿ ವಿಶೇಷ ಯೋಜನೆಯನ್ನು ಸಿದ್ಧಪಡಿಸಬಹುದು. ಇದಕ್ಕೆ ಕಾರಣ, ಮಕ್ಕಳಿಗೆ ಪ್ರಶ್ನೆಯ ಹಿಂದಿನ ಪರಿಕಲ್ಪನೆಯು ಅರ್ಥವಾಗದೇ ಇರುವುದು, ಮಕ್ಕಳಿಗೆ ಪ್ರಶ್ನೆಯ ಭಾಷೆ ಅರ್ಥವಾಗದೇ ಇರುವುದು ಅಥವಾ ಇನ್ಯಾವುದೇ ಕಾರಣಗಳಿರಬಹುದು. ಅಂತೂ ಅವರು ಪ್ರಶ್ನೆಯನ್ನು ಬಿಟ್ಟುಬಿಡಲು ಇವುಗಳಲ್ಲಿ ಯಾವುದಾದರೊಂದು ಕಾರಣ ಇದ್ದೇ ಇರುತ್ತದೆ. ಮಕ್ಕಳ ಜೊತೆಗೆ ಈ ಕುರಿತಾಗಿ ಮಾತನಾಡಿದಾಗ ಕಾರಣವು ಹೆಚ್ಚು ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದು ಬಾರಿ ಕಾರಣವನ್ನು ಅರಿತುಕೊಂಡರೆ, ಹೆಚ್ಚು ನಿಖರವಾದ ಮತ್ತು ಪರಿಣಾಮಕಾರಿಯಾದ ಯೋಜನೆಯನ್ನು ಸಿದ್ಧಪಡಿಸಬಹುದು.

1.2 ಆ ಬಳಿಕ, ಮಕ್ಕಳು ಪರಿಹರಿಸಲು ಪ್ರಯತ್ನಿಸಿದ, ಆದರೆ ಅವರಲ್ಲಿ ಹೆಚ್ಚಿನವರು ತಪ್ಪು ಮಾಡಿದ ಪ್ರಶ್ನೆಗಳು ಯಾವುವು ಎಂಬುದನ್ನು ವಿಶ್ಲೇಷಿಸಬೇಕು. ಹಾಗಂತ, ಇಷ್ಟೇ ವಿಶ್ಲೇಷಣೆಯಿಂದ ಮುಂದಿನ ಕಾರ್ಯಯೋಜನೆ ರೂಪಿಸಲು ಸಾಧ್ಯವಾಗುವಷ್ಟು ಮಾಹಿತಿ ಲಭ್ಯವಾಗುವುದಿಲ್ಲ. ಇದಕ್ಕೆ ಒಂದಿಷ್ಟು ಅಧಿಕ ವಿಶ್ಲೇಷಣೆಯ ಅಗತ್ಯವಿದೆ. ಅಂದರೆ, ತಪ್ಪಾದ ಪ್ರಶ್ನೆಗಳಲ್ಲಿ ಯಾವ ವಿಧದ ತಪ್ಪುಗಳು ಪದೇಪದೇ ಮರುಕಳಿಸಿವೆ ಎಂದು ಗೊತ್ತಾದರೆ, ಅವು ಮಕ್ಕಳು ಅರಿತುಕೊಳ್ಳುವುದರಲ್ಲಿ ಎಲ್ಲಿ ತಪ್ಪಾಗಿದೆ ಅಥವಾ ಅಪೂರ್ಣವಾಗಿದೆ ಎಂಬುದರ ಸ್ಪಷ್ಟ ಕಲ್ಪನೆಯನ್ನು ಒದಗಿಸುತ್ತದೆ. ಈ ವಿಶ್ಲೇಷಣೆಯು ಮಗುವಿನ ಶೈಕ್ಷಣಿಕ ಮಟ್ಟ, ಅದು ಎಲ್ಲಿ ಸಿಲುಕಿಕೊಂಡಿದೆ ಹಾಗೂ ಮಕ್ಕಳು ಹೇಗೆ ಕಲಿಯುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಇದು ಶಿಕ್ಷಕರಿಗೆ ಪ್ರತಿ ಮಗುವಿಗಾಗಿ ಯೋಜಿಸಲು ಮತ್ತು ಅವರ ಬೋಧನಾ ವಿಧಾನಗಳನ್ನು ಮಾರ್ಪಡಿಸಲು ಅನುಭವ ಆಧಾರಿತ ಮಾರ್ಗಗಳನ್ನು ಕಂಡುಕೊಳ್ಳಲು ಅವಕಾಶವನ್ನು ಒದಗಿಸಿಕೊಡುತ್ತದೆ.

ಮಕ್ಕಳ ತಪ್ಪುಗಳ ಉದಾಹರಣೆಗಳನ್ನು ನೀಡುವ ಮೂಲಕ ವಿಷಯವನ್ನು ಕಲಿಸುವುದನ್ನು ಶಿಕ್ಷಕರು ಯೋಜಿಸಬೇಕು. ಆದರೆ ಆ ಉದಾಹರಣೆಯಲ್ಲಿ ಮಕ್ಕಳ ಹೆಸರುಗಳು ಬಹಿರಂಗಗೊಳ್ಳದಂತೆ ಎಚ್ಚರಿಕೆ ವಹಿಸಬೇಕು. ಹೀಗೆ, ಮಕ್ಕಳ ತಪ್ಪುಗಳು ಅವರನ್ನು ಅರ್ಥ ಮಾಡಿಕೊಳ್ಳುವ ಪ್ರಬಲ ಸಾಧನವಾಗುತ್ತವೆ. ಈ ತಪ್ಪುಗಳು ಕಲಿಕೆಯ ಹಂತಗಳಾಗಿವೆಯೇ ಹೊರತು, ಮಕ್ಕಳನ್ನು ಹಿಂದಕ್ಕೆ ತಳ್ಳುವ ಅಥವಾ ಕೆಳಗಿಳಿಸುವ ಸೂಚನೆಗಳಲ್ಲ. ಬಹುತೇಕ ಮಕ್ಕಳು ತಪ್ಪಾಗಿ ಉತ್ತರಿಸಿದ ಪ್ರಶ್ನೆಗಳಿಗೆ ಕೆಲವು ಮಕ್ಕಳು ಸರಿಯಾಗಿ ಉತ್ತರಿಸಿರುತ್ತಾರಲ್ಲ, ಅದನ್ನು ಕೂಡ ನಾವು ವಿಶ್ಲೇಷಿಸಬೇಕು. ಅಂತಹ ಮಕ್ಕಳನ್ನು ಗುರುತಿಸುವುದು ಮುಂದಿನ ಕಾರ್ಯ ಯೋಜನೆಗಳನ್ನು ರೂಪಿಸಲು ನೆರವಾಗುತ್ತದೆ.

ಉದಾಹರಣೆಗೆ, ಚಿತ್ರ 2ರಲ್ಲಿ, ಒಂದು ಪ್ರಶ್ನೆಯನ್ನು ಕೇಳಲಾಗಿದೆ. “ತಂದೆಯವರು 20 ರೂಪಾಯಿ ಕೊಟ್ಟಿದ್ದಾರೆ. ನೀವು 2 ರೂಪಾಯಿಯ ಪೆನ್ಸಿಲ್, 1 ರೂಪಾಯಿಯ ರಬ್ಬರ್, 3 ರೂಪಾಯಿಯ ಸ್ಕೇಲ್ ಅನ್ನು ಖರೀದಿಸಿದ್ದೀರಿ ಹಾಗೂ 2 ರೂಪಾಯಿಯನ್ನು ಭಿಕ್ಷುಕನಿಗೆ ನೀಡಿದ್ದೀರಿ. ಹಾಗಾದರೆ ಈಗ ನಿಮ್ಮ ಬಳಿ ಎಷ್ಟು ಹಣ ಉಳಿದಿದೆ?” (ಚಿತ್ರ 2 ನೋಡಿ) ಈ ಪ್ರಶ್ನೆಗೆ ಉತ್ತರಗಳನ್ನು ವಿಶ್ಲೇಷಿಸಿದಾಗ, ಪರಿಧಿ ಮತ್ತು ದಿಶಾ ಎಂಬ ಇಬ್ಬರು ಹುಡುಗಿಯರು ಪರಿಕಲ್ಪನೆ ಮತ್ತು ಸಮಸ್ಯೆ ಪರಿಹರಿಸುವ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಂಡಿರುವುದು ಕಂಡುಬರುತ್ತದೆ. ಏಕೆಂದರೆ ಅವರು ಹಣವನ್ನು ಖರ್ಚು ಮಾಡಿದಾಗ, ಅವರು ಆ ಮೊತ್ತವನ್ನು ಒಟ್ಟು ಮೊತ್ತದಿಂದ ಹಂತ ಹಂತವಾಗಿ ಕಳೆಯುತ್ತಾರೆ. ಆದರೆ ಈಗ ಮುಂದಿನ ಹಂತಕ್ಕೆ ಹೋಗಲು, ಅವರು ಎಲ್ಲಾ ವೆಚ್ಚಗಳನ್ನು ಒಟ್ಟಿಗೆ ಕ್ರೋಢೀಕರಿಸುವುದು ಹೇಗೆ ಮತ್ತು ಅದನ್ನು ಒಟ್ಟು ಮೊತ್ತದಿಂದ ಕಳೆಯುವುದು ಹೇಗೆ ಎಂಬುದನ್ನು ಕಲಿಯಬೇಕಾಗಿತ್ತು.

ಆದರೆ ರಾಹುಲ್‌ನ ಪ್ರಯತ್ನದಲ್ಲಿ ಕಂಡುಬರುವ ತಿಳುವಳಿಕೆಯು ಈ ಹುಡುಗಿಯರಲ್ಲಿ ಕಾಣಿಸುವುದಿಲ್ಲ. ವಾಶಿಗೆ ಈ ಪರಿಕಲ್ಪನೆಯೇ ಅರ್ಥವಾಗಿಲ್ಲ. ಪುಷ್ಪರಾಜ್ ಮತ್ತು ಕವಿತಾ ಅವರ ಉದಾಹರಣೆ ಕುತೂಹಲಕಾರಿಯಾಗಿದೆ - ಅವರು ಸಾಮಾನುಗಳ ಖರೀದಿಯನ್ನು ವೆಚ್ಚವೆಂದು ಪರಿಗಣಿಸುತ್ತಿದ್ದಾರೆ, ಆದರೆ ಬಹುಶಃ ಭಿಕ್ಷುಕನಿಗೆ ನೀಡಿದ ಹಣವನ್ನು ವೆಚ್ಚವೆಂದು ಪರಿಗಣಿಸುತ್ತಿಲ್ಲ. ಭಿಕ್ಷುಕನಿಗೆ ನೀಡಿದ ಹಣವನ್ನು ಏನು ಮಾಡಬೇಕೆಂದು ತಿಳಿಯದೆ ಅವರು ಗೊಂದಲಕ್ಕೆ ಸಿಲುಕಿದಂತಿದೆ. ಅಂತಿಮವಾಗಿ, ಅವರು ಆ ಮೊತ್ತವನ್ನು ಶೇಷಕ್ಕೆ ಸೇರಿಸುತ್ತಾರೆ. ಬಹುಶಃ ಮಕ್ಕಳು ಉಳಿದ ಹಣಕ್ಕೆ ಬದಲಾಗಿ ಕೆಲವು ಸಾಮಾನುಗಳನ್ನು ಪಡೆದಿದ್ದೇವೆ ಎಂದು ಭಾವಿಸಿರಬಹುದು. ಆದರೆ ಈ ಹಣದಿಂದ ಏನನ್ನೂ ಪಡೆದಿಲ್ಲ. ಈ ಮಕ್ಕಳೊಂದಿಗೆ ಚರ್ಚಿಸುವ ಮೂಲಕ ಅವರು ಏಕೆ ಹೀಗೆ ಮಾಡಿದರು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಈ ವಿಶ್ಲೇಷಣೆಯು ಪ್ರತಿ ಮಗುವು ಏನನ್ನು ಅರ್ಥ ಮಾಡಿಕೊಂಡಿದೆ, ಏನು ಅರ್ಥ ಮಾಡಿಕೊಂಡಿಲ್ಲ, ಮತ್ತು ಅವರೊಂದಿಗೆ ಯಾವ ಕೆಲಸವನ್ನು ಮಾಡಬೇಕಾಗಿದೆ ಎಂಬುದನ್ನು




ಚಿತ್ರ 2: ಒಂದೇ ಪ್ರಶ್ನೆಯನ್ನು ವಿದ್ಯಾರ್ಥಿಗಳು ಬೇರೆ ಬೇರೆ ರೀತಿಯಲ್ಲಿ ಉತ್ತರಿಸುತ್ತಿರುವುದು.

Q: Write the fractional forms of the decimal numbers given below:


Ans:

| Sl. No. | Decimal | Fractional form |
|---|---|---|
| a. | 0.4 | $\frac{10}{4}$ |
| b. | 0.8 | $\frac{10}{8}$ |
| c. | 0.9 | $\frac{10}{9}$ |

ಚಿತ್ರ 3 : ವಿದ್ಯಾರ್ಥಿಗಳ ಕೆಲಸದ ಒಂದು ಉದಾಹರಣೆ.

Q : What is the sum of 3, 047 and 30,152?

Ans :




ಚಿತ್ರ 4 : ಓರ್ವ ವಿದ್ಯಾರ್ಥಿ ಸಂಕಲನವನ್ನು ಅರ್ಥ ಮಾಡಿಕೊಂಡ ಒಂದು ರೀತಿ.

ಅರಿತುಕೊಳ್ಳಲು ನಮಗೆ ಒಳನೋಟವನ್ನು ನೀಡುತ್ತದೆ. ಮಕ್ಕಳು ಹೇಗೆಲ್ಲಾ ಯೋಚಿಸುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಹಾಗೂ ಅವರಿಗೆ ಕಲಿಸುವ ವಿಧಾನಗಳನ್ನು ನಿರ್ಧರಿಸಲು ಈ ವಿಶ್ಲೇಷಣೆಯು ನಮಗೆ ಸಹಾಯ ಮಾಡುತ್ತದೆ. ಜೊತೆಗೆ, ಪರಿಧಿ ಮತ್ತು ದಿಶಾರಂತಹ ವಿದ್ಯಾರ್ಥಿಗಳ ನೆರವನ್ನು, ಇತರ ಮಕ್ಕಳಿಗೆ ಕಲಿಸುವುದಕ್ಕೂ ತೆಗೆದುಕೊಳ್ಳಬಹುದು ಎಂಬುದು ಇದರಿಂದ ಗೊತ್ತಾಗುತ್ತದೆ.

ಚಿತ್ರ 3ರಿಂದ ಮಕ್ಕಳಿಗೆ ದಶಮಾಂಶ ಮತ್ತು ಭಿನ್ನರಾಶಿಗಳ ಪರಿಕಲ್ಪನೆಯು ಅರ್ಥವಾಗಿಲ್ಲ ಎಂಬುದನ್ನು ತಿಳಿಯಬಹುದಾಗಿದೆ. ಆದರೆ ದಶಮಾಂಶ ಸಂಖ್ಯೆಗಳನ್ನು ಭಿನ್ನರಾಶಿಗಳಾಗಿ ಪರಿವರ್ತಿಸಲು ಶಿಕ್ಷಕರು ತರಗತಿಯಲ್ಲಿ ಆಗಾಗ್ಗೆ ಹೇಳಿಕೊಡುವ ಸೂತ್ರವನ್ನು ಅವರು ನೆನಪಲ್ಲಿ ಇಟ್ಟುಕೊಂಡಿರುವುದು ಕೂಡ ಗೊತ್ತಾಗುತ್ತದೆ. ಅಂದರೆ, ಇಂಥ ಪ್ರಶ್ನೆಗಳಲ್ಲಿ, ದಶಮಾಂಶವನ್ನು ತೆಗೆದುಹಾಕಿದ ನಂತರ ಭಿನ್ನರಾಶಿಗಳ ಸಂಖ್ಯೆಯನ್ನು ರೇಖೆಯ ಮೇಲೆ ಬರೆಯಲಾಗುತ್ತದೆ ಮತ್ತು ಅದರ ಕೆಳಗೆ 1 ಅನ್ನು ಬರೆಯಲಾಗುತ್ತದೆ. ಬಳಿಕ 1ರ ನಂತರ ಎಷ್ಟು ಶೂನ್ಯಗಳಿವೆಯೋ ಅಷ್ಟೇ ಸಂಖ್ಯೆಗಳನ್ನು ದಶಮಾಂಶಕ್ಕೆ ಸೇರಿಸಲಾಗುತ್ತದೆ. ಉದಾಹರಣೆಗೆ, ದಶಮಾಂಶದ ನಂತರ ಒಂದು ಅಂಕಿ ಇದ್ದರೆ 10, ಎರಡು ಅಂಕಿಗಳಿದ್ದರೆ 100, ಮೂರು ಅಂಕಿಗಳಿದ್ದರೆ 1000, ಮತ್ತು ಇದೇ ಪ್ರಕಾರದಲ್ಲಿ ಮುಂದೆ ಶೂನ್ಯಗಳನ್ನು ಸೇರಿಸಲಾಗುತ್ತದೆ. ಆದರೆ ಈ ಉದಾಹರಣೆಯಿಂದ ತಿಳಿದುಬರುವುದೇನೆಂದರೆ, ಬಹುಶಃ ವಿದ್ಯಾರ್ಥಿಗೆ ಅಂತಿಮ ಕ್ಷಣದಲ್ಲಿ ಮೇಲೆ ಏನು ಬರೆಯಬೇಕು ಮತ್ತು ಕೆಳಗೆ ಏನು ಬರೆಯಬೇಕು ಎಂದು ಮರೆತುಹೋಗಿದೆ. ಇದು ಅಂತಹ ಮಕ್ಕಳೊಂದಿಗೆ ಏನು ಮತ್ತು ಹೇಗೆ ಕೆಲಸ ಮಾಡಬೇಕು ಎಂಬುದರ ಒಳನೋಟವನ್ನು ನೀಡುತ್ತದೆ. ಈ ರೀತಿಯ ಪರಿಕಲ್ಪನೆಗೆ ಬೇರೆಬೇರೆ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ.

> **ಒಂದು ವೇಳೆ ಶಿಕ್ಷಕರಿಗೆ ಪ್ರತಿ ವಿಷಯದಲ್ಲೂ ತಮ್ಮ ವಿದ್ಯಾರ್ಥಿಗಳ ಸಾಮರ್ಥ್ಯದ ಮಟ್ಟದ ಕುರಿತಂತೆ ಸ್ಪಷ್ಟವಾದ ತಿಳುವಳಿಕೆ ಇದ್ದಿದ್ದರೆ, ಅವರು ಈ ಕಲಿಸುವ-ಕಲಿಯುವ ಪ್ರಕ್ರಿಯೆಗಳನ್ನು ಅವರ ಮಟ್ಟಕ್ಕೆ ತಕ್ಕಂತೆ ಉತ್ತಮವಾಗಿ ಹೊಂದಿಸಿಕೊಳ್ಳಬಹುದಾಗಿದೆ.**

ಚಿತ್ರ 4 ರಲ್ಲಿ, ವಿದ್ಯಾರ್ಥಿಯು ಮೂಲಭೂತ ಸಂಕಲನ ಮತ್ತು ದಶಕಗಳನ್ನು ಅರ್ಥಮಾಡಿಕೊಂಡಿದ್ದಾನೆ ಆದರೆ ಸಂಖ್ಯೆಗಳಲ್ಲಿ ಅಲ್ಪವಿರಾಮಗಳನ್ನು (commas) ಹೇಗೆ ಬಳಸಲಾಗುತ್ತದೆ ಎಂಬುದನ್ನು ಪ್ರಾಯಶಃ ಸಂಪೂರ್ಣವಾಗಿ ಗ್ರಹಿಸಿಲ್ಲ. ಆದಾಗ್ಯೂ, ವಿದ್ಯಾರ್ಥಿಯು ಮೊದಲ ಸಂಖ್ಯೆಯನ್ನು ಸರಿಯಾಗಿ ಬರೆದಿರುವುದರಿಂದ, ನಾವು ಈ ನಿರ್ಧಾರಕ್ಕೆ ಬರಲಾಗುವುದಿಲ್ಲ. ಮಗುವಿನೊಂದಿಗೆ ಸಂಕಲನದ ಪರಿಕಲ್ಪನೆಯ ಬಗ್ಗೆ ಕೆಲಸ ಮಾಡುವ ಅಗತ್ಯವಿಲ್ಲ. ಆದರೆ ಸಂಖ್ಯೆಗಳನ್ನು ಹೇಗೆ ಬರೆಯುವುದು, ಅಲ್ಪವಿರಾಮಗಳನ್ನು ಹೇಗೆ ಬಳಸುವುದು ಎಂಬುದರ ಬಗ್ಗೆ ಮಾತನಾಡುವ ಅವಶ್ಯಕತೆಯಿದೆ ಎಂದು ಇದರಿಂದ ಮನದಟ್ಟಾಗುತ್ತದೆ. ಈ ಉತ್ತರವು ಶಿಕ್ಷಕರಿಗೆ ಅನೇಕ ವಿಷಯಗಳನ್ನು ಹೇಳುತ್ತದೆ. ಉದಾಹರಣೆಗೆ, ಮಕ್ಕಳು ಸಾಮಾನ್ಯವಾಗಿ ಅಲ್ಪವಿರಾಮವನ್ನು ಅರ್ಥಮಾಡಿಕೊಳ್ಳುವುದಿಲ್ಲ, ಕಲಿಸುವ ಸಂದರ್ಭದಲ್ಲಿ ತಾವು ಯಾವ ಸೂಕ್ಷ್ಮತೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು, ಪ್ರಶ್ನೆ ಪತ್ರಿಕೆಯನ್ನು ತಯಾರಿಸುವಾಗ ಯಾವ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು ಇತ್ಯಾದಿ ವಿಷಯಗಳು ಇದರಿಂದ ತಿಳಿದುಬರುತ್ತದೆ.

## 2. ಮಕ್ಕಳಿಂದ ಮಕ್ಕಳ ಉತ್ತರಪತ್ರಿಕೆಗಳ ವಿಶ್ಲೇಷಣೆ

ಇದೇ ವೇಳೆ, ಮಕ್ಕಳ ವಾರ್ಷಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮಕ್ಕಳ ಮೂಲಕವೇ ವಿಶ್ಲೇಷಣೆ ಮಾಡಿಸುವುದು ಕೂಡ ಅವಶ್ಯಕ ಹಾಗೂ ಮಹತ್ವಪೂರ್ಣವಾದುದು. ಮೊತ್ತಮೊದಲಿಗೆ, ಮಕ್ಕಳು ತಮ್ಮ ಸ್ವಂತ ಉತ್ತರಪತ್ರಿಕೆಗಳನ್ನು ವಿಶ್ಲೇಷಿಸಿ, ತಾವು ಯಾವ ಪ್ರಶ್ನೆಗಳನ್ನು ಸರಿಯಾಗಿ ಉತ್ತರಿಸಿದ್ದಾರೆ ಮತ್ತು ಯಾವ ಪ್ರಶ್ನೆಗಳನ್ನು ತಪ್ಪಾಗಿ ಉತ್ತರಿಸಿದ್ದಾರೆ, ಅವರು ತಾವು ತಪ್ಪು ಮಾಡಿರುವ ಪ್ರಶ್ನೆಗಳಲ್ಲಿ ಏನು ತಪ್ಪು ಮಾಡಿದ್ದಾರೆ ಎಂಬುದನ್ನು ಹೇಳಲಿ. ಈ ಪ್ರಕ್ರಿಯೆಯು ಮಕ್ಕಳಿಗೆ ಯೋಚಿಸಲು ಮತ್ತು ಕಲಿಯಲು ಸಹಾಯ ಮಾಡುತ್ತದೆ. ಬಳಿಕ, ಅವರು ಸಣ್ಣ ಗುಂಪುಗಳಲ್ಲಿ ಪರಸ್ಪರರ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಲಿ. ಇದರಲ್ಲಿ, ಬೇರೆಯವರು ಹೇಗೆ ಸರಿಮಾಡಿದ್ದಾರೆ, ತಪ್ಪಾಗಿದ್ದರೆ ಆ ತಪ್ಪು ಎಲ್ಲಿ ಆಗಿದೆ, ಹೇಗಾಗಿದೆ ಇತ್ಯಾದಿಗಳನ್ನು ಅವರು ನೋಡಬೇಕು. ಮಕ್ಕಳು ಒಬ್ಬರು ಇನ್ನೊಬ್ಬರ ಉತ್ತರ ಪತ್ರಿಕೆಗಳನ್ನು ನೋಡಲು ಇಷ್ಟಪಡುತ್ತಾರೆ. ಅವರು ತಾವು ತಪ್ಪಾಗಿ ಉತ್ತರಿಸಿರುವ ಪ್ರಶ್ನೆಗೆ ಇನ್ನೊಬ್ಬರು ಸರಿಯಾಗಿ ಉತ್ತರಿಸಿರುವುದನ್ನು ನೋಡಿದಾಗ, ಅವರ ಕಲಿಕೆಯು ಇನ್ನಷ್ಟು ಸಹಜವೂ ಸರಳವೂ ಆಗುತ್ತದೆ. ಈ ಇಡೀ ಪ್ರಕ್ರಿಯೆಯು ತುಂಬಾ ಮೋಜಿನದ್ದಾಗಿರುತ್ತದೆ.

## 3. ಅವಶ್ಯಕತೆ-ಆಧಾರಿತ ಗುಂಪುಗಳಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಮಕ್ಕಳ ಸಹಯೋಗ

ತರಗತಿಯ ಸಾಂಪ್ರದಾಯಿಕ ಆಸನ ವ್ಯವಸ್ಥೆಯಿಂದ ಭಿನ್ನ ರೀತಿಯಲ್ಲಿ ಮಕ್ಕಳನ್ನು ಕೂರಿಸಿ ಕಲಿಸುವ ಪ್ರಯೋಗಗಳನ್ನು ಮಾಡಬೇಕಾದ ಸಮಯವಿದು. ಈ ವ್ಯವಸ್ಥೆಯು ಉತ್ತರಪತ್ರಿಕೆಗಳ ವಿಶ್ಲೇಷಣೆಗೆ ಬಹಳ ಉಪಯುಕ್ತವಾಗಿದೆ. ಯಾವ ಪರಿಕಲ್ಪನೆಗಳಲ್ಲಿ ಮಕ್ಕಳು ತಪ್ಪು ಮಾಡಿರುವರೋ, ಅವರನ್ನು ಅವರ ತಪ್ಪುಗಳಿಗೆ ಅನುಗುಣವಾಗಿ ವರ್ಗೀಕರಿಸಿ ತಾತ್ಕಾಲಿಕ ಸ್ವರೂಪದ ಗುಂಪುಗಳಲ್ಲಿ ಕುಳಿತುಕೊಳ್ಳುವಂತೆ ಮಾಡಬೇಕು. ಇದರಲ್ಲಿ, ಅಗತ್ಯಕ್ಕೆ ಅನುಗುಣವಾಗಿ ಒಂದು ಅಥವಾ ಎರಡು-ಮೂರು ತರಗತಿಗಳ ಮಕ್ಕಳು ಒಟ್ಟಿಗೆ ಕುಳಿತುಕೊಳ್ಳಬಹುದು. ಆದರೆ ಮಕ್ಕಳಿಗೆ ಕೆಲವು ವಿಷಯಗಳು ಅರ್ಥವಾಗುವುದಿಲ್ಲ ಎಂಬ ಸಂದೇಶವು ಅವರಿಗೆ ಹೋಗದಂತೆ ಎಚ್ಚರ ವಹಿಸಬೇಕು. ಹೀಗಾಗಿ ಆ ಪರಿಕಲ್ಪನೆಗೆ ಸಂಬಂಧಿಸಿದ ಪ್ರಶ್ನೆಗೆ ಸರಿಯಾಗಿ ಉತ್ತರಿಸಿರುವ ಒಬ್ಬ ಅಥವಾ ಇಬ್ಬರು ಮಕ್ಕಳಿಗೆ ಆ ಗುಂಪಿನಲ್ಲಿರುವ ಮಕ್ಕಳಿಗೆ ಪರಿಕಲ್ಪನೆಯನ್ನು ವಿವರಿಸುವ ಹೊಣೆಯನ್ನು ವಹಿಸಬಹುದು. ಮಕ್ಕಳಿಗೆ ಕಲಿಸುವ ವಿಧಾನಗಳು ಬಹಳ ಸಲ ಮಕ್ಕಳು ಕಲಿಸುವುದರಲ್ಲಿ ಹೆಚ್ಚು ಪರಿಣಾಮಕಾರಿಯಾಗಬಹುದು. ಈ ಸಮಯದಲ್ಲಿ, ಶಿಕ್ಷಕರು ಬೇರೆಬೇರೆ ಗುಂಪುಗಳನ್ನು ಅಥವಾ ತರಗತಿಯನ್ನು ಗಮನಿಸಬೇಕಾಗುತ್ತದೆ. ಇದರಿಂದ ಮಕ್ಕಳಿಗೆ ಕಲಿಯಲು ಮತ್ತು ಅರ್ಥ ಮಾಡಿಕೊಳ್ಳಲು ಉತ್ತಮ ಅವಕಾಶಗಳು ಸೃಷ್ಟಿಯಾಗುತ್ತದೆ.

## 4. ಪ್ರಮುಖ ಪರಿಕಲ್ಪನೆಗಳ ಮೇಲೆ ವಿಶೇಷ ಕಾರ್ಯಯೋಜನೆ

ಮಕ್ಕಳಿಗೆ ಯಾವ ಪರಿಕಲ್ಪನೆಗಳು ಸಂಪೂರ್ಣವಾಗಿ ಅರ್ಥವಾಗಿಲ್ಲ, ಮತ್ತು ಯಾವ ಪರಿಕಲ್ಪನೆಗಳನ್ನು ಮಕ್ಕಳು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ

ಅಥವಾ ಅಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂಬುದು ಮಕ್ಕಳ ಉತ್ತರಪತ್ರಿಕೆಗಳನ್ನು ನೋಡುವುದರಿಂದ ಬಹುತೇಕ ಸ್ಪಷ್ಟವಾಗುತ್ತದೆ. ಅಪೂರ್ಣವಾದ ಅಥವಾ ತಪ್ಪಾಗಿ ಅರ್ಥೈಸಿಕೊಳ್ಳಲಾದ ಪರಿಕಲ್ಪನೆಗಳಲ್ಲಿ ಎಲ್ಲಿ ತಪ್ಪಾಗಿದೆ? ಮಕ್ಕಳು ಅರ್ಥ ಮಾಡಿಕೊಳ್ಳುವಲ್ಲಿ ತಪ್ಪು ಮಾಡುತ್ತಿರುವ ಭಾಗಗಳು ಇಲ್ಲವೇ ಪ್ರಕ್ರಿಯೆಗಳ ಕುರಿತಂತೆ ಗಮನ ಹರಿಸಬೇಕಾಗುತ್ತದೆ. ಕೆಲವೊಮ್ಮೆ ಮಕ್ಕಳಿಗೆ ಅರ್ಥವಾಗದ ಪದಗಳನ್ನು ಬಳಸುವುದರಿಂದ, ಇಲ್ಲವೇ ಆ ಪದಗಳ ಅರ್ಥವು ಮಕ್ಕಳಿಗೆ ವಿಭಿನ್ನವಾಗಿರುವುದರಿಂದಲೂ ಈ ತಪ್ಪುಗಳು ಆಗಿರಬಹುದು. ಅಂತಹ ಪರಿಕಲ್ಪನೆಗಳ, ಅವರು ಮಾಡಿದ ತಪ್ಪುಗಳ ಆಧಾರದ ಮೇಲೆ ಯೋಜನೆಯನ್ನು ರೂಪಿಸಬೇಕು. ಮಕ್ಕಳು ಉತ್ತರಿಸಲು ಯತ್ನಿಸದ ಪ್ರಶ್ನೆಗಳನ್ನು ವಿಶ್ಲೇಷಿಸುವ ಮೂಲಕ, ಮಕ್ಕಳು ಆ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಂಡಿಲ್ಲ ಎಂಬುದನ್ನು ಕಂಡುಕೊಳ್ಳಬಹುದು. ಆದರೆ ಅವರಿಗೆ ಏನು ಅರ್ಥವಾಗಿಲ್ಲ ಹಾಗೂ ಎಲ್ಲಿ ಕಷ್ಟವಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಈ ಎಲ್ಲಾ ಪರಿಕಲ್ಪನೆಗಳನ್ನು ಅರ್ಥೈಸಲು, ಬೇರೆಬೇರೆ ವಿಧದ ಚಟುವಟಿಕೆಗಳು, ಆಟಗಳು, ವ್ಯಾಯಾಮಗಳು ಮತ್ತು ಟಿ.ಎಲ್.ಎಂ. ಆಧಾರಿತ ಸೃಜನಶೀಲ ಬೋಧನಾ ಯೋಜನೆಗಳು ಅವಶ್ಯಕವಾಗಿವೆ. ಉದಾಹರಣೆಗೆ, ಒಂದು ತರಗತಿಯಲ್ಲಿ, ಮಕ್ಕಳಿಗೆ ಮೀಟರ್, ಸೆಂಟಿಮೀಟರ್ ಮತ್ತು ಅಡಿಯ ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಶಿಕ್ಷಕನು ದರ್ಜಿಯ ಇಂಚಿನ ಟೇಪ್ ಬಳಸಿ ಕೊಠಡಿಗಳು ಮತ್ತು ನೆಲದ ವಿವಿಧ ಅಳತೆಗಳನ್ನು ತೆಗೆಸಿಕೊಂಡು ಅವುಗಳ ಪಟ್ಟಿಯನ್ನು ಬರೆಸಿದರು ಹಾಗೂ ತರಗತಿಯಲ್ಲಿ ಇದರ ಬಗ್ಗೆ ಚರ್ಚೆಯನ್ನು ನಡೆಸಲಾಯಿತು. ಇದು ಅಳತೆಯ ದೊಡ್ಡ ಮತ್ತು ಸಣ್ಣ ಘಟಕಗಳು ಯಾವುವು ಹಾಗೂ ಅವುಗಳ ನಡುವಿನ ಪರಸ್ಪರ ಸಂಬಂಧವೇನು ಎಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ಇದು ಸಹಾಯ ಮಾಡಿತು.

> **“ಒಂದು ವೇಳೆ ಮನೆಕಲಸಗಳು, ಶಾಲೆಯಲ್ಲಿ ಕಲಿಸಲಾದ ಪರಿಕಲ್ಪನೆಗಳನ್ನೊಳಗೊಂಡಿದ್ದು, ಅವು ದೈನಂದಿನ ಜೀವನದಲ್ಲೂ ಅನ್ವಯವಾಗುವಂತಿದ್ದರೆ, ಆಗ ಶಾಲೆ ಮತ್ತು ಮನೆ ಒಂದಕ್ಕೊಂದು ಪೂರಕವಾಗುತ್ತವೆ.”**

## 5. ಮನೆಕೆಲಸ

ಹಲವು ಸಂದರ್ಭಗಳಲ್ಲಿ ಮಕ್ಕಳಿಗೆ ಮನೆಯೊಂದಿಗೆ ಯಾವುದೇ ಸಂಬಂಧವಿಲ್ಲದ ಮನೆಕೆಲಸವನ್ನು ನೀಡಲಾಗುತ್ತದೆ. ಮಕ್ಕಳು ಶಾಲೆಯಲ್ಲಿ ಮಾಡಲು ಸಾಧ್ಯವಾಗದ, ಅಥವಾ ಅಲ್ಲಿ ಅಪೂರ್ಣವಾಗಿ ಉಳಿದಿರುವ, ಅಥವಾ ಪುನರಾವರ್ತಿಸಬೇಕಾದ ಕೆಲಸವನ್ನು ಮನೆಯಲ್ಲಿ ಮಾಡಲು ನೀಡಲಾಗುತ್ತದೆ. ಹೀಗಾಗಿ, ಮನೆ ಕೆಲಸದ ಹೆಸರಿನಲ್ಲಿ, ಮನೆಯೂ ಸಹ ಶಾಲೆಯ ವಿಸ್ತರಣೆಯಾಗುತ್ತದೆ. ಮಕ್ಕಳು ಹೆಚ್ಚಾಗಿ ಅಂತಹ ಹೋಂವರ್ಕ್ ಬಗ್ಗೆ ಯಾವಾಗಲೂ ಉದಾಸೀನತೆಯನ್ನು ತೋರಿಸುತ್ತಾರೆ. ಒಂದು ವೇಳೆ ಮನೆಕಲಸಗಳು,ಶಾಲೆಯಲ್ಲಿ ಕಲಿಸಲಾದ ಪರಿಕಲ್ಪನೆಗಳನ್ನೊಳಗೊಂಡಿದ್ದು, ಅವು ದೈನಂದಿನ ಜೀವನದಲ್ಲೂ ಅನ್ವಯವಾಗುವಂತಿದ್ದರೆ, ಆಗ ಶಾಲೆ ಮತ್ತು ಮನೆ ಒಂದಕ್ಕೊಂದು ಪೂರಕವಾಗುತ್ತವೆ.

ಹೀಗಾಗಿ, ಮಕ್ಕಳು ಅಪೂರ್ಣವಾಗಿ ಅಥವಾ ತಪ್ಪಾಗಿ ಅರ್ಥೈಸಿಕೊಂಡಿರುವ ಅಥವಾ ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ ಪರಿಕಲ್ಪನೆಗಳ ಮೇಲೆ ಮನೆಕೆಲಸ ನೀಡುವುದು ಅವಶ್ಯಕವಾಗಿದೆ. ಇದರಿಂದ ಆ ಪರಿಕಲ್ಪನೆಗಳನ್ನು ಮೂರ್ತ ರೂಪದಲ್ಲಿ ನೋಡಲು ಮತ್ತು ಅಭ್ಯಾಸ ಮಾಡಲು ಅವರಿಗೆ ಅವಕಾಶಗಳನ್ನು ನೀಡಿದಂತಾಗುತ್ತದೆ. ಉದಾಹರಣೆಗೆ, ಮಕ್ಕಳು ಸಾಮಾನ್ಯವಾಗಿ ಪಟ್ಟಿಯನ್ನು ಅಥವಾ ಸೂಚಿಯನ್ನು ಓದಲು ಕಷ್ಟಪಡುತ್ತಾರೆ. ಅವರಿಗೆ ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಮಕ್ಕಳನ್ನು ತಮ್ಮ ಕುಟುಂಬ ಅಥವಾ ಸುತ್ತಮುತ್ತಲಿನ ಜನರನ್ನು ಅಥವಾ ಹಳ್ಳಿಯಲ್ಲಿರುವ ಪ್ರಾಣಿಗಳನ್ನು ಕುರಿತಾಗಿ ಸಮೀಕ್ಷೆ ಮಾಡಲು ಹೇಳಿದರೆ ಮತ್ತು ಅವುಗಳನ್ನು ಪಟ್ಟಿಯಲ್ಲಿ ಬರೆಯಲು ಹೇಳಿದರೆ ಅದು ಅವರಿಗೆ ಬಹಳಷ್ಟು ಸಹಾಯ ಮಾಡುತ್ತದೆ. ಇಂತಹ ಪಟ್ಟಿಗಳ ಕುರಿತಾಗಿ ಚರ್ಚಿಸಿದಾಗ, ಅವರು ಅವುಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಮಕ್ಕಳು ಇಂತಹ ಸವಾಲಿನ ಹಾಗೂ ಸೃಜನಶೀಲ ಕೆಲಸವನ್ನು ಆನಂದಿಸುತ್ತಾರೆ. ಜೊತೆಗೆ ಇದರಿಂದ ಅವರ ಆತ್ಮವಿಶ್ವಾಸವೂ ಹೆಚ್ಚಾಗುತ್ತದೆ.

ಹೀಗೆ, ನಾವು ಸಿದ್ಧ ಮಾದರಿಯಿಂದ ಹೊರಬಂದು, ಮಕ್ಕಳ ಉತ್ತರಪತ್ರಿಕೆಗಳಿಂದ ಅವರ ನಿಜವಾದ ಶೈಕ್ಷಣಿಕ ಮಟ್ಟ ಹಾಗೂ ಅಗತ್ಯಗಳನ್ನು ಅರ್ಥ ಮಾಡಿಕೊಂಡು, ಅದಕ್ಕೆ ಅನುಗುಣವಾಗಿ ಪರಿಣಾಮಕಾರಿ ಕಲಿಕಾ ಯೋಜನೆಗಳನ್ನು ಸಜ್ಜುಗೊಳಿಸುವ ಮೂಲಕ ಮಕ್ಕಳಿಗೆ ನೆರವಾಗಲು ವಾರ್ಷಿಕ ಪರೀಕ್ಷೆಗಳ ನಂತರದ ಸಮಯವು ಒಂದು ಅಪೂರ್ವ ಅವಕಾಶವಾಗಿದೆ. ಈ ರೀತಿಯಲ್ಲಿ, ಪರೀಕ್ಷೆಗಳನ್ನು ಕೇವಲ ತರಗತಿಯ ಪ್ರಗತಿಯ ಸಾಧನವಾಗಿ ಮಾಡುವ ಬದಲು ಇಡೀ ಕಲಿಕೆಯ ಪ್ರಕ್ರಿಯೆಯ ಮೇಲೆ ಪರಿಣಾಮಕಾರಿ ಸಾಧನವನ್ನಾಗಿ ಮಾಡಬಹುದಾಗಿದೆ. ಈ ಪ್ರಯತ್ನಗಳು ಮಕ್ಕಳ ಕುರಿತಾಗಿ, ಜೊತೆಗೆ ಕಲಿಕೆಯ ಪ್ರಕ್ರಿಯೆಗಳ ಕುರಿತಾಗಿ ತಮ್ಮ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಶಿಕ್ಷಕರಿಗೆ ಸಹಾಯಕವಾಗಬಹುದು.




ಚಿತ್ರ 5 : ಓದುವ ಮೂಲೆಯಲ್ಲಿ ತಮ್ಮ ಇಷ್ಟದ ಪುಸ್ತಕಗಳಿಗಾಗಿ ಹುಡುಕುತ್ತಿರುವ ವಿದ್ಯಾರ್ಥಿಗಳು.

---



**ಜಗಮೋಹನ್ ಸಿಂಗ್ ಕಠೈತ್** ಅವರು ಸುಮಾರು 30 ವರ್ಷಗಳಿಂದ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಕಳೆದ 15 ವರ್ಷಗಳಿಂದ ಅಜೀಮ್ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ, ಅಜೀಂ ಪ್ರೇಮ್‌ಜಿ ಫೌಂಡೇಷನ್ ಮೂಲಕ ಸಾಂವಿಧಾನಿಕ ಮೌಲ್ಯಗಳ ಕುರಿತಂತೆ ಯುವಕರಿಗಾಗಿ ನಡೆಯುತ್ತಿರುವ ಕಾರ್ಯಯೋಜನೆಗಳ ನೇತೃತ್ವ ವಹಿಸುತ್ತಿದ್ದಾರೆ.

**ಸಂಪರ್ಕ:** jagmohan@azimpremjifoundation.org

ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಬೇಸಿಗೆ ಶಿಬಿರಗಳು ಮತ್ತು ರಜೆಯ ಸಮಯದಲ್ಲಿ ಬೋಧನೆ-ಕಲಿಕೆ

**ಶೋಭನ್ ಸಿಂಗ್ ನೇಗಿ**

**ಮುಂದಿನ ತರಗತಿಗಳಿಗೆ ಹೋಗುವ ಮೊದಲು, ವಿದ್ಯಾರ್ಥಿಗಳು ಹಿಂದಿನ ವರ್ಷದ ತಮ್ಮ ಅನುಭವಗಳನ್ನು ಪುನರಾವಲೋಕಿಸಬೇಕು. ಈ ಅನುಭವಗಳು ಮುಂದಿನ ವರ್ಷದ ಕಲಿಕೆಗೆ ಅಡಿಪಾಯವನ್ನು ಬಲಪಡಿಸಲು ಸಹಾಯ ಮಾಡುತ್ತವೆ. ಬೇಸಿಗೆ ಶಿಬಿರಗಳು ಮತ್ತು ರಜಾ ದಿನಗಳಲ್ಲಿ, ಆಕರ್ಷಕ ಮತ್ತು ಸೃಜನಾತ್ಮಕ ಬೋಧನಾ ವಿಧಾನಗಳನ್ನು ಆನಂದದಾಯಕ ವಾತಾವರಣದಲ್ಲಿ ಬಳಸಬಹುದು. ಇದು ಮಕ್ಕಳು ತಮ್ಮ ಮುಂದಿನ ತರಗತಿಗಳಲ್ಲಿ ಎದುರಿಸುವ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಸಹ ಸಹಾಯ ಮಾಡುತ್ತದೆ.**

ಮಕ್ಕಳ ಜೀವನದಲ್ಲಿ ಹೊಸ ತರಗತಿಗೆ ಅಂದರೆ ಮುಂದಿನ ತರಗತಿಗೆ ಪ್ರವೇಶಿಸುವುದು ಒಂದು ಪ್ರಮುಖ ಘಟನೆಯಾಗಿದೆ. ಹೆಚ್ಚಿನ ಮಕ್ಕಳು ಉತ್ತೀರ್ಣರಾಗಿ ಮುಂದಿನ ತರಗತಿಗೆ ಹೋಗುತ್ತಾರೆ. ಆದರೆ ಹಿಂದಿನ ತರಗತಿಯಲ್ಲಿನ ಪ್ರಶ್ನೆಗಳು ಅವರಲ್ಲಿ ಇನ್ನೂ ಉಳಿದುಕೊಂಡಿರುತ್ತವೆ ಎಂಬುದು ಅನುಭವದಿಂದ ತಿಳಿದ ವಿಷಯವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹೊಸ ಪಠ್ಯ ಪುಸ್ತಕಗಳು ಜುಲೈ ತಿಂಗಳಿನಲ್ಲಿ ಲಭ್ಯವಾಗುತ್ತವೆ ಎಂಬುದು ಸಾಮಾನ್ಯವಾಗಿ ಕಂಡುಬರುತ್ತದೆ. ಆದ್ದರಿಂದ, ಬೇಸಿಗೆ ರಜೆಯ ಸಮಯವು, ಮುಂದಿನ ತರಗತಿಯ ಕಲಿಕೆಗೆ ಅಗತ್ಯವಿರುವ ಅನುಭವಗಳಿಂದ ವಂಚಿತರಾಗಿರುವ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಲು ಒಂದು ಅವಕಾಶವನ್ನು ನೀಡುತ್ತದೆ. ಈ ಲೇಖನದಲ್ಲಿ, ಅಂತಹ ಒಂದು ಪ್ರಯತ್ನವನ್ನು ವಿವರಿಸಲಾಗಿದೆ.

## ಬೇಸಿಗೆ ರಜೆ: ಕಲಿಯುವ ಮತ್ತು ಕಲಿಸುವಲ್ಲಿನ ಅನುಭವಗಳು

ರಜೆಯ ಆರಂಭಿಕ ತಿಂಗಳುಗಳು, ಅಂದರೆ ಏಪ್ರಿಲ್-ಮೇ ತಿಂಗಳಿನ ಸಮಯವನ್ನು, ಹಿಂದಿನ ತರಗತಿಗಳಲ್ಲಿ ಮಾಡಿದ ಪಾಠಗಳನ್ನು ಪುನರಾವರ್ತಿಸಲಿಕ್ಕಾಗಿ ಬಳಸಿಕೊಳ್ಳುವುದು ಒಳ್ಳೆಯದು. ಮಕ್ಕಳ ವಾರ್ಷಿಕ ಪರೀಕ್ಷೆಗಳನ್ನು ಶಿಕ್ಷಕರೇ ನಡೆಸುತ್ತಾರೆ ಆದ್ದರಿಂದ, ಹೀಗೆ ಪುನರಾವರ್ತನೆ ಮಾಡಲು ಶಿಕ್ಷಕರ ಬಳಿ ಪಕ್ಕಾ ಆಧಾರವಿರುತ್ತದೆ. ಎಲ್ಲಾ ಶಿಕ್ಷಕರಿಗೂ ಪ್ರತಿ ಮಗುವಿನ ಶೈಕ್ಷಣಿಕ ಮಟ್ಟದ ಬಗ್ಗೆ ಸ್ಪಷ್ಟ ಚಿತ್ರಣ ಇರುತ್ತದೆ. ಯಾವ ತರಗತಿಯ ಯಾವ ವಿದ್ಯಾರ್ಥಿ ಯಾವ ಹಂತದಲ್ಲಿದ್ದಾರೆ ಎಂದು ಅವರಿಗೆ ತಿಳಿದಿರುತ್ತದೆ. ಹೀಗಿರುವಾಗ ಶಿಕ್ಷಕರು ಮಕ್ಕಳ



ಚಿತ್ರ 1 : ಬೇಸಿಗೆ ಶಿಬಿರದಲ್ಲಿ ಭಾಗಿಯಾಗಿರುವ ವಿದ್ಯಾರ್ಥಿಗಳು.

ಸಾಮರ್ಥ್ಯದ ಮಟ್ಟವನ್ನು ಆಧರಿಸಿ ಗುಂಪುಗಳನ್ನು ರಚಿಸುವುದು ಉತ್ತಮ. ಆ ನಂತರ ಮಕ್ಕಳ ಶೈಕ್ಷಣಿಕ ಗುಂಪಿನ ಮಟ್ಟಕ್ಕನುಗುಣವಾಗಿ ಬೋಧನಾ ಯೋಜನೆಯನ್ನು ಸಿದ್ಧಪಡಿಸಲಾಗುತ್ತದೆ.

ನನ್ನ ಅವಲೋಕನಗಳಲ್ಲಿ, ಚಿತ್ರಗಳು ಅಥವಾ ಚಿತ್ರ ಕಥೆಗಳ ಬಗ್ಗೆ ಮಾತನಾಡುವುದು ಚರ್ಚಿಸುವುದು ಮಕ್ಕಳೊಂದಿಗೆ ಉತ್ತಮ ಮತ್ತು ಸಹಜವಾದ ಆರಂಭಿಕ ಹಂತವಾಗಿದೆ ಎಂಬುದನ್ನು ನಾನು ಕಂಡುಕೊಂಡಿದ್ದೇನೆ. ಈ ಚಟುವಟಿಕೆಯು ಮಕ್ಕಳ ಅಭಿವ್ಯಕ್ತಿ, ಕಲ್ಪನಾ ಶಕ್ತಿ ಮತ್ತು ಮೌಖಿಕ ಭಾಷೆಯ ಬೆಳವಣಿಗೆಗೆ ಪರಿಣಾಮಕಾರಿ ಎಂದು ಕಂಡುಬಂದಿದೆ. 5ನೇ ತರಗತಿಯವರೆಗಿನ ಮಕ್ಕಳ ಬರಹದಲ್ಲಿ ಮತ್ತು ಮೌಖಿಕ ಭಾಷಾ ಬೆಳವಣಿಗೆಯಲ್ಲಿ ಚಿತ್ರಗಳು ಮತ್ತು ಚಿತ್ರ ಕಥೆಗಳು ಪರಿಣಾಮಕಾರಿ ಮಾಧ್ಯಮವಾಗಿದೆ. ಅನೇಕ ಶಿಕ್ಷಕರು ಚಿತ್ರಕಥೆಗಳ ಮೂಲಕ ಮಕ್ಕಳೊಂದಿಗೆ ಮಾತುಕತೆ ನಡೆಸುವುದನ್ನು ಮತ್ತು ಮಕ್ಕಳು ಚಿತ್ರಗಳನ್ನಿಟ್ಟುಕೊಂಡು ಅವುಗಳ ಮೇಲೆ ಕಥೆ ಹೆಣೆಯುವುದನ್ನು, ಆ ಕುರಿತು ಕಲ್ಪನೆ ಮಾಡಿಕೊಳ್ಳುವುದನ್ನು ನಾನು ನೋಡಿದ್ದೇನೆ. ಅಲ್ಲದೆ ಅವರು, ಪ್ರಾಥಮಿಕ ತರಗತಿಗಳಲ್ಲಿ ಚಿತ್ರಗಳ ಮೇಲೆ ತಾವು ಬರೆದ ಕಥೆಗಳನ್ನು ವಿವರಿಸುತ್ತಿರುವುದನ್ನು ಸಹ ನೋಡಿದೆ.

ಸಣ್ಣ ತರಗತಿಗಳ ಮಕ್ಕಳಲ್ಲಿ ಭಾಷೆಯ ಮೌಖಿಕ ಬೆಳವಣಿಗೆಯಲ್ಲಿ ಇದು ಆಸಕ್ತಿದಾಯಕ ಮತ್ತು ಅದ್ಭುತ ಚಟುವಟಿಕೆಯಾಗಿದೆ. ಏಕ್ತಾರಾ, ಏಕಲವ್ಯ, ರೂಮ್ ಟು ರೀಡ್, ನ್ಯಾಷನಲ್ ಬುಕ್ ಟ್ರಸ್ಟ್ ಮುಂತಾದ ಸಂಸ್ಥೆಗಳ ಮೂಲಕ, ಚಿತ್ರ ಸಹಿತ ಕಥೆಪುಸ್ತಕಗಳು ಸೇರಿದಂತೆ ಇಂತಹ ಬಹಳಷ್ಟು ಒಳ್ಳೆಯ ಸಾಹಿತ್ಯವು ಪ್ರಕಟಣೆಯಾಗುತ್ತಿವೆ. ಈ ಎಲ್ಲಾ ಸಂಸ್ಥೆಗಳು ಮಕ್ಕಳಿಗಾಗಿ ಅನೇಕ ಉತ್ತಮ ಚಿತ್ರ ಇರುವ ಕಥೆ ಪುಸ್ತಕಗಳನ್ನು ಪ್ರಕಟಿಸಿವೆ. ಒಟ್ಟಾರೆಯಾಗಿ ಹೇಳುವುದಾದರೆ ಈ ಅವಧಿಯಲ್ಲಿ, ಮಕ್ಕಳ ಮನಸ್ಸನ್ನು ಮತ್ತು ಅವರ ಭಾಷಾ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಲು, ಅವರಲ್ಲಿ ಓದುವ ಆಸಕ್ತಿಯನ್ನು ಮೂಡಿಸಲು ಮತ್ತು ಅವರ ಕಲ್ಪನೆಗೆ ರೆಕ್ಕೆಗಳನ್ನು ಮೂಡಿಸುವ ಕೆಲಸವನ್ನು ಮಾಡಬಹುದು.

> **ಇಲ್ಲಿ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರು ಕೂಡಾ ಕಲಿಯುವುದನ್ನು ಗಮನಿಸಬಹುದು. ಶಿಕ್ಷಕರು ಕೂಡಾ ಮಕ್ಕಳಿಗೆ ಶಾಲೆಯಲ್ಲಿ ಅಥವಾ ತರಗತಿಯಲ್ಲಿ ಕೊಡಲಾಗದ ಅನುಭವಗಳನ್ನು ಕೊಡಲು ಬಯಸುತ್ತಾರೆ.**

ನನಗೆ ಅರ್ಥವಾದ ಮತ್ತೊಂದು ವಿಷಯವೆಂದರೆ, ವಿಷಯವೆಂದರೆ, 8ನೇ ತರಗತಿಯವರೆಗಿನ ಮಕ್ಕಳು ಈಗಲೂ ಸಹ ಮೂಲ ಭಾಷೆ ಮತ್ತು ಸಂಖ್ಯೆಗಳನ್ನು ಕಲಿಯಲು ಹೆಣಗುತ್ತಿದ್ದಾರೆ ಎನ್ನುವುದು. ಕೋವಿಡ್ ಅವಧಿಯು ಇದನ್ನು ಮತ್ತಷ್ಟು ಹೆಚ್ಚಿಸಿದೆ. ಹೀಗಿರುವ ಪರಿಸ್ಥಿತಿಯಲ್ಲಿ, ಮಕ್ಕಳಲ್ಲಿ ಮೂಲ ಭಾಷೆ ಮತ್ತು ಗಣಿತ ಕೌಶಲಗಳನ್ನು ಬೆಳೆಸುವ ಪ್ರಯತ್ನಗಳನ್ನು ಹೆಚ್ಚಿಸುವುದು ಜರೂರಾಗಿದೆ. ಹೆಚ್ಚಿನ ಮಕ್ಕಳು ಹಿಂದಿನ ತರಗತಿಯ ಮಟ್ಟವನ್ನು ತಲುಪಲು, ಗ್ರಂಥಾಲಯಗಳನ್ನು ಉತ್ತಮವಾಗಿ ಬಳಸಬಹುದು ಎಂದು ನಮಗೆ ತಿಳಿದಿದೆ. ಮಕ್ಕಳಿಗೆ ಅವರ ಮಟ್ಟಕ್ಕೆ ಅನುಗುಣವಾಗಿ ಪುಸ್ತಕಗಳನ್ನು ಓದಲು ಅವಕಾಶವನ್ನು ನೀಡುವುದು ತುಂಬಾ ಪ್ರಯೋಜನಕಾರಿಯಾದುದಾಗಿದೆ. ಪ್ರತಿಯೊಂದು ವಿದ್ಯಾರ್ಥಿಗೂ ಪ್ರತಿದಿನ ಅವರ ಮಟ್ಟದ ಬೋಧನೆ-ಕಲಿಕಾ ಸಾಮಗ್ರಿಯಿಂದ (Teaching-learning materials) ಒಂದು ಪಾಠವನ್ನೋ ಕಥೆಯನ್ನೋ ಓದಲು ಆಯ್ಕೆ ಮಾಡಿಸಬೇಕು ಮತ್ತು ಹಾಗೇ ಅವರು ಓದಿದ ಆ ಪಠ್ಯದ ಕುರಿತು ಅವರೊಂದಿಗೆ ಚರ್ಚೆ ನಡೆಸಬೇಕು–ನಿರ್ದಿಷ್ಟವಾಗಿ, ಕಥೆಯಲ್ಲಿನ ಪಾತ್ರಗಳನ್ನು ಮತ್ತು ಆ ಪಾತ್ರಗಳ ನಡುವಿನ ಸಂಬಂಧಗಳನ್ನು ಮಕ್ಕಳು ಹೇಗೆ ಅರ್ಥ ಮಾಡಿಕೊಳ್ಳುತ್ತಾರೆ ಎಂಬುದನ್ನು ತಿಳಿಯಬೇಕು. ಇಂತಹ ಮಾತುಕತೆಗಳು ಮಕ್ಕಳಲ್ಲಿ ಓದುವ ಆಸಕ್ತಿ ಮತ್ತು ಅಭ್ಯಾಸವನ್ನು ಬೆಳೆಸುತ್ತವೆ.

ಮಕ್ಕಳಿಗೆ ಓದುವ ಸಾಮಗ್ರಿಗಳನ್ನು ಒದಗಿಸುವುದಷ್ಟೇ ಮಾಡಿದರೆ ಸಾಲದು, ಶಿಕ್ಷಕರೂ ಸಹ ಮಕ್ಕಳ ಸಾಹಿತ್ಯವನ್ನು ಓದಬೇಕು ಎಂಬುದು ಮುಖ್ಯವಾದ ವಿಷಯವಾಗಿದೆ. ಇಲ್ಲಿ ಒಂದು ಘಟನೆಯನ್ನು ಉಲ್ಲೇಖಿಸುವುದು ಸೂಕ್ತವಾಗಿದೆ. ಕೆಲವು ವರ್ಷಗಳ ಹಿಂದೆ, ಬಾರ್ಮೇರ್‌ನ ಅಜೀಂ ಪ್ರೇಮ್ ಜಿ ಫೌಂಡೇಷನ್‌ನ ತಂಡವು, ಗ್ರಂಥಾಲಯ ಚಳವಳಿಯ ಪಿತಾಮಹರಾದ ದಿವಂಗತ ಪಿ.ಎನ್.ಪಣಿಕ್ಕರ್ ಅವರ ಪುಣ್ಯತಿಥಿಯಂದು ಅಂದರೆ ಜೂನ್ 20ರಂದು 'ರಾಷ್ಟ್ರೀಯ ಓದುವ ದಿನ'ದಂದು ಓದುವ ವಿಷಯದ ಕುರಿತಾಗಿ ಕೆಲವು ಶಾಲೆಗಳೊಂದಿಗೆ ವ್ಯಾಪಕವಾದ ಹಂತದಲ್ಲಿ ಕೆಲಸವನ್ನು ಮಾಡಬೇಕು ಎಂದು ನಿರ್ಣಯ ಮಾಡಿತು. ಇದಕ್ಕಾಗಿ, ಒಂದು ಪ್ರಾಥಮಿಕ ಶಾಲೆಯಲ್ಲಿ ಫೌಂಡೇಷನ್‌ನ ಮೂವರು ಸದಸ್ಯರು ಮತ್ತು ಶಾಲೆಯ ನಾಲ್ಕು ಶಿಕ್ಷಕರನ್ನು ತಂಡವು ಒಳಗೊಂಡಿತ್ತು. ಮಕ್ಕಳ ಸಂಖ್ಯೆ ಸರಿಸುಮಾರು 70 ಇದ್ದಿರಬಹುದು. ನಾವು ಮಕ್ಕಳ ವಯಸ್ಸು, ತರಗತಿ ಮತ್ತು ಅವರ ಇಷ್ಟಕ್ಕೆ ಅನುಗುಣವಾಗಿ ಪುಸ್ತಕಗಳನ್ನು ತೆಗೆದುಕೊಂಡು ಶಾಲೆಗೆ ಹೋಗಿದ್ದೆವು. ಆ ದಿನ ಮಕ್ಕಳು ತಮ್ಮ ತಮ್ಮ ಗುಂಪುಗಳಲ್ಲಿ ಎರಡು ಗಂಟೆಗಳಲ್ಲಿ ಮೂರು-ನಾಲ್ಕು ಕಥೆಗಳನ್ನು ಓದಿದರು.

ಮಕ್ಕಳು ಎಲ್ಲಕ್ಕಿಂತ ಹೆಚ್ಚಾಗಿ ಕಾಡು ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ ಕಥೆಗಳನ್ನು ಇಷ್ಟಪಟ್ಟರು ಎಂಬುದನ್ನು ನಾವು ಗಮನಿಸಿದೆವು. ಕಥೆಯಲ್ಲಿ ಬರುವ ಕಾಗೆ ಮತ್ತು ಆಮೆಯ ಪಾತ್ರಗಳ ಸ್ಥಾನದಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದಿರಿ ಎಂಬ ಪ್ರಶ್ನೆಯನ್ನು ಮಕ್ಕಳಿಗೆ ಕೇಳಿದಾಗ ಸಿಕ್ಕ ಮಕ್ಕಳ ಉತ್ತರಗಳು ತುಂಬಾ ಆಸಕ್ತಿದಾಯಕ ಮತ್ತು ಮೌಲಿಕವಾಗಿದ್ದವು. ಈ ಪ್ರಶ್ನೆಯು ಮಕ್ಕಳಲ್ಲಿ ಮಾತ್ರವಲ್ಲದೆ ಶಿಕ್ಷಕರಲ್ಲಿಯೂ ಕೂಡ ಬಹಳಷ್ಟು ಉತ್ಸಾಹವನ್ನು ಉಂಟುಮಾಡಿತು. ಇಲ್ಲಿ ಗಮನಕ್ಕೆ ಬಂದ ಅಂಶವೆಂದರೆ, ಓದಿನಲ್ಲಿ ಆಸಕ್ತಿ ಇಲ್ಲದ ಸಹಶಿಕ್ಷಕರೊಬ್ಬರು ಬೇರೆಬೇರೆ ತರಗತಿಗಳಲ್ಲಿ ಸುತ್ತು ಹಾಕುತ್ತಿದ್ದರು. ನಾವು ಅವರಲ್ಲಿ ಆಸಕ್ತಿ ಹುಟ್ಟುಹಾಕುವಲ್ಲಿ ವಿಫಲರಾಗಿದ್ದೆವು. ಆದಾಗ್ಯೂ, ಅವರು ಗುಂಪಿನಲ್ಲಿ ನಿಂತು ಮಕ್ಕಳು ಕೊಡುತ್ತಿದ್ದ ಉತ್ತರಗಳನ್ನು ಗಮನವಿಟ್ಟು ಕೇಳುತ್ತಿದ್ದಾಗ ನಮಗೆ ನಿಜವಾಗಿಯೂ ಬಹಳ ಸಂತೋಷವಾಯಿತು. ಅಲ್ಲಿದ್ದ ವಿದ್ಯಾರ್ಥಿಗಳಲ್ಲಿ ಒಬ್ಬರು ಅವರಿಗೆ ಒಂದು ಪ್ರಶ್ನೆಯನ್ನೂ ಕೇಳಿದರು - "ಸರ್, ಈ ಕಥೆಯಲ್ಲಿರುವ ಆಮೆಯ ಜಾಗದಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದಿರಿ?." ಆಗ ಆ ಶಿಕ್ಷಕರು "ನಾನು ಈ ಕಥೆಯನ್ನು ಓದೇ ಇಲ್ಲವಲ್ಲ" ಎಂದು ಹೇಳುತ್ತಿರುವಂತೆ ಅವರ ಮುಖದ ಹಾವ-ಭಾವಗಳು ಬದಲಾಗುತ್ತಿರುವಂತೆ ಕಂಡುಬಂದವು. ಶಿಕ್ಷಕರು ಕಥೆಯನ್ನು ಓದುವುದನ್ನು ಮಕ್ಕಳು ನೋಡಿದಾಗ, ಅವರ ಉತ್ಸಾಹವು



ಚಿತ್ರ 2 : ಬೇಸಿಗೆ ಶಿಬಿರದಲ್ಲಿ ಚಿತ್ರ ಬಿಡಿಸುತ್ತಿರುವ ಓರ್ವ ವಿದ್ಯಾರ್ಥಿನಿ.

ದುಪ್ಪಟ್ಟಾಗುತ್ತದೆ ಎಂದು ಆ ಶಿಕ್ಷಕರು ಅರಿತುಕೊಂಡರು. ಮಕ್ಕಳು ಕಥೆಗಳನ್ನು ಓದುವುದನ್ನು ನಾನು ಎಲ್ಲೇ ನೋಡಿದರೂ ಅಥವಾ ಕೇಳಿದರೂ, ಅಲ್ಲೆಲ್ಲ ಒಂದು ಸರ್ವೇಸಾಮಾನ್ಯ ವಿಷಯವಿತ್ತು – ಅದೇಂದರೆ, ಯಾವ ಶಾಲೆಯಲ್ಲಿ ಶಿಕ್ಷಕರು ಮಕ್ಕಳ ಜೊತೆಯಲ್ಲೆ ಕಥೆಗಳನ್ನು ಓದುತ್ತಾರೋ, ಅಲ್ಲಿ ಓದುವ-ಬರೆಯುವ ವಾತಾವರಣ ಸಹಜವಾಗಿ ನಿರ್ಮಾಣವಾಗುತ್ತದೆ ಎಂಬುದು.

ವಿಶೇಷವಾಗಿ ಹೇಳುವುದಾದರೆ, ಏಪ್ರಿಲ್-ಮೇ ತಿಂಗಳಲ್ಲಿ, ಒಂದು ಶಾಲೆಯಲ್ಲಿ ಶಿಕ್ಷಕರು ಪುನರಾವರ್ತನೆ ಮಾಡುವ ಮೂಲಕ ಪಾಠವನ್ನು ಪುನರಾವರ್ತಿಸುವ ವಿಧಾನವು ಬಹಳವೇ ಅದ್ಭುತವಾಗಿ ಕಂಡಿತು. ಅವರು ಪ್ರತಿಯೊಬ್ಬ ವಿದ್ಯಾರ್ಥಿಗೂ "ಹೋದ ವರ್ಷದ ಹಿಂದಿ ಭಾಷೆಯ ಪಠ್ಯಪುಸ್ತಕದಲ್ಲಿ ಯಾವ ಪಾಠ ಹೆಚ್ಚು ಇಷ್ಟವಾಯಿತು ಮತ್ತು ಯಾವ ಪಾಠ ಎಲ್ಲಕ್ಕಿಂತ ಕಷ್ಟ ಎಂದು ಅನಿಸಿತು" ಎಂದು ಕೇಳುತ್ತಿದ್ದರು. ಶಿಕ್ಷಕರು ಎಲ್ಲಾ ಮಕ್ಕಳಿಗೂ ಯೋಚಿಸಲು ಸಾಕಷ್ಟು ಸಮಯವನ್ನು ನೀಡುತ್ತಿದ್ದರು.

ಆಯ್ಕೆ ಮಾಡಿದ ಯಾವುದಾದರೂ ಒಂದು ವಾರದಲ್ಲಿ, ಶಿಕ್ಷಕರು ಮಕ್ಕಳೊಂದಿಗೆ ತರಗತಿಯ ಪಾಠವಿಧಾನದ ಅಂಗವಾಗಿ ಈ ಕೆಳಗಿನ ಚಟುವಟಿಕೆ ಮಾಡುತ್ತಿದ್ದರು:

ಪ್ರತಿ ವಿದ್ಯಾರ್ಥಿಯೂ ತಮಗೆ ಸರಳವೆನಿಸಿದ ಪಾಠ ಮತ್ತು ಕಷ್ಟವೆನಿಸಿದ ಪಾಠಗಳ ಬಗ್ಗೆ ಯೋಚಿಸಬೇಕು ಮತ್ತು ಅವುಗಳನ್ನು ಗುಂಪಿನಲ್ಲಿರುವ ಇತರೆ ಮಕ್ಕಳಿಗೆ ಹೇಳಬೇಕು. ಇದು ತರಗತಿಯಲ್ಲಿನ ಒಂದು ಚಟುವಟಿಕೆಯಾದರೆ, ಅದೇ ವಿಷಯವನ್ನು ಬರೆಯುವ ಮೂಲಕ ಇತರರೊಂದಿಗೆ ಹಂಚಿಕೊಳ್ಳಬೇಕಿತ್ತೆಂಬುದು ತರಗತಿಯ ಪಾಠವಿಧಾನದ ಎರಡನೇ ಚಟುವಟಿಕೆಯಾಗಿತ್ತು. ಈ ಚಟುವಟಿಕೆಯನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಸರದಿಯಲ್ಲಿ ಮಾಡುತ್ತಿದ್ದರು. ಇದು ಅವರು ಅಲ್ಪಸಮಯಕ್ಕಾಗಿ ರೂಪಿಸಿದ ಪಾಠದ ಯೋಜನೆಯಾಗಿತ್ತು. ಈ ಯೋಜನೆಯು ಕೇವಲ ಭಾಷೆಗೆ ಮಾತ್ರ ಸೀಮಿತವಾಗಿರಲಿಲ್ಲ, ಬದಲಿಗೆ ಗಣಿತ ಮತ್ತು ಪರಿಸರ ಅಧ್ಯಯನಗಳಿಗೂ ಅನ್ವಯಿಸಲಾಗಿತ್ತು. ಇಷ್ಟು ಮಾತ್ರವಲ್ಲದೆ, ಹಿಂದಿನ ತರಗತಿಗೆ ಸಂಬಂಧಿಸಿದ ಒಂದು ಒಳ್ಳೆಯ ಮತ್ತು ಒಂದು ಕೆಟ್ಟ ಅನುಭವವನ್ನು ಹಂಚಿಕೊಳ್ಳಲು ಕೂಡ ಅವರು ಹೇಳುತ್ತಿದ್ದರು. ಸ್ವಲ್ಪ ಸಮಯದ ನಂತರ, ನಾನು ಮತ್ತೆ ಆ ಶಾಲೆಗೆ ಹೋದಾಗ, ಶಿಕ್ಷಕರು ಮಕ್ಕಳ ಈ ಅನುಭವಗಳನ್ನು ಗೋಡೆಯ ಮೇಲಿನ ಪತ್ರಿಕೆಯಲ್ಲಿ ಅಂಟಿಸಿ ಪ್ರದರ್ಶನವನ್ನೂ ಮಾಡಿದ್ದರು ಎಂಬುದನ್ನು ನೋಡಿದೆ. ಇದು ಒಂದು ಸರಳ ಚಟುವಟಿಕೆಯಾಗಿದ್ದರೂ, ಮಕ್ಕಳನ್ನು ಹಿಂದಿನ ತರಗತಿಯಲ್ಲಿ ಕಲಿತದ್ದನ್ನು ಪುನಃ ಅಭ್ಯಾಸ ಮಾಡಲು ಇದೊಂದು ಪರಿಣಾಮಕಾರಿ ಮಾರ್ಗವಾಗಿತ್ತು. ಈ ಚಟುವಟಿಕೆಯಲ್ಲಿ -

ಎ. ಪ್ರತಿ ವಿದ್ಯಾರ್ಥಿಯು ಹಿಂದಿನ ತರಗತಿಯ ಪಾಠವನ್ನು ಪುನರಭ್ಯಾಸ ಮಾಡಿದರು.

ಬಿ. ಯಾವುದೇ ಒಂದು ಪಾಠವು ಏಕೆ ಕಷ್ಟವೆನಿಸಿತು ಅಥವಾ ಏಕೆ ಸುಲಭವೆನಿಸಿತು ಎಂಬುದರ ಕುರಿತು ಮಕ್ಕಳು ಸಹಜವಾಗಿ ಹೇಳಿದರು.

ಸಿ. ಪ್ರತಿ ವಿದ್ಯಾರ್ಥಿಗೂ ಪ್ರೋತ್ಸಾಹ ಸಿಕ್ಕಿತು ಮತ್ತು ದೊಡ್ಡ ಗುಂಪುಗಳಲ್ಲಿ ಮಾತನಾಡಲು ಅವರಿಗೆ ಅವಕಾಶ ನೀಡಲಾಯಿತು.

ಡಿ. ಮಕ್ಕಳಿಗೆ ಪಾಠವು ಸುಲಭ ಅಥವಾ ಕಠಿಣವಾಗಿದೆ ಎಂದು ಏಕೆ ಅನಿಸಿತು ಎಂಬುದರ ಕುರಿತು ಬರೆಯಲು ಮಕ್ಕಳಿಗೆ ಅವಕಾಶಗಳನ್ನು ಕೊಡಲಾಯಿತು.

ಇ. ಕಠಿಣವಾದ ಪರಿಕಲ್ಪನೆಗಳ ಬಗ್ಗೆ ಶಿಕ್ಷಕರೂ ಸಹ ತಮ್ಮ ತಿಳುವಳಿಕೆಯನ್ನು ವಿಸ್ತರಿಸಿಕೊಳ್ಳಲು ಮತ್ತು ಅವುಗಳ ಕುರಿತು ಕೆಲಸ ಮಾಡಲು ಯೋಜನೆ ಸಿದ್ಧಪಡಿಸಿದರು.

ಎಫ್. ಇದಷ್ಟೇ ಅಲ್ಲ, ಮಕ್ಕಳು ಹಂಚಿಕೊಂಡ ಅನುಭವಗಳಲ್ಲಿ, ಯಾವುದು ಕೆಟ್ಟದೆಂದು ಅನಿಸಿತು ಮತ್ತು ಯಾವುದು ಒಳ್ಳೆಯದೆಂದು ಅನಿಸಿತು ಎಂಬುದು ನಿಜವಾದ ಅರ್ಥದಲ್ಲಿ ಶಾಲೆಗೂ ಸಹ ಒಂದು ರೀತಿಯಲ್ಲಿ ಹಿಮ್ಮಾಹಿತಿ ಆಗಿದೆ.

ಹಿಂದಿನ ತರಗತಿ ಮತ್ತು ಹೊಸ ತರಗತಿಯ ನಡುವೆ ಸೇತುವೆಯನ್ನು ನಿರ್ಮಿಸುವ ಈ ವಿಧಾನವು ಅದ್ಭುತವಾಗಿತ್ತು. ಈ ಪ್ರಕ್ರಿಯೆಯು ಹೊಸ ತರಗತಿಯ ಸವಾಲುಗಳನ್ನು ಬಹಳ ಸುಲಭಗೊಳಿಸಿತು, ಏಕೆಂದರೆ ಮಕ್ಕಳಿಗೆ ಕಷ್ಟವಾಗುತ್ತಿರುವ ಕ್ಷೇತ್ರಗಳು ಮತ್ತು ಪರಿಕಲ್ಪನೆಗಳ ಕುರಿತಾಗಿ ಶಿಕ್ಷಕರು ಮಕ್ಕಳೊಂದಿಗೆ ಕೆಲಸ ಮಾಡುತ್ತಿದ್ದರು.

## ಬೇಸಿಗೆ ಶಿಬಿರಗಳಲ್ಲಿ ಕಲಿಯುವ – ಕಲಿಸುವ ಅನುಭವಗಳು

ಕಳೆದ ಹತ್ತು ವರ್ಷಗಳಲ್ಲಿ ರಾಜಸ್ಥಾನ ಮತ್ತು ಉತ್ತರಾಖಂಡದಲ್ಲಿ ಬೇಸಿಗೆ ರಜಾದಿನಗಳಲ್ಲಿ ನಾನು ನೋಡಿದ ಎಲ್ಲಾ ಶಿಬಿರಗಳಲ್ಲಿ, ಮಕ್ಕಳಲ್ಲಿ ಅಪಾರ ಸಂತೋಷ, ಖುಷಿಯ ಜೋಷ್ ಮತ್ತು ಉತ್ಸಾಹದ ಭಾವವು ಒಂದೇ ರೀತಿಯಿತ್ತು. ಮಕ್ಕಳಿಗೆ ಇಲ್ಲಿ ಬೇಸರವಾಗುವುದಿಲ್ಲ. ಮಕ್ಕಳು ಏನನ್ನು ಕಲಿತರೂ, ಅವರು ಮನಸ್ಸಿನಿಂದ ಕಲಿಯುತ್ತಿರುವುದು ಕಾಣುತ್ತದೆ. ಶಿಕ್ಷಕರು ಸಹ ನಿರಾಳವಾಗಿ ಕಾಣುತ್ತಾರೆ. ಮಕ್ಕಳಿಗಾಗಿ ಹೊಸತನವಿರುವ, ಸೃಜನಶೀಲವಾದದ್ದೇನಾದರೂ ಮಾಡುವ ಬಯಕೆಯು ಶಿಕ್ಷಕರ ಮನದಲ್ಲಿರುವುದನ್ನು ಸ್ಪಷ್ಟವಾಗಿ ನೋಡಬಹುದು. ಬೇಸಿಗೆ ಶಿಬಿರದಲ್ಲಿ ಪೋಷಕರು ಮತ್ತು ಪ್ರತಿನಿಧಿಗಳ ಉತ್ಸಾಹಭರಿತ ಭಾಗವಹಿಸುವಿಕೆಯನ್ನು ಕಾಣಬಹುದು. ಇವೆಲ್ಲದಕ್ಕೆ ಅಧಿಕಾರಿಗಳ ಸಕಾರಾತ್ಮಕ ಪ್ರತಿಕ್ರಿಯೆಯಿಂದ ಶಿಕ್ಷಕರಿಗೆ ಬಲವಾದ ಬೆಂಬಲ ಸಿಗುತ್ತದೆ. ಈ ಬೇಸಿಗೆ ಶಿಬಿರದಲ್ಲಿ ಶಾಲೆಯ



ಚಿತ್ರ 3 : ಬೇಸಿಗೆ ಶಿಬಿರದಲ್ಲಿ ಆಟದಲ್ಲಿ ಭಾಗವಹಿಸುತ್ತಿರುವ ವಿದ್ಯಾರ್ಥಿಗಳು.

ಮತ್ತು ಹಳ್ಳಿಯ ವಿದ್ಯಾವಂತ ಯುವಕರೂ ಸಹ ತಮ್ಮ ಕಲೆ ಮತ್ತು ಕೌಶಲಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳುತ್ತಿರುವುದನ್ನು ಕಾಣುವುದು ಆಶ್ಚರ್ಯಕರ ಬೆಳವಣಿಗೆಯಾಗಿತ್ತು. ಬೇಸಿಗೆ ಶಿಬಿರವು ವರ್ಣರಂಜಿತ ಮತ್ತು ಹಬ್ಬದ ವಾತಾವರಣದ ರೀತಿ ಕಂಡುಬರುತ್ತಿತ್ತು. ಮಕ್ಕಳು ತುಂಬಾ ಕಲಿಯಲು ಬಯಸುತ್ತಿದ್ದಾರೆ ಎಂಬುದು ಕಾಣಿಸುತ್ತಿತ್ತು. ಕಲಿಯುವಲ್ಲಿ ಎಷ್ಟು ಆನಂದಿತರಾಗಿದ್ದರೆಂದರೆ ಶಿಬಿರದ ವಾತಾವರಣ ಬಿಟ್ಟು ಮನೆಗೆ ಹೋಗಲೇ ಅವರಿಗೆ ಮನಸ್ಸಿರಲಿಲ್ಲ. - "ಮಕ್ಕಳೇ, ಈಗ ಮನೆಗೆ ಹೋಗಿ!" ಎಂದು ಶಿಕ್ಷಕರೇ ಹೇಳಬೇಕಾಗಿ ಬರುತ್ತಿತ್ತು. ಶಿಬಿರವು ಕೊನೆಗೊಳ್ಳುವ ದಿನದಂದು, ತಾವು ಕಲಿತದ್ದರ ಬಗ್ಗೆ ಮಾತನಾಡಲು ಮಕ್ಕಳಿಗೆ ಆಯಾಸವೇ ಆಗುತ್ತಿರಲಿಲ್ಲ.

ಹೀಗಾಗಿ ಮನದಲ್ಲಿ ಮೂಡುವ ಪ್ರಶ್ನೆಯೆಂದರೆ, ಈ ಬೇಸಿಗೆ ಶಿಬಿರಗಳಲ್ಲಿ ಅಂಥಾದ್ದು ಏನಿರುತ್ತದೆ? ಎಂಬುದು. ಎಲ್ಲಾ ಶಿಬಿರಗಳಲ್ಲಿ ಒಂದೇ ರೀತಿಯಾಗಿದ್ದ ಕೆಲವು ಉತ್ತಮ ವಿಷಯಗಳನ್ನು ನಾನು ನೋಡಿದೆ.

ಇಲ್ಲಿ ಮಕ್ಕಳು ಮತ್ತು ಶಿಕ್ಷಕರು ಇಬ್ಬರಲ್ಲೂ ಉತ್ಸಾಹ ಮತ್ತು ಸಂತೋಷವಿತ್ತು. ಇದು ಶಾಲೆಯ ಸಾಮಾನ್ಯ ದಿನಗಳಲ್ಲಿ ಕಾಣುವುದು ಕಡಿಮೆಯೇ. ಇದರ ಹಿಂದಿರುವ ಕಾರಣ: ಬೇಸಿಗೆ ಶಿಬಿರದ ಅದ್ಭುತ ವಿನ್ಯಾಸ. ಶೈಕ್ಷಣಿಕ ಚೌಕಟ್ಟಿನ ಒತ್ತಡದಿಂದ ಮುಕ್ತರಾದ ಶಿಕ್ಷಕರು, ತಾವು ಮನಸ್ಸಿನಿಂದ ಏನು ಮಾಡಬೇಕೆಂದು ಬಯಸುತ್ತಿದ್ದರೋ ಅದನ್ನು ಮಾಡಲು ಇಲ್ಲಿ ಸ್ವತಂತ್ರರು. ಜೊತೆಗೇ ಇಲ್ಲಿ ಕೇವಲ ಓದುವುದು ಮತ್ತು ಬರೆಯುವುದು ಮಾತ್ರವಲ್ಲದೆ ಜೀವನ ಕೌಶಲಗಳ ಬಗ್ಗೆ ಕೂಡ ಗಮನವಿರುತ್ತದೆ. ತರಗತಿಯೆಂದರೆ, ಚಟುವಟಿಕೆಗಳ ಮೂಲಕ ಆಸಕ್ತಿದಾಯಕ ಕಲಿಕೆಯೇ ಆಗಿರುತ್ತದೆ. ಇಲ್ಲಿ, ಮಕ್ಕಳೊಂದಿಗೆ, ಶಿಕ್ಷಕರೂ ಸಹ ಏನನ್ನಾದರೂ ಕಲಿಯುತ್ತಿರುವುದು ಕಾಣುತ್ತಿರುತ್ತದೆ. ಶಿಕ್ಷಕರೂ ಸಹ ಶಾಲೆಯಲ್ಲಿ ಅಥವಾ ತರಗತಿಯಲ್ಲಿ ನೀಡಲು ಸಾಧ್ಯವಾಗದ ಅನುಭವಗಳನ್ನು ಮಕ್ಕಳಿಗೆ ನೀಡಲು ಬಯಸುತ್ತಾರೆ. ಈ ಬಯಕೆಯೇ ಶಿಕ್ಷಕರಿಗೆ ಸಂತೋಷವನ್ನು ತರುತ್ತದೆ. ಪೋಷಕರಿಂದ ಸಿಗುವ ಪ್ರೋತ್ಸಾಹವೂ ಅವರಲ್ಲಿ ಸಂತಸವನ್ನುಂಟು ಮಾಡುತ್ತದೆ. ಇದರಿಂದ ಒಂದು ಸಕಾರಾತ್ಮಕ ಉತ್ಸಾಹದ ಹರಿವು ಉಂಟಾಗುತ್ತದೆ. ಮಕ್ಕಳಿಗೂ ಕೂಡ ಇಲ್ಲಿ ಯಾವುದೇ ನಿರ್ಬಂಧಗಳಿಲ್ಲ. ಕಥೆಯನ್ನು ಓದುವುದರಿಂದ ಹಿಡಿದು ಚಿತ್ರಕಲೆ ಅಥವಾ ಆಟವಾಡುವುದರವರೆಗೆ ಕಲಿಯಲು ಅವರಿಗೆ ಅನೇಕ ಆಯ್ಕೆಗಳಿವೆ.

ಈ ಶಿಬಿರಗಳು ಖಂಡಿತವಾಗಿಯೂ ಇನ್ನಷ್ಟು ದೊಡ್ಡ ಸಂಖ್ಯೆಯಲ್ಲಿ ಆಯೋಜಿಸಲ್ಪಡಬೇಕು ಎಂಬುದನ್ನು ಈ ಬೇಸಿಗೆ ಶಿಬಿರದ ಅನುಭವಗಳು ತಿಳಿಸುತ್ತವೆ. ಶಿಬಿರದಲ್ಲಿ ಘಟಿಸುವ ಮೊದಲ ಮಾತೆಂದರೆ, ಶಿಕ್ಷಕರು ಮತ್ತು ಮಕ್ಕಳು ಪರಸ್ಪರ ಅರ್ಥ ಮಾಡಿಕೊಳ್ಳಲು ಉತ್ತಮ ಅವಕಾಶವನ್ನು ಒದಗಿಸುವುದು, ಮಕ್ಕಳ ಮನೆ-ಕುಟುಂಬದ ಪರಿಸ್ಥಿತಿ, ಅವರ ಅಭಿರುಚಿ-ಆಸಕ್ತಿಗಳು, ಒಳ್ಳೆಯ ಮತ್ತು ಕೆಟ್ಟ ಅಭ್ಯಾಸಗಳ ಕಾರಣಗಳನ್ನು ಅರ್ಥ ಮಾಡಿಕೊಳ್ಳುವುದು, ಅವರೊಂದಿಗೆ ಸ್ನೇಹಪರ ಸಂಬಂಧ ಬೆಳೆಸಿಕೊಳ್ಳುವುದು ಆಗಿರುತ್ತದೆ. ಸಾಮಾನ್ಯವಾಗಿ ನಮಗೆ ಶಾಲೆಯಲ್ಲಿ ಅಂತಹ ಅವಕಾಶಗಳು ಕಡಿಮೆ ಇರುತ್ತವೆ. ಏಕೆಂದರೆ, ಶಿಬಿರದಲ್ಲಿ ಅನೌಪಚಾರಿಕ ವಾತಾವರಣವಿರುವುದರಿಂದ, ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ಸಾಕಷ್ಟು ನಿರಾಳರಾಗುತ್ತಾರೆ.

ಎರಡನೆಯದಾಗಿ, ಮಕ್ಕಳಿಗೆ ಕಲಿಯಲು ಗರಿಷ್ಠ ಅವಕಾಶಗಳು ಇರಬೇಕು. ಕ್ರೀಡಾ ಚಟುವಟಿಕೆಗಳಾಗಲಿ, ಕಲೆ ಮತ್ತು ಚಿತ್ರಕಲೆಗಳಿಗಾಗಲಿ ಸಾಕಷ್ಟು ಸಾಮಗ್ರಿಗಳು ಲಭ್ಯ ಇರಬೇಕು. ಮಕ್ಕಳು ಓದಲಿಕ್ಕಾಗಿ ಆಸಕ್ತಿ ಹುಟ್ಟಿಸುವಂತಹ ಓದುವ ಸಾಮಾಗ್ರಿಗಳಿರಬೇಕು, ತಮ್ಮ ಕಲೆಗಳನ್ನು ವ್ಯಕ್ತಪಡಿಸಲು ಅವರಿಗೆ ಅನೇಕ ಅವಕಾಶಗಳನ್ನು ನೀಡಬೇಕು. ಮಕ್ಕಳು ನಾಟಕ ಮತ್ತು ಸೂತ್ರದ ಬೊಂಬೆಯಾಟದಲ್ಲಿ ತುಂಬಾ ಆಸಕ್ತಿ ಹೊಂದಿದ್ದಾರೆ ಎಂದು ನಾನು ನೋಡಿದೆ. ಮಕ್ಕಳು ಚಟುವಟಿಕೆಗಳಲ್ಲಿ ಭಾಗವಹಿಸಲು ಮತ್ತು ಕಲಿಯಲು ಸ್ವಾತಂತ್ರ್ಯ ಹೊಂದಿರಬೇಕು ಎನ್ನುವುದು ಶಿಬಿರದ ಮೂಲಭೂತ ಅಂಶಗಳಲ್ಲೊಂದಾಗಿದೆ. ಶಿಕ್ಷಕರು ಸಾಮಾನ್ಯವಾಗಿ ಹೀಗೆ ಮಾಡುತ್ತಿರುವುದನ್ನು ನೋಡಬಹುದು.



ಚಿತ್ರ 4 : ತಾವೇ ರಚಿಸಿದ ಮಾದರಿಯನ್ನು ವಿವರಿಸುತ್ತಿರುವ ವಿದ್ಯಾರ್ಥಿಗಳು.

ಮೂರನೆಯದಾಗಿ, ಮಕ್ಕಳಲ್ಲಿ ಓದುವ ಆಸಕ್ತಿಯನ್ನು ಹುಟ್ಟುಹಾಕಲು ಬೇಸಿಗೆ ಶಿಬಿರಗಳು ಒಂದು ಉತ್ತಮ ಅವಕಾಶವಾಗಿದೆ. ಮಕ್ಕಳು ತಮ್ಮ ಹೊಸ ತರಗತಿಗಳಿಗೆ ಪ್ರವೇಶಿಸುವ ಈ ಅವಧಿಯು, ಅವರಿಗೆ ಹೊಸ ತರಗತಿಯ ಕೊಠಡಿಗಳು, ಹೊಸ ಪಠ್ಯಪುಸ್ತಕಗಳನ್ನು ಎದುರುಗೊಳ್ಳುವ ಸಂದರ್ಭವಾಗಿರುತ್ತದೆ. ಕೋವಿಡ್ ನಂತರ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ತರಗತಿಗಳಲ್ಲಿನ ಹೆಚ್ಚಿನ ಮಕ್ಕಳು ಈಗಲೂ ಸಹ ಮೂಲಭೂತ ಅಕ್ಷರಗಳು ಮತ್ತು ಸಂಖ್ಯೆಗಳನ್ನು ಗುರುತಿಸುವಿಕೆಯ ಸಮಸ್ಯೆಯೊಂದಿಗೆ ಹೆಣಗಾಡುತ್ತಿದ್ದಾರೆ. ಆದ್ದರಿಂದ, ಹೀಗೆ ಬೇಸಿಗೆ ಶಿಬಿರಗಳಲ್ಲಿ ಮಕ್ಕಳಲ್ಲಿ ಓದುವ ಮತ್ತು ಕಲಿಸುವ ಆಸಕ್ತಿಯನ್ನು ಮೂಡಿಸುವ ಸಲುವಾಗಿ, ಅವರೊಂದಿಗೆ ಕಥೆ ಪುಸ್ತಕಗಳ ಬಗ್ಗೆ ಆಸಕ್ತಿದಾಯಕ ಚರ್ಚೆಗಳನ್ನು ನಡೆಸಬೇಕು, ಅವರಿಗೆ ಸ್ವತಂತ್ರ ಬರವಣಿಗೆ ಮತ್ತು ಅಭಿವ್ಯಕ್ತಿಯ ಅವಕಾಶಗಳನ್ನು ನೀಡಬೇಕು. ಮಕ್ಕಳನ್ನು ಅವರ ಸ್ವಾಭಾವಿಕ ವೇಗ ಮತ್ತು ಪರಿಸ್ಥಿತಿಗಿಂತ ಒಂದು ಹೆಜ್ಜೆ ಮುಂದೆ ಕೊಂಡೊಯ್ಯುವ ಪ್ರಯತ್ನಗಳನ್ನು ಮಾಡಬೇಕು. ಮಕ್ಕಳಲ್ಲಿ ಕಲಿಕೆಯ ಉತ್ಸಾಹವನ್ನು ಮೂಡಿಸುವುದು, ಅವರನ್ನು ಪ್ರೋತ್ಸಾಹಿಸುವುದು ನಮ್ಮ ಪ್ರಯತ್ನಗಳ ಕೇಂದ್ರಬಿಂದುವಾಗಬೇಕು.

> **ಮಕ್ಕಳಿಗೆ ಶಿಶುಸಾಹಿತ್ಯವನ್ನು ಕೊಟ್ಟರಷ್ಟೇ ಸಾಲದು, ಶಿಕ್ಷಕರು ಕೂಡಾ ಬಾಲ ಸಾಹಿತ್ಯವನ್ನು ಓದುವ ಅನಿವಾರ್ಯತೆಯಿದೆ.**

ನಾಲ್ಕನೆಯ ಪ್ರಮುಖ ವಿಷಯವೆಂದರೆ, ಹಿಂದಿನ ತರಗತಿಗಳು, ತರಗತಿಯ ಬದಲಾವಣೆಗಳು ಮತ್ತು ಮಕ್ಕಳ ಸ್ಥಿತಿಯನ್ನು ತಿಳಿಯಲು ಬೇಸಿಗೆ ಶಿಬಿರದಲ್ಲಿ ಯಾವ ವಿಷಯದ ಬಗ್ಗೆ ಗಮನ ನೀಡಬೇಕು ಎಂಬ ಕುರಿತು ಅವಲೋಕನ ನಡೆಸುವುದು ಎಂದಿಗೂ ಉಪಯುಕ್ತವಾಗಿರುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳ ಅವಧಿಯಲ್ಲಿ ನಾವು ಸಂತೋಷದ ಮತ್ತು ಸೃಜನಶೀಲ ರೀತಿಯಲ್ಲಿ ಕಲಿಸುವ-ಕಲಿಯುವ ವಿಧಾನವನ್ನು ಎಷ್ಟೆಷ್ಟು ಹೆಚ್ಚಾಗಿ ಬಳಸಲು ಸಾಧ್ಯವೋ ಅಷ್ಟಷ್ಟನ್ನು ಬಳಕೆ ಮಾಡಿದಲ್ಲಿ ಅಷ್ಟೇ ವೇಗದಲ್ಲಿ ಮುಂದಿನ ತರಗತಿಗಳ ಪಠ್ಯಕ್ರಮದೊಂದಿಗೆ ಹೆಜ್ಜೆಗೆ ಹೆಜ್ಜೆ ಹಾಕಿ ನಡೆಯುವುದು ಮಕ್ಕಳಿಗೆ ಸುಲಭ ಸಾಧ್ಯವಾಗುತ್ತದೆ. ಶಿಬಿರದ ಅವಧಿಯು ಮಕ್ಕಳಿಗೆ, ಯಾವುದೇ ಒತ್ತಡವಿಲ್ಲದೆ ಮನಸ್ಸಿಟ್ಟು ಕಲಿಯುವ ಸಮಯವಾಗಿದೆ. ಶಿಕ್ಷಕರಿಗೆ, ತಮ್ಮ ಪಾಠದ ವಿಧಾನಗಳನ್ನು ನಿರ್ಧರಿಸುವಾಗ ಏನನ್ನು ಗಮನದಲ್ಲಿಟ್ಟುಕೊಳ್ಳಬೇಕು ಮತ್ತು ಯಾವ ವಿಧಾನಗಳು ಸರಿಯೆಂದು ಸಾಬೀತಾಗುತ್ತವೆ ಎಂಬುದರ ಬಗ್ಗೆ ತಿಳುವಳಿಕೆಯನ್ನು ಬೆಳೆಸಿಕೊಳ್ಳುವ ಅವಧಿಯು ಈ ಬೇಸಿಗೆ ಶಿಬಿರವಾಗಿದೆ.



**ಶೋಭನ್ ಸಿಂಗ್ ನೇಗಿ** ಅವರು ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಕೆಲಸ ಮಾಡುತ್ತಿದ್ದಾರೆ. 2010ರಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ಸೇರಿದ ಅವರು, ಎಂಟು ವರ್ಷಗಳ ಕಾಲ ರಾಜಾಸ್ಥಾನದ ಬಾಡ್ಮೇರ್‌ನಲ್ಲಿ ಸಕ್ರಿಯವಾಗಿದ್ದರು. ಈಗ ಅವರು ಉತ್ತರಾಖಂಡದಲ್ಲಿ ಫೌಂಡೇಷನ್‌ನ ಕೆಲಸದ ನೇತೃತ್ವ ವಹಿಸಿದ್ದಾರೆ.

**ಸಂಪರ್ಕ:** shobhan@azimpremjifoundation.org

ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ವಿದ್ಯಾರ್ಥಿಗಳ ಕಲಿಕೆಯ ಮೇಲೆ ಬೇಸಿಗೆ ಶಿಬಿರಗಳ ಪರಿಣಾಮ

ಮುನೀರ್

**ಮಕ್ಕಳು ಯಾವಾಗಲೂ ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಲು ಉತ್ಸುಕರಾಗಿರುತ್ತಾರೆ. ಇಲ್ಲಿ ನಾವು ಬೇಸಿಗೆ ರಜೆಗೆ ಮುನ್ನ ಸರ್ಕಾರಿ ಶಾಲೆಗಳಲ್ಲಿ ನಡೆಯುವ ಶಿಬಿರಗಳ ಬಗ್ಗೆ ಮಾತನಾಡುತ್ತಿದ್ದೇವೆ. ವಿವಿಧ ರಾಜ್ಯಗಳಲ್ಲಿ ನಡೆದ ಶಿಬಿರಗಳ ಅನುಭವಗಳನ್ನು ಆಧಾರವಾಗಿ ತೆಗೆದುಕೊಂಡು, ಈ ಲೇಖನವು ಅವುಗಳ ಉಪಯುಕ್ತತೆಯನ್ನು ಪರಿಶೀಲಿಸುತ್ತದೆ. ಶಿಬಿರಗಳನ್ನು ಹೇಗೆ ಆಯೋಜಿಸಬೇಕು ಮತ್ತು ಅವುಗಳಲ್ಲಿ ಮಕ್ಕಳ ಕಲಿಕೆಯನ್ನು ಹೇಗೆ ಅರ್ಥಮಾಡಿಕೊಳ್ಳಬಹುದು ಎಂಬುದರ ಕುರಿತು ಒಳನೋಟಗಳನ್ನು ನೀಡುತ್ತದೆ.**

ಬೇಸಿಗೆ ಶಿಬಿರ ಎಂದು ಹೇಳುತ್ತಿರುವಂತೆಯೇ, ತಕ್ಷಣ ಮನಸ್ಸಿನಲ್ಲಿ ಅನೇಕ ಚಿತ್ರಗಳು ಹೊರಹೊಮ್ಮುತ್ತವೆ. ಕಳೆದ ಕೆಲವು ವರ್ಷಗಳಿಂದ ಸರ್ಕಾರಿ ಶಾಲೆಗಳ ಶಿಕ್ಷಕರು ಬೇಸಿಗೆ ಶಿಬಿರಗಳನ್ನು ಆಯೋಜಿಸಲು ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅನೇಕ ರಾಜ್ಯಗಳಲ್ಲಿ, ಶಿಕ್ಷಕರು ಬೇಸಿಗೆ ರಜೆಗೆ ಸ್ವಲ್ಪ ಮುಂಚಿತವಾಗಿ ಮಕ್ಕಳಿಗಾಗಿ ಬೇಸಿಗೆ ಶಿಬಿರಗಳನ್ನು ನಡೆಸಲು ಪ್ರಾರಂಭಿಸಿದ್ದಾರೆ, ಅದರ ಪರಿಣಾಮಗಳು ಬಹಳ ಸಕಾರಾತ್ಮಕವಾಗಿರುವುದು ಕೂಡಾ ಕಂಡುಬಂದಿದೆ. ಹೀಗೆ ಬೇಸಿಗೆ ಶಿಬಿರ ಆಯೋಜಿಸಿದ ಬಹುತೇಕ ಸ್ಥಳಗಳಲ್ಲಿ ನಡೆದ ಶಿಬಿರಗಳು, ಶಿಕ್ಷಕರು ತಮ್ಮ ಸ್ವಯಂಪ್ರೇರಣೆಯಿಂದ ಮಾಡಿದವಾಗಿದ್ದವು. ನಂತರ ಈ ಬೇಸಿಗೆ ಶಿಬಿರಗಳ ಪರಿಣಾಮಗಳನ್ನು ಗಮನಿಸಿದ, ಶಿಕ್ಷಣ ಇಲಾಖೆಯೂ ಸಹ ಅನೇಕ ರಾಜ್ಯಗಳಲ್ಲಿ ಈ ಪ್ರಯತ್ನದಲ್ಲಿ ಶಿಕ್ಷಕರ ಜೊತೆಗೂಡಲು ಶುರುಮಾಡಿಬಿಟ್ಟಿತು. ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡು ಹೇಳುವುದಾದರೆ, ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸುವ ಮಕ್ಕಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದೆ. ಕೇವಲ ಛತ್ತೀಸ್‌ಗಢದ ಬಗ್ಗೆ ಮಾತ್ರ ಮಾತನಾಡುವುದಾದರೆ, ಕಳೆದ ಎರಡು ವರ್ಷಗಳಲ್ಲಿ, ಅಜೀಂ ಪ್ರೇಮ್‌ಜಿ ಫೌಂಡೇಷನ್ ಕೆಲಸಮಾಡುವ 9 ಜಿಲ್ಲೆಗಳಲ್ಲಿ ಕಡಿಮೆಯೆಂದರೂ 4,500 ಶಿಕ್ಷಕರು 2,484 ಶಾಲೆಗಳ 39,000 ವಿದ್ಯಾರ್ಥಿಗಳಿಗೆ 2,125 ಬೇಸಿಗೆ ಶಿಬಿರಗಳನ್ನು ಸ್ವಯಂಪ್ರೇರಣೆಯಿಂದ ಆಯೋಜಿಸಿದ್ದಾರೆಂಬುದು ಕಂಡುಬರುತ್ತದೆ.



ಚಿತ್ರ 1: ವಿದ್ಯಾರ್ಥಿ ತನ್ನ ಹಸ್ತಮುದ್ರೆಯನ್ನು ಒತ್ತುವ ಮೂಲಕ ತನ್ನದೇ ಕಲ್ಪನೆಗೆ ಆಕಾರ ಕೊಡುತ್ತಿರುವುದು.

ನನ್ನ ಪ್ರಕಾರ, ಶಿಕ್ಷಕರ ಈ ಸ್ವಯಂಪ್ರೇರಣೆಯ ಭಾಗವಹಿಸುವಿಕೆಯ ಹಿಂದಿನ ಮೊದಲನೆಯ ಕಾರಣವೆಂದರೆ, ಈ ಕಲ್ಪನೆಯು ಆಕರ್ಷಕವಾಗಿತ್ತು ಮತ್ತು ಪರಿಣಾಮಕಾರಿಯಾಗಿತ್ತು. ಅಲ್ಲದೆ ಪೋಷಕರೂ ಸೇರಿದಂತೆ, ಬೇಸಿಗೆ ಶಿಬಿರದಲ್ಲಿ ಭಾಗಿಯಾದವರೆಲ್ಲರೂ, ಶಾಲೆಗಳಲ್ಲಿ ಇದರ ಮುಂದಿನ ಪರಿಣಾಮ ಏನಿರಬಹುದು ಎಂಬುದನ್ನು ಶಿಬಿರ ನಡೆಯುವ ಅವಧಿಯಲ್ಲೇ ಸ್ಪಷ್ಟವಾಗಿ ನೋಡಬಹುದಿತ್ತು. ಎರಡನೆಯದಾಗಿ, ಶಿಕ್ಷಕರು ತಮ್ಮ ಅಭ್ಯಾಸಗಳನ್ನು ಆತ್ಮಾವಲೋಕನ ಮಾಡಿಕೊಳ್ಳುವಷ್ಟು ವಿಶ್ವಾಸ ಹೊಂದಿದ್ದರು ಮತ್ತು ತಮ್ಮ ವಿದ್ಯಾರ್ಥಿಗಳ ಅಗತ್ಯಗಳ ಆಧಾರದ ಮೇಲೆ ಅವರು ಯಾವುದೇ ತರಗತಿ ಅಥವಾ ವಯಸ್ಸಿನವರಾಗಿದ್ದರೂ ಸರಿ ಏನು ಕಲಿಸಬೇಕು ಮತ್ತು ಹೇಗೆ ಕಲಿಸಬೇಕೆಂದು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಶಿಕ್ಷಕರು ಹೊಂದಿದ್ದರು.

ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಉತ್ತಮವಾಗಿ ಕಲಿಸಲು ಸಹಾಯಕವಾಗುವಂತಹ ನವೀನ ಮತ್ತು ಕುತೂಹಲಕಾರಿ ವಿಧಾನಗಳನ್ನು ಪ್ರಯೋಗ ಮಾಡುವುದರಿಂದ ಬೇಸಿಗೆ ಶಿಬಿರಗಳು ವಿಶೇಷ ಆಗಿರುತ್ತವೆ. ಅವರು ತಮ್ಮ ವಿದ್ಯಾರ್ಥಿಗಳ ಅಗತ್ಯಗಳಿಗೆ ಇದು ಎಲ್ಲಕ್ಕಿಂತ ಹೆಚ್ಚು ಉಪಕ್ತವಾಗಬಹುದು ಎಂದು ಅನಿಸುವಂತಹ ವಿಧಾನಗಳನ್ನು ಆಯ್ಕೆ ಮಾಡುತ್ತಾರೆ. ನಾವು ಯಾವ ಶಿಕ್ಷಕರೊಂದಿಗೆ ಕಲೆತು ಬೇಸಿಗೆ ಶಿಬಿರಗಳನ್ನು ಆಯೋಜಿಸಿದ್ದೇವೋ, ಅವರಲ್ಲಿ ನಾವು ಮೂರು ಮೂಲಭೂತ ಪ್ರಶ್ನೆಗಳನ್ನು ಚರ್ಚಿಸಿದೆವು :

1. ಯಾವ ತರಗತಿಯವರು ಎಂಬುದನ್ನು ಪರಿಗಣಿಸದೇ, ಬೇಸಿಗೆ ಶಿಬಿರಕ್ಕೆ ಹಾಜರಾಗುವ ಮಕ್ಕಳ ಪ್ರಸ್ತುತ ಕಲಿಕೆಯ ಈಗಿನ ಮಟ್ಟ ಏನು?

2. ಅವರ ತರಗತಿಯ ಮಕ್ಕಳ ಕಲಿಕೆಯ ಹಂತಕ್ಕೆ ಉಪಯುಕ್ತವಾಗಬಹುದಾದ ಮತ್ತು ಅವರ ಮಕ್ಕಳ ಅವಶ್ಯಕತೆಗಳು/ ಸವಾಲುಗಳಿಗೆ ಸಂಬಂಧಿಸಿದಂತೆ ಕೆಲಸ ಮಾಡಲು ಹಾಗೂ ಅವರ ಕಲಿಕೆಯನ್ನು ಇನ್ನಷ್ಟು ಉತ್ತಮಪಡಿಸಲು ಸಹಾಯಕವಾಗುವಂಥ ಯಾವ ವಿಷಯ, ಬೋಧನಾ-ಕಲಿಕಾ ಸಾಮಗ್ರಿಗಳು (TLMಗಳು) ಮತ್ತು ಚಟುವಟಿಕೆಗಳನ್ನು ಬೇಸಿಗೆ ಶಿಬಿರಗಳಿಗೆ ಆಯ್ಕೆ ಮಾಡಿಕೊಳ್ಳಬಹುದು.

3. ರಜೆಯ ನಂತರ ಶಾಲೆ ಮತ್ತೆ ಶುರುವಾದಾಗ ಶಿಬಿರದ ಯಾವ ಆಯಾಮಗಳನ್ನು ಅವರಿಗೆ ಪಾಠ ಮಾಡುವ ರೀತಿಯಲ್ಲಿ ಒಂದು ಅವಿಭಾಜ್ಯ ಅಂಗವಾಗಿ ರೂಢಿಸಿಕೊಳ್ಳಬಹುದು?



ಚಿತ್ರ 2 : ವಿದ್ಯಾರ್ಥಿಗಳು ತಾವೇ ಬಿಡಿಸಿದ ಚಿತ್ರಗಳನ್ನು ತೋರಿಸುತ್ತಿರುವುದು.

## ಶಿಕ್ಷಕರಿಗೆ ಉಪಯುಕ್ತವಾದುದು

ಶಿಕ್ಷಕರು ಪಾಠ ಮಾಡುವ ತಮ್ಮ ರೀತಿಗಳ ಬಗ್ಗೆ ಯೋಚಿಸಲು ಮತ್ತು ಮಕ್ಕಳ ಕಲಿಕೆಯ ಮೇಲೆ ಉತ್ತಮ ಪರಿಣಾಮ ಬೀರುವ ತಂತ್ರಗಳನ್ನು ಕಂಡುಹಿಡಿಯಲು ಶಿಕ್ಷಕರಿಗಾಗಿ ಬೇಸಿಗೆ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಈ ರೀತಿಯಾಗಿ ತೊಡಗಿಸಿಕೊಳ್ಳುವಿಕೆಯು ಸ್ವಯಂಪ್ರೇರಿತ ಆಗಿರುವುದರಿಂದ ಮತ್ತು ಪಠ್ಯಕ್ರಮವನ್ನು ಪೂರ್ಣಗೊಳಿಸುವ ಬದಲು ಕಲಿಕೆಯ ಮೇಲೆ ಕೇಂದ್ರೀಕೃತವಾಗಿರುವುದರಿಂದ, ಇಲ್ಲಿ ವಿಷಯದ ಪುನರ್ ಅವಲೋಕನ ಮತ್ತು ಸುಧಾರಣೆಗೆ ಹೆಚ್ಚಿನ ಅವಕಾಶವಿರುತ್ತದೆ.

## ಶಿಕ್ಷಕರು ಮೌಲ್ಯಾಂಕನ ಪ್ರಕ್ರಿಯೆಯನ್ನು ಮತ್ತೂ ಆಳವಾಗಿ ಅರ್ಥಮಾಡಿಕೊಂಡರು

ಮಕ್ಕಳ ಮೌಲ್ಯಾಂಕನ ಪ್ರಕ್ರಿಯೆ ಮತ್ತು ಸೂಚಿಸಲ್ಪಟ್ಟ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಶಿಕ್ಷಕರು ಬೇರೆ-ಬೇರೆ ಅಭಿಪ್ರಾಯ ಹೊಂದಿದ್ದರು. ಆದರೂ ಸಹ ಹೆಚ್ಚಿನ ಶಿಕ್ಷಕರು - ಮಕ್ಕಳ ಪ್ರಸ್ತುತ ಕಲಿಕೆಯ ಮಟ್ಟವನ್ನು ಸುಧಾರಿಸಲು ಮಕ್ಕಳ ಈಗಿನ ಸಾಮರ್ಥ್ಯಗಳ ಮೌಲ್ಯಮಾಪನ ಮಾಡಲು ಇದು ಮುಖ್ಯವಾದುದು ಎಂದು ಒಪ್ಪಿಕೊಂಡರು ಹಾಗೂ ಇದರೊಂದಿಗೆ SCERT/NCERTಯ ಕಲಿಕೆಯ ಫಲಿತಾಂಶಗಳು ಹಾಗೂ ಶಿಫಾರಸ್ಸು ಮಾಡಿದ ಬೋಧನಾ ವಿಧಾನದ ಆಧಾರದ ಮೇಲೆ ಪಾಠ ಮಾಡುವ ವಿಧಾನಗಳನ್ನು ಕುರಿತೂ ಅವಲೋಕನ ಮಾಡುವುದು ಸಹ ಮುಖ್ಯವಾದುದು ಎಂಬುದನ್ನೂ ಒಪ್ಪಿಕೊಂಡರು. ಕಲಿಕೆಯ ಪರಿಣಾಮಗಳನ್ನು ಶಿಕ್ಷಕರು ಇನ್ನೂ ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿಲ್ಲವಾದರೂ, ಇತ್ತೀಚಿನ ತರಬೇತಿ ಕಾರ್ಯಕ್ರಮಗಳು ಅವರಿಗೆ ಈ ಪರಿಕಲ್ಪನೆಯ ಬಗ್ಗೆ ಚೆನ್ನಾಗಿ ಅರಿವು ಮೂಡಿಸಿವೆ. ಅಲ್ಲದೆ ಈಗ ಶಿಕ್ಷಕರು ಅದನ್ನು ತಮ್ಮ ಸ್ವಂತ ಮಾತುಗಳಲ್ಲಿ ವ್ಯಕ್ತಪಡಿಸಲು ಪ್ರಯತ್ನಿಸುತ್ತಿದ್ದಾರೆ. ಅನೇಕ ಶಿಬಿರಗಳಲ್ಲಿ, ಶಿಕ್ಷಕರು ಈ ಚೌಕಟ್ಟಿನ ಆಧಾರದ ಮೇಲೆ ತಮ್ಮ ಮನಸ್ಸಿನಲ್ಲೇ ಮನೋನಕ್ಷೆಗಳು (mind maps) ಅಥವಾ ಅದರ ಅನುಷ್ಠಾನಕ್ಕಾಗಿ ಯೋಜನೆಗಳನ್ನು ರಚಿಸಿದರು. ಶಿಕ್ಷಕರ ತರಬೇತಿ ಕೇಂದ್ರಗಳು (Teacher Learning Centres -TLCs) ಹಾಗೂ ಕ್ಲಸ್ಟರ್ ಮತ್ತು ಬ್ಲಾಕ್ ಸಂಪನ್ಮೂಲ ಕೇಂದ್ರಗಳಲ್ಲಿ ಇಡೀ ದಿನದ ಓರಿಯಂಟೇಶನ್ ಸೆಷನ್‌ಗಳ ಮೂಲಕ ಶಿಬಿರದ ಉದ್ದೇಶ, ರೂಪುರೇಷೆ ಮತ್ತು ಕ್ರಮಬದ್ಧ ದೈನಿಕ ಯೋಜನೆಯ ಮೇಲೆ ಚರ್ಚಿಸಲಾಯಿತು. ಇದರಲ್ಲಿ ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ಪದಾಧಿಕಾರಿಗಳು ಸೇರಿಕೊಂಡರು ಮತ್ತು ಶಿಬಿರದ ಪರಿಕಲ್ಪನೆಯಲ್ಲಿ ತಮ್ಮ ವಿಚಾರಗಳನ್ನು ಮುಂದಿಟ್ಟರು ಮತ್ತು ತಮ್ಮ ಬೆಂಬಲವನ್ನು ನೀಡಿದರು.

**ಕೋಷ್ಟಕ 1: ಮೌಲ್ಯಾಂಕನಕ್ಕಾಗಿ ಸೂಚಕಗಳು ಮತ್ತು ಮಾರ್ಗಸೂಚಿಗಳು**

| ಕ್ರಮ ಸಂಖ್ಯೆ | ಏನನ್ನು ಕಲಿಯಬೇಕೆಂದು ಮಕ್ಕಳಿಂದ ನಿರೀಕ್ಷಿಸಲಾಗುತ್ತದೆ? | ಇದನ್ನು ಸಾಧಿಸಲು ಯಾವ ಚಟುವಟಿಕೆಗಳು ಸಹಾಯ ಮಾಡಬಲ್ಲವು? | ನಾನು ಯಾವ ಚಟುವಟಿಕೆಗಳನ್ನು ಮಾಡಬೇಕು? |
|---|---|---|---|
| | | | |
| | | | |
| | | | |

ಮೇಲಿನ ಕೋಷ್ಟಕವು, ಪಾಠ ಮಾಡುವ ವಿಧಾನಗಳಿಗೆ ಸ್ವಯಂ-ಮೌಲ್ಯಾಂಕನ ಸಾಧನವಾಗಿ (self-assessment tool) ಕಾರ್ಯನಿರ್ವಹಿಸುತ್ತದೆ ಹಾಗೂ ಮಕ್ಕಳ ಕಲಿಕೆಯ ಮಟ್ಟವನ್ನು ತೋರಿಸುತ್ತದೆ. ಇದು ಶಿಕ್ಷಕರಿಗೆ ಕೇವಲ ಪಠ್ಯಕ್ರಮವನ್ನು ಪೂರ್ಣಗೊಳಿಸುವೆಡೆ ಗಮನ ಕೊಡುವ ಬದಲಾಗಿ, ಮಕ್ಕಳ

ಮಟ್ಟವೇನಿದೆಯೋ ಆ ಮಟ್ಟದಿಂದ ಪ್ರಾರಂಭಿಸಲು ಶಿಕ್ಷಕರನ್ನು ಪ್ರೋತ್ಸಾಹಿಸುತ್ತದೆ. ಶಿಬಿರದಲ್ಲಿನ ಸರ್ಕಲ್ ಟೈಮ್ ಸಮಯದಲ್ಲಿ ಮೊದಲ ಬಾರಿಗೆ ನಟನೆ ಮತ್ತು ಭಾವನೆಗಳ ಅಭಿವ್ಯಕ್ತಿಯೊಂದಿಗೆ ಶಿಶುಗೀತೆಗಳನ್ನು ಹಾಡಿಸುವ ಪ್ರಯತ್ನವನ್ನು ಮಾಡಿದ ಹಿರಿಯ ಶಿಕ್ಷಕರೊಬ್ಬರನ್ನು, ವಾಟ್ಸಾಪ್ ಗ್ರೂಪ್‌ನಲ್ಲಿ ಇತರ ಇಬ್ಬರು ಶಿಕ್ಷಕರು ಪ್ರಶಂಸಿಸಿ ಹೊಗಳಿದ್ದು ನನಗೆ ನೆನಪಿದೆ. ಇದು ಆ ಹಿರಿಯ ಶಿಕ್ಷಕರ ಶಿಕ್ಷಣ ಪ್ರಕ್ರಿಯೆಯಲ್ಲಿ ದೊಡ್ಡ ಬದಲಾವಣೆಯನ್ನು ತಂದಿತು, ಜೊತೆಗೆ ಶಿಶುಗೀತಗಳನ್ನು ಹಾಡಿಸುವುದನ್ನು ಕುರಿತಂತೆ ಅವರ ಗ್ರಹಿಕೆಯಲ್ಲೂ ಬದಲಾವಣೆಯನ್ನು ತಂದಿತು. ಈ ಬದಲಾವಣೆಯು ಅವರ ಸಹೋದ್ಯೋಗಿಗಳ ಮೇಲೆ ಪರಿಣಾಮ ಬೀರಿತು.

## ಶಿಕ್ಷಕರು ಉತ್ತಮ ಅಭ್ಯಾಸಗಳನ್ನು ಬೆಳೆಸಿಕೊಂಡರು

ಈಗ ಅನೇಕ ಶಿಕ್ಷಕರು ತಮ್ಮ ತರಗತಿಗಳಲ್ಲಿ ಕವಿತೆಗಳು, ನಟನೆ ಮತ್ತು ಭಿತ್ತಿಪತ್ರಗಳನ್ನು ತಮ್ಮ ಪಾಠದ ವಿಧಾನಗಳಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಪಾಠದ ಈ ವಿಧಾನಗಳೊಂದಿಗೆ ನಾವು ಓದುವ ಮತ್ತು ಬರೆಯುವತ್ತ ಪ್ರಗತಿ ಸಾಧಿಸುತ್ತಿದ್ದೇವೆ. ಕೇವಲ ಬೆಮೆತರಾ ಜಿಲ್ಲೆಯ ಬೆರ್ಲಾ ಬ್ಲಾಕ್ ಒಂದರಲ್ಲಿಯೇ 43ಕ್ಕೂ ಹೆಚ್ಚು ಶಿಕ್ಷಕರು, ಪ್ರತಿ ವಾರ ಕನಿಷ್ಠ ಒಂದು ಕಥೆಯನ್ನು ಹೇಳುವಾಗಲಾದರೂ ಸೂತ್ರದ ಬೊಂಬೆಗಳನ್ನು ಬಳಸುತ್ತಾರೆ. ಇದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು - ಬುನಾದಿ ಹಂತ (NCF-FS) 2023ರ ನಾಲ್ಕು ಬ್ಲಾಕ್ ಭಾಷಾ ಬೋಧನಾ ಮಾದರಿಯನ್ನು ಒಟ್ಟು ಮಾಡಿ ಸಂಯೋಜಿಸುತ್ತದೆ.

ಬೇಸಿಗೆ ಶಿಬಿರಗಳನ್ನು ಆಯೋಜಿಸಿ ಮುನ್ನಡೆಸಿದ ಹೆಚ್ಚಿನ ಶಿಕ್ಷಕರ ಉದ್ದೇಶ, ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಸಂತಸ ಸಿಗಲೆಂಬುದಾಗಿತ್ತು ಮತ್ತು ಇಲ್ಲಿ ನಡೆಯುವ ಚಟುವಟಿಕೆಗಳ ಮೂಲಕ ಭಾಷೆ, ಗಣಿತ ಮತ್ತಿತರ ವಿಷಯಗಳ ಮೂಲಭೂತ ಕೌಶಲಗಳನ್ನು ಕಲಿತುಕೊಳ್ಳಬೇಕೆಂಬುದಾಗಿತ್ತು. ಈಗ ವಿದ್ಯಾರ್ಥಿಗಳ ಅಗತ್ಯತೆಗಳು, ಮೂಲಭೂತ ಅಭ್ಯಾಸ ಕೌಶಲಗಳು



ಚಿತ್ರ 3 : ಬೇಸಿಗೆ ಶಿಬಿರದಲ್ಲಿ ಸಮೂಹ ಚಟುವಟಿಕೆಯ ಭಾಗವಾಗಿ ನಕ್ಷೆಯನ್ನು ವಿನ್ಯಾಸಗೊಳಿಸುತ್ತಿರುವ ವಿದ್ಯಾರ್ಥಿಗಳು.



ಚಿತ್ರ 4 : ಬೇಸಿಗೆ ಶಿಬಿರದಲ್ಲಿ ಬೇರೆಬೇರೆ ಆಕಾರಗಳ ಆಕೃತಿಯನ್ನು ಜೋಡಿಸಿ ಮಾಡೆಲ್ ರಚಿಸುತ್ತಿರುವುದು.

ಮತ್ತು ಅನೇಕ ಆಕರ್ಷಕ ಚಟುವಟಿಕೆಗಳ ಬಗ್ಗೆ ಉತ್ತಮ ತಿಳುವಳಿಕೆಯ ಅರಿವು ಹೊತ್ತು ಶಾಲೆಗೆ ಮರಳಿ ಬಂದಿದ್ದಾರೆ. ಅನೇಕ ಶಿಕ್ಷಕರು ಬೇಸಿಗೆ ಶಿಬಿರಗಳನ್ನು ಉಚಿತವಾಗಿ ಆಯೋಜಿಸಿ ಹೆಮ್ಮೆಪಟ್ಟರು (ಸಾಮಾನ್ಯವಾಗಿ ಬೇಸಿಗೆ ಶಿಬಿರವೊಂದಕ್ಕೆ ಕನಿಷ್ಠ 5,000 ರೂ. ವೆಚ್ಚ ತಗಲುತ್ತದೆ). ಇಂತಹ ಅವಕಾಶವು ಹೆಚ್ಚಾಗಿ ಖಾಸಗಿ ಶಾಲೆಗಳಲ್ಲಿ ಮಾತ್ರ ಸಿಗುತ್ತದೆ. ಶಿಕ್ಷಕರ ಪ್ರಯತ್ನದಿಂದ ಸರ್ಕಾರೀ ಶಾಲೆಗಳಲ್ಲೂ ಈ ಶಿಬಿರ ಆಯೋಜನೆಗೊಂಡಾಗ ಶಿಕ್ಷಕರಂತೆಯೇ ಪೋಷಕರಲ್ಲಿ ಮತ್ತು ಮಕ್ಕಳಲ್ಲಿಯೂ ಸಹ ಬೇರೆಯೇ ಬಗೆಯ ಖುಷಿ ಮತ್ತು ಸಂತೃಪ್ತಿಯ ಭಾವವು ಸ್ಪಷ್ಟವಾಗಿ ಕಂಡುಬರುತ್ತಿತ್ತು.

ಮಕ್ಕಳು ಮಾತುಕತೆ ಮತ್ತು ಬರವಣಿಗೆಯ ಮೂಲಕ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು, ಅನೇಕ ಶಿಕ್ಷಕರು ಮಕ್ಕಳನ್ನು ಪ್ರೋತ್ಸಾಹಿಸಿದರು. ಶಿಕ್ಷಕರು, ಮಕ್ಕಳು ಬರೆದ ಬರಹಗಳನ್ನು, ರಚಿಸಿದ ಚಿತ್ರಗಳನ್ನು ಗೋಡೆಯ ಮೇಲೆ ಅಂಟಿಸಲಾಗುವ ಪತ್ರಿಕೆಯಲ್ಲಿ ಹಾಗೂ ಎಲ್ಲರೂ ಒಟ್ಟುಸೇರುವ ಬೆಳಗಿನ ಸಭೆಗಾಗಿ ಸಾಮಗ್ರಿಗಳ ರೂಪದಲ್ಲಿ ಬಳಸಲು ಸಂಗ್ರಹಿಸಿದರು. ಇದಲ್ಲದೆ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ತಪ್ಪುಗಳ ಬಗ್ಗೆ ಚಿಂತಿಸದೆ ಭಯವಿಲ್ಲದೆ ಬರೆಯಲು ಪ್ರೋತ್ಸಾಹಿಸಿದರು ಹಾಗೂ ಆ ಕೃತಿಗಳನ್ನು ಕೆಲವು ನಿಯತಕಾಲಿಕೆಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ನೀಡಿದರು. ಹೀಗೆ ಮಕ್ಕಳ ಬರಹಗಳು, ಕೃತಿಗಳು ಅನೇಕ ಪತ್ರಿಕೆಗಳು ಮತ್ತು ಮಕ್ಕಳ ನಿಯತಕಾಲಿಕೆಗಳಲ್ಲಿ ಪ್ರಕಟವೂ ಆದವು. ಬಹುತೇಕ ಶಿಕ್ಷಕರು ಮಕ್ಕಳನ್ನು ಓದಲಿಕ್ಕೆ ಮತ್ತು ಬರೆಯಲಿಕ್ಕೆ ಪ್ರೇರೇಪಿಸಲು ಪ್ರಾಸ ಕವಿತೆಗಳು ಮತ್ತು ಶಿಶುಗೀತೆಗಳನ್ನು ಬಳಸಲು ಪ್ರಾರಂಭಿಸಿದರು. ಶಿಕ್ಷಕರು ತಮ್ಮ ಕಾರ್ಯಚಟುವಟಿಕೆಗಳಲ್ಲಿನ ಸುಧಾರಣೆಗಳನ್ನು ಮತ್ತು ವಿದ್ಯಾರ್ಥಿಗಳ ಕಲಿಯುವಿಕೆಯಲ್ಲಿ ಇದರ ಪರಿಣಾಮಗಳನ್ನು ಗಮನಿಸಲು ಮತ್ತು ದಾಖಲಿಸಲು ಪ್ರಾರಂಭಿಸಿದರು.

## ಬೇಸಿಗೆ ಶಿಬಿರಗಳ ವಿಸ್ತರಣೆ

ತಮ್ಮ ವಿದ್ಯಾರ್ಥಿಗಳಿಗೆ ತರಗತಿಯ ಮಟ್ಟದ ಸಾಮರ್ಥ್ಯಗಳು ಮತ್ತು ಇತರ ಕೆಲವು ಉನ್ನತ ಮಟ್ಟದ ಕೌಶಲಗಳನ್ನು ಕಲಿಸಲು ಬಯಸುವಂತಹ ಶಿಕ್ಷಕರೊಂದಿಗೆ ಸೇರಿ, ನಾವು ರಜೆಯ ಸಮಯದಲ್ಲಿ ಬೇಸಿಗೆ ಶಿಬಿರವನ್ನು ಮುಂದುವರಿಸಬಹುದು. ಹಾಗೆ ನೋಡಿದಲ್ಲಿ, ವಾಸ್ತವದ ಸವಾಲು ಬೇರೆಯದೇ ಆಗಿದೆ. ಪರೀಕ್ಷೆಗಳ ನಂತರ ಮತ್ತು ಬೇಸಿಗೆ ರಜೆಯ ಮೊದಲು ಬಹಳಷ್ಟು ಮಕ್ಕಳು ಶಾಲೆಗೆ ಬರುವುದಿಲ್ಲ ಎಂಬುದನ್ನು ಅಂಕಿಅಂಶಗಳು ತೋರಿಸುತ್ತವೆ. ನಾನು ಭೇಟಿ ನೀಡಿದ ಶಾಲೆಗಳಲ್ಲಿ - ಈ ಅವಧಿಯಲ್ಲಿ ಕೇವಲ ಶೇಕಡಾ 25-40ರಷ್ಟು ವಿದ್ಯಾರ್ಥಿಗಳು ಮಾತ್ರ ಶಾಲೆಗೆ ಬರುತ್ತಾರೆ ಎನ್ನುವುದನ್ನು ನಾನು ನೋಡಿದ್ದೇನೆ. ಇನ್ನೊಂದೆಡೆ, ಶಾಲೆಗೆ ರಜೆಯಿದ್ದರೂ ಬೇಸಿಗೆ ಶಿಬಿರದಲ್ಲಿ ಪಾಲ್ಗೊಳ್ಳಲು ಅನೇಕ ಮಕ್ಕಳು ಉತ್ಸುಕರಾಗಿದ್ದರು.

ಹಾಜರಾತಿ ಕಡಿಮೆಯಾಗಲು ಒಂದು ಮುಖ್ಯ ಕಾರಣವೆಂದರೆ ತರಗತಿಯಲ್ಲಿ ಯೋಜಿತ ಕಾರ್ಯಚಟುವಟಿಕೆಗಳ ಕೊರತೆ ಇರುವುದು. ಪರೀಕ್ಷೆಯ ನಂತರ, ಶಿಕ್ಷಕರು ಸಾಮಾನ್ಯವಾಗಿ ಉತ್ತರಪತ್ರಿಕೆಗಳನ್ನು ಪರಿಶೀಲಿಸುವ/ ಶ್ರೇಣೀಕರಿಸುವ ಕಡೆಗೆ ಗಮನ ನೀಡುತ್ತಾರೆ. ಇದರಿಂದ ಮಕ್ಕಳಿಗೆ ಶಾಲಾ ಅವಧಿ ಮುಗಿದಂತೆ ಭಾಸವಾಗುತ್ತದೆ. ಆದರೆ ಪಾಠಗಳು ಮತ್ತು ಕಲಿಕೆಯ ಚಟುವಟಿಕೆಗಳು ಆಸಕ್ತಿದಾಯಕ ಮತ್ತು ಮೋಜಿನಿಂದ ಕೂಡಿದ್ದರೆ, ಮಕ್ಕಳು ಶಾಲೆಗೆ ಬಂದು ಕಲಿಯಲು ಉತ್ಸುಕರಾಗಿರುತ್ತಾರೆ ಎನ್ನುವುದು ಅನುಭವಕ್ಕೆ ಬಂದಿರುವ ವಿಷಯವಾಗಿದೆ. ಜೀವಂತಿಕೆ ತುಂಬಿರುವ, ಆಸಕ್ತಿದಾಯಕ ಮತ್ತು ಅರ್ಥಪೂರ್ಣ ಕಲಿಕೆಯ ವಾತಾವರಣಕ್ಕಾಗಿ ಅವರು ಕಾತರರಾಗಿ ಎದುರು ನೋಡುತ್ತಿರುತ್ತಾರೆ.

ಬೇಸಿಗೆ ಶಿಬಿರಗಳಿಂದ ನಮಗೆ ದೊರಕಿದ ಅನುಭವವು, ಈ ಮೌಲ್ಯಾಂಕನ ಪ್ರಕ್ರಿಯೆಗಳು ಪಾಠ ಮಾಡುವ ವಿಧಾನಗಳನ್ನು ಸುಧಾರಿಸುತ್ತವೆ ಎಂದು ತೋರಿಸುತ್ತದೆ. ಅಷ್ಟೇ ಅಲ್ಲದೆ ಅಂತಿಮವಾಗಿ, ಕಲಿಯುವಿಕೆಯ ಮೇಲೆ ಇದು ಪರಿಣಾಮ ಬೀರುತ್ತದೆ. ಮುಂದಿನ ದಿನಗಳಲ್ಲಿ, ವಾರ್ಷಿಕ ಪರೀಕ್ಷೆಗಳ ನಂತರ ಮತ್ತು ಬೇಸಿಗೆ ರಜೆಯ ಮೊದಲು ನಮಗೆ ಶಾಲೆಗಳಲ್ಲಿ ಸಿಗುವ 15ರಿಂದ 25 ದಿನಗಳನ್ನು ಸದುಪಯೋಗ ಮಾಡಿಕೊಳ್ಳುವುದು ಸರಿಯಾಗಿರುತ್ತದೆ. ಈ ಆಲೋಚನೆಯನ್ನು ಆಚರಣೆಯಲ್ಲಿ ಕಾರ್ಯರೂಪಕ್ಕೆ ತರಲಿಕ್ಕಾಗಿ, ವಾರ್ಷಿಕ ಪರೀಕ್ಷೆಗಳಲ್ಲಿನ ಪ್ರಶ್ನೆಗಳಿಗೆ ಮಕ್ಕಳು ನೀಡುವ ಉತ್ತರವನ್ನು ನಾವು ವಿಶ್ಲೇಷಿಸಬೇಕಿರುವುದು ಜರೂರಾಗಿರುತ್ತದೆ. ಮಕ್ಕಳಿಗೆ ಕಠಿಣ ಎಂದೆನ್ನಿಸುವ ಸಂದರ್ಭ(ಉದಾ: ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವ ಸಂದರ್ಭ)ಗಳನ್ನು ಗುರುತಿಸುವುದು ಮತ್ತು ಮಕ್ಕಳಲ್ಲಿನ ಪರಸ್ಪರ ಕೌಶಲ ಸಾಮರ್ಥ್ಯಗಳ ಅಂತರವನ್ನು ಕಡಿಮೆ ಮಾಡಲು, ಅಪೇಕ್ಷಿತ ಬೋಧನಾ ವಿಧಾನಗಳ ಪಟ್ಟಿಯನ್ನು ಮಾಡುವುದು ಒಳ್ಳೆಯದು. ಇದನ್ನು ಮಾಡುವಲ್ಲಿ ನಾವು ಯಶಸ್ವಿಯಾದರೆ, ಆಗ ನಿರ್ದಿಷ್ಟವಾದ ಫಲಿತಾಂಶಗಳನ್ನು ಪಡೆಯಲು ಕಾಲಮಿತಿ ಇರುವ ಅಭಿಯಾನವನ್ನು ನಡೆಸಬಹುದಾಗಿದೆ. ಬನ್ನಿ, ಶಿಕ್ಷಕರ ಸ್ವರೂಪದಲ್ಲಿರುವ ನಾವು ಸ್ವಯಂ ನಮ್ಮನ್ನೇ ಎರಡು ಪ್ರಶ್ನೆಗಳನ್ನು ಕೇಳಿಕೊಳ್ಳೋಣ.

1. ವಾರ್ಷಿಕ ಪರೀಕ್ಷೆಗಳು ಮುಗಿದ ಕೂಡಲೇ ಮತ್ತು ಶಾಲೆ ಮುಚ್ಚುವ ಮೊದಲು ನನ್ನ ಬಳಿ ಇರುವ 15ರಿಂದ 20 ದಿನಗಳಲ್ಲಿ ಮಕ್ಕಳ ಕಲಿಕೆಯನ್ನು ಹೆಚ್ಚು ಉಪಯುಕ್ತವಾಗಿ ಹೇಗೆ ಮಾಡಬಹುದಾಗಿದೆ ಮತ್ತು ಇದರ ಪಕ್ಕಾ ಯೋಜನೆಯನ್ನು ಹೇಗೆ ಮಾಡಬೇಕು ಎಂಬುದು ಮೊದಲ ಪ್ರಶ್ನೆ,


ಚಿತ್ರ 5: ಬಿಂದಿಗಳನ್ನು ಬಳಸಿ ಆಟ ಮತ್ತು ಲೆಕ್ಕ.

2. ವಾರ್ಷಿಕ ಪರೀಕ್ಷೆಯಲ್ಲಿ ಮಕ್ಕಳು ನೀಡಿದ ಉತ್ತರಗಳಿಂದ ಯಾವ ಕೌಶಲಗಳನ್ನು ಹೊಂದುವಲ್ಲಿ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದಾರೆಂದು ನಾನು ಕಂಡುಹಿಡಿಯಬಹುದು? ಅವುಗಳ ಕುರಿತು ಈ ಅವಧಿಯಲ್ಲಿ ನಾನು ಏನು ಕೆಲಸ ಮಾಡಬಹುದು? ಎಂಬುದು ಎರಡನೇ ಪ್ರಶ್ನೆಯಾಗಿದೆ.

## ವಾರ್ಷಿಕ ಪರೀಕ್ಷೆಗಳಿಂದ ಪಡೆದ ಮಾಹಿತಿಯನ್ನು ಬಳಸುವುದು


ಚಿತ್ರ 6: ಓದುವ ಮೂಲೆಯಲ್ಲಿರುವ ಪುಸ್ತಕಗಳನ್ನು ಓದುತ್ತಿರುವ ಮಕ್ಕಳು.

ನನ್ನ ಪ್ರಕಾರ, ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (Foundational Literacy and Numeracy -FLN) ಮತ್ತು ಗ್ರೇಡ್ ಮಟ್ಟದ ಸಾಮರ್ಥ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಸಾಧಿಸಲಿಕ್ಕಾಗಿ ಮತ್ತು ತಮ್ಮ ರೂಢಿ ಆಚರಣೆಗಳನ್ನು ಸ್ವಯಂ ತಿದ್ದಿಕೊಳ್ಳಲಿಕ್ಕಾಗಿ, ನಾವು ನಿಯಮಿತವಾಗಿ ಮೌಲ್ಯಾಂಕನ ಮಾಡಬೇಕು. ವರ್ಷದ ಕೊನೆಯಲ್ಲಿ ಮಕ್ಕಳ ಮಟ್ಟವನ್ನು ಅಳೆಯುವುದಕ್ಕಾಗಿ, ಕೋಷ್ಟಕ 2ರಲ್ಲಿ ತೋರಿಸಿರುವ ಚೌಕಟ್ಟನ್ನು ನೀವು ಬಳಸಬಹುದು ಮತ್ತು ಈ ಕೆಲಸವನ್ನು ಪೂರೈಸಲು ಒಂದು ಕಾಲಮಿತಿ ಇರುವ ಕಾರ್ಯಯೋಜನೆಯನ್ನು ಸಿದ್ಧಪಡಿಸಬಹುದು.

**ಕೋಷ್ಟಕ 2:**

| ಕ್ರಮ ಸಂಖ್ಯೆ | ವಿದ್ಯಾರ್ಥಿ | ಪ್ರಶ್ನೆ 1 | ಪ್ರಶ್ನೆ 2 | ಪ್ರಶ್ನೆ 3 | ಪ್ರಶ್ನೆ 4 | ಪ್ರಶ್ನೆ 5 |
|---|---|---|---|---|---|---|
| 1 | ಅಮಲ್ | ಹೌದು | ಹೌದು | ಹೌದು | ಇಲ್ಲ | ಹೌದು |
| 2 | ಅನಾಮಿಕಾ | ಹೌದು | ಹೌದು | ಇಲ್ಲ | ಇಲ್ಲ | ಹೌದು |
| 3 | ಹಫೀಜಾ | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ |
| 4 | ಜೋಸೆಫ್ | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ |
| 5 | ನಿಕಿತಾ | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ |

ಬನ್ನಿ, ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು, ತಳಮಟ್ಟದಿಂದ ಕೆಲವು ಉದಾಹರಣೆಗಳನ್ನಿಟ್ಟುಕೊಂಡು ನೋಡೋಣ. ಈ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ವಿಧಾನಗಳು, ವಿಷಯ ಸಾಮಗ್ರಿಗಳು ಮತ್ತು ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಇದು ನಮಗೆ ಸಹಾಯ ಮಾಡುತ್ತದೆ. ಅರ್ಧವಾರ್ಷಿಕ ಪರೀಕ್ಷೆಯಲ್ಲಿ, ಐದನೇ ತರಗತಿಯ ಹಿಂದಿ ವಿಷಯದಲ್ಲಿ, ಮೈಸೂರಿನ ದಸರಾ ಉತ್ಸವದ ವಿವರಣೆ ಕೇಳುವ ಪ್ರಶ್ನೆ ಇತ್ತು. ವಿದ್ಯಾರ್ಥಿಗಳು ಈ ಹಬ್ಬದ ಬಗ್ಗೆ ಒಂದು ಅಧ್ಯಾಯದಲ್ಲಿ ಓದಿದ್ದರು. ಹಾಗೆ ನೋಡಿದರೆ ಈ ಪ್ರಶ್ನೆಯು ಭಾಗಶಃ ಸ್ಮರಣೆ ಆಧಾರಿತವಾಗಿದೆ. ಆದರೆ

ಇದು ವಿದ್ಯಾರ್ಥಿಗಳ ಪಾಠವನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಸಹ ಅಳೆಯುತ್ತದೆ. ವಿದ್ಯಾರ್ಥಿಗಳು ಯಾವ ಪಾಠವನ್ನು ನಿಜವಾಗಿ ಅರ್ಥ ಮಾಡಿಕೊಂಡಿದ್ದಾರೋ ಅದನ್ನು ಮಾತ್ರ ನೆನಪಿಟ್ಟುಕೊಳ್ಳಬಲ್ಲರು. ಒಂದುವೇಳೆ, ಐದನೇ ತರಗತಿಯ ಮಕ್ಕಳಿಗೆ ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತಿದ್ದಲ್ಲಿ, ಅವರ ಓದುವ ಮತ್ತು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಸುಧಾರಿಸುವಲ್ಲಿ ಸಹಕರಿಸುವಂತಹ ನಿರ್ದಿಷ್ಟ ಚಟುವಟಿಕೆಗಳನ್ನು ನಾವು ಯೋಜಿಸಬೇಕು.

ಇದಕ್ಕಾಗಿ ಒಂದು ಸರಳ ಮಾರ್ಗವನ್ನು ಅನುಸರಿಸಬಹುದು. ಅದೇನೆಂದರೆ-ಶಿಕ್ಷಕರು ತಮ್ಮ ತರಗತಿಗಳಲ್ಲಿ ಉತ್ತರಪತ್ರಿಕೆಗಳನ್ನು ಪರಿಶೀಲಿಸುವಾಗ/ಗ್ರೇಡ್ ನೀಡುವಲ್ಲಿ ನಿರತರಾಗಿರುವಾಗ, ಆ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ ಇಷ್ಟದ ಯಾವುದಾದರೂ ಪಠ್ಯಪುಸ್ತಕ ಅಥವಾ ರೀಡಿಂಗ್ ಕಾರ್ನರ್‌ನಿಂದ ಯಾವುದೇ ಪುಸ್ತಕವನ್ನು ತೆಗೆದುಕೊಂಡು ಓದುತ್ತಿರಬಹುದು. ಇದರ ಆರಂಭ ಸ್ವಯಂ ನಿಮ್ಮಿಂದಲೇ ಆಗಿ ನೀವೇ ಒಂದು ಉದಾಹರಣೆ ಆಗಬಹುದು. ಅಂದರೆ, ಶಿಕ್ಷಕರು ಸ್ವಯಂ ಪುಸ್ತಕವನ್ನು ಓದುತ್ತಾರೆ, ಕಥೆಯನ್ನು ತಮ್ಮದೇ ಸ್ವಂತ ಮಾತುಗಳಲ್ಲಿ ಮತ್ತೆಮತ್ತೆ ಹೇಳುತ್ತಾರೆ. ಅಲ್ಲದೇ ಅದನ್ನು ಬರೆಯುತ್ತಾರೆ ಕೂಡಾ. ಪಾಠ ಮಾಡುವ ತರಗತಿಯ ವಿದ್ಯಾರ್ಥಿಗಳಿಗಾಗಿ ಅಥವಾ ಹತ್ತಿರ-ಹತ್ತಿರ ಅದೇ ಮಟ್ಟದಲ್ಲಿರುವ ವಿದ್ಯಾರ್ಥಿಗಳಿಗಾಗಿ ವಿನ್ಯಾಸಗೊಳಿಸಲಾದ ವಿಷಯದಿಂದ ಶಿಕ್ಷಕರು 3ರಿಂದ 5 ರೀತಿಯಲ್ಲಿ ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನು ಸಿದ್ಧಪಡಿಸಬಲ್ಲರು. ಓದುವ ಅಭ್ಯಾಸಕ್ಕೆ ಪ್ರೋತ್ಸಾಹ ನೀಡುವಲ್ಲಿ ಆಸಕ್ತಿಯಿಲ್ಲದಂತಹ ಶಿಕ್ಷಕರೂ ಅನೇಕರಿದ್ದಾರೆ. ಹೀಗಾಗುವುದು ಏಕೆಂದರೆ, ಒಂದೋ ಅವರಿಗೆ ಓದುವ ಅಭ್ಯಾಸವು ತಪ್ಪಿಹೋಗಿರುತ್ತದೆ, ಇಲ್ಲವೇ ತಮ್ಮ ಶಾಲಾ ಜೀವನದಲ್ಲಿ ಈ ಓದುವ ಅಭ್ಯಾಸವನ್ನು ಬೆಳೆಸಿಕೊಂಡೇ ಇರುವುದಿಲ್ಲ. ಇದನ್ನು ನಿವಾರಿಸಿಕೊಳ್ಳಲು ಶಿಕ್ಷಕರು ಪ್ರತಿದಿನ ರೀಡಿಂಗ್ ಕಾರ್ನರ್‌ನಿಂದ ಪುಸ್ತಕವನ್ನು ತೆಗೆದುಕೊಂಡು ಓದುವ ಮೂಲಕ ಮತ್ತು 20 ದಿನಗಳಲ್ಲಿ 20 ಪುಸ್ತಕಗಳನ್ನು ಓದುವ ಗುರಿಯನ್ನು ಇಟ್ಟುಕೊಳ್ಳುವ ಮೂಲಕ ತಮಗೇ ತಾವೇ ಒದಿನ ಸವಾಲನ್ನು ಹಾಕಿಕೊಳ್ಳಬಹುದು. ಶಿಕ್ಷಕರು ಇದನ್ನು ಅಳವಡಿಸಿಕೊಂಡಲ್ಲಿ, ಇದು ಶಿಕ್ಷಕರ ಮತ್ತು ರೀಡಿಂಗ್ ಕಾರ್ನರ್ ಇವೆರಡರ ಕುರಿತಾಗಿನ ವಿದ್ಯಾರ್ಥಿಗಳ ಗ್ರಹಿಕೆಯಲ್ಲಿ ಸಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಆರಂಭಿಕ ತರಗತಿಗಳಿಗೆ ಈ ವಿಧಾನವು ಸ್ವಲ್ಪ ಬೇರೆಯಾಗಿರಬಹುದು. ಅಲ್ಲಿ ನಾವು ಶೇಕಡಾ 90ರಷ್ಟು ಮಕ್ಕಳಿಗಾಗಿ, 15 ದಿನಗಳಲ್ಲಿ ಸರಳ ವಾಕ್ಯಗಳನ್ನು ಓದುವ ಮತ್ತು ಬರೆಯುವ ಗುರಿಯನ್ನು ಹಾಕಿಕೊಳ್ಳಬಹುದು. ಚಿತ್ರಗಳು ಮತ್ತು ಪಠ್ಯವನ್ನು ಹೊಂದಿರುವ ಥೀಮ್ ಕಾರ್ಡ್‌ಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯವು FLN ಕಿಟ್‌ನಲ್ಲಿ ಒದಗಿಸಿದ 100ಕ್ಕೂ ಹೆಚ್ಚು ಫ್ಲಾಶ್‌ಕಾರ್ಡ್‌ಗಳನ್ನು ಬಳಸಿಕೊಂಡು, ವಿದ್ಯಾರ್ಥಿಗಳಿಗೆ ಓದಿಸುವ ಮತ್ತು ಬರೆಸುವ ಅಭ್ಯಾಸವನ್ನು ಬೆಳೆಸಲು ಪ್ರಾರಂಭಿಸಬಹುದು. ಯಾವಾಗ ವಿದ್ಯಾರ್ಥಿಗಳು ಪದಗಳನ್ನು ಬಳಸುವಲ್ಲಿ ಸಹಜವಾಗಿ ವ್ಯವಹರಿಸಬಲ್ಲರೋ ಆಗ, ನಾವು ಆ ಪದಗಳನ್ನು ಬಳಸುತ್ತಾ ಸರಳ ವಾಕ್ಯಗಳನ್ನು ರಚಿಸಲು ಅವರಿಗೆ ಹೇಳಿಕೊಡಬಹುದು. ಉದಾಹರಣೆಗೆ: ಇದು ಮಾವಿನಹಣ್ಣು ಎಂಬ ವಾಕ್ಯ ಬರೆಯಲು ಹೇಳುವುದು. ನಂತರ ಈ ವಾಕ್ಯದಲ್ಲಿ ಇತರ ಹಣ್ಣುಗಳ ಹೆಸರುಗಳನ್ನು ಸೇರಿಸಲು ಹೇಳುವುದು.

ಶಿಕ್ಷಕರು ಈ ಪ್ರಕ್ರಿಯೆಯನ್ನು ಹೇಳಿ ಮಾಡಿಸುವಾಗ, ಈ ವಿಧಾನದಿಂದ ಓದುವುದು ಮತ್ತು ಬರೆಯುವುದು ಎರಡಕ್ಕೂ ಉತ್ತೇಜನ ಸಿಗುತ್ತದೆ. ಇದೇ ರೀತಿಯಾಗಿ, ಗಣಿತದಲ್ಲಿ ನಾವು ತರಗತಿಯ ಮಟ್ಟವನ್ನು ಅವಲಂಬಿಸಿ 2ರಿಂದ 4 ಅಂಕಿಗಳ ತನಕದ ಲೆಕ್ಕಗಳ ಕಡೆಗೆ ವಿಸ್ತರಿಸುವತ್ತ ಗಮನ ನೀಡಬಹುದು. ಇದರ ನಂತರ, ಗಣಿತೀಯ ಪರಿಭಾಷೆಗಳ ಕಡೆಗೆ ಅಂದರೆ ಅಂಕೆಗಳ ಸ್ಥಾನ ಮೌಲ್ಯಗಳು, ಮೂಲಭೂತ ಲೆಕ್ಕಾಚಾರದ ಸೂತ್ರಗಳು, ಮೂಲಭೂತ ಲೆಕ್ಕಾಚಾರದ ಕಥೆಗಳನ್ನು ಹೊಂದಿರುವ ಆರ್ಥಿಕ ಪ್ರಶ್ನೆಗಳ ಮೂಲಕ ಗಣಿತ ಹೇಳಿಕೊಡುವ ಕಡೆ ಗಮನಹರಿಸಬಹುದು. ವಿವರಣೆ ಇಂತಿದೆ -

- ಅಂಕೆಗಳ ಸ್ಥಾನ ಮೌಲ್ಯಗಳು (ಅಂದರೆ ಬಿಡಿ-ಹತ್ತು-ನೂರು-ಸಾವಿರ-ಹತ್ತುಸಾವಿರ ತರಹದ್ದು)
- ಮೂಲಭೂತ ಲೆಕ್ಕಾಚಾರದ ಸೂತ್ರಗಳು (ಅಂದರೆ ಕೂಡುವುದು, ಕಳೆಯುವುದು, ಗುಣಾಕಾರ, ಭಾಗಾಕಾರಗಳು)
- ಮೂಲಭೂತ ಲೆಕ್ಕಾಚಾರದ ಕಥೆಗಳನ್ನು ಹೊಂದಿರುವ ಆರ್ಥಿಕ ಪ್ರಶ್ನೆಗಳು (ಅಂದರೆ – ಒಂದು ಅಂಗಡಿಯಲ್ಲಿ 15 ಸೇಬುಹಣ್ಣು ಇದ್ದವು. 10 ಸೇಬು ಮಾರಾಟ ಆದರೆ ಅಂಗಡಿಯಲ್ಲಿ ಎಷ್ಟು ಸೇಬು ಉಳಿದವು – ಎಂಬ ತರಹದ ಲೆಕ್ಕಾಚಾರ ಇರುವ ಪ್ರಶ್ನೆಗಳು).

> **ಬೇಸಿಗೆ ಶಿಬಿರಗಳಿಂದ ನಮಗೆ ದೊರಕಿದ ಅನುಭವವು, ಈ ಮೌಲ್ಯಮಾಪನಗಳು ಪಾಠ ಮಾಡುವ ವಿಧಾನಗಳನ್ನು ಸುಧಾರಿಸುತ್ತವೆ ಎಂದು ತೋರಿಸುತ್ತದೆ. ಅಷ್ಟೇ ಅಲ್ಲದೆ ಅಂತಿಮವಾಗಿ, ಕಲಿಯುವಿಕೆಯ ಮೇಲೆ ಇದು ಪರಿಣಾಮ ಬೀರುತ್ತದೆ.**

ಇಂತಹವುಗಳ ಮೂಲಕ ಗಣಿತದ ತಿಳುವಳಿಕೆಯನ್ನು ಬೆಳೆಸಬಹುದಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು, ಗಣಿತೀಯ ಮೂಲಭೂತ ಪರಿಭಾಷೆಯ ಕಾರ್ಯಾಚರಣೆಗಳಲ್ಲಿ ಇಂತಹ ಕನಿಷ್ಠವೆಂದರೂ 25 'ಲೆಕ್ಕಾಚಾರದ ಪ್ರಶ್ನೆಗಳನ್ನು' (word problems) ಬಿಡಿಸಬೇಕು, ಅಂದರೆ ಒಟ್ಟಾರೆಯಾಗಿ 100 ಪ್ರಶ್ನೆಗಳಾದವು. 5ನೇ ತರಗತಿಯ 15 ವಿದ್ಯಾರ್ಥಿಗಳು, 15ರಿಂದ 20 ದಿನಗಳ ಅವಧಿಯಲ್ಲಿ ರಚಿಸಿರುವ ಒಂದು ಪುಸ್ತಕದಲ್ಲಿ 1,500 'ಲೆಕ್ಕಾಚಾರದ ಪರಿಭಾಷೆ ಇರುವ ಪ್ರಶ್ನೆಗಳು' ಇವೆ ಎಂದು ಊಹಿಸಿಕೊಳ್ಳಿ. ಇವುಗಳನ್ನು ಬಿಡಿಸುವ ಜೊತೆಗೆ, ಬೇರೆಯದೇ ಮತ್ತೊಂದು ಪ್ರಾಜೆಕ್ಟ್‌ನಲ್ಲಿ ಅಳತೆ-ಮಾಪನ ಮತ್ತು ಅಂಕಿ-ಸಂಖ್ಯೆಗಳನ್ನು ಹೊಂದಿದ ಡೇಟಾ ನಿರ್ವಹಣೆಯನ್ನು ಸಹ ಮಾಡಿಸಬಹುದು.

ಪ್ರತಿಯೊಂದು ಚಟುವಟಿಕೆಯೂ ವಾರ್ಷಿಕ ಪರೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿಯನ್ನಿಟ್ಟುಕೊಂಡು ನಡೆಸುವಂತಹದಾಗಿರಬೇಕು. ನಮ್ಮನ್ನು ನಾವು ಬದ್ಧತೆಯಿಂದ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾವು ಗುರುತಿಸಿರುವ ಕೊರತೆಗಳನ್ನು ನಿವಾರಿಸಲು, ನಾವು ನಮ್ಮ ಪ್ರಕ್ರಿಯೆಗಳನ್ನು ಸುಧಾರಿಸುವತ್ತ ಗಮನ ಹರಿಸಬೇಕೇ ವಿನಹ, ಮಕ್ಕಳು ಇನ್ನೂ ಪಡೆಯದ ಸಾಮರ್ಥ್ಯಗಳಿಗಾಗಿ ಅವರನ್ನು ದೂಷಿಸಬಾರದು.



**ಮುನೀರ್** ಅವರು ಕಳೆದ 9 ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನೊಂದಿಗೆ ಕೆಲಸ ಮಾಡುತ್ತಿದ್ದಾರೆ. ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಎಂ.ಎ ಪದವಿ ಪಡೆದಿದ್ದಾರೆ. ಅವರಿಗೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಬಗ್ಗೆ ಆಳವಾದ ತಿಳುವಳಿಕೆ ಇದ್ದು, ಅದನ್ನು ಇನ್ನಷ್ಟು ಸುಧಾರಿಸಲು ಕಟಿಬದ್ಧರಾಗಿದ್ದಾರೆ.

**ಸಂಪರ್ಕ:** muneer.c@azimpremjifoundation.org

ಅನುವಾದ: ಆಶಾ ಸಿಂಗ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ವಿದ್ಯಾರ್ಥಿಗಳ ಮನೋಸ್ಥೈರ್ಯ ಮತ್ತು ಕಲಿಕೆ: ಶಿಕ್ಷಕರ ದೃಷ್ಟಿಕೋನ

ರಾಜು ಪಟೇಲ್

**ಶಾಲೆಯಲ್ಲಿ, ಕೆಲವೊಮ್ಮೆ ಕೆಲವು ಮಕ್ಕಳು ಯಾರೊಡನೆಯೂ ಹೆಚ್ಚು ಮಾತನಾಡದೆ ಏಕಾಂತವಾಗಿ ಇರುವುದನ್ನು ನಾವು ನೋಡುತ್ತೇವೆ - ಇದು ಅವರನ್ನು ಇತರರಿಗಿಂತ ಭಿನ್ನವಾಗಿಸುತ್ತದೆ. ಶಿಕ್ಷಕರಾಗಿ, ಅಂತಹ ವಿದ್ಯಾರ್ಥಿಗಳನ್ನು ನಾವು ನೋಡಿದಾಗ, ಅವರು ಚಿಕ್ಕಂದಿನಿಂದಲೂ ಹೀಗೆ ಇದ್ದಾರೆಯೇ ಅಥವಾ ಅವರ ವ್ಯಕ್ತಿತ್ವದಲ್ಲಿ ಇತ್ತೀಚಿನ ಬದಲಾವಣೆಗೆ ಕಾರಣವಿದೆಯೇ ಎಂಬ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಈ ಲೇಖನದಲ್ಲಿ ಅಂತಹ ಒಬ್ಬ ವಿದ್ಯಾರ್ಥಿಯ ಕಥೆಯನ್ನು ಹಂಚಿಕೊಳ್ಳಲಾಗಿದೆ.**

## ಶಾಲೆಗೆ ಪ್ರವೇಶ

ನಾನು ಮೊದಲ ಬಾರಿಗೆ ಶಿಕ್ಷಕನಾಗಿ ಶಾಲೆಗೆ ಪ್ರವೇಶಿಸಿದಾಗ ಅದು ನನಗೆ ಸಂತೋಷದ ಭಾವವಾಗಿತ್ತು. ಮೊದಲ ನೋಟದಲ್ಲೇ ಶಾಲೆಯ ವಾತಾವರಣ ನನಗೆ ಇಷ್ಟವಾಯಿತು. ಈ ಶಾಲೆಯಲ್ಲಿ ಸುಮಾರು 200 ಮಕ್ಕಳು ಮತ್ತು 7 ಶಿಕ್ಷಕರು ಇದ್ದರು. ಜೊತೆಗೆ ಅನೇಕ ಬಿ.ಎಡ್ ಇಂಟರ್ನ್‌ಷಿಪ್ ಫೆಲೋಗಳು ತಮ್ಮ ಸೇವೆಗಳನ್ನು ಒದಗಿಸುತ್ತಿದ್ದರು. ಶಾಲೆಯ ಮೊದಲ ದಿನವೇ, ಶಿಕ್ಷಕ ಸಹೋದ್ಯೋಗಿಗಳು ಐದರಿಂದ ಎಂಟನೇ ತರಗತಿಯ 30 ಮಕ್ಕಳು ಇನ್ನೂ ಹಿಂದಿಯನ್ನು ಓದಲು ಮತ್ತು ಬರೆಯಲು ಕಲಿತಿಲ್ಲ. ಇದರಿಂದಾಗಿ ಇತರ ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಮಾಹಿತಿಯನ್ನು ಹಂಚಿಕೊಂಡರು. ಶಿಕ್ಷಕರ ಅಭಿಪ್ರಾಯಗಳನ್ನು ಅರ್ಥಮಾಡಿಕೊಂಡ ನಾನು ಮಕ್ಕಳೊಂದಿಗೆ ಎರಡು ಹಂತಗಳಲ್ಲಿ ಕೆಲಸ ಮಾಡಲು ಯೋಜಿಸಿದೆ. ಮೊದಲನೆಯದಾಗಿ, ತರಗತಿಯ ಸಮಯದಲ್ಲಿ ವಿಷಯಕ್ಕೆ ಸಂಬಂಧಿಸಿದ ಸಂಭಾಷಣೆಗಳು, ಮತ್ತು ಎರಡನೆಯದಾಗಿ, ಹೆಚ್ಚುವರಿ ಸಮಯದಲ್ಲಿ, ಅಗತ್ಯವಿರುವ ಮಕ್ಕಳೊಂದಿಗೆ ಭಾಷೆಯ ಕುರಿತು ಪ್ರತ್ಯೇಕವಾಗಿ ಕೆಲಸ ಮಾಡುವುದು.

## ಮಕ್ಕಳೊಂದಿಗೆ ಗುರುತಿಸುವಿಕೆ

ಅದು ಐದನೇ ತರಗತಿಯಲ್ಲಿ ನನ್ನ ಮೊದಲ ದಿನವಾಗಿತ್ತು. ನಾನು ನನ್ನನ್ನು ಪರಿಚಯಿಸಿಕೊಂಡೆ ಮತ್ತು ಮಕ್ಕಳನ್ನು ತಮ್ಮನ್ನು ತಾವು ಪರಿಚಯಿಸಿಕೊಳ್ಳುವಂತೆ ಕೇಳಿಕೊಂಡೆ. ಎಲ್ಲಾ ಮಕ್ಕಳು ತಮ್ಮನ್ನು ಬಹಳ ಸುಲಭವಾಗಿ ಪರಿಚಯಿಸಿಕೊಂಡರು, ಆದರೆ ಪ್ರಾಚಿ ಎಂಬ ಹುಡುಗಿಯೊಬ್ಬಳು ತನ್ನನ್ನು ಪರಿಚಯಿಸಿಕೊಳ್ಳುವಾಗ ಅವಳಲ್ಲಿ ಸ್ವಲ್ಪ ಅಸಹಜ ವರ್ತನೆ ಕಾಣಿಸಿತು. ತೆಳ್ಳಗಿನ ಮತ್ತು ಸಂಪೂರ್ಣವಾಗಿ ಮೌನವಾಗಿರುವ ಪ್ರಾಚಿ ಇತರ ಹುಡುಗರು ಮತ್ತು ಹುಡುಗಿಯರಿಗಿಂತ ಸಂಪೂರ್ಣವಾಗಿ ಭಿನ್ನವಾಗಿ ಕಾಣುತ್ತಿದ್ದಳು. ನಾನು ಪ್ರಾಚಿಯನ್ನು ಪರಿಚಯಿಸಲು ಹೇಳಿದ ತಕ್ಷಣ, ಎಲ್ಲಾ ಮಕ್ಕಳೂ ಇದ್ದಕ್ಕಿದ್ದಂತೆ ಜೋರಾಗಿ ನಗಲು ಪ್ರಾರಂಭಿಸಿದ್ದನ್ನೂ ನಾನು ಗಮನಿಸಿದೆ. ಅವರು ಯಾಕೆ ನಗುತ್ತಿದ್ದಾರೆ ಎಂದು ನಾನು ಆಶ್ಚರ್ಯಪಟ್ಟೆ. ಪ್ರಾಚಿ ದುಃಖಿತಳಾಗಿ ಮುಖ ತಗ್ಗಿಸಿ ನಿಂತಿದ್ದಳು. ಸ್ವಲ್ಪ ಹೊತ್ತು ನಿಲ್ಲಿಸಿ, ನಾನು ಮತ್ತೆ ಅವಳ ಪರಿಚಯದ ಬಗ್ಗೆ ಕೇಳಿದೆ., ಆದರೆ ಅವಳು ಇನ್ನೂ ಸಂಪೂರ್ಣವಾಗಿ ಮೌನವಾಗಿದ್ದಳು. ನಾನು ಪ್ರಾಚಿಯ ಹೆಸರನ್ನು ಕೇಳಲು ಪ್ರಯತ್ನಿಸಿದಾಗಲೆಲ್ಲಾ ಇತರ ಮಕ್ಕಳು ನನ್ನನ್ನು ನೋಡಿ ನಗುತ್ತಿದ್ದರು. ಕೊನೆಗೆ ನಾನು ಇತರ ಮಕ್ಕಳನ್ನು ಕೇಳಿದೆ, "ಅವಳು ಏಕೆ ಮಾತನಾಡುತ್ತಿಲ್ಲ ಮತ್ತು ನೀವೆಲ್ಲ ಏಕೆ ನಗುತ್ತಿದ್ದೀರಿ?" ಈ ಪ್ರಶ್ನೆಯನ್ನು ಕೇಳಿದ ಕೂಡಲೇ ಮಕ್ಕಳು ಇನ್ನಷ್ಟು ಜೋರಾಗಿ ನಗತೊಡಗಿದರು. ನಾನೇನಾದರೂ ತಪ್ಪಾಗಿ ಹೇಳಿದ್ದೇನೆಯೇ ಎಂದು ಮನಸ್ಸಿನಲ್ಲಿಯೇ ಯೋಚಿಸುತ್ತಾ ಗೊಂದಲದಿಂದ ಮಕ್ಕಳನ್ನು ನೋಡುತ್ತಿದ್ದೆ. ಅಷ್ಟರಲ್ಲಿ ನಗುವನ್ನು ಹತ್ತಿಕ್ಕಿಕೊಂಡ ವಿದ್ಯಾರ್ಥಿನಿಯೊಬ್ಬಳು "ಸಾರ್, ಆಕೆ ಮಾತನಾಡುತ್ತಾಳೆ." ಈಗ ನಾನು



ಚಿತ್ರ 1 : ಪರಸ್ಪರ ಜೊತೆಗೂಡಿ ಓದುವ ಆನಂದ.

ಮತ್ತೊಮ್ಮೆ ಪ್ರಾಚಿಯ ಕಡೆಗೆ ನೋಡಿದೆ. ಅವಳು ಇನ್ನೂ ದುಃಖದಿಂದ ಮುಖವನ್ನು ತಗ್ಗಿಸಿಕೊಂಡು ನಿಂತಿರುವುದನ್ನು ನಾನು ಗಮನಿಸಿದೆ. ಶಾಲೆಯ ಮೊದಲ ದಿನದ ಮೊದಲ ತರಗತಿ ಹೀಗಾಗುತ್ತದೆ ಎಂದು ನಾನು ಊಹಿಸಿರಲಿಲ್ಲ. ಮೊದಲ ದಿನದ ಈ ಮೊದಲ ತರಗತಿಯು ಉತ್ತಮವಾಗಿ ಏನು ಮಾಡಬಹುದೆಂದು ಯೋಚಿಸುವಂತೆ ಮಾಡಿತು. ಈ ಪ್ರಕ್ಷುಬ್ಧತೆಯು ನನ್ನನ್ನು ಹೊಸದಾಗಿ ಮತ್ತು ಸೃಜನಶೀಲವಾಗಿ ಏನನ್ನಾದರೂ ಮಾಡಲು ಒತ್ತಾಯಿಸಿತು. ಮರುದಿನವೇ ಮಕ್ಕಳಿಗೆ ಪರಿಸರದ ಬಗ್ಗೆ ಪಾಠ ಹೇಳತೊಡಗಿದೆ. ಪಾಠ ಮಾಡುವಾಗ ತರಗತಿಯ ಪ್ರತಿ ಮಗುವಿನ ಚಟುವಟಿಕೆ ಮತ್ತು ಕಲಿಕೆಯ ಮಟ್ಟವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ. ನಾನು ಮಕ್ಕಳಿಗೆ ಪಾಠಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದೆ, ಇದರಿಂದ ನಾನು ಹೇಳುತ್ತಿರುವುದನ್ನು ಅವರು ಅರ್ಥಮಾಡಿಕೊಳ್ಳಲು ಸಮರ್ಥರಾಗಿದ್ದಾರೆಯೇ ಅಥವಾ ಇಲ್ಲವೇ ಅಥವಾ ಎಷ್ಟರಮಟ್ಟಿಗೆ ಅರ್ಥ ಮಾಡಿಕೊಳ್ಳಲ್ಲರು ಎನ್ನುವುದು ನನಗೆ ತಿಳಿಯುತ್ತದೆ; ಬಹುತೇಕ ಎಲ್ಲಾ ಮಕ್ಕಳು ಸಂಭಾಷಣೆಗೆ ಸೇರಿಕೊಂಡರು. ಆದರೆ ಇಂದಿಗೂ ಪ್ರಾಚಿ ಮೌನವಾಗಿ ಮುಖ ತಗ್ಗಿಸಿ ನಿಂತಿದ್ದಳು, ಉಳಿದ ಮಕ್ಕಳು ಅವಳನ್ನು ನೋಡಿ ನಗುತ್ತಿದ್ದರು.

ಪ್ರಾಚಿ ಓದಬಹುದೇ ಅಥವಾ ಬರೆಯಬಹುದೇ ಎಂದು ನನಗೆ ತಿಳಿದಿರಲಿಲ್ಲ. ಮರುದಿನ, ನಾನು ವಿಶೇಷ ಅಗತ್ಯವಿರುವ ಮಕ್ಕಳಿಗಾಗಿ ಪ್ರತ್ಯೇಕ ತರಗತಿಯನ್ನು ತೆಗೆದುಕೊಂಡೆ. ಈ ಮಕ್ಕಳಲ್ಲಿ ಪ್ರಾಚಿಯೂ ಇದ್ದಳು. ಪ್ರಾಚಿಗೆ ಪುಸ್ತಕವನ್ನು ಓದಲು ಸಾಧ್ಯವಿಲ್ಲ, ಬರೆಯಲು ಸಾಧ್ಯವಿಲ್ಲ, ಬಹುಶಃ ಅದಕ್ಕಾಗಿಯೇ ಇತರ ಮಕ್ಕಳು ಅವಳನ್ನು ನೋಡಿ ನಗುತ್ತಾರೆ ಎಂದು ನಾನು ಭಾವಿಸಿದೆ. ಆದರೆ ಮಕ್ಕಳಲ್ಲಿ ಈ ವಿಷಯದ ಬಗ್ಗೆ ನಗುವ ಪ್ರವೃತ್ತಿ ಹಾಗೇ ತನ್ನಷ್ಟಕ್ಕೆ ಬೆಳೆದಿರುವುದಲ್ಲ. ಯಾವುದೋ ವಿಶೇಷ ಕಾರಣವಿರಬೇಕು ಎಂದು ಯೋಚಿಸುತ್ತಿದ್ದೆ. ಇದನ್ನು ತನಿಖೆ ಮಾಡಲು, ನಾನು ಪ್ರಾಚಿ ಮತ್ತು ಇತರ ಮಕ್ಕಳ ನಡವಳಿಕೆ ಮತ್ತು ಚಟುವಟಿಕೆಗಳನ್ನು ಆಳವಾಗಿ ಅರ್ಥ ಮಾಡಿಕೊಳ್ಳಲು ಪ್ರಾರಂಭಿಸಿದೆ. ಊಟದ ಸಮಯದಲ್ಲಿ ತರಗತಿಯ ಮಕ್ಕಳೆಲ್ಲ ಹೊರಗೆ ಹೋದ ನಂತರ ಪ್ರಾಚಿ ಕೊನೆಯದಾಗಿ ತರಗತಿಯಿಂದ ಹೊರಗೆ ಬರುತ್ತಿದ್ದುದನ್ನು ನಾನು ಗಮನಿಸಿದೆ. ಅದೂ ಒಬ್ಬಂಟಿಯಾಗಿ! ಕೆಲವು ದಿನಗಳ ನಂತರವೂ ನನಗೆ ಇತರ ಮಕ್ಕಳು ಪ್ರಾಚಿಯನ್ನು ಒಬ್ಬಂಟಿಯಾಗಿ ಬಿಟ್ಟಿದ್ದಾರೋ ಅಥವಾ ಪ್ರಾಚಿಯೇ ಅವರನ್ನು ತೊರೆದಿದ್ದಾಳೋ ಎಂಬುದು ಸ್ಪಷ್ಟವಾಗಿಲ್ಲ.

## ಪ್ರಾಚಿ, ನಾನು ಮತ್ತು ಉಳಿದ ಶಿಕ್ಷಕರು

ಶಾಲೆಯಲ್ಲಿ ಪ್ರಾಚಿಯ ಈ ಚಿತ್ರಣಕ್ಕೆ ಸ್ವತಃ ಪ್ರಾಚಿಯೇ, ಅಥವಾ ಇತರ ಮಕ್ಕಳು ಅಥವಾ ಕೆಲಸ ಮಾಡುವ ಶಿಕ್ಷಕ ಸಹೋದ್ಯೋಗಿಗಳು ಕಾರಣವೇ? ಅಥವಾ ಇದರ ಹಿಂದೆ ಎಲ್ಲರ ಸಾಮೂಹಿಕ ಪಾತ್ರವಿದೆಯೇ? ಇದು ನನಗೆ ವಿಚಾರ ಮಾಡಲು ಯೋಗ್ಯವಾದ ಪ್ರಶ್ನೆಯಾಗಿತ್ತು. ನಾನು ಪ್ರಾಚಿಯ ಕಡೆಗೆ ಇತರ ಮಕ್ಕಳು ಮತ್ತು ಶಿಕ್ಷಕರ ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ. ಸಂಭಾಷಣೆಯಲ್ಲಿ, ಎಲ್ಲಾ ಶಿಕ್ಷಕರು ಪ್ರಾಚಿಗೆ ಓದಲು ಅಥವಾ ಬರೆಯಲು ತಿಳಿದಿಲ್ಲ ಮತ್ತು ಅವಳು ಏನನ್ನೂ ಅರ್ಥ ಮಾಡಿಕೊಳ್ಳುವುದಿಲ್ಲ, ಆದ್ದರಿಂದ ಕೇಳಿದಾಗ ಅವಳು ಏನನ್ನೂ ಹೇಳಲು ಸಾಧ್ಯವಿಲ್ಲ ಎಂದು ತಿಳಿಸಿದರು. ಶಿಕ್ಷಕರ ಅನುಮತಿಯೊಂದಿಗೆ, ನಾನು ಅವರ ತರಗತಿಗಳನ್ನು ಗಮನಿಸುವುದರ ಮೂಲಕ ತರಗತಿಯ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ.

ತರಗತಿಯಲ್ಲಿ ಪಾಠ ಮಾಡುವಾಗ, ಶಿಕ್ಷಕರ ಗಮನವು ಪ್ರಶ್ನೆಗೆ ತಕ್ಷಣ ಉತ್ತರಿಸುವ ಅಥವಾ ಪುಸ್ತಕವನ್ನು ಓದಲು ಅಥವಾ ಬರೆಯಲು ತಿಳಿದಿರುವ ವಿದ್ಯಾರ್ಥಿಗಳ ಮೇಲೆ ಮಾತ್ರ ಕೇಂದ್ರೀಕೃತವಾಗಿದೆ ಎಂದು ನಾನು ಕಂಡುಕೊಂಡೆ. ಪ್ರಾಚಿ ಶಿಕ್ಷಕರ ದೃಷ್ಟಿಗೆ ಮರೆಯಾಗಿದ್ದಳು. ಪರಿಣಾಮವಾಗಿ, ಪ್ರಾಚಿ ನಿರ್ಲಕ್ಷ್ಯವನ್ನು ಅನುಭವಿಸಲು ಪ್ರಾರಂಭಿಸಿದ್ದಳು.

ಶಿಕ್ಷಕರು ಮಕ್ಕಳನ್ನು ಪ್ರಶ್ನಿಸಿದಾಗಲೆಲ್ಲಾ ಪ್ರಾಚಿ ಮತ್ತು ಆಕೆಯಂತಹ ಇತರ ಮಕ್ಕಳು ಉತ್ತರವನ್ನು ಕೊಡುವುದು ಮತ್ತು ನೀಡದೆ ಇರುವುದು ಶಿಕ್ಷಕರಿಗೆ ನಗು ಅಥವಾ ಕೋಪವನ್ನು ಉಂಟುಮಾಡುತ್ತದೆ ಎನ್ನುವುದನ್ನು ಕೂಡಾ ನಾನು ಅರಿತುಕೊಂಡೆ, ಏಕೆಂದರೆ ಅವರ ಉತ್ತರಗಳು ಶಿಕ್ಷಕರ ನಿರೀಕ್ಷೆಗೆ ಅನುಗುಣವಾಗಿಲ್ಲ. ಶಿಕ್ಷಕರು ಮತ್ತು ಮಕ್ಕಳು ಇಂತಹ ವರ್ತನೆಗೆ ಒಗ್ಗಿಕೊಂಡಿದ್ದರು. ಅದರಲ್ಲಿ ಏನಾದರೂ ತಪ್ಪಿದೆ ಎಂದು ಅವರು ಭಾವಿಸಲಿಲ್ಲ. ಶಿಕ್ಷಕರ ಇಂತಹ ನಡವಳಿಕೆಯು ಕ್ರಮೇಣ ಪ್ರಾಚಿಯನ್ನು ಮೌನ ಮತ್ತು ದುಃಖದ ಕಡೆಗೆ ತಳ್ಳಿತ್ತು.

ಪ್ರಾಚಿಯ ವಿಚಾರದಲ್ಲಿ, ನಕಾರಾತ್ಮಕವಾದದ್ದನ್ನು ಉತ್ತೇಜಿಸಲು ಶಿಕ್ಷಕರ ಕಡೆಯಿಂದ ಯಾವುದೇ ಉದ್ದೇಶಪೂರ್ವಕ ಪ್ರಯತ್ನ ನಡೆದಿರಲಿಲ್ಲ, ಆದರೆ ಪರೋಕ್ಷವಾಗಿ ಅನಿರೀಕ್ಷಿತವಾಗಿ ಏನಾದರೂ ನಡೆಯುತ್ತಿತ್ತು. ಶಿಕ್ಷಕರಾಗಿ, ನಾವು ಈ ವಿಷಯಗಳ ಬಗ್ಗೆ ಹೆಚ್ಚು ಗಮನಹರಿಸದಿದ್ದರೆ, ಅಂತಹ ಸಮಸ್ಯೆಗಳು ಯಾರಿಗಾದರೂ ಬರಬಹುದು ಮತ್ತು ಅದರ ಬಗ್ಗೆ ನಮಗೆ ತಿಳಿಯದೇ ಇರುವ ಸಾಧ್ಯತೆಯಿದೆ.

ಕಾಲಾನಂತರದಲ್ಲಿ, ನಾವು ಅಂತಹ ಪ್ರಕ್ರಿಯೆಗಳಿಗೆ ತುಂಬಾ ಒಗ್ಗಿಕೊಳ್ಳುತ್ತೇವೆ, ಅವುಗಳಲ್ಲಿ ಯಾವುದೇ ನ್ಯೂನತೆಗಳನ್ನು ನಾವು ಗಮನಿಸುವುದಿಲ್ಲ.

## ನಾನು ಕೈಗೊಂಡ ಉಪಕ್ರಮ

ಈ ಎಲ್ಲಾ ವಿಷಯಗಳನ್ನು ತಿಳಿದು, ಅರ್ಥ ಮಾಡಿಕೊಂಡ ನಂತರ ಪ್ರಾಚಿಗೆ ಪ್ರತ್ಯೇಕ ಸಮಯ ಕೊಡಲು ಮತ್ತು ನಿರಂತರವಾಗಿ ಮಾತನಾಡುವ ಪ್ರಯತ್ನವನ್ನು ಪ್ರಾರಂಭಿಸಿದೆ. ಆಕೆಯ ವಿಶ್ವಾಸವನ್ನು ಗಳಿಸಲು ನಾನು ಬಹಳ ದಿನ ಕಷ್ಟಪಡಬೇಕಾಯಿತು. ಊಟದ ಸಮಯದಲ್ಲಿ, ಎಲ್ಲಾ ಮಕ್ಕಳು ಹೊರಗೆ ಚೆಂಡಾಟ ಆಡುವಾಗ, ಪ್ರಾಚಿ ಕೋಣೆಯೊಳಗೆ ಒಬ್ಬಂಟಿಯಾಗಿ ಬಾಲ್ ಆಡುತ್ತಿದ್ದಳು. ನಾನು ಆಕೆಯೊಂದಿಗೆ ಚೆಂಡನ್ನು ಆಡಲು ಪ್ರಾರಂಭಿಸಿದೆ. ನಾನು ಅವಳ ಬಳಿ ಚೆಂಡನ್ನು ಕೇಳಿದಾಗ, ನನಗೆ ಅದನ್ನು ಕೊಟ್ಟು ಕುಳಿತುಕೊಂಡಳು. ನಾನು ಉದ್ದೇಶಪೂರ್ವಕವಾಗಿ ಚೆಂಡನ್ನು ಆಕೆಯ ಕೈಯಲ್ಲಿ ಎಸೆಯುವ ಬದಲು ಅಲ್ಲಿ ಇಲ್ಲಿ ಎಸೆದೆ ಮತ್ತು ಈ ನೆಪದಲ್ಲಾದರೂ ಆಕೆ ನನ್ನೊಂದಿಗೆ ಮಾತನಾಡಲು ಚೆಂಡನ್ನು ತರಲು ಕೇಳುತ್ತಾಳೆಂದು ಹೀಗೆ ಮಾಡಿದೆ. ಒಂದು ದಿನ ಅಥವಾ ಎರಡು ದಿನಗಳವರೆಗೆ ಅವಳು ಶಾಂತವಾಗಿ ಚೆಂಡನ್ನು ನನ್ನ ಬಳಿಗೆ ತರುತ್ತಿದ್ದಳು, ಆದರೆ ಕೆಲವು ದಿನಗಳ ನಂತರ ಅವಳು "ಸರ್, ನೀವು ಸರಿಯಾಗಿ ಚೆಂಡು ಎಸೆಯುತ್ತಿಲ್ಲ?" ಎಂದು ಹೇಳಿದಳು. ಇದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಕನಿಷ್ಠ ಆಕೆ ಇಷ್ಟಾದರೂ ಮಾತನಾಡಿದಳಲ್ಲಾ? ಅಲ್ಲಿಂದ ನಿಧಾನವಾಗಿ ನನ್ನೊಂದಿಗೆ ಮಾತನಾಡತೊಡಗಿದಳು. ಸ್ವಲ್ಪ ಸಮಯ ಕಳೆದ ನಂತರ, ಅವಳು ನನ್ನ ಜೊತೆ ಹೆಚ್ಚು ನಿರಾತಂಕವಾಗಿ ಇರಲು ಪ್ರಾರಂಭಿಸಿದಳು. ಅವಳು ನನ್ನ ಮಾತುಗಳನ್ನು ಕೇಳಲಾರಂಭಿಸಿದಳು ಮತ್ತು ನನ್ನ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದಳು.

> **ನಾನು ಪುಸ್ತಕದ ಪ್ರಶ್ನೆಗಳನ್ನು ಅದರ ವ್ಯವಹಾರಿಕ ಅನುಭವ ಮತ್ತು ಸಂದರ್ಭದೊಂದಿಗೆ ಸಂಯೋಜಿಸಿ ಅವರಿಗೆ ಸಹಜವೆನಿಸುವಂತೆ ಕೇಳುತ್ತೇನೆ ಮತ್ತು ಅವರು ಏನನ್ನಾದರೂ ಹೇಳುವಂತೆ ಮಾಡುತ್ತೇನೆ.**

ನಾನು ಪುಸ್ತಕದ ಪ್ರಶ್ನೆಗಳನ್ನು ಅದರ ವ್ಯಾವಹಾರಿಕ ಅನುಭವ ಮತ್ತು ಸಂದರ್ಭದೊಂದಿಗೆ ಸಂಯೋಜಿಸಿ ವಿದ್ಯಾರ್ಥಿಗಳಿಗೆ ಸಹಜವೆನಿಸುವಂತೆ ಕೇಳುತ್ತೇನೆ ಮತ್ತು ಅವರು ಏನನ್ನಾದರೂ ಹೇಳುವಂತೆ ಮಾಡುತ್ತೇನೆ. ಆದರೆ ಇತರ ಮಕ್ಕಳು ಇದ್ದಾಗ ಪ್ರಾಚಿಯನ್ನು ಏನನ್ನಾದರೂ ಕೇಳಿದಾಗ, ಅವಳು ಮೌನವಾಗಿರುತ್ತಿದ್ದಳು. ಬಹುಶಃ ಆಕೆಗೆ ಇನ್ನೂ ತಾನು ಸರಿಯಾದ ಉತ್ತರವನ್ನು ಹೇಳಲು ಸಾಧ್ಯವಾಗುತ್ತದೆ ಎನ್ನುವುದು ಖಚಿತವಾಗಿರಲಿಲ್ಲ. ಉತ್ತರ ತಪ್ಪಾಗಿದ್ದರೆ, ಇತರ ಮಕ್ಕಳು ತನ್ನನ್ನು ನೋಡಿ ನಗುತ್ತಾರೆ ಎಂದು ಆಕೆ ಭಾವಿಸಿದ್ದಳು.

ಆಕೆ ಮಕ್ಕಳ ನಗುವಿಗೆ ಹೆದರುವಷ್ಟು ತಪ್ಪು ಉತ್ತರಕ್ಕೆ ಹೆದರುತ್ತಿರಲಿಲ್ಲ. ಆಕೆಯೊಂದಿಗೆ ನನ್ನ ಮಾತುಕತೆ ಮುಂದುವರೆಯಿತು. ಕ್ರಮೇಣ, ಇತರ ಮಕ್ಕಳು ನಕ್ಕ ನಂತರವೂ ಅವಳು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸಿದಳು, ಮತ್ತು ಅವಳ ಈ ನಂಬಿಕೆ ಈಗ ಅವಳಿಗೆ ಧೈರ್ಯವನ್ನು ನೀಡಲಾರಂಭಿಸಿತು. ಮತ್ತೊಂದೆಡೆ, ಇತರ ಮಕ್ಕಳೊಂದಿಗೆ ನಿರಂತರ ಸಂಭಾಷಣೆಯು ಈ ದಿಕ್ಕಿನಲ್ಲಿ ಮುಂದುವರೆಯಿತು. ಇದರ ಪರಿಣಾಮವೇನೆಂದರೆ ಕಾಲಕ್ರಮೇಣ ಇತರ ಮಕ್ಕಳೂ ಪ್ರಾಚಿಯ ಮಾತುಗಳನ್ನು ಕೇಳಲು ಮತ್ತು ಸ್ವೀಕರಿಸಲು ಆರಂಭಿಸಿದರು. ಪ್ರಾಚಿಗೆ ಇನ್ನೂ ಸರಿಯಾಗಿ ಓದಲು ಮತ್ತು ಬರೆಯಲು ತಿಳಿದಿರಲಿಲ್ಲ, ಆದರೆ ಈಗ ಅವಳು ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಲು ಸಾಧ್ಯವಾಯಿತು. ಕೆಲವೊಮ್ಮೆ ತರಗತಿಯಲ್ಲಿ ಜಾಣ ಮಕ್ಕಳೆಂದು ಕರೆಸಿಕೊಳ್ಳುವವರೂ ಉತ್ತರಿಸಲಾಗದ ಪ್ರಶ್ನೆಗಳಿಗೆ ಪ್ರಾಚಿ ಉತ್ತರಿಸುತ್ತಿದ್ದಳು. ಕೆಲವೊಮ್ಮೆ ಇತರ ಮಕ್ಕಳು ಉತ್ತರಿಸಲು ಪ್ರಾಚಿಯನ್ನೇ ಮೌನವಾಗಿರುವಂತೆ ಹೇಳಬೇಕಾದ ಸಂದರ್ಭವೂ ಬರುತ್ತಿತ್ತು. ಆಕೆಯ ದುಃಖದ ಬಾಡಿದ ಮುಖವು ಈಗ ಅರಳಲು ಪ್ರಾರಂಭಿಸಿತು, ಮತ್ತು ಆಕೆಯ ಬಾಗಿದ ಕುತ್ತಿಗೆ ಏರಲು ಪ್ರಾರಂಭಿಸಿತು.



ಚಿತ್ರ 2 : ಜೊತೆಗೂಡಿ ಕಲಿಯುತ್ತಿರುವ ವಿದ್ಯಾರ್ಥಿಗಳು.



ಚಿತ್ರ 3 : ಆಟವಾಡುತ್ತಲೇ ಕಲಿಯಲು ಉತ್ತೇಜಿಸುತ್ತಿರುವ ಶಿಕ್ಷಕರು.

## ಸವಾಲು

ಈ ಇಡೀ ಪ್ರಯತ್ನಕ್ಕೆ ಒಂದು ದುಷ್ಪರಿಣಾಮವೂ ಇತ್ತು. ನಾನು ಪ್ರಾಚಿ ಮತ್ತು ಅವಳಂತಹ ಇತರ ಹುಡುಗಿಯರಿಗೆ ವಿಶೇಷ ಬೆಂಬಲವನ್ನು ನೀಡಲು ಪ್ರಾರಂಭಿಸಿದಾಗ, ತರಗತಿಯಲ್ಲಿನ ಇತರ ಮಕ್ಕಳ ನಡವಳಿಕೆಯು ನನ್ನ ಮತ್ತು ಈ ಮಕ್ಕಳ ಬಗ್ಗೆ ನಕಾರಾತ್ಮಕವಾಗತೊಡಗಿತು. ನಾನು ಯಾವಾಗಲೂ ಪ್ರಾಚಿಗೆ ಮೊದಲ ಸ್ಥಾನ ನೀಡುತ್ತೇನೆ ಎಂಬುದು ಅವರ ದೂರಾಗಿತ್ತು. ಕೆಲವು ಮಕ್ಕಳು ನನ್ನೊಂದಿಗೆ ಮಾತನಾಡುವುದನ್ನು ಮತ್ತು ನನ್ನ ಪ್ರಶ್ನೆಗಳಿಗೆ ಉತ್ತರಿಸುವುದನ್ನು ನಿಲ್ಲಿಸಿದ್ದರು. ಇದು ನನಗೆ ಮತ್ತೊಂದು ದೊಡ್ಡ ಸಮಸ್ಯೆಯಾಗಿತ್ತು. ಈ ಪರಿಸ್ಥಿತಿ ಬಹಳ ದಿನ ಉಳಿಯದಿದ್ದರೂ, ಅದು ಇರುವಾಗ ನನಗೆ ದೊಡ್ಡ ಸಮಸ್ಯೆಯಾಗಿತ್ತು. ಬಹುಶಃ ಇದಕ್ಕೆ ಒಂದು ಕಾರಣವೆಂದರೆ, ಇತರ ಶಿಕ್ಷಕರಂತೆ, ನನ್ನ ಗಮನವು ಕೆಲವು ನಿರ್ದಿಷ್ಟ ಮಕ್ಕಳ ಮೇಲಷ್ಟೇ ಇರದೆ, ಮಕ್ಕಳ ಅಗತ್ಯಗಳಿಗೆ ಅನುಗುಣವಾಗಿದ್ದುದರಿಂದ, ಬಹುಶಃ ಆ ಮಕ್ಕಳು ತಮ್ಮ ಆದ್ಯತೆಯು ಕಳೆದುಹೋಗುತ್ತಿದೆ ಎಂದು ಭಾವಿಸಿರಬಹುದು. ಆದಾಗ್ಯೂ, ನಾನು ಮಕ್ಕಳ ಸಮಸ್ಯೆಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ನನ್ನ ಗಮನವನ್ನು ಹರಡಲು ಪ್ರಯತ್ನಿಸಿದೆ. ಅಂದರೆ, ನನ್ನ ದೃಷ್ಟಿಯಲ್ಲಿ ಎಲ್ಲಾ ಮಕ್ಕಳು ಸಮಾನ ಪ್ರಾಮುಖ್ಯತೆಯನ್ನು ಹೊಂದಿದ್ದರು ಮತ್ತು ಎಲ್ಲರಲ್ಲಿ ಕಲಿಯುವ ಮತ್ತು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು ನನ್ನ ಮೊದಲ ಗುರಿಯಾಗಿದೆ. ನಿಜ, ಇದೊಂದು ಸುದೀರ್ಘ ಪ್ರಯತ್ನ ಮತ್ತು ನಾನು ಶಾಲೆಯಲ್ಲಿದ್ದಷ್ಟು ಕಾಲ ಅದು ಮುಂದುವರಿಯಿತು.

---




**ರಾಜು ಪಟೇಲ್** ಅವರು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಿಂದ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರು ಜುಲೈ, 2018ರಿಂದ ಪ್ರತಾಪ್‌ಗಢದ (ರಾಜಸ್ಥಾನ) ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಬ್ಲಾಕ್ ಸಂಯೋಜಕರಾಗಿ ಮತ್ತು ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದಾರೆ.

**ಸಂಪರ್ಕ:** rajoo.patel@azimpremjifoundation.org


ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ತರಗತಿಯಲ್ಲಿ ಪಾತ್ರಾಭಿನಯದ ಮೂಲಕ ಕಲಿಕೆ

**ಆಶಾ ಸಿಂಗ್**

**ವಿದ್ಯಾರ್ಥಿಗಳು ಸಂಕೀರ್ಣ ಪರಿಕಲ್ಪನೆಗಳನ್ನು ಗ್ರಹಿಸಲು ಸಹಾಯ ಮಾಡಲು ಶಿಕ್ಷಕರಿಗೆ ನವೀನ ವಿಧಾನಗಳು ಬೇಕಾಗುತ್ತವೆ. ಹಲವು ಬಾರಿ, ಅವರು ಮಕ್ಕಳ ಮನಸ್ಸಿನಲ್ಲಿರುವ ಗೊಂದಲವನ್ನು ಪರಿಹರಿಸಲು ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ಬೋಧನಾ ತಂತ್ರವಾಗಿ ಬಳಸಿದಾಗ ಪಾತ್ರಾಭಿನಯವು ವಿದ್ಯಾರ್ಥಿಗಳಿಗೆ ಸಂಕೀರ್ಣ ಪರಿಕಲ್ಪನೆಗಳನ್ನು ಹೇಗೆ ಸರಳಗೊಳಿಸಲು ಸಹಾಯ ಮಾಡುತ್ತದೆ ಎಂಬುದನ್ನು ನಾನು ಇಲ್ಲಿ ಹಂಚಿಕೊಳ್ಳುತ್ತೇನೆ.**

ಒಂದು ತರಗತಿಯ ಮಕ್ಕಳು ಭೂಮಿಯ ಚಲನೆಯಿಂದಾಗಿ ಹಗಲು ಮತ್ತು ರಾತ್ರಿಗಳು ಹೇಗೆ ಉಂಟಾಗುತ್ತದೆ ಎಂಬ ವಿಚಾರದ ಕುರಿತಂತೆ ತಲೆಕೆಡಿಸಿಕೊಳ್ಳುತ್ತಿದ್ದರು. ತನ್ನ ಅಕ್ಷದ ಸುತ್ತಲೂ ಸುತ್ತುವ ಮತ್ತು ಸೂರ್ಯನ ಸುತ್ತ ಸುತ್ತುಬರುವ ಎರಡು ಬಗೆಯ ಚಲನೆಯಿಂದಾಗಿ ಮಕ್ಕಳಿಗೆ ಇದನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಯಿತು. ಆದುದರಿಂದ ಶಿಕ್ಷಕರು, ನಡೀರಿ ಒಂದು 'ಆಟ ಆಡೋಣ' ಎಂದು ಹೇಳಿ, ಮೂರು ಮಕ್ಕಳಿಗೆ ಸೂರ್ಯ, ಚಂದ್ರ ಮತ್ತು ಭೂಮಿಯ ಪಾತ್ರಗಳನ್ನು ಕೊಟ್ಟರು. ಸೂರ್ಯನು ಚಲಿಸುವುದಿಲ್ಲವಾದ್ದರಿಂದ, ಸೂರ್ಯನ ಪಾತ್ರಧಾರಿಯು ಒಂದೇ ಕಡೆ ನಿಂತಿದ್ದನು. ಭೂಮಿಯ ಪಾತ್ರ ವಹಿಸಿದ್ದ ಮಗು ತಾನು ನಿಂತಿದ್ದ ಸ್ಥಳದಲ್ಲಿ ಸುತ್ತುವುದರ ಜೊತೆಗೆ ಒಂದು ವೃತ್ತದಲ್ಲಿ ಸೂರ್ಯನಾಗಿರುವ ಮಗುವಿನ ಸುತ್ತ ಚಲಿಸಿತು. ತಕ್ಷಣ ಒಂದು ಮಗುವು, ಬಹಳ ಉತ್ಸಾಹದಿಂದ ಭೂಮಿಯ ಪಾತ್ರ ವಹಿಸಿರುವ ಆ ಮಗು 'ಒಂದು ಜಾಗದಲ್ಲಿ ಸುತ್ತುವಾಗ ಹಗಲು ರಾತ್ರಿಗಳಾಗುತ್ತವೆ; ಸೂರ್ಯನ ಸುತ್ತ ಒಂದು ಪೂರ್ಣ ಸುತ್ತು ಬಂದಾಗ ಒಂದು ವರ್ಷ ಪೂರ್ತಿಯಾಗುತ್ತದೆ' ಎಂದು ಹೇಳಿತು. ಈ ವಿದ್ಯಮಾನವನ್ನು ಬಹಳ ಸುಲಭವಾಗಿ ಅರ್ಥ ಮಾಡಿಕೊಂಡ ಮಕ್ಕಳೆಲ್ಲ ಖುಷಿಯಿಂದ ಚಪ್ಪಾಳೆ ತಟ್ಟತೊಡಗಿದರು. ಶಿಕ್ಷಕರು, ಪರಿಕಲ್ಪನೆಯನ್ನು ಅರ್ಥೈಸುವಲ್ಲಿ ಯಶಸ್ವಿಯಾದ ಖುಷಿಯನ್ನು ವಿದ್ಯಾರ್ಥಿಗಳ ಮುಖದಲ್ಲಿ ಕಂಡರು.

ಇಂತಹ ಆಟದ ಅನುಭವಗಳು ಮಕ್ಕಳಿಗೆ ಭಾವನಾತ್ಮಕ ಭದ್ರತೆಯನ್ನು ತರುತ್ತವೆ. ಇದರಿಂದಾಗಿ ಅವರು ತಮ್ಮ ಕಷ್ಟಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಹಿಂಜರಿಯುವುದಿಲ್ಲ. ಮಕ್ಕಳು ಒಟ್ಟುಗೂಡಿ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಪ್ರೋತ್ಸಾಹಿಸುವ ಗುಂಪಿನಲ್ಲಿ ಸೇರುವ ಮೂಲಕ ಕಲಿಕೆಯಲ್ಲಿ ತೃಪ್ತಿ ಮತ್ತು ಸಂತೋಷವನ್ನು ಕಂಡುಕೊಳ್ಳುತ್ತಾರೆ. ಭಾವನಾತ್ಮಕ ನೆಮ್ಮದಿಯು (Emotional gratification) ಕಷ್ಟಕರವಾದ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅವುಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ಪ್ರೇರೇಪಿಸುತ್ತದೆ.

## ಸೃಜನಾತ್ಮಕ ನಾಟಕ ಪಾಠಗಳ ಪ್ರಯೋಜನಗಳು

ಬೋಧನೆಯಲ್ಲಿ ಕಲೆಗಳನ್ನು ಬಳಸಿಕೊಳ್ಳುವುದರಿಂದ ಕಲಿಕೆಯ ಮೇಲೆ ಧನಾತ್ಮಕ ಪರಿಣಾಮ ಉಂಟಾಗುತ್ತದೆ ಎಂದು ಕಲವು ಚಿಕ್ಕ ಅಧ್ಯಯನಗಳು ತೋರಿಸಿವೆ. ಇದರಿಂದ ಮಕ್ಕಳಲ್ಲಿ ಕಲಿಯುವ ಕುತೂಹಲ ಹೆಚ್ಚುತ್ತದೆ ಮತ್ತು ಅವರು ಖುಶಿಯಿಂದ ಕಲಿಯುತ್ತಾರೆ. ಸಂಗೀತ ಮತ್ತು ಚಲನೆಯು ವಿಕಲಚೇತನ ಮಕ್ಕಳ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ ಎಂದು ಅಧ್ಯಯನಗಳು ತೋರಿಸಿವೆ. ಸಂಗೀತ ಮತ್ತು ಚಲನೆಯನ್ನು ಒಳಗೊಂಡ ತಂತ್ರಗಳು ವಿಕಲಚೇತನ ಮಕ್ಕಳಿಗೆ ತಮ್ಮ ದೇಹದ ಭಾಗಗಳ ಅರಿವನ್ನು ಹೆಚ್ಚಿಸಿಕೊಳ್ಳಲು, ದಿಕ್ಕುಗಳನ್ನು ಅರ್ಥಮಾಡಿಕೊಳ್ಳಲು ಮತ್ತು ದೈನಂದಿನ ವ್ಯವಹಾರಗಳಲ್ಲಿ ದೈಹಿಕ ಅಂತರದ ಕುರಿತಾದ ಸಾಮಾಜಿಕ ನಿಯಮಗಳನ್ನು ಅರ್ಥಮಾಡಿಕೊಳ್ಳಲು ನೆರವಾದವು. ಕೆಲವು ಅಧ್ಯಯನಗಳು ಮಕ್ಕಳು ಕೌಟುಂಬಿಕ ಜೀವನ ಮತ್ತು ಸಂಬಂಧಗಳನ್ನು ಹೇಗೆ ಅರ್ಥೈಸುತ್ತಾರೆ ಎಂದು ತಿಳಿಯಲು ನಾಟಕಗಳನ್ನು ಬಳಸಿದವು. ಪಠ್ಯಪುಸ್ತಕವನ್ನು ಆಧರಿಸಿ ಪಾಠಗಳಿಗೆ ಉತ್ತರಿಸುವ ಬಗ್ಗೆ ಚಿಂತಿಸದೆ ಸರಳವಾದ ಕೆಲಸವನ್ನು ಪೂರ್ಣಗೊಳಿಸುವ ಮೂಲಕ ಮಕ್ಕಳು ಕಲಿತಾಗ, ಅವರು ಹೆಚ್ಚು ಆತ್ಮವಿಶ್ವಾಸವನ್ನು ಹೊಂದುತ್ತಾರೆ. ಇದು ತರಗತಿಯ ಚಟುವಟಿಕೆಗಳಲ್ಲಿ ಕಲಿಯಲು ಮತ್ತು ಭಾಗವಹಿಸಲು ಅವರ ಬಯಕೆ ಮತ್ತು ಉತ್ಸಾಹವನ್ನು ಹೆಚ್ಚಿಸುತ್ತದೆ.



ಚಿತ್ರ 1 : ನಾಟಕದಲ್ಲಿ ತಮ್ಮ ಪಾತ್ರವನ್ನು ಚರ್ಚಿಸುತ್ತಿರುವ ಮಕ್ಕಳು.

ದೃಷ್ಟಿ ದೋಷವುಳ್ಳ ಮಕ್ಕಳಿಗೆ ಬಾಹ್ಯಾಕಾಶದ ಪರಿಕಲ್ಪನೆಯನ್ನು ವಿವರಿಸಲು ನಾಟಕವನ್ನು ಬಳಸಲಾಗುತ್ತದೆ. ಸಾಮಾಜಿಕ ಕೌಶಲಗಳ ಕೊರತೆಯಿರುವ ಮಕ್ಕಳಿಗೆ, ಈ ನಾಟಕಗಳು ವಿಭಿನ್ನ ಸಂದರ್ಭಗಳಲ್ಲಿ ಸಾಮಾಜಿಕ ನಡವಳಿಕೆಯನ್ನು ಪರಿಗಣಿಸಲು ಸಹಾಯ ಮಾಡುತ್ತದೆ. ಇದಕ್ಕಾಗಿ, ಮಕ್ಕಳಿಗೆ ನಾಟಕದ ದೃಶ್ಯವನ್ನು ತೋರಿಸಿ, ಅವುಗಳನ್ನು ಚರ್ಚಿಸಲು ಪ್ರಶ್ನೆಗಳನ್ನು ಕೇಳಲಾಗುತ್ತದೆ. ಉದಾಹರಣೆಗೆ, ನಾಲ್ಕನೇ ತರಗತಿಯಲ್ಲಿ, ಬ್ರೆಡ್ ಪ್ಯಾಕೆಟ್ ಖರೀದಿಸುವಾಗ ಮಗುವು ಇತರ ಕೆಲಸದಲ್ಲಿ ನಿರತನಾದ ಅಂಗಡಿಯಾತನ ಕೈಯನ್ನು ಎಳೆಯುವ ದೃಶ್ಯವನ್ನು ಮಕ್ಕಳಿಗೆ ತೋರಿಸಲಾಯಿತು. ಈ ತಮಾಷೆಯ ದೃಶ್ಯವನ್ನು ನೋಡಿ ಮಕ್ಕಳೆಲ್ಲರೂ

ನಕ್ಕರು. ಏಕೆಂದರೆ ಈ ರೀತಿ ಅಂಗಡಿಯವನ ಗಮನವನ್ನು ಸೆಳೆಯುವ ಮತ್ತು ಸರಕುಗಳನ್ನು ಖರೀದಿಸುವ ಮಗುವನ್ನು ಅವರು ನೋಡಿರಲಿಲ್ಲ. ಈ ಕುರಿತ ಚರ್ಚೆಯಲ್ಲಿ ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಹೇಳಲು ಆರಂಭಿಸಿದರು ಮತ್ತು ಎಲ್ಲರೂ ಸೇರಿ 'ನಮಗೆ ಸರಿಯಾಗಿ ಪರಿಚಯವಿಲ್ಲದವರ ಜೊತೆ ನಾವು ನಿಕಟವಾಗಿ ವರ್ತಿಸುವುದಿಲ್ಲ' ಎಂದು ತೀರ್ಮಾನಿಸಿದರು.

ಗುಂಪಿನ ಎಲ್ಲರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ಪರಿಣಾಮಕಾರಿ ಕಲಿಕೆಯಾಗುವುದಲ್ಲದೆ, ಎಲ್ಲ ಮಕ್ಕಳ ಆತ್ಮವಿಶ್ವಾಸವೂ ಹೆಚ್ಚುತ್ತದೆ. ಈ ಪ್ರಕ್ರಿಯೆಯಲ್ಲಿ ಮಕ್ಕಳು ತ್ವರಿತ ಚಿಂತನೆ, ಸಮಸ್ಯೆ ಪರಿಹಾರ ಮತ್ತು ಏಕಾಗ್ರತೆಯಂತಹ ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ. ಇದರೊಂದಿಗೆ, ಈ ಪ್ರಕ್ರಿಯೆಯು ಮಕ್ಕಳಲ್ಲಿ ಚಿಂತನೆ ಮತ್ತು ವಿಶ್ಲೇಷಣೆಯ ಕೌಶಲಗಳನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳೊಂದಿಗೆ ನಾಟಕಗಳನ್ನು ರಚಿಸುವುದು ಪರಿಕಲ್ಪನೆ-ನಿರ್ಮಾಣ, ಸಹಕಾರ ಮತ್ತು ಬದ್ಧತೆಯ ಗುಣಗಳನ್ನು ಹೆಚ್ಚಿಸುತ್ತದೆ. ಈ ಎಲ್ಲಾ ಕೌಶಲಗಳು ಜೀವನಕ್ಕೆ ಮುಖ್ಯವಾಗಿವೆ.

## ಸುಧಾರಣಾ ತಂತ್ರಗಳು ಮಕ್ಕಳ ಮನಸ್ಸನ್ನು ಉಲ್ಲಾಸಗೊಳಿಸುತ್ತವೆ

ತರಗತಿಯಲ್ಲಿ ರಚಿಸಲಾದ ಕಥೆಯನ್ನು ಪಠ್ಯಪುಸ್ತಕದಲ್ಲಿನ ಯಾವುದೇ ಪಾಠಕ್ಕೆ ಅಥವಾ ಮಕ್ಕಳ ಆಸಕ್ತಿಯ ಯಾವುದೇ ವಿಷಯಕ್ಕೆ ಜೋಡಿಸಬಹುದು. ವಿದ್ಯಾರ್ಥಿಗಳು ಬರೆಯುತ್ತಿದ್ದಂತೆ, ಅವರು ನಾಟಕದಲ್ಲಿ ಪಾತ್ರಗಳನ್ನು ರಚಿಸುತ್ತಾರೆ. ಈ ಸಮಯದಲ್ಲಿ ಅವರು ನಾಟಕದ ಸನ್ನಿವೇಶ, ಕಥಾವಸ್ತು ಮತ್ತು ಪರಿಹಾರದ ಬಗ್ಗೆ ಯೋಚಿಸುತ್ತಾರೆ. ಸಂಭಾಷಣೆಯ ಮೂಲಕ ಕಥೆಗಳನ್ನು ಬರೆಯುವ ಪ್ರಕ್ರಿಯೆಯು ವಿದ್ಯಾರ್ಥಿಗಳಿಗೆ ಸುಲಭ, ಹೆಚ್ಚಿನ ಮೋಜು ಮತ್ತು ಹೆಚ್ಚು ಆಸಕ್ತಿಕರವಾಗಿರುತ್ತದೆ. ಕಾಗದದ ಮೇಲೆ ಕಥೆಯನ್ನು ಬರೆಯುವಂತೆ ವಿದ್ಯಾರ್ಥಿಗಳನ್ನು ಕೇಳುವ ಬದಲು, ಕಥೆಯನ್ನು ರಚಿಸುವ ಪ್ರಕ್ರಿಯೆಯೇ ಹೆಚ್ಚು ಸುಲಭವಾಗಿರುತ್ತದೆ ಮತ್ತು ಖುಷಿಯಿಂದ ಕೂಡಿರುತ್ತದೆ. ಅದು ಕಥೆಯ ಎಲ್ಲಾ ಅಂಶಗಳನ್ನು ಒಳಗೊಂಡಿದೆ ಎಂದು ಖಚಿತಪಡಿಸಿಕೊಳ್ಳಬೇಕು. ಭಾಷೆ ಮತ್ತು ಬರವಣಿಗೆಯಲ್ಲಿ ತೊಂದರೆ ಇರುವ ವಿದ್ಯಾರ್ಥಿಗಳಿಗೆ ಕಾಗದ ಮತ್ತು ಪೆನ್ಸಿಲ್‌ನೊಂದಿಗೆ ಕೆಲಸ ಮಾಡುವುದು ಸ್ವಲ್ಪ ಕಷ್ಟ. ಆದರೂ, ಕಥೆಯನ್ನು ರಚಿಸಿದ ನಂತರ, ಮಕ್ಕಳು ಅಭಿನಯಿಸುವ ಮೊದಲು ಅದನ್ನು ಸ್ವತಃ ಬರೆಯಲು ಬಯಸಬಹುದು. ಸಾಮಾನ್ಯವಾಗಿ, ಮಕ್ಕಳು ಸಹಜವಾಗಿ ತಮ್ಮ ಆಲೋಚನೆಗಳನ್ನು ಕಾಗದದ ಮೇಲೆ ಬರೆಯಲು ಬಯಸುತ್ತಾರೆ. ಇದನ್ನು ಪ್ರೋತ್ಸಾಹಿಸಬೇಕು, ಇದು ಅವರ ಓದುವ ಮತ್ತು ಬರೆಯುವ ಕೌಶಲಗಳನ್ನು ಬೆಳೆಸಲು ಸಹಾಯ ಮಾಡುತ್ತದೆ.

ಸುಧಾರಣೆಯು (improvisation) ಒಂದು ಪ್ರಮುಖ ಪ್ರಕ್ರಿಯೆಯಾಗಿದ್ದು, ಅದಕ್ಕೆ ವಿಮರ್ಶಾತ್ಮಕ ಚಿಂತನೆಯ ಅಗತ್ಯವಿರುವುದರಿಂದ ಅದು ಮಕ್ಕಳ ಮನಸ್ಸನ್ನು ಸಕ್ರಿಯಗೊಳಿಸುತ್ತದೆ. ಮತ್ತು ಅದು ಮಕ್ಕಳ ಮನಸ್ಸಿಗೆ ಸವಾಲೆಸೆಯುತ್ತದೆ. ಪಠ್ಯವನ್ನು ಅರ್ಥಮಾಡಿಕೊಳ್ಳಲು, ವಿಷಯಗಳನ್ನು ಗುರುತಿಸಲು ಮತ್ತು ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವಂತೆ ನೆರವಾಗಲು ಇಂತಹ ತಂತ್ರಗಳು ಉಪಯುಕ್ತವಾಗಿವೆ.

ಮಕ್ಕಳೆದುರು ಪರಿಸ್ಥಿತಿಯನ್ನು ಪ್ರಸ್ತುತಪಡಿಸಿದಾಗ, ಅವರು ಅದರ ಅರ್ಥವನ್ನು ತಿಳಿದುಕೊಳ್ಳುತ್ತಾರೆ. ಅದನ್ನು ತಮ್ಮ ಅನುಭವಗಳಿಗೆ ಸಂಬಂಧಿಸಿ ಮತ್ತು ಅವರ ಇಂದಿನ ವಾಸ್ತವಕ್ಕೆ ಸರಿಹೊಂದಿಸುತ್ತಾರೆ. ತಂಡದ ಭಾಗವಾಗಿ, ಅವರು ಒಟ್ಟಿಗೆ ಕೆಲಸ ಮಾಡಲು ಸಹಕರಿಸುತ್ತಾರೆ. ಈ ಸಾಮೂಹಿಕ ಪ್ರಯತ್ನದಲ್ಲಿ, ಅವರ ಪ್ರಸ್ತುತಿಯ ಗುಣಮಟ್ಟವು ಸಹಯೋಗದ ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ. ಎಲ್ಲ ರೀತಿಯ ಮಕ್ಕಳೂ ಪಾಲ್ಗೊಳ್ಳುವಂತೆ ಮಾಡಲು ನಾವು ಹಲವಾರು ರೀತಿಯ ಸಂದರ್ಭಗಳು ಮತ್ತು ವಿಷಯಗಳನ್ನು ಅನ್ವೇಷಿಸಬೇಕಾಗುತ್ತದೆ. ಇವು ವಿವಿಧ ಹಿನ್ನೆಲೆಗಳಿಂದ ಬಂದಿರುವ ಮಕ್ಕಳಿಗೆ ಆಸಕ್ತಿಕರವಾಗಿದ್ದು, ಅವರದೇ ಆದ ವಾಸ್ತವಗಳಿಗೆ ಹತ್ತಿರವಿರಬೇಕು.

## ಸುಧಾರಣೆ ಅಭ್ಯಾಸಕ್ಕೆ ಪರಿಗಣಿಸಬಹುದಾದ ಕೆಲವು ವಿಷಯಗಳು

| ವಿಷಯ-ವಸ್ತು | ಉದಾಹರಣೆಗಳು |
|---|---|
| ಶೈಕ್ಷಣಿಕ | ತರಗತಿಯ ಪರಸ್ಪರ ಕ್ರಿಯೆ, ಭಾಷೆಗಳ ವೈವಿಧ್ಯ, ಪೋಷಕ-ಶಿಕ್ಷಕರ ಸಂಬಂಧ |
| ಪರಿಸ್ಥಿತಿ-ಆಧಾರಿತ | ರೈಲು ನಿಲ್ದಾಣ, ಮಾರುಕಟ್ಟೆ, ಜಾತ್ರೆ ಇತ್ಯಾದಿ ದೃಶ್ಯಗಳನ್ನು ವಿವರಿಸುವುದು. |
| ಸಂಬಂಧ-ಆಧಾರಿತ | ಶಿಶುವಿನೊಂದಿಗೆ ದಂಪತಿಗಳು, ಶಾಲಾ ವಯಸ್ಸಿನ ಮಕ್ಕಳೊಂದಿಗೆ ಕುಟುಂಬ, ಹದಿಹರೆಯದವರೊಂದಿಗಿನ ಕುಟುಂಬ. |
| ಪಾತ್ರ-ಆಧಾರಿತ | ವಿಶೇಷ ಶಿಕ್ಷಕ, ಜಾದೂಗಾರ, ದೆವ್ವ, ಭಿಕ್ಷುಕ, ಇತ್ಯಾದಿ. |
| ಕತೆ | 6-7 ಗುಂಪುಗಳಲ್ಲಿ, ಮಕ್ಕಳು ಕಥೆಗಳನ್ನು ಹಂಚಿಕೊಳ್ಳುತ್ತಾರೆ. ಈ ಕಥೆಗಳಲ್ಲಿ ಒಂದನ್ನು ನಟನೆಗಾಗಿ ಆಯ್ಕೆ ಮಾಡಿ. ಅವರು ಕಥೆಯಲ್ಲಿ ಪಾತ್ರಗಳನ್ನು ಅಭಿನಯಿಸುತ್ತಾರೆ. ಇದು ಅವರಿಗೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ಪೌರಾಣಿಕ ಪಾತ್ರಗಳೊಂದಿಗೆ ಸಂಬಂಧ ಕಲ್ಪಿಸಲು ಅವಕಾಶವನ್ನು ನೀಡುತ್ತದೆ. |
| ವೈಯಕ್ತಿಕ ಅನುಭವ | ಮಕ್ಕಳು ಗುಂಪಿನಲ್ಲಿ ಅವರು ಅತ್ಯಂತ ಮುಖ್ಯವೆಂದು ಭಾವಿಸುವ ನೆನಪುಗಳನ್ನು ಚರ್ಚಿಸುತ್ತಾರೆ. ಸುಧಾರಣೆಗಾಗಿ ಈ ನೆನಪುಗಳಲ್ಲಿ ಒಂದನ್ನು ಆಯ್ಕೆ ಮಾಡಿ. ಅಂತಹ ವೈಯಕ್ತಿಕ ಕಥೆಗಳನ್ನು ಹಂಚಿಕೊಳ್ಳುವುದು ಗುಂಪು ಪರಸ್ಪರರ ಸಾಮಾಜಿಕ-ಭಾವನಾತ್ಮಕ ಸನ್ನಿವೇಶಗಳೊಂದಿಗೆ ಪರಿಚಿತರಾಗಲು ಅವಕಾಶವನ್ನು ಒದಗಿಸುತ್ತದೆ. |
| ರಂಗದ ಸಾಮಗ್ರಿಗಳ ಉಪಯೋಗ | ಮಕ್ಕಳಿಗೆ ಕೋಲು, ಬಾಟಲಿ, ಚೀಲ ಮತ್ತು ಪುಸ್ತಕದಂತಹ ಕೆಲವು ರಂಗಪರಿಕರಗಳನ್ನು ನೀಡಬಹುದು. ಈ ವಸ್ತುವಿನೊಂದಿಗೆ ಅವರು ಕಥೆಯನ್ನು ಅಭಿನಯಿಸಲು ಕೇಳಲಾಗುತ್ತದೆ. ಇದು ಮಕ್ಕಳು ತಮ್ಮ ಕಲ್ಪನೆಯನ್ನು ತಮ್ಮ ಸಾಮಾಜಿಕ ಮತ್ತು ಭೌತಿಕ ಪ್ರಪಂಚದೊಂದಿಗೆ ಸಂಪರ್ಕಿಸಲು ಅನುವು ಮಾಡಿಕೊಡುತ್ತದೆ. |

## ಕೇಸ್ ಸ್ಟಡಿ

ದೈನಂದಿನ ತರಗತಿಗಳಲ್ಲಿ ಕಲಾ ಚಟುವಟಿಕೆಗಳನ್ನು ಬಳಸುವುದರಿಂದ ತರಗತಿ ಪ್ರಕ್ರಿಯಗಳಿಗೆ ತೊಂದರೆಯಾಗುವುದಿಲ್ಲ ಎಂದು ತೋರಿಸಲು ನಾನು ಒಂದು ಕೇಸ್ ಸ್ಟಡಿಯನ್ನು ಬಳಸುತ್ತೇನೆ. ದೆಹಲಿ ಮೂಲದ 'ಮಗುವಿನ ಬೆಳವಣಿಗೆ' (Child Development) ವಿಷಯದ ಸ್ನಾತಕೋತ್ತರ ವಿದ್ಯಾರ್ಥಿಯೊಬ್ಬರು ಮೂರನೇ ತರಗತಿಯ ಹಿಂದಿ ಪಠ್ಯಕ್ರಮವನ್ನು ನಟನೆಯ ಮೂಲಕ ಬೋಧಿಸಲು ಪ್ರಯತ್ನಿಸಿದರು. ಪರಿಣಾಮವಾಗಿ, ಮಕ್ಕಳು ಪಾಠವನ್ನು ನೆನಪಿನಲ್ಲಿಟ್ಟುಕೊಳ್ಳುವ ರೀತಿಯಲ್ಲಿ ಗುಣಾತ್ಮಕ ವ್ಯತ್ಯಾಸ ಕಂಡುಬಂದಿದೆ. ಅವರ ಉತ್ತರಗಳು ಮತ್ತು ಕಾರ್ಯಕ್ಷಮತೆಯಿಂದ ಇದು ಸ್ಪಷ್ಟವಾಗಿದೆ. ಇಷ್ಟೇ ಅಲ್ಲದೆ, ನಾಟಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮಕ್ಕಳು ಸಾಂಪ್ರದಾಯಿಕ ಚಾಕ್ ಆ್ಯಂಡ್ ಟಾಕ್ ಬೋಧನಾ ವಿಧಾನಕ್ಕೆ ಹೋಲಿಸಿದರೆ ಸ್ವಲ್ಪ ಹೆಚ್ಚಿನ ಅಂಕಗಳನ್ನು ಪಡೆದರು.

## ವಿಧಾನಗಳು ಮತ್ತು ಅಭ್ಯಾಸಗಳು

### ಮೊದಲ ದಿನ

ಯಾವುದೇ ಮನೋರಂಜಕ ಮತ್ತು ಆಸಕ್ತಿದಾಯಕ ಸಂಗತಿಗಳೊಂದಿಗೆ ಪ್ರಾರಂಭಿಸುವುದು ಉತ್ತಮ. ಹೊಸ ಅವಧಿಯ ಆರಂಭದಲ್ಲಿ, ಶಿಕ್ಷಕರು ಮಕ್ಕಳೊಂದಿಗೆ ಪರಿಚಯ ಮಾಡಿಕೊಳ್ಳಲು ಹೆಸರಿನ ಆಟದೊಂದಿಗೆ ಪ್ರಾರಂಭಿಸಿದರು. ಇದು ಪರಸ್ಪರ ಸಮನ್ವಯವನ್ನು ಸಾಧಿಸಲು ಸಹಾಯ ಮಾಡುತ್ತದೆ ಮತ್ತು ಮಕ್ಕಳು ತಮ್ಮ ಹಿಂಜರಿಕೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ.

ಈ ಆಟದಲ್ಲಿ ಮಕ್ಕಳು ವೃತ್ತಾಕಾರವಾಗಿ ನಿಂತು ಒಂದೇ ಭಾವದಲ್ಲಿ ತಮ್ಮ ಹೆಸರನ್ನು ಕರೆದರು. ಉದಾಹರಣೆಗೆ, ಪಾವನಾ ತನ್ನ ಕೈಗಳನ್ನು ಮೇಲಕ್ಕೆತ್ತಿ ಜಿಗಿದು, ದೊಡ್ಡ ಧ್ವನಿಯಲ್ಲಿ ಹೇಳಿದಳು, "ಪಾವನಾ!". ಶಿಕ್ಷಕರು ಹಿಂದೆ ಸರಿದು, "ಅಯ್ಯೋ ದೇವರೇ, ಪಾವನಾ!" ಎಂದು ಹೇಳಿದರು.

ಎಲ್ಲಾ ಮಕ್ಕಳು ಇದನ್ನು ಸಹಜವಾಗಿ ಮಾಡುವುದಿಲ್ಲ. ಗಮನವಿಟ್ಟು ನೋಡುವುದು, ತ್ವರಿತವಾಗಿ ಯೋಚಿಸುವುದು ಮತ್ತು ತಕ್ಷಣದ ಪ್ರತಿಕ್ರಿಯೆಯನ್ನು ನೀಡುವುದು ತರಗತಿಗೆ ಉತ್ಸಾಹವನ್ನು ತುಂಬುತ್ತದೆ. ನಂತರ ಶಿಕ್ಷಕರು, ತಮ್ಮ ಸಂಬಂಧಿಕರ ಮನೆಗಳಿಗೆ ಹೇಗೆ ಹೋಗುತ್ತಾರೆ ಎಂಬುದರ ಕುರಿತು ಯೋಚಿಸಲು ಮತ್ತು ನಂತರ ಅದನ್ನು ಪ್ರದರ್ಶಿಸಲು ವಿದ್ಯಾರ್ಥಿಗಳಿಗೆ ಹೇಳಿದರು. ಆಗ ತರಗತಿಯಲ್ಲಿ ಗದ್ದಲ ಉಂಟಾಯಿತು. ಕೆಲವರು ದ್ವಿಚಕ್ರ ವಾಹನಗಳನ್ನು ಓಡಿಸಿದರೆ, ಇನ್ನು ಕೆಲವರು ಕಾರು ಓಡಿಸುವಂತೆ ಅಥವಾ ಆಟೋ ರಿಕ್ಷಾದಲ್ಲಿ ಕುಳಿತುಕೊಂಡಂತೆ ನಟಿಸಿದರು. ಉತ್ಸಾಹಗೊಂಡ ವಿದ್ಯಾರ್ಥಿಗಳು ಪರಸ್ಪರ ಡಿಕ್ಕಿ ಹೊಡೆದು ಗಲಾಟೆ ಸೃಷ್ಟಿಸಿದರು. ಒಂದು ಚೆಂಡನ್ನು ನಿಧಾನವಾಗಿ ಒದೆಯುತ್ತಾ ಹೋಗುವುದು ಅಥವಾ 'ತಾರೆ ತಾರೆ' ಎಂದು ಕೂಗಿದಾಗ ಕೈಗಳನ್ನು ಎತ್ತಲು ಹೇಳುವುದರಿಂದ ಈ ಅವ್ಯವಸ್ಥೆಯನ್ನು ಹತೋಟಿಗೆ ತರಬಹುದು. ಈ ತಂತ್ರಗಳನ್ನು ಹಲವು ಬಾರಿ ಬಳಸಲಾಗಿದ್ದು, ಅವು ತರಗತಿಯ ಶಿಸ್ತನ್ನು ಕಾಪಾಡುವಲ್ಲಿ ಬಹಳ ಪರಿಣಾಮಕಾರಿಯಾಗಿವೆ.

ಮೊದಲ ಅಧಿವೇಶನವನ್ನು ಕೊನೆಗೊಳಿಸಲು ಶಿಕ್ಷಕರು ಪಠ್ಯಪುಸ್ತಕದ ನಿರ್ದಿಷ್ಟ ಪುಟವನ್ನು ತೆರೆಯುವಂತೆ ಮಕ್ಕಳಿಗೆ ಹೇಳಿದರು; ಶಿಕ್ಷಕರು ಪಠ್ಯದ ಭಾಗಗಳನ್ನು ಸಾಲುಗಳ ಮೂಲಕ ನಿರ್ಧರಿಸುತ್ತಾರೆ (ಒಂದು ಅಥವಾ ಎರಡು ಸಾಲುಗಳು, ನೀವು ಪಠ್ಯವನ್ನು ಹೇಗೆ ವಿಭಜಿಸುತ್ತೀರಿ ಎಂಬುದರ ಆಧಾರದ ಮೇಲೆ). ಆ ಪಾಠವು ನಗರದ ಸಂಚಾರ, ಪ್ರಮುಖ ಸ್ಥಳಗಳು ಮತ್ತು ಹೊಸ ಬೆಳವಣಿಗೆಗಳ ಕುರಿತಾಗಿತ್ತು. ಕೆಳಗೆ ನೀಡಲಾದ ವಿಷಯಗಳ ಆಧಾರದ ಮೇಲೆ ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಲಾಯಿತು ಮತ್ತು ಸಂಬಂಧಿತ ವಿಭಾಗವನ್ನು ಓದಲು ಕೇಳಲಾಯಿತು. ನಂತರ ಚಿತ್ರಗಳು, ನಾಟಕ ಅಥವಾ ಇತರ ಚಟುವಟಿಕೆಗಳ ಮೂಲಕ ಕಥೆಯಾಗಿ ಓದಿದ್ದನ್ನು ವಿವರಿಸಲು ಅವರನ್ನು ಕೇಳಲಾಯಿತು.

- ಸಂಚಾರ
- ಐತಿಹಾಸಿಕ ಮತ್ತು ಪ್ರಮುಖ ಪ್ರವಾಸಿ ಸ್ಥಳಗಳು
- ನಗರದಲ್ಲಿ ಅಭಿವೃದ್ಧಿ

### ಎರಡನೇ ದಿನ

ಮಕ್ಕಳನ್ನು ಅವರ ಗುಂಪುಗಳಲ್ಲಿ ಕೂರಿಸಲಾಯಿತು ಮತ್ತು ಅವರಿಗೆ ನೀಡಲಾದ ಪಠ್ಯ ಭಾಗದ ಬಗ್ಗೆ ಅವರ ತಿಳುವಳಿಕೆಯನ್ನು ವ್ಯಕ್ತಪಡಿಸಲು ಒಂದು ಕಾರ್ಯವನ್ನು ಯೋಜಿಸಲಾಯಿತು. ಶಿಕ್ಷಕರು ನಾಲ್ಕೂ ಕಡೆ



ಚಿತ್ರ 2 : ಪಾತ್ರಾಭಿನಯದ ಸಂದರ್ಭದಲ್ಲಿನ ಕಲಿಕೆ ಮತ್ತು ಸಂತಸ.



ಚಿತ್ರ 3 : ಮಕ್ಕಳು ಪರಸ್ಪರ ಸಂತೋಷದಿಂದ ಕಲಿಯುತ್ತಾರೆ.



ಚಿತ್ರ 4 : ತಮ್ಮ ಸಂಭಾಷಣೆಯನ್ನು ಅಭ್ಯಾಸ ಮಾಡುತ್ತಿರುವ ಮಕ್ಕಳು.

ಸುತ್ತಾಡಿ ವಿಷಯವನ್ನು ಕಥೆಯ ರೂಪದಲ್ಲಿ ಹೇಗೆ ವ್ಯಕ್ತಪಡಿಸಬೇಕು ಎಂದು ಚರ್ಚಿಸಿದರು ಮತ್ತು ಪ್ರತಿ ಗುಂಪಿಗೆ ಸಂಭಾಷಣೆ ಬರೆಯಲು ಹೇಳಿದರು.

ಗ್ರೂಪ್ ಎ ಮೇಲ್ ಸೇತುವೆಗಳೊಂದಿಗೆ ರಸ್ತೆಗಳನ್ನು ನಿರ್ಮಿಸಿತು ಮತ್ತು ಇವುಗಳನ್ನು ಗ್ರೂಪ್ ಬಿ ಯ ಆಲೋಚನೆಗಳಿಗೆ ಜೋಡಿಸಿತು. ಪಾಠದ ವಿವಿಧ ಭಾಗಗಳನ್ನು ಸಂಪರ್ಕಿಸಲು ಇಡೀ ವರ್ಗವು ಸಹಕರಿಸಬೇಕು ಎಂದು ಎಲ್ಲಾ ಮೂರು ತಂಡಗಳು ಶೀಘ್ರದಲ್ಲೇ ಅರಿತುಕೊಂಡವು. ಚಿತ್ರಗಳಲ್ಲಿ ಸ್ಥಳಾವಕಾಶದ ಕೊರತೆ ಇದ್ದಾಗ, ಸುಧಾರಿತ ತಂತ್ರವನ್ನು ಬಳಸಿಕೊಂಡು ಮೃಗಾಲಯ ಅಥವಾ ಮಾರುಕಟ್ಟೆಯಂತಹ ಸ್ಥಳಗಳನ್ನು ವಿವರಿಸಲು ಅವರನ್ನು ಕೇಳಲಾಯಿತು.

ಕೆಲವು ಮಕ್ಕಳು ಸಂಭಾಷಣೆ ಬರೆದರು; ಅವರು ಪಠ್ಯಕ್ಕೆ ಕಟ್ಟುನಿಟ್ಟಾಗಿ ಸಂಬಂಧಿಸಿದ ಸಂಭಾಷಣೆಗಳನ್ನು ಬರೆಯುವುದು ಅನಿವಾರ್ಯವಲ್ಲ, ಆದರೆ ಅವರು ಅರ್ಥ ಮಾಡಿಕೊಂಡದ್ದನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿತ್ತು. ಸೆಟ್ ವಿನ್ಯಾಸ ಮತ್ತು ಮೇಲ್ ಸೇತುವೆಗಳು ಅಥವಾ ಟ್ರಾಫಿಕ್ ಲೈಟ್‌ಗಳು ಇತ್ಯಾದಿಗಳನ್ನು ಹೇಗೆ ಸುಧಾರಿಸುವುದು ಎಂಬುದರ ಕುರಿತು ಕೆಲವು ಗುಂಪುಗಳು ಕೆಲಸ ಮಾಡುತ್ತವೆ. ಮಕ್ಕಳು ತಮ್ಮ ವಿವಿಧ ಪ್ರತಿಭೆಗಳನ್ನು ಬಳಸಿಕೊಂಡರು ಮತ್ತು ತುಂಬಾ ಸಂತೋಷಪಟ್ಟರು.

## ಮೂರನೇ ದಿನ

ಮಕ್ಕಳು ಪ್ರದರ್ಶನಕ್ಕಾಗಿ ಕುತೂಹಲದಿಂದ ಕಾಯುತ್ತಿದ್ದರು ಮತ್ತು ತಮ್ಮ ಪಾತ್ರವನ್ನು ಅಭಿನಯಿಸಲು ರಂಗಪರಿಕರಗಳೊಂದಿಗೆ ಸಿದ್ಧರಾಗಿದ್ದರು. ನಟನೆ ಮಾಡುವಾಗಲೂ, ಅವರು ಪಠ್ಯದಿಂದ ವಾಕ್ಯಗಳನ್ನು ನೆನಪಿಟ್ಟುಕೊಂಡು ವಾಸ್ತವ ಸಂಗತಿಗಳ ಬಗ್ಗೆ ಪರಸ್ಪರ ತಪ್ಪುಗಳನ್ನು ತಿದ್ದಿದರು. ಆ ಮೂಲಕ ಮಕ್ಕಳಿಗೆ ಪಾಠವನ್ನು ಕಂಠಪಾಠ ಮಾಡಬೇಕೆಂಬ ಒತ್ತಡವಿರಲಿಲ್ಲ ಹಾಗೂ ಪಾಠ ಪುನರಾವರ್ತನೆಯಾಗುತ್ತಿತ್ತು.

ಈ ಪ್ರಸ್ತುತಿಯು 15 ನಿಮಿಷಗಳಿಗಿಂತ ಹೆಚ್ಚಿರಲಿಲ್ಲ. ಆದರೆ ಮಕ್ಕಳು ಉತ್ಸಾಹ ಮತ್ತು ಚರ್ಚೆಯಿಂದ ರೋಮಾಂಚನಗೊಂಡರು. ಪಾಠದಲ್ಲಿ ಅವರ ಉತ್ಸಾಹ ಮತ್ತು ಆಸಕ್ತಿಯು ಹಾಗೆಯೇ ಉಳಿಯಿತು. ಪ್ರಸ್ತುತಿ ಮುಗಿದ ತಕ್ಷಣ, ಸಣ್ಣ ರಸಪ್ರಶ್ನೆ ಇರುತ್ತದೆ ಎಂದು ಶಿಕ್ಷಕರು ಹೇಳಿದರು ('ಪರೀಕ್ಷೆ' ಪದವನ್ನು ಬಳಸಲಿಲ್ಲ). ಮಕ್ಕಳು ಎಷ್ಟು ಪಾಠವನ್ನು ಅರ್ಥ ಮಾಡಿಕೊಂಡಿದ್ದಾರೆ ಮತ್ತು ನೆನಪಿಸಿಕೊಂಡಿದ್ದಾರೆ ಎಂಬುದನ್ನು ನಿರ್ಣಯಿಸುವುದು ಮತ್ತು ತಿಳಿಯುವುದು ಇದರ ಉದ್ದೇಶವಾಗಿತ್ತು.

## ಫಲಿತಾಂಶಗಳು ಮತ್ತು ತೀರ್ಮಾನ

ಎರಡು ವಾರಗಳ ನಂತರ ವಿಷಯದ ಬಗ್ಗೆ ಮಕ್ಕಳ ತಿಳುವಳಿಕೆಯನ್ನು ಪರೀಕ್ಷಿಸಲಾಯಿತು. ಅವರ ಉತ್ತರಗಳು ನಿರ್ದಿಷ್ಟ ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಳ್ಳುವ ವಿಶೇಷ ಗುಣವನ್ನು ತೆರೆದಿಟ್ಟವು. ಉದಾಹರಣೆಗೆ, 'ದೇವಾಲಯವು ಹೂವಿನ ಆಕಾರದಲ್ಲಿದೆ ಎಂದು ಹೇಳುವ ಬದಲಿಗೆ 'ದೇವಾಲಯವು ಕಮಲದ ಆಕಾರದಲ್ಲಿದೆ' ಎಂದು ಬಳಸುವುದು (ಸಾಮಾನ್ಯ 'ಹೂವಿನ' ಬದಲಿಗೆ 'ಕಮಲ' ಬಳಸಿ). ಮಕ್ಕಳು ಕೇವಲ ಕೇಳಿಸಿಕೊಂಡಾಗ ಮೊದಲಿನ ಉತ್ತರ ಬರುತ್ತದೆ. ಅದೇ ಅವರು ಚಟುವಟಿಕೆಯಲ್ಲಿ ಭಾಗವಹಿಸಿದಾಗ ಪಾಠದ ನಿರ್ದಿಷ್ಟ ಅಂಶಗಳನ್ನು ನೆನಪಿಸಿಕೊಳ್ಳುತ್ತಾರೆ.

ಸ್ವಲ್ಪ ನಗು ಅಥವಾ ಸಕ್ರಿಯ ಭಾಗವಹಿಸುವಿಕೆ ತರಗತಿಗಳಲ್ಲಿ ಆಸಕ್ತಿಯನ್ನು ಉಂಟು ಮಾಡುತ್ತದೆ. ಮಕ್ಕಳಿಗೆ ಸತ್ಯಗಳನ್ನು ಆಳವಾಗಿ ಕಲಿಯುವ ಶಕ್ತಿ ಮತ್ತು ಬಯಕೆ ಇರುತ್ತದೆ. ಅವರು ನಿರಂತರವಾಗಿ ಕಲಿಯುವ ಮತ್ತು ತಂಡದಲ್ಲಿ ಕೆಲಸ ಮಾಡುವ ಬಯಕೆಯನ್ನು ಹೊಂದಿರುತ್ತಾರೆ ಮತ್ತು ಸಾಮಾಜಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾರೆ. ಅವರು ತಮ್ಮ ಸುತ್ತಲಿನ ಪರಿಸರವನ್ನು ನೋಡುವ ಸೃಜನಶೀಲ ವಿಧಾನವನ್ನು ಕಂಡುಕೊಳ್ಳುತ್ತಾರೆ ಮತ್ತು ಸಕಾರಾತ್ಮಕ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ.



**ಆಶಾ ಸಿಂಗ್** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಜುಕೇಶನ್‌ನಲ್ಲಿ ಸಂದರ್ಶಕ ಅಧ್ಯಾಪಕರಾಗಿದ್ದಾರೆ. ಅವರು ಈ ಹಿಂದೆ ದೆಹಲಿಯ ಲೇಡಿ ಇರ್ವಿನ್ ಕಾಲೇಜಿನಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದರು. ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ಪರಿಣಿತಿಯನ್ನು ಹೊಂದಿರುವ ಇವರು, ಮಕ್ಕಳ ಕುರಿತು ಪಾಠ ಮಾಡುತ್ತಾ, ಮಕ್ಕಳೊಂದಿಗೆ ಕೆಲಸ ಮಾಡುತ್ತಿದ್ದಾರೆ. ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ಶಿಕ್ಷಕರಿಗೆ ಶಿಕ್ಷಣ ಸಾಧನವಾಗಿ ಮತ್ತು ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವಲ್ಲಿ ಕಲೆಯನ್ನು ಬಳಸುವುದು ಅವರ ನಿರಂತರ ಆಸಕ್ತಿಯಾಗಿದೆ.

**ಸಂಪರ್ಕ:** asha.singh@apu.edu.in

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ವಿಜ್ಞಾನದಲ್ಲಿ ಮಕ್ಕಳ ಕುತೂಹಲವನ್ನು ಬೆಳೆಸುವುದು

**ಅಮೃತಾ ಮಾಸಿಹ್**

**ಚಿಕ್ಕ ವಯಸ್ಸಿನಿಂದಲೇ ವೈಜ್ಞಾನಿಕ ಕುತೂಹಲವನ್ನು ಪೋಷಿಸುವುದರಿಂದ ಮಕ್ಕಳು ಕಲಿಕೆಯ ಮೇಲೆ ದೀರ್ಘಕಾಲದ ಪ್ರೀತಿ ಬೆಳೆಸಿಕೊಳ್ಳಲು ಮತ್ತು ವಿಮರ್ಶಾತ್ಮಕ ಚಿಂತನೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಪೋಷಕರು, ಶಿಕ್ಷಕರು ಮತ್ತು ಮಾರ್ಗದರ್ಶಕರಾಗಿ, ನಾವು, ಪ್ರಶ್ನಿಸುವ, ಅನ್ವೇಷಿಸುವ ಮತ್ತು ಪ್ರಯೋಗ ಮಾಡುವಲ್ಲಿ ಇರುವ ಮಗುವಿನ ಸಹಜ ಒಲವನ್ನು ಬೆಳೆಸಬೇಕು ಮತ್ತು ಬೆಂಬಲಿಸಬೇಕು.**

## ವಿಜ್ಞಾನದಲ್ಲಿ ಕುತೂಹಲ ಎಂದರೇನು?

ಕುತೂಹಲವು, ಅನ್ವೇಷಣೆ ಮತ್ತು ಚಿಂತಿಸುವ ಪ್ರವೃತ್ತಿಯನ್ನು ಉತ್ತೇಜಿಸುವ ಮೂಲಭೂತ ಮಾನವ ಲಕ್ಷಣವಾಗಿದೆ. ವಿಜ್ಞಾನದ ವಿಷಯದಲ್ಲಿ, ಕುತೂಹಲವು ನೈಸರ್ಗಿಕ ಪ್ರಪಂಚದ ಆಧಾರವಾಗಿರುವ ತತ್ವಗಳನ್ನು ಅರ್ಥ ಮಾಡಿಕೊಳ್ಳುವ ಬಯಕೆಯನ್ನು ಹೆಚ್ಚಿಸುತ್ತದೆ.

ಮಕ್ಕಳಲ್ಲಿ, ಅವರ ಗಮನಕ್ಕೆ ಬರುವ ಘಟನೆಗಳು "ಏಕೆ" ಮತ್ತು "ಹೇಗೆ" ಸಂಭವಿಸುತ್ತವೆ ಎಂದು ತಿಳಿಯುವ ಸಹಜವಾದ, ಒಂದು ವಿಶೇಷ ರೀತಿಯ ಕುತೂಹಲ ಇರುತ್ತದೆ. ಈ ಕುತೂಹಲವನ್ನು ಇನ್ನಷ್ಟು ಉತ್ತೇಜಿಸುವುದರಿಂದ ಅವರಿಗೆ ವೈಜ್ಞಾನಿಕ ಪರಿಕಲ್ಪನೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಮತ್ತು ಅವರ ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ ಪರಿಹರಿಸುವ ಕೌಶಲಗಳನ್ನು ಉತ್ತಮಗೊಳಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಕೇವಲ ಸೈದ್ಧಾಂತಿಕ ವಿವರಣೆಗಳನ್ನು ಅವಲಂಬಿಸುವ ಬದಲು ವಿಜ್ಞಾನ ತರಗತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಚಟುವಟಿಕೆಗಳ ಮೂಲಕ ವಿಜ್ಞಾನದಲ್ಲಿ ಮಕ್ಕಳ ಆಸಕ್ತಿಯನ್ನು ಅಳೆಯುವುದು ಸುಲಭ. ಆನ್ವಯಿಕ -ಆಧಾರಿತ ಬೋಧನಾ ವಿಧಾನವು (Application-based instructions) ಶಾಲೆಯಲ್ಲಿ ಕಲಿತದ್ದನ್ನು ಮನೆಯಲ್ಲಿಯೇ ಅನ್ವಯಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ. ಈ ಲೇಖನದಲ್ಲಿ, ವಿಜ್ಞಾನದಲ್ಲಿ ಮಕ್ಕಳ ಕುತೂಹಲವನ್ನು ಹೆಚ್ಚಿಸಲು ಮತ್ತು ಅವರು ವೈಜ್ಞಾನಿಕ ಅನ್ವೇಷಣೆಗಳನ್ನು (scientific exploration) ಮಾಡುವಂತೆ ಪ್ರೋತ್ಸಾಹಿಸಲು ಪ್ರಾಯೋಗಿಕ ಮಾರ್ಗಗಳನ್ನು ವಿವರಿಸಲಾಗಿದೆ.

## ಕುತೂಹಲವನ್ನು ಪೋಷಿಸುವ ವಾತಾವರಣವನ್ನು ಸೃಷ್ಟಿಸುವುದು

**1. ಸಂಪನ್ಮೂಲಗಳಿಗೆ ಪ್ರವೇಶಿಕೆ ಒದಗಿಸುವುದು:** ಮಕ್ಕಳನ್ನು ವಿಜ್ಞಾನದ ವಿವಿಧ ವಿಭಾಗಗಳಿಗೆ ಪರಿಚಯಿಸಲು ಅವರ ವಯಸ್ಸಿಗೆ ಸೂಕ್ತವಾದ ಪುಸ್ತಕಗಳು, ವೀಡಿಯೋಗಳು, ಸಾಕ್ಷ್ಯಚಿತ್ರಗಳು ಮತ್ತು ಸಾಧನಗಳನ್ನು (interactive tools) ಒದಗಿಸಿ. ಇದರಿಂದ ಅವರ ಜ್ಞಾನವು ವಿಸ್ತರಿಸುವುದಲ್ಲದೆ, ಅವರಲ್ಲಿ ಪ್ರಶ್ನೆಗಳು ಮತ್ತು ಚರ್ಚೆಗಳನ್ನು ಉತ್ತೇಜಿಸಿದಂತಾಗುತ್ತದೆ.

ಇದನ್ನು ಕಾರ್ಯಗತಗೊಳಿಸಲು, ಪಠ್ಯಪುಸ್ತಕಗಳ ಜೊತೆಗೆ ಇತರ ಪುಸ್ತಕಗಳಲ್ಲೂ ಆಸಕ್ತಿ ಹುಟ್ಟಿಸುವ ಉದ್ದೇಶದಿಂದ ನಾವು ವಿಜ್ಞಾನದ ತರಗತಿಗಳಲ್ಲಿ ವಾರಕ್ಕೊಮ್ಮೆ ಗ್ರಂಥಾಲಯ ತರಗತಿಗಳನ್ನು ಪ್ರಾರಂಭಿಸಿದೆವು. ತರಗತಿ ಪ್ರಾರಂಭವಾಗುವ ಮೊದಲು, ನಾವು ಮಕ್ಕಳೊಂದಿಗೆ ಭಾಷಾ ಜ್ಞಾನದ ಬೆಳವಣಿಗೆ ಮತ್ತು ವಿಷಯ ಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಯೋಜಿಸಿದೆವು.

ಮೊದಲ ಚಟುವಟಿಕೆಯು ವಿಜ್ಞಾನದ ಪುಸ್ತಕಗಳನ್ನು ಒಬ್ಬರೇ ಓದುವುದು ಮತ್ತು ಅವರು ಓದಿದ ಭಾಗದ ವಿಮರ್ಶೆಗಳನ್ನು ಹಂಚಿಕೊಳ್ಳುವುದಾಗಿತ್ತು. ಇದನ್ನು ಅವರು ತಮ್ಮ ಸ್ವಂತ ಮಾತುಗಳಲ್ಲಿ ಅಥವಾ ಪುಸ್ತಕದಿಂದ ಆ ಭಾಗಗಳನ್ನು ಓದುವ ಮೂಲಕ ವ್ಯಕ್ತಪಡಿಸಬಹುದಾಗಿತ್ತು. ಎರಡನೇ ಚಟುವಟಿಕೆಯಲ್ಲಿ, ಶಿಕ್ಷಕರು ಗುಂಪುಗಳನ್ನು ರಚಿಸಿದರು ಮತ್ತು ಪ್ರತಿ ಗುಂಪಿಗೆ ಓದಲು ಒಂದು ಪುಸ್ತಕವನ್ನು ನೀಡಿದರು. ಮಕ್ಕಳು ಅದನ್ನು ಗುಂಪುಗಳಲ್ಲಿ ಓದುತ್ತಾರೆ ಮತ್ತು ಪುಸ್ತಕಗಳಿಗೆ ಸಂಬಂಧಿಸಿದ ತಮ್ಮ ಕಲಿಕೆ





ಚಿತ್ರ 1, 2 ಮತ್ತು 3: ಪುಸ್ತಕಗಳನ್ನು ಓದುತ್ತಿರುವ ಮತ್ತು ವಿಜ್ಞಾನದ ಪ್ರಯೋಗಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳು.

ಮತ್ತು ಅನುಭವಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ಈ ಚಟುವಟಿಕೆಯು ಅವರಿಗೆ ಗುಂಪಿನಲ್ಲಿ ಪರಸ್ಪರ ಕಲಿಯಲು ಮತ್ತು ಕಲಿತದ್ದನ್ನು ಪ್ರಸ್ತುತಪಡಿಸಲು ಅವಕಾಶ ನೀಡಿತು.

**2. ಹ್ಯಾಂಡ್ಸ್ ಆನ್ ಅನ್ವೇಷಣೆಗಳನ್ನು ಪ್ರೋತ್ಸಾಹಿಸುವುದು:** ಮಕ್ಕಳು ಅವರ ಆಲೋಚನೆಗಳನ್ನು ವೀಕ್ಷಿಸಲು, ಪರಿಕಲ್ಪಿಸಿಕೊಳ್ಳಲು ಮತ್ತು ಪರೀಕ್ಷಿಸಲು ಅನುವು ಮಾಡಿಕೊಡುವ ಪ್ರಯೋಗಗಳು ಮತ್ತು ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲಿ. ಮನೆಬಳಕೆಯ ವಸ್ತುಗಳನ್ನು ಬಳಸಿ ಮಾಡುವ ಸರಳ ಪ್ರಯೋಗಗಳು ಅವರ ಕುತೂಹಲವನ್ನು ಉತ್ತೇಜಿಸುತ್ತವೆ ಮತ್ತು ವಿಜ್ಞಾನವನ್ನು ಸಾಕಾರಗೊಳಿಸುತ್ತವೆ. ಉದಾಹರಣೆಗೆ, ಏಳನೇ ತರಗತಿಯಲ್ಲಿ ನಾವು ಮಕ್ಕಳನ್ನು ತಮ್ಮ ನೆರೆಹೊರೆಯಿಂದ ವಿವಿಧ ಹೂವುಗಳನ್ನು ತರಲು ಮತ್ತು ಆಮ್ಲೀಯ ಅಥವಾ ಪ್ರತ್ಯಾಮ್ಲೀಯ ಪದಾರ್ಥಗಳನ್ನು ಪರೀಕ್ಷಿಸಲು ಸೂಚಕಗಳನ್ನು ಮಾಡಲು ಹೇಳಿದೆವು. ವಿವಿಧ ಹೂವಿನ ಎಸಳುಗಳ ಬದಲಾಗುತ್ತಿರುವ ಬಣ್ಣಗಳನ್ನು ನೋಡಿ ಮಕ್ಕಳು ಬಹಳ ಉತ್ಸುಕರಾಗಿದ್ದರು. ಇದು ಈ ವೈಜ್ಞಾನಿಕ ಸತ್ಯದಲ್ಲಿ ಅವರ ಆಸಕ್ತಿಯನ್ನು ಹೆಚ್ಚಿಸಿತು.

ಇದೇ ರೀತಿ, ಆರನೇ ತರಗತಿಯಲ್ಲಿ ಪದಾರ್ಥದ ಗುಣಲಕ್ಷಣಗಳನ್ನು ಅಧ್ಯಯನ ಮಾಡುವಾಗ, ನಾವು ವಿದ್ಯಾರ್ಥಿಗಳಿಗೆ ಕಾಗದ, ಉಪ್ಪು, ಪಾಲಿಥಿನ್, ಅಯಸ್ಕಾಂತಗಳು, ಕಬ್ಬಿಣದ ಮೊಳೆ, ಚಾಕ್ ಪುಡಿ, ಸಕ್ಕರೆ, ತೈಲ, ಹಾಲು, ತಾಮ್ರದ ತಂತಿ, ಬ್ಯಾಟರಿಗಳು, ಬಲ್ಬ್‌ಗಳು, ಧೂಪದ್ರವ್ಯ, ನೀರು ಮುಂತಾದ ವಸ್ತುಗಳನ್ನು ನೀಡಿದ್ದೇವೆ.

ಇದರಿಂದಾಗಿ ಕರಗುವಿಕೆ, ಪಾರದರ್ಶಕತೆ, ಕಾಂತೀಯತೆ, ವಾಹಕತೆ ಮತ್ತು ಪ್ರಸರಣದ ಗುಣಲಕ್ಷಣಗಳನ್ನು ಪರೀಕ್ಷಿಸಬಹುದು. ಸರಳ ಪ್ರಯೋಗಗಳ ಮೂಲಕ, ಅವರು ಈ ಪರಿಕಲ್ಪನೆಗಳನ್ನು ಹೆಚ್ಚು ಸ್ಪಷ್ಟವಾಗಿ ಅರ್ಥ ಮಾಡಿಕೊಂಡರು.

**3. ಪ್ರಶ್ನೆ ಕೇಳುವುದನ್ನು ಪ್ರೋತ್ಸಾಹಿಸುವುದು:** ಪ್ರಶ್ನೆಗಳನ್ನು ಸ್ವಾಗತಿಸುವ ವಾತಾವರಣವನ್ನು ಸೃಷ್ಟಿಸಿ. ಅವರ ಪ್ರಶ್ನೆಗಳಿಗೆ ಉತ್ತರಿಸಲು ಸಮಯ ತೆಗೆದುಕೊಳ್ಳಿ, ಮತ್ತು ನಿಮಗೆ ಉತ್ತರ ತಿಳಿದಿಲ್ಲದಿದ್ದರೆ, ಅದನ್ನು ಕಂಡುಹಿಡಿಯಲು ಅವರೊಂದಿಗೆ ಕೈಜೋಡಿಸಿ. ಹಾಗೆ ಮಾಡುವುದರಿಂದ ಕುತೂಹಲವು ಜೀವನ ಪರ್ಯಂತದ ಹುಡುಕಾಟವಾಗಿದೆ ಎಂದು ಅವರಿಗೆ ತೋರಿಸಿದಂತಾಗುತ್ತದೆ ಅದೇ ಸಮಯದಲ್ಲಿ, ಇದು ತರಗತಿಯಲ್ಲಿ ಒಳಗೊಳ್ಳುವಿಕೆಯ ವಾತಾವರಣ ನಿರ್ಮಿಸುವುದರಿಂದ ವಿದ್ಯಾರ್ಥಿಗಳಿಗೆ ಮುಕ್ತವಾಗಿ ಮಾತನಾಡಲು ಅನುವು ಮಾಡಿಕೊಡುವ ಸಂಸ್ಕೃತಿಯನ್ನು ಸಹ ಸೃಷ್ಟಿಸುತ್ತದೆ. ಎಲ್ಲಾ ಪ್ರಶ್ನೆಗಳು ಮತ್ತು ಉತ್ತರಗಳನ್ನು ಗೌರವಿಸಿದಾಗ, ಮತ್ತು ಮಕ್ಕಳು ತಮ್ಮತನವನ್ನು ಅನುಭವಿಸಿದಾಗ, ಇದು ಅವರಿಗೆ ತರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶವನ್ನು ನೀಡುತ್ತದೆ.

ಶಿಕ್ಷಕರು ವಿವಿಧ ಹಂತದ ವಿದ್ಯಾರ್ಥಿಗಳಿಗೆ ಹೊಂದಿಕೊಳ್ಳುವ ವಿವಿಧ ಪ್ರಶ್ನೆಗಳನ್ನು ಸಹ ಬಳಸುತ್ತಾರೆ. ಹೀಗೆ ಮಾಡುವ ಮೂಲಕ, ಪ್ರತಿಯೊಬ್ಬರೂ ತಾವು ಈ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದೇವೆ ಎಂದು ಭಾವನೆಯನ್ನು ಹೊಂದುತ್ತಾರೆ. ಕೆಲವು ಸವಾಲಿನ ಪ್ರಶ್ನೆಗಳೂ ಸಹ ಇರಬೇಕು. ಮಕ್ಕಳು ಪ್ರಶ್ನೆಗಳನ್ನು ಕೇಳಿದಾಗ, ಶಿಕ್ಷಕರು ಕೆಲವು ಶೋಧನಾ ಪ್ರಶ್ನೆಗಳನ್ನು ಸಹ ಕೇಳುತ್ತಾರೆ. ಇದರಿಂದಾಗಿ ಮಕ್ಕಳು ವಿಮರ್ಶಾತ್ಮಕವಾಗಿ ಯೋಚಿಸುತ್ತಾರೆ, ತಮ್ಮದೇ ಆದ ಉತ್ತರಗಳೊಂದಿಗೆ ಬರಲು ಪ್ರಯತ್ನಿಸುತ್ತಾರೆ ಮತ್ತು ತಮ್ಮಲ್ಲಿ ಸಮಸ್ಯೆ-ಪರಿಹರಿಸುವ ಕೌಶಲಗಳನ್ನು ಬೆಳೆಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳು ತಮ್ಮ ಸಮವಯಸ್ಕರು ಮತ್ತು ಶಿಕ್ಷಕರೊಂದಿಗೆ ತಾವು ತಿಳಿದುಕೊಂಡದ್ದನ್ನು ಹಂಚಿ, ಸಂದೇಹಗಳನ್ನು ಬಗೆಹರಿಸಿಕೊಳ್ಳುವಾಗ ಪ್ರಶ್ನೆಗಳನ್ನು ಅಥವಾ ಅನುಮಾನಗಳನ್ನು ಕೇಳುವ ಇಚ್ಛೆಯನ್ನು ಹೆಚ್ಚಿಸುತ್ತದೆ.

**4. ತಾರ್ಕಿಕ ಮನೋಭಾವ ಬೆಳೆಸುವುದು:** ವಿಜ್ಞಾನವನ್ನು ಅಭ್ಯಾಸ ಮಾಡಲು, ತಾರ್ಕಿಕತೆಯನ್ನು ಬೆಳೆಸುವುದು ಮತ್ತು ಅವುಗಳನ್ನು



ಚಿತ್ರ 4 : ಸೂಕ್ಷ್ಮದರ್ಶಕದ ಮೂಲಕ ಈರುಳ್ಳಿಯ ಜೀವಕೋಶಗಳನ್ನು ನೋಡುತ್ತಿರುವ ವಿದ್ಯಾರ್ಥಿನಿ.

ಪರೀಕ್ಷಿಸಲು ಸಮರ್ಥರಾಗಿರುವುದು ಮುಖ್ಯವಾಗುತ್ತದೆ. ವಿಜ್ಞಾನವು ಸೃಜನಶೀಲತೆ ಮತ್ತು ವಿಚಾರಣೆಯ ಅಗತ್ಯವಿರುವ ಕ್ಷೇತ್ರವಾಗಿದೆ ಎಂದು ತರಗತಿಯಲ್ಲಿನ ವಾದಗಳು ಮತ್ತು ಪ್ರಯೋಗಗಳು ವಿದ್ಯಾರ್ಥಿಗಳಿಗೆ ತೋರಿಸುತ್ತವೆ.

ಹಿರಿಯ ಪ್ರಾಥಮಿಕ ಶಾಲೆಗಳಿಗೆ ಪ್ರವೇಶಿಸುವಾಗ ವಿದ್ಯಾರ್ಥಿಗಳು ತಮ್ಮ ಸುತ್ತಲಿನ ಪ್ರಪಂಚದ ಬಗ್ಗೆ ಅನೇಕ ಪ್ರಶ್ನೆಗಳು ಮತ್ತು ಪರಿಕಲ್ಪನೆಗಳೊಂದಿಗೆ ಬರುತ್ತಾರೆ. ಆದರೆ ಅವರ ಜ್ಞಾನದ ಮಟ್ಟವು ಅವರ ತಾರ್ಕಿಕತೆಯನ್ನು ಸ್ವಲ್ಪಮಟ್ಟಿಗೆ ಸೀಮಿತಗೊಳಿಸಬಹುದು. ಉದಾಹರಣೆಗೆ, ಸೂರ್ಯನು ಪರಮಾಣು ಸಮ್ಮಿಲನದ ಮೂಲಕ ಶಕ್ತಿಯನ್ನು ನೀಡುತ್ತಾನೆ ಎಂದು ಆರನೇ ತರಗತಿಯವರಿಗೆ ತಿಳಿಯುತ್ತದೆ ಎಂದು ನಿರೀಕ್ಷಿಸುವುದು ಸೂಕ್ತವಲ್ಲ.

ಆರನೇ ತರಗತಿಯ ಕೆಲವು ವಿದ್ಯಾರ್ಥಿಗಳು ಸೂರ್ಯನು ಪರಿಸರ ವ್ಯವಸ್ಥೆಯ ಜೈವಿಕ ಘಟಕ ಎಂದು ಭಾವಿಸಿದ್ದರು. ಜೈವಿಕ ಮತ್ತು ಅಜೈವಿಕ ಎಂಬ ಪದವನ್ನು ಅರ್ಥ ಮಾಡಿಕೊಳ್ಳಲು, ವಿದ್ಯಾರ್ಥಿಗಳು ಜೀವಂತ ಜೀವಿಗಳ ಗುಣಲಕ್ಷಣಗಳನ್ನು (ಚಲನೆ, ಉಸಿರಾಟ, ಸೂಕ್ಷ್ಮತೆ, ಬೆಳವಣಿಗೆ, ಸಂತಾನೋತ್ಪತ್ತಿ, ವಿಸರ್ಜನೆ ಮತ್ತು ಪೋಷಣೆ) ತಿಳಿದುಕೊಳ್ಳಬೇಕು ಮತ್ತು ಅವರು ಇದೆಲ್ಲವನ್ನೂ ತಿಳಿದುಕೊಂಡಿದ್ದರಿಂದ, ಸೂರ್ಯನು ಜೀವಂತವಾಗಿದ್ದಾನೋ ಅಥವಾ ನಿರ್ಜೀವಿಯೋ ಎಂದು ಕಂಡುಹಿಡಿಯಲು ಈ ಪದಗಳನ್ನು ಬಳಸಬಹುದಾಗಿತ್ತು. ಹಾಗೆ ಮಾಡುವಾಗ, ಸೂರ್ಯನ ಬಗ್ಗೆ ವಿದ್ಯಾರ್ಥಿಗಳು ಹೊಂದಿದ್ದ ಇತರ ಗ್ರಹಿಕೆಗಳು ಮತ್ತು ನಂಬಿಕೆಗಳನ್ನು ಸಹ ಮರುಪರಿಶೀಲಿಸಲಾಯಿತು.

ಉದಾಹರಣೆಗೆ, ತಮ್ಮ ಸಾಂಸ್ಕೃತಿಕ-ಧಾರ್ಮಿಕ ನಂಬಿಕೆಗಳ ಪ್ರಕಾರ, ಸೂರ್ಯನಿಗೆ (ಸೂರ್ಯ ದೇವರು) ಮಕ್ಕಳಿರುವುದರಿಂದ ಸೂರ್ಯನು

ಸಂತಾನೋತ್ಪತ್ತಿ ಮಾಡಬಹುದು ಎಂದು ವಿದ್ಯಾರ್ಥಿಗಳು ಭಾವಿಸಿದ್ದರು. ಆದ್ದರಿಂದ ಶಿಕ್ಷಕರಿಗೆ ಸಂತಾನೋತ್ಪತ್ತಿಯನ್ನು ನಿರ್ದಿಷ್ಟ (ವೈಜ್ಞಾನಿಕ) ರೀತಿಯಲ್ಲಿ ವ್ಯಾಖ್ಯಾನಿಸುವುದು ಅಗತ್ಯವಾಯಿತು. "ಸೂರ್ಯನು ತನ್ನಂತೆಯೇ ಮಕ್ಕಳನ್ನು ಉತ್ಪತ್ತಿ ಮಾಡುತ್ತಾನೆಯೇ?" ಎಂದು ನಾನು ಪ್ರಶ್ನಿಸಿದೆ. "ವಿದ್ಯಾರ್ಥಿಗಳು ಇಲ್ಲ" ಎಂದು ಉತ್ತರಿಸಿದರು. ಏಕೆಂದರೆ ಸೂರ್ಯನು ಬೇರೆ ಸೂರ್ಯರಿಗೆ ಜನ್ಮ ನೀಡುವುದಿಲ್ಲ ಎಂದು ಅವರು ಅರ್ಥ ಮಾಡಿಕೊಂಡರು. ಈ ರೀತಿಯಲ್ಲಿ, ಅವರ ಸಾಂಸ್ಕೃತಿಕ ನಂಬಿಕೆಗಳು ವಿಜ್ಞಾನದ ವಿರುದ್ಧ ನಿಲ್ಲುವುದರಿಂದಲೂ ರಕ್ಷಿಸಲ್ಪಡುತ್ತವೆ.

## ತಪ್ಪುಗಳು ಮತ್ತು ವೈಫಲ್ಯಗಳನ್ನು ಒಪ್ಪಿಕೊಳ್ಳುವುದು

ವೈಜ್ಞಾನಿಕ ತಿಳುವಳಿಕೆಯನ್ನು ಬೆಳೆಸಿಕೊಳ್ಳುವಾಗ ತಪ್ಪುಗಳನ್ನು ಮಾಡುವುದು ಮತ್ತು ವಿಫಲರಾಗುವುದು ಸಹಜ. ಆದರೆ ಇವು ನಮಗೆ ಕಲಿಯಲು ಹೊಸ ಅವಕಾಶಗಳನ್ನು ನೀಡುತ್ತವೆ. ವೈಫಲ್ಯಗಳನ್ನು ತಮ್ಮ ಊಹೆಗಳನ್ನು ಪರಿಷ್ಕರಿಸಲು ಮತ್ತು ಸಮಸ್ಯೆಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ನೋಡಲು ಅವಕಾಶಗಳಾಗಿ ಪರಿಗಣಿಸಲು ನಾವು ಮಕ್ಕಳನ್ನು ಪ್ರೋತ್ಸಾಹಿಸಬೇಕು. ಬೆಳವಣಿಗೆಯ ಮನಸ್ಥಿತಿಯನ್ನು ಬೆಳೆಸುವ ಮೂಲಕ, ವಿಜ್ಞಾನವು ಯಾವಾಗಲೂ ಸರಿಯಾಗಿರುವುದಲ್ಲ, ಬದಲಿಗೆ ಆವಿಷ್ಕಾರದ ಪ್ರಕ್ರಿಯೆಯಾಗಿದೆ ಎಂದು ಮಕ್ಕಳು ಕಲಿಯುತ್ತಾರೆ.

ಉದಾಹರಣೆಗೆ, ವಿಜ್ಞಾನ ತರಗತಿಯಲ್ಲಿ ಚಟುವಟಿಕೆಗಳು ಮತ್ತು ಪ್ರಯೋಗಗಳನ್ನು ಪ್ರದರ್ಶಿಸಿದಾಗ, ಅವುಗಳ ಸಂಪೂರ್ಣ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳಿಗೆ ತೋರಿಸಲಾಯಿತು. ಇದು ವಿದ್ಯಾರ್ಥಿಗಳಿಗೆ ಗಮನಕ್ಕೆ ಬಾರದ ಕೆಲವು ಸೂಕ್ಷ್ಮ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಳ್ಳಲು ಅವಕಾಶವನ್ನು ನೀಡಿತು. ಉದಾಹರಣೆಗೆ, ನಾವು ನಲ್ಲಿ ನೀರಿಗೆ ಹೋಲಿಸಿದರೆ ಬಟ್ಟಿ ಇಳಿಸಿದ ನೀರಿನಲ್ಲಿ ವಿದ್ಯುತ್ ವಾಹಕತೆಯನ್ನು ನೋಡಲು ಪ್ರಯತ್ನಿಸುವಾಗ, ಬಟ್ಟಿ ಇಳಿಸಿದ ನೀರಿನಲ್ಲಿ ಸ್ವಲ್ಪ ವಾಹಕತೆಯನ್ನು ಗಮನಿಸಲಾಯಿತು, ಅದು ಹಾಗಾಗಬಾರದು. ನಂತರ, ಶಿಕ್ಷಕರು ಹಲವಾರು ವಿವಿಧ ವಿಧಾನಗಳನ್ನು ಬಳಸಿಕೊಂಡು ಪ್ರಯೋಗವನ್ನು ಪುನರಾವರ್ತಿಸಿದರು. ಇದು ವಿದ್ಯಾರ್ಥಿಗಳಿಗೆ ನಮ್ಯತೆ ಮತ್ತು ದೃಢನಿಶ್ಚಯದ ಮಹತ್ವವನ್ನು ಕಲಿಸಿತು.

> **ಮಗುವಿನ ಕುತೂಹಲದಿಂದಲೇ ಹೊರಹೊಮ್ಮಿದ ಸಾಧನೆಗಳನ್ನು ಗುರುತಿಸಿ ಮತ್ತು ಆಚರಿಸಿ. ಅದು ಯಶಸ್ವಿ ಪ್ರಯೋಗವಾಗಲಿ, ಹೊಸ ಪ್ರಶ್ನೆಯಾಗಲಿ ಅಥವಾ ಅವರು ಅರ್ಥ ಮಾಡಿಕೊಂಡ ಪರಿಕಲ್ಪನೆಯಾಗಲಿ; ಧನಾತ್ಮಕ ಬಲವರ್ಧನೆಯು ವಿಜ್ಞಾನದಲ್ಲಿ ಅವರ ಆಸಕ್ತಿಯನ್ನು ಬಲಪಡಿಸುತ್ತದೆ.**

ನಾವು ಶಿಕ್ಷಕರು ತರಗತಿಯಲ್ಲಿ ಪ್ರಯೋಗ ಮಾಡುವ ಮೊದಲು ಕನಿಷ್ಠ ಒಂದು ಬಾರಿಯಾದರೂ ಅದನ್ನು ಸ್ವತಃ ನಾವೇ ಪ್ರಯತ್ನಿಸಿ ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ. ಇದು ಪ್ರಯೋಗವು ಯಶಸ್ವಿಯಾಗುತ್ತದೆಯೇ ಎಂದು ತಿಳಿಯಲು ನಮಗೆ ಅನುವು ಮಾಡಿಕೊಡುತ್ತದೆ. ಈ ರೀತಿಯಲ್ಲಿ, ತರಗತಿಯ ಸಮಯದಲ್ಲಿ ವಿಷಯಗಳನ್ನು ಕಂಡುಹಿಡಿಯಲು ನಾವು ಹೆಚ್ಚು ಸಮಯವನ್ನು ವ್ಯರ್ಥ ಮಾಡಬೇಕಾಗಿಲ್ಲ. ಆದರೂ, ಕೆಲವು ಅಸಂಗತತೆಗಳನ್ನು ಇನ್ನೂ ಕಾಣಬಹುದು, ಮತ್ತು ಶಿಕ್ಷಕರು ಇವುಗಳ ಮೇಲೆ ಕೇಂದ್ರೀಕರಿಸುವ ಬದಲು ಹೆಚ್ಚು ಪ್ರಜ್ಞಾಪೂರ್ವಕವಾಗಿ ಪ್ರಕ್ರಿಯೆಯನ್ನು ಪುನರಾವರ್ತಿಸಬೇಕು. ಫಲಿತಾಂಶಗಳನ್ನು ಪಡೆಯಲು ಸಮಯ ತೆಗೆದುಕೊಳ್ಳಬಹುದು ಮತ್ತು ಅವರು ಈ ಪ್ರಕ್ರಿಯೆಯನ್ನು ಒಂದಕ್ಕಿಂತ ಹೆಚ್ಚು ಬಾರಿ ಪುನರಾವರ್ತಿಸಬೇಕಾಗಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಲು ಇದು ಮಕ್ಕಳಿಗೆ ಸಹಾಯ ಮಾಡುತ್ತದೆ.



ಚಿತ್ರ 5 : ವಿಜ್ಞಾನ ಪ್ರಯೋಗಗಳಲ್ಲಿ ನಿರತರಾಗಿರುವ ವಿದ್ಯಾರ್ಥಿಗಳು.

## ದೈನಂದಿನ ಜೀವನಕ್ಕೆ ವಿಜ್ಞಾನವನ್ನು ಜೋಡಿಸುವುದು

**1. ವಾಸ್ತವ ಪ್ರಪಂಚದಲ್ಲಿ ಪ್ರಸ್ತುತತೆ:** ಮಕ್ಕಳು ತಮ್ಮ ದೈನಂದಿನ ಜೀವನದಲ್ಲಿ ವೈಜ್ಞಾನಿಕ ಪರಿಕಲ್ಪನೆಗಳ ಪ್ರಾಯೋಗಿಕ ಅನ್ವಯವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿ. ಇದು ಬೈಸಿಕಲ್‌ಗಳ ಹಿಂದಿನ ಭೌತವಿಜ್ಞಾನ ಅಥವಾ ಅಡುಗೆಯ ಜೀವವಿಜ್ಞಾನವನ್ನು ವಿವರಿಸುವುದಾಗಿರಬಹುದು - ಅವು ವಿಜ್ಞಾನವನ್ನು ಅವರ ಜಗತ್ತಿಗೆ ಸಂಪರ್ಕಿಸುತ್ತದೆ ಮತ್ತು ಅದರಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡುತ್ತದೆ.

ಉದಾಹರಣೆಗೆ, ಆರನೇ ತರಗತಿಯಲ್ಲಿ 'ಆಮ್ಲ, ಕ್ಷಾರ ಮತ್ತು ಲವಣ' ಎಂಬ ಪಾಠವನ್ನು ಹೇಳಿಕೊಡಲಾಗುತ್ತಿತ್ತು. ಈ ವಿಷಯದ ಕುರಿತು ಹೆಚ್ಚಿನ ಚರ್ಚೆಗಳಿಗಾಗಿ, ನೈಜ-ಜೀವನದ ಆನ್ವಯಿಕತೆಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಲಾಗಿದೆ. ಇದನ್ನು ನಿಯಮಿತವಾಗಿ ಮಾಡುವುದರಿಂದ ಅವರೂ ಆ ನಿಟ್ಟಿನಲ್ಲಿ ಯೋಚಿಸತೊಡಗುತ್ತಾರೆ. ತಟಸ್ಥೀಕರಣದ (neutralisation) ಕುರಿತು ಚರ್ಚಿಸುತ್ತಿರುವಾಗ, ಒಬ್ಬ ವಿದ್ಯಾರ್ಥಿಯು ಜೇನುನೊಣ ಕುಟುಕಿದಾಗ (ಅದರಲ್ಲಿ ಫಾರ್ಮಿಕ್ ಆಮ್ಲವಿದೆ ಎಂದು ಅವನಿಗೆ ಮೊದಲೇ ತಿಳಿದಿತ್ತು) ಅವರು ಸಾಮಾನ್ಯವಾಗಿ ಕೆಲವು ನಿರ್ಮಾ ಪುಡಿಯನ್ನು (ಡಿಟರ್ಜೆಂಟ್ ಮತ್ತು ಕ್ಷಾರ) ಜೇನುನೊಣ ಕುಟುಕಿದ ಜಾಗಕ್ಕೆ ಹಚ್ಚುತ್ತಾರೆ ಎಂದು ನಮಗೆ ಉದಾಹರಣೆ ನೀಡಿದನು. ಅವನು ಮನೆಯಲ್ಲಿ ಆಗಾಗ್ಗೆ ನೋಡುತ್ತಿದ್ದುದನ್ನು ತನ್ನ ಕಲಿಕೆಯ

ಪ್ರಕ್ರಿಯೆಗೆ ಜೋಡಿಸಿದನು. ಇದು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕಾದ ಅತ್ಯಂತ ಪ್ರಮುಖ ಕೌಶಲವಾಗಿದೆ.

**2. ಬಾಹ್ಯ ಪರಿಶೋಧನೆ:** ಪ್ರಕೃತಿಯು ವೈಜ್ಞಾನಿಕ ಪವಾಡಗಳ ನಿಧಿಯಾಗಿದೆ. ಆದ್ದರಿಂದ ಸಸ್ಯಗಳು, ಪ್ರಾಣಿಗಳು, ಹವಾಮಾನ ಮಾದರಿಗಳು ಮತ್ತು ನೈಸರ್ಗಿಕ ವಿದ್ಯಮಾನಗಳನ್ನು ವೀಕ್ಷಿಸಲು ಹೊರಗೆ ಸಮಯ ಕಳೆಯಿರಿ. ವಿದ್ಯಾರ್ಥಿಗಳು ಅವರು ನೋಡುವ ಮತ್ತು ಅನುಭವಿಸುವ ಬಗ್ಗೆ ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸಿ.

ಆರನೇ ತರಗತಿಯ ವಿದ್ಯಾರ್ಥಿಗಳ ಪ್ರಕೃತಿ ಪ್ರವಾಸದಲ್ಲಿ, ನಾವು ಎಲೆಗಳು ಮತ್ತು ಹೂವುಗಳಲ್ಲಿ ವಿಭಿನ್ನ ಮಾದರಿಗಳನ್ನು ವೀಕ್ಷಿಸಲು ಯೋಜಿಸಿದೆವು. ಇದು ಎಲೆಗಳು ಮತ್ತು ಬೇರುಗಳ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿತು. ಅವರು ಹೂವುಗಳನ್ನು ನೋಡಿದಾಗ ಹೂವುಗಳನ್ನು ಗಂಡು ಮತ್ತು ಹೆಣ್ಣು ಭಾಗಗಳಾಗಿ ವರ್ಗೀಕರಿಸುವ ತರಗತಿಯಲ್ಲಿ ಕಲಿತ ಪರಿಕಲ್ಪನೆಯನ್ನು ನೇರವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ಇದು ಅವರ ತಿಳುವಳಿಕೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡಿತು ಮತ್ತು ಮಾಹಿತಿಯು ಅವರಿಗೆ ಹೆಚ್ಚು ದೃಢವಾಯಿತು.

> **ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಲು ಸಮಯ ತೆಗೆದುಕೊಳ್ಳಿ, ಮತ್ತು ನಿಮಗೆ ಉತ್ತರ ತಿಳಿದಿಲ್ಲದಿದ್ದರೆ, ಅದನ್ನು ಕಂಡುಹಿಡಿಯಲು ಅವರೊಂದಿಗೆ ಕೈಜೋಡಿಸಿ. ಹಾಗೆ ಮಾಡುವುದರಿಂದ ಕುತೂಹಲವು ಜೀವನ ಪರ್ಯಂತದ ಹುಡುಕಾಟವಾಗಿದೆ ಎಂಬುದನ್ನು ಅವರಿಗೆ ತೋರಿಸುತ್ತದೆ. ಅದೇ ಸಮಯದಲ್ಲಿ, ಇದು ತರಗತಿಯಲ್ಲಿ ಒಳಗೊಳ್ಳುವಿಕೆಯ ವಾತಾವರಣ ನಿರ್ಮಿಸುವುದರಿಂದ ವಿದ್ಯಾರ್ಥಿಗಳಿಗೆ ಮುಕ್ತವಾಗಿ ಮಾತನಾಡಲು ಅನುವು ಮಾಡಿಕೊಡುವ ಸಂಸ್ಕೃತಿಯನ್ನು ಸಹ ಸೃಷ್ಟಿಸುತ್ತದೆ.**

## ರೋಲ್ ಮಾಡೆಲ್‌ಗಳು ಮತ್ತು ಮಾರ್ಗದರ್ಶಕರು

ಪ್ರಪಂಚದ ಬಗ್ಗೆ ನಮ್ಮ ತಿಳುವಳಿಕೆಯನ್ನು ರೂಪಿಸಿದ ವಿಜ್ಞಾನಿಗಳು, ಸಂಶೋಧಕರು ಮತ್ತು ಪರಿಶೋಧಕರನ್ನು ಮಕ್ಕಳಿಗೆ ಪರಿಚಯಿಸಿ. ರೋಲ್ ಮಾಡೆಲ್‌ಗಳ ಜೀವನ ಮತ್ತು ಸಾಧನೆಗಳ ಬಗ್ಗೆ ಓದುವುದು ಮಕ್ಕಳಿಗೆ ಸ್ಫೂರ್ತಿ ನೀಡುತ್ತದೆ ಮತ್ತು ಅದು ಅವರ ತಿಳುವಳಿಕೆಗೆ ಅರ್ಥಪೂರ್ಣ ಕೊಡುಗೆಯನ್ನು ನೀಡುತ್ತದೆ.

ವಿದ್ಯಾರ್ಥಿಗಳು ಯಾವಾಗಲೂ ಅಂತಹ ಉದಾಹರಣೆಗಳಿಗೆ ತೆರೆದುಕೊಳ್ಳಬೇಕು. ಇದರಿಂದ ಅವರು ತಮ್ಮ ಸಾಮರ್ಥ್ಯಗಳನ್ನು ಮೀರಿ ಶ್ರಮಿಸಲು ಪ್ರೇರೇಪಿಸಿದಂತಾಗುತ್ತದೆ. ಚಂದ್ರಯಾನವನ್ನು ಪ್ರಾರಂಭಿಸಿದಾಗ, ಶಾಲಾ ವಿದ್ಯಾರ್ಥಿಗಳಿಗೆ ಅದರ ಸಂಪೂರ್ಣ ಪ್ರಕ್ರಿಯೆ ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಯಿತು. ನಾವೆಲ್ಲರೂ ಒಟ್ಟಾಗಿ ಸಂಪೂರ್ಣ ಉಡಾವಣೆಯನ್ನು ನೇರಪ್ರಸಾರದಲ್ಲಿ ವೀಕ್ಷಿಸಿದೆವು ಮತ್ತು ಎಲ್ಲ ವಿಜ್ಞಾನಿಗಳೂ ಒಟ್ಟಿಗೆ ಸೇರಿ ಸಂಭ್ರಮಿಸುತ್ತಿರುವುದನ್ನು ನೋಡಿದೆವು.

ಎಂಟನೇ ತರಗತಿಯ ಲೈಬ್ರರಿ ಅವಧಿಯಲ್ಲಿ, ನಾವು ಗ್ರಹಾಂ ಬೆಲ್ ಮತ್ತು ಥಾಮಸ್ ಅಲ್ವಾ ಎಡಿಸನ್ ಮತ್ತು ಅವರ ಜೀವನದ ಪ್ರಯಾಣದ ವೀಡಿಯೋಗಳನ್ನು ವೀಕ್ಷಿಸಿದ್ದೇವೆ. ವಿವಿಧ ಪ್ರಕ್ರಿಯೆಗಳ ಮೂಲಕ ಆವಿಷ್ಕಾರಗಳು ಹೇಗೆ ಬಂದವು ಎಂಬುದನ್ನು ತಿಳಿಯಲು ಇದು ವಿದ್ಯಾರ್ಥಿಗಳಿಗೆ ಸಹಾಯ ಮಾಡಿತು. ಅಲ್ಲದೇ, ತಮ್ಮ ಸುತ್ತಲಿನ ಹಲವು ಸಮಸ್ಯೆಗಳಿಗೆ ಸರಳ ಪರಿಹಾರಗಳಿವೆ ಎಂದುದನ್ನು ಕಂಡುಕೊಂಡರು.

## ಕುತೂಹಲವನ್ನು ಸಂಭ್ರಮಿಸುವುದು

ಮಗುವಿನ ಕುತೂಹಲದಿಂದಲೇ ಹೊರಹೊಮ್ಮಿದ ಸಾಧನೆಗಳನ್ನು ಗುರುತಿಸಿ ಮತ್ತು ಆಚರಿಸಿ. ಅದು ಯಶಸ್ವಿ ಪ್ರಯೋಗವಾಗಲಿ, ಹೊಸ ಪ್ರಶ್ನೆಯಾಗಲಿ ಅಥವಾ ಅವರು ಅರ್ಥ ಮಾಡಿಕೊಂಡ ಪರಿಕಲ್ಪನೆಯಾಗಲಿ; ಧನಾತ್ಮಕ ಬಲವರ್ಧನೆಯು ವಿಜ್ಞಾನದಲ್ಲಿ ಅವರ ಆಸಕ್ತಿಯನ್ನು ಬಲಪಡಿಸುತ್ತದೆ. ವಿದ್ಯಾರ್ಥಿಗಳು ಕೇಳುವ ಒಳ್ಳೆಯ ಪ್ರಶ್ನೆಗಳನ್ನು ಅಥವಾ ಹೊಸದನ್ನು ಮಾಡಲು ಅವರ ಪ್ರಯತ್ನಗಳನ್ನು ಶಿಕ್ಷಕರು ಯಾವಾಗಲೂ ಪ್ರಶಂಸಿಸಬೇಕು. ಇದು ಅವರಿಗೆ ಸ್ಫೂರ್ತಿ ನೀಡುತ್ತದೆ. ತಮ್ಮ ಬಗ್ಗೆ ಗಮನ ನೀಡಲಾಗುತ್ತಿದೆ ಎಂದು ಅವರು ಭಾವಿಸುತ್ತಾರೆ ಮತ್ತು ಇದರಿಂದ ವಿಭಿನ್ನವಾಗಿ ಯೋಚಿಸುವ ಧೈರ್ಯವನ್ನು ಬೆಳೆಸಿಕೊಳ್ಳುತ್ತಾರೆ. ಉದಾಹರಣೆಗೆ, ತರಗತಿಯಲ್ಲಿ ನೀರಿನ ಮೂಲಕ ವಿದ್ಯುತ್ ವಾಹಕತೆಯನ್ನು ಪ್ರದರ್ಶಿಸಿದಾಗ, ಒಬ್ಬ ವಿದ್ಯಾರ್ಥಿ ತನ್ನ ಸುತ್ತಲಿನ ವಸ್ತುಗಳೊಂದಿಗೆ ಸ್ವತಃ ಪ್ರಯೋಗವನ್ನು ಮಾಡಲು ಪ್ರಯತ್ನಿಸಿದನು. ಪ್ರಯೋಗವು ಮೊದಲ ಬಾರಿ ವಿಫಲವಾದರೂ, ಶಿಕ್ಷಕರ ನಿರಂತರ ಪ್ರೋತ್ಸಾಹವು ಅವನನ್ನು ಮತ್ತೆ ಪ್ರಯತ್ನಿಸಲು ಪ್ರೇರೇಪಿಸಿತು ಮತ್ತು ಅವನು ಹತ್ತಿರದ ಸಂಪನ್ಮೂಲಗಳೊಂದಿಗೆ ಪ್ರಯೋಗವನ್ನು ಪುನರಾವರ್ತಿಸಿದನು.

ಜೀವಕೋಶಗಳು ಮತ್ತು ಅಂಗಾಂಶಗಳ ಬಗ್ಗೆ ಕಲಿಯುವಾಗ, ವಿದ್ಯಾರ್ಥಿಗಳಿಗೆ ಈರುಳ್ಳಿ ಕೋಶಗಳನ್ನು ತೋರಿಸಲಾಯಿತು. ಸ್ಲೈಡ್ ಅನ್ನು ಹೇಗೆ ಹೊಂದಿಸುವುದು ಎಂದು ಅವರಿಗೆ ತೋರಿಸಲಾಯಿತು. ವಿದ್ಯಾರ್ಥಿಗಳ ಗುಂಪೊಂದು ಈರುಳ್ಳಿ ಸಿಪ್ಪೆಗಳನ್ನು ಹೊಂದಿರುವ ಉಪಯೋಗಕ್ಕೆ ಬಾರದ ಸ್ಲೈಡ್ ಅನ್ನು ಕಂಡುಹಿಡಿದರು ಮತ್ತು ಅವರು ತಕ್ಷಣ ಶಿಕ್ಷಕರು ತೋರಿಸಿದಂತೆಯೇ ಪ್ರಯೋಗವನ್ನು ಮತ್ತೆ ಮಾಡಲು ಪ್ರಯತ್ನಿಸಿದರು. ಅದು ಏಕೆ ಕೆಲಸ ಮಾಡುತ್ತಿಲ್ಲ ಎಂದು ಅವರು ಕುತೂಹಲಗೊಂಡರು ಮತ್ತು ಅದು ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿತು.



**ಅಮೃತಾ ಮಾಸಿಹ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸದಸ್ಯರು. ಅವರು ಮಧ್ಯ ಪ್ರದೇಶದ ಸೆಹೋರ್ ಬ್ಲಾಕ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು 2000ರಲ್ಲಿ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ನಂತರ ಛತ್ತೀಸ್‌ಘಢದ ಧಮ್‌ತರಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕರಾಗಿ ಸೇರ್ಪಡೆಗೊಂಡರು. ಅವರು ಶಿಕ್ಷಕರು ಮತ್ತು ಮಕ್ಕಳೊಂದಿಗೆ ಕೆಲಸ ಮಾಡಲು ಇಷ್ಟಪಡುತ್ತಾರೆ.

**ಸಂಪರ್ಕ:** amrita.masih@azimpremjifoundation.org

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಗಣಿತದ ಕುರಿತು ಬಹು-ಸಂವೇದಿ ದೃಷ್ಟಿಕೋನ

ಸೋನಿಯಾ ಕುಂದು

**ಈ ಲೇಖನವು ಅನ್ವೇಷಣೆಯಲ್ಲಿ ಮುಕ್ತ ಆಟದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಕಥೆ ಹೇಳುವಿಕೆ ಮತ್ತು ಸಂವಾದಾತ್ಮಕ ಆಟಗಳ ಮೂಲಕ ಬುನಾದಿ ಹಂತದ ಗಣಿತ ಪರಿಕಲ್ಪನೆಗಳನ್ನು ಹೇಗೆ ಪರಿಣಾಮಕಾರಿಯಾಗಿ ಕಲಿಸಬಹುದು ಎಂಬುದನ್ನು ಈ ಲೇಖನದಲ್ಲಿ ನೋಡಬಹುದು. ಮರದ ಬ್ಲಾಕ್‌ಗಳನ್ನು ಜೋಡಿಸುವುದು ಮತ್ತು ಕಡ್ಡಿಗಳನ್ನು ಕಟ್ಟುವಂತಹ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಮಕ್ಕಳು ಅಗತ್ಯ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತಾರೆ. ಅವರು ಸಂಖ್ಯೆಗಳ ಅರಿವು, ಸ್ಥಾನ ಬೆಲೆ ಮತ್ತು ಸಮಸ್ಯೆ-ಪರಿಹಾರವನ್ನು ಆಟವಾಡುತ್ತಲೇ ಕಲಿಯುತ್ತಾರೆ.**

ಒಂದು ದಿನ, ಪೂರ್ವ ಪ್ರಾಥಮಿಕ ತರಗತಿಯ ಇಬ್ಬರು ವಿದ್ಯಾರ್ಥಿಗಳು ಮರದ ಬ್ಲಾಕ್‌ಗಳೊಂದಿಗೆ ಆಟವಾಡುತ್ತಿದ್ದರು. ಸ್ವಲ್ಪ ಸಮಯದ ನಂತರ ಅವರು ಬ್ಲಾಕ್‌ಗಳೊಂದಿಗೆ ಅರಮನೆಯನ್ನು ನಿರ್ಮಿಸುತ್ತಿರುವುದನ್ನು ನಾನು ನೋಡಿದೆ. ಆ ಅರಮನೆಯನ್ನು ಕಟ್ಟುವಾಗ ಗೋಡೆಗಳು ಸಮರೂಪದಲ್ಲಿರುವುದನ್ನು ಸರಿಯಾಗಿ ನೋಡಿಕೊಂಡಿದ್ದರು. ಆ ಆಟದ ಸಮಯದಲ್ಲಿ ಅವರ ಸಂಭಾಷಣೆಯು ಯಾವುದೇ ಪರಿಣಿತ ಕೆಲಸಗಾರರಿಗಿಂತ ಕಡಿಮೆಯಿರಲಿಲ್ಲ.

ಮಗು 1: "ಬನ್ನಿ, ಈಗ ಬಾಗಿಲು ಮಾಡೋಣ."

ಬಾಗಿಲು ಮಾಡಲು, ವಿದ್ಯಾರ್ಥಿಯು ಎರಡು ಬದಿಗಳಲ್ಲಿ ಲಂಬವಾಗಿ ಮೂರು ಬ್ಲಾಕ್ ಗಳನ್ನು ಇರಿಸಿದರು. ಇವು 2:1 ರ ಅನುಪಾತದಲ್ಲಿದ್ದವು. ಇದನ್ನು ನೋಡಿದ ಇನ್ನೊಂದು ಮಗು, "ಅದು ಚೆನ್ನಾಗಿ ಕಾಣುತ್ತಿಲ್ಲ, ಇನ್ನೊಂದು ಬ್ಲಾಕ್ ಇಡು ಇದರಲ್ಲಿ" ಎಂದಿತು. ಅವರು ಅದನ್ನು ಸಮಗೊಳಿಸಲು ಮತ್ತೊಂದು ಬ್ಲಾಕ್ ಅನ್ನು ಸೇರಿಸಿದರು. ನಂತರ, ಅವರು ಅದರ ಮೇಲೆ ಛಾವಣಿಯನ್ನು ನಿರ್ಮಿಸಲು ನಿರ್ಧರಿಸಿದರು ಮತ್ತು ಆ ಲಂಬವಾದ ಬ್ಲಾಕ್ ಗಳ ಮೇಲೆ ಅಡ್ಡಲಾಗಿ ಮತ್ತೊಂದು ಬ್ಲಾಕ್ ಅನ್ನು ಇರಿಸಿದರು.




ಚಿತ್ರ 1: ವಿದ್ಯಾರ್ಥಿಗಳು ಬಂಡಲ್‌ಗಳನ್ನು ಮಾಡಿ, ಇಪ್ಪತ್ತರವರೆಗೆ ಎಣಿಸುತ್ತಾರೆ.

ಈ ಆಟವು ನನ್ನ ವಿದ್ಯಾರ್ಥಿಗಳು ನಂಬರ್ ಬಾಂಡ್[1] ಜೊತೆಗೆ ಆಡುವ ಬಗ್ಗೆ ನನ್ನಲ್ಲಿ ಅರಿವು ಮೂಡಿಸಿತು ಮತ್ತು ನಂತರ ನಾನು ಗಣಿತವನ್ನು ಬೋಧಿಸಲು ಮರದ ಬ್ಲಾಕ್‌ಗಳನ್ನು ಬಳಸಲು ಯೋಚಿಸಿದೆ. ನನ್ನ ತರಗತಿಯಲ್ಲಿ 20 ವಿದ್ಯಾರ್ಥಿಗಳಿದ್ದು, ಅವರೆಲ್ಲರೂ 5ರಿಂದ 6 ವರ್ಷದೊಳಗಿನವರು. ಈ ವಯಸ್ಸಿನಲ್ಲಿ, ವಿದ್ಯಾರ್ಥಿಗಳು ಸಾಕಷ್ಟು ಕೆಲಸಗಳನ್ನು ತಮ್ಮಷ್ಟಕ್ಕೆ ತಾವು ಮಾಡಲು ಶಕ್ತರಾಗಿರುತ್ತಾರೆ. ಹಾಗಾಗಿ ಈ ವಯಸ್ಸಿನಲ್ಲಿ ಮುಖ್ಯವಾಗಿ ಮಕ್ಕಳು ತಮ್ಮ ಸುತ್ತಲಿನ ವಸ್ತುಗಳೊಂದಿಗೆ ತೊಡಗಿಸಿಕೊಳ್ಳುತ್ತಾರೆ ಹಾಗೂ ತಮ್ಮ ಆಟದಲ್ಲಿ ಅವನ್ನು ಬಳಸಿಕೊಳ್ಳುತ್ತಾರೆ.

ಬುನಾದಿ ಹಂತದಲ್ಲಿ, (Foundational Stage) ಮಕ್ಕಳು ಗಣಿತದ ಪರಿಕಲ್ಪನೆಗಳನ್ನು 'ಅಧ್ಯಯನ' ಮಾಡುವುದಕ್ಕಿಂತ ಅದರೊಂದಿಗೆ ಆಟವಾಡುವುದು ಹೆಚ್ಚು ಮುಖ್ಯವಾಗಿದೆ. ವಿಷಯವು ಸಂಪೂರ್ಣವಾಗಿ 'ಆಟದ ಮೂಲಕ ಕಲಿಕೆ' ವಿಧಾನವನ್ನು (play-way method) ಆಧರಿಸಿರಬೇಕು, ಇಲ್ಲದಿದ್ದರೆ ಮಕ್ಕಳು ನೀರಸವಾದ ಶಿಕ್ಷಣಕ್ಕೆ ಬಲಿಯಾಗುತ್ತಾರೆ ಮತ್ತು ಎಂದಿಗೂ ಅದರಿಂದ ಹೊರ ಬರಲು ಸಾಧ್ಯವಾಗುವುದಿಲ್ಲ.

ವಿದ್ಯಾರ್ಥಿಗಳು ತಾವೇ ಸ್ವತಃ ಆಡುವಾಗ, ಅವರ ಅನುಭವಗಳನ್ನು ಸಂಯೋಜಿಸಲು ನನಗೆ ಅನೇಕ ಅವಕಾಶಗಳಿವೆ. ಏಕೆಂದರೆ ಅಂತಹ ಆಟಗಳಲ್ಲಿ ಅವರು ಚಟುವಟಿಕೆಗಳು, ಆಟದ ಜೊತೆಗಾರರು, ವಸ್ತುಗಳು ಮತ್ತು ಆಟದ ವಿಧಾನಗಳನ್ನು ಆಯ್ಕೆ ಮಾಡಲು ಸ್ವತಂತ್ರರಾಗಿರುತ್ತಾರೆ. ವಾಸ್ತವವಾಗಿ ಇದು ತಮ್ಮ ಇಷ್ಟದ ಮತ್ತು ಆಸಕ್ತಿಗಳ ಆಧಾರದ ಮೇಲೆ ಆಟಗಳನ್ನು ಆಯ್ಕೆ ಮಾಡಲು, ರಚಿಸಲು ಮತ್ತು ಸಂಘಟಿಸಲು ಮಕ್ಕಳನ್ನು ಶಕ್ತಗೊಳಿಸುತ್ತದೆ.

ವಿದ್ಯಾರ್ಥಿಗಳಿಗೆ ತಮ್ಮ ಇಚ್ಛೆಯಂತೆ ಆಟವಾಡಲು ಅನುಮತಿಸಿದಾಗ, ಅವರು ವಸ್ತುಗಳನ್ನು ಎಣಿಸುತ್ತಾರೆ, ಕೆಲವು ಮಾನದಂಡಗಳ ಆಧಾರದ ಮೇಲೆ ಅವುಗಳನ್ನು ಪ್ರತ್ಯೇಕಿಸುತ್ತಾರೆ ಮತ್ತು ಗುಂಪುಗಳನ್ನು ರಚಿಸುತ್ತಾರೆ ಮತ್ತು ವಸ್ತುಗಳಿಂದ ಮಾದರಿಗಳನ್ನು ಸಹ ಮಾಡುತ್ತಾರೆ ಎಂಬುದನ್ನು ನಾನು ಆಗಾಗ್ಗೆ ಕಂಡುಕೊಂಡಿದ್ದೇನೆ.

ಅಂತೆಯೇ, ಆಡುವಾಗ, ಅವರು ವಿವಿಧ ವಸ್ತುಗಳ ಸಹಾಯದಿಂದ ಎಣಿಸುವ ವಿವಿಧ ವಿಧಾನಗಳೊಂದಿಗೆ ಪರಿಚಿತರಾಗುತ್ತಾರೆ. ಹಾಗಾಗಿ 10ಕ್ಕೂ ಮೀರಿದ ಸಂಖ್ಯೆಗಳನ್ನು ಕಲ್ಪಿಸಿಕೊಳ್ಳಲು, ಸ್ಥಾನಮೌಲ್ಯದ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಮತ್ತು ಗುಂಪುಗಳಲ್ಲಿ ಎಣಿಸುವಂತಹ ಚಟುವಟಿಕೆಗಳನ್ನು ಮಾಡಲು ವಿದ್ಯಾರ್ಥಿಗಳೊಂದಿಗೆ ನಾನು ಈ ಕೆಳಗಿನ ಆಟವನ್ನು ಬಳಸಿದ್ದೇನೆ.

## ಕಥೆಗಳು ಮತ್ತು ಘನ ವಸ್ತುಗಳನ್ನು ಒಟ್ಟುಗೂಡಿಸಿಕೊಂಡು ಕೆಲಸ ಮಾಡುವುದು

ಬಳಸಿದ ಸಾಮಗ್ರಿಗಳು: ಮರದ ಬ್ಲಾಕ್‌ಗಳು, ವಿಡಿಯೊ (ಬಂಡಲ್‌ಗಳನ್ನು ಎಣಿಸುವುದರ ಕುರಿತಾದ ಕಥೆ), ಮತ್ತು ರಬ್ಬರ್ ಬ್ಯಾಂಡ್‌ಗಳು

**ಉದ್ದೇಶ:**

- ಸ್ಥಾನಬೆಲೆಯನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುವುದು
- ಸಂಖ್ಯೆಗಳನ್ನು ಹೋಲಿಸುವುದು
- ಸಂಖ್ಯೆಗಳನ್ನು ಘನ ಮತ್ತು ಅಮೂರ್ತ ರೂಪದಲ್ಲಿ ಪ್ರಸ್ತುತ ಪಡಿಸುವುದು

ವಿದ್ಯಾರ್ಥಿಗಳು ವಿಭಿನ್ನ ಅನುಭವಗಳಲ್ಲಿ ತೊಡಗಿಸಿಕೊಳ್ಳಲು ನಾನು ಅನೇಕ ಹಂತಗಳಲ್ಲಿ ವಿಭಿನ್ನ ಚಟುವಟಿಕೆಗಳನ್ನು ಯೋಜಿಸಿದೆ. ಸಂಖ್ಯೆಯ ತಿಳಿವಳಿಕೆ ಮತ್ತು ಹತ್ತರ ಸಂಖ್ಯೆಯ ಆಧಾರ ಪದ್ಧತಿಯಲ್ಲಿ ಸ್ಥಾನಮೌಲ್ಯದ ಪರಿಕಲ್ಪನೆಯನ್ನು ಬೆಳೆಸುವುದು (ತಿಳುವಳಿಕೆ ಮೂಡಿಸುವುದು) ನಮ್ಮ ಉದ್ದೇಶವಾಗಿತ್ತು 10 **ರಿಂದ ಮುಂದಿನ ಸಂಖ್ಯೆಗಳ ತಿಳಿವಳಿಕೆ ಮುಂದೆ ಬರುವ** ಗಣಿತದ ಪರಿಕಲ್ಪನೆಗಳು ಮತ್ತು ಮೂಲಭೂತ ಕ್ರಮಾವಳಿಗಳನ್ನು ಅರ್ಥ ಮಾಡಿಕೊಳ್ಳಲು ಮಹತ್ವದ್ದಾಗಿದೆ. ಆದ್ದರಿಂದ ಮಕ್ಕಳು 10ರಿಂದ ಮುಂದಿನ ಸಂಖ್ಯೆಗಳ ಸಹಜ ಮತ್ತು ಬಲವಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳಲು ನಾವು ವಿವಿಧ ವಿಧಾನಗಳನ್ನು ಬಳಸುವುದು ಅತ್ಯಗತ್ಯ.

> **ಮಕ್ಕಳಿಗೆ ಮುಕ್ತ ಆಟದ ಸಮಯ ನೀಡಿದಾಗ, ಅವರು ಕೆಲವು ಮಾನದಂಡಗಳ ಆಧಾರದಲ್ಲಿ, ಗುಂಪುಗಳನ್ನು ಕಟ್ಟಿ, ವಸ್ತುಗಳಿಂದ ಮಾದರಿಗಳನ್ನು ರಚಿಸುವುದು ಇತ್ಯಾದಿಗಳ ಮೂಲಕ ವಸ್ತುಗಳ ಎಣಿಕೆ, ಅದರ ವಿಭಾಗೀಕರಣವನ್ನು ಮಾಡುತ್ತಾರೆ**

ಆರಂಭದಲ್ಲಿ ನಾನು ನೀಡಿದ ಉದಾಹರಣೆಯು ಮುಕ್ತ ಆಟದ ಸಮಯದಲ್ಲಿ ನನ್ನ ವಿದ್ಯಾರ್ಥಿಗಳು ಗಣಿತದ ಬಗ್ಗೆ ಮಾತನಾಡುವುದನ್ನು ತೋರಿಸುತ್ತದೆ. ಇದರಿಂದ 10ಕ್ಕೂ ಮೀರಿದ ಎಣಿಕೆಯನ್ನು ಕಲಿಸಲು ಅದೇ ಸಂಪನ್ಮೂಲವನ್ನು ಬಳಸುವ ಆಲೋಚನೆ ನನಗೆ ಬಂತು. ಮರದ ಬ್ಲಾಕ್‌ಗಳ ಜೊತೆಗೆ ಅವರ ಆಟಕ್ಕೆ ಕೆಲವು ರಬ್ಬರ್ ಬ್ಯಾಂಡ್‌ಗಳನ್ನು ಸೇರಿಸಲು ನಾನು ನಿರ್ಧರಿಸಿದೆ. ನನ್ನ ನಿರೀಕ್ಷೆಯಂತೆ ಮಕ್ಕಳು ಆಟವಾಡಲು ಮತ್ತು ಮೋಜು ಮಾಡಲು ಪ್ರಾರಂಭಿಸಿದರು. ಅವರು ವಿವಿಧ ಆಟಗಳನ್ನು ಆಡುತ್ತಿದ್ದರು ಮತ್ತು ಮರದ ಬ್ಲಾಕ್ ಗಳನ್ನು ಬಳಸಿ ಕಟ್ಟಡಗಳು, ರಸ್ತೆಗಳು, ಸೇತುವೆಗಳು ಇತ್ಯಾದಿಗಳನ್ನು ನಿರ್ಮಿಸಿದರು. ಕೆಲವು ವಿದ್ಯಾರ್ಥಿಗಳು ರಬ್ಬರ್ ಬ್ಯಾಂಡ್‌ಗಳ ಸಹಾಯದಿಂದ ಬಂಡಲ್‌ಗಳನ್ನು ಸಹ ಮಾಡಿದರು. ಮಕ್ಕಳಿಗೆ ಯಾವುದೇ ಸೂಚನೆಗಳನ್ನು ನೀಡಿರಲಿಲ್ಲ. ಈ ತಮಾಷೆಯ ನಾಟಕದ ನಂತರ ನಾವು ನಮ್ಮ ದಿನಚರಿಗೆ ಮರಳಿದೆವು ಮತ್ತು ಅವರು ಮರದ ಬ್ಲಾಕ್‌ಗಳಿಂದ ತಯಾರಿಸಿದ್ದನ್ನು ತರಲು ನಾನು ಅವರನ್ನು ಹೇಳಿದೆ. ವಿದ್ಯಾರ್ಥಿಗಳು ಯಾವಾಗಲೂ ತಮ್ಮ ಕೆಲಸವನ್ನು ತೋರಿಸಲು ಉತ್ಸುಕರಾಗಿರುತ್ತಾರೆ, ಮತ್ತು ಈ ಉತ್ಸಾಹವನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಮುಂದೆ ಕೆಲಸವನ್ನು ಪ್ರಾರಂಭಿಸಿದೆ.

ಮುಂದಿನ ಚಟುವಟಿಕೆ- ಕಥೆ ಹೇಳುವುದು. ನಾನು ಅವರಿಗೆ 'ಮ್ಯಾಜಿಕ್ ರೋಪ್' ಮಾಯಾ ಹಗ್ಗ ಎಂಬ ಕಥೆ ಹೇಳಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಎಣಿಸಲು ತಿಳಿದಿದ್ದರೂ ಎಣಿಸಿದ ವಸ್ತುಗಳ ಸಂಖ್ಯೆಯನ್ನು



ಚಿತ್ರ 2: ಸಂಖ್ಯೆಗಳನ್ನು ದೃಶ್ಯೀಕರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು. ಇದು ಅವರಿಗೆ ವಸ್ತುಗಳ ಪ್ರಮಾಣವನ್ನು ಎಣಿಸದೇ, ನಿಖರವಾಗಿ ಊಹಿಸಲು ನೆರವಾಗುತ್ತದೆ (ವಸ್ತುಗಳ ಸಂಖ್ಯೆ ಚಿಕ್ಕದಿದ್ದಾಗ).

ಮರೆತುಬಿಡುತ್ತಿದ್ದ ಭೋಲಾ ಎಂಬ ಹುಡುಗನ ಕಥೆ ಇದು. ಅವುಗಳನ್ನು ಹೇಗೆ ಬರೆಯಬೇಕೆಂದು ಕೂಡಾ ಅವನಿಗೆ ತಿಳಿದಿರಲಿಲ್ಲ. ಕಥೆಯ ಕೊನೆಯಲ್ಲಿ ಅವನು 10ರ ಕಟ್ಟುಗಳನ್ನು ಮಾಡುವ ಮೂಲಕ ಎಣಿಸಲು ಸುಲಭವಾದ ಮಾರ್ಗವನ್ನು ಕಂಡುಕೊಳ್ಳುತ್ತಾನೆ. ಅದು ಅವನ ಕೆಲಸವನ್ನು ಸುಲಭಗೊಳಿಸುತ್ತದೆ. ಕಥೆಯ ಸಮಯದಲ್ಲಿ, ಈ ಕೆಳಗಿನ ಕೆಲವು ಪ್ರಶ್ನೆಗಳನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸಲಾಯಿತು:

ಪ್ರಶ್ನೆ: ಭೋಲಾ ಮರೆತರೆ ಏನು ಮಾಡಬೇಕು?

ಮಕ್ಕಳು: ಅವನು ಇದನ್ನು ಬರೆಯಬಹುದು.

ಪ್ರಶ್ನೆ: ಅವನು ಅದನ್ನು ಏಕೆ ಬರೆಯಲಿಲ್ಲ ಎಂದು ನೀವು ಭಾವಿಸುತ್ತೀರಿ?

ಮಕ್ಕಳು: ಬಹುಶಃ ಅವನಿಗೆ ಬರೆಯಲು ತಿಳಿದಿಲ್ಲ ಅಥವಾ ಅವನ ಬಳಿ ಪೆನ್ಸಿಲ್ ಇಲ್ಲ; ಅವನು ಕಾಡಿನಲ್ಲಿ ವಾಸಿಸುತ್ತಿದ್ದಾನೆ. ಹಾಗಾಗಿ ಅವನ ಬಳಿ ಬರೆಯಲು ನೋಟ್‌ಬುಕ್ ಇಲ್ಲ; ಬಹುಶಃ ಅವನ ಶಿಕ್ಷಕರು 10 ರವರೆಗಿನ ಸಂಖ್ಯೆಗಳನ್ನು ಬರೆಯಲು ಕಲಿಸಲಿಲ್ಲ.

ಕಥೆಗಳು ವಿದ್ಯಾರ್ಥಿಗಳ ಕಲ್ಪನೆಯನ್ನು ಪ್ರೇರೇಪಿಸುತ್ತವೆ ಮತ್ತು ಉತ್ತೇಜಿಸುತ್ತವೆ. ಇದು ವಿವಿಧ ವಿಷಯಗಳೊಂದಿಗೆ ಸಂಪರ್ಕ ಸಾಧಿಸಲು ಅವರನ್ನು ಸಮರ್ಥರನ್ನಾಗಿಸುತ್ತದೆ. ಭಾಷೆಯಲ್ಲಿ ಮಕ್ಕಳ ಅನುಭವಗಳು ಮತ್ತು ಅವರ ಸಂದರ್ಭಕ್ಕೆ ಸ್ಥಾನ ನೀಡುವುದರಿಂದ, ವಿದ್ಯಾರ್ಥಿಗಳು ಅದರ ಅರ್ಥ ಮತ್ತು ಸಂದರ್ಭವನ್ನು ಹೆಚ್ಚು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಏಕೆಂದರೆ ಅವರು ಅದರೊಂದಿಗೆ ಪರಿಚಿತರಾಗಿರುತ್ತಾರೆ. ಅದಕ್ಕಾಗಿಯೇ ಕಥೆಯನ್ನು ಹೇಳುವಲ್ಲಿ ಚಿತ್ರಗಳು ಮತ್ತು ರೇಖಾಚಿತ್ರಗಳ ಸಹಾಯವನ್ನು ತೆಗೆದುಕೊಳ್ಳಲಾಗುತ್ತದೆ. ಮುಂದೆ, ಭೋಲಾ ಮಾಡಿದಂತೆಯೇ ಬ್ಲಾಕ್‌ಗಳನ್ನು ಬಳಸಿ ಕಟ್ಟುಗಳನ್ನು ಮಾಡಲು ನಾನು ಮಕ್ಕಳನ್ನು ಕೇಳಿದೆ. ಈ ಚಟುವಟಿಕೆಯನ್ನು ಮಾಡುವಾಗ ಮಕ್ಕಳು ಎಣಿಸುತ್ತಿದ್ದರು ಮತ್ತು ಗುಂಪುಗಳನ್ನು ರಚಿಸುತ್ತಿದ್ದರು. ಅವರು ಗುಂಪುಗಳನ್ನು ಮಾಡುವಾಗ ಎರಡೆರಡು ಬಾರಿ ಎಣಿಸಿ ಪರಿಶೀಲಿಸುತ್ತಿದ್ದರು ಹಾಗೂ ಬ್ಲಾಕ್‌ಗಳು ಸರಿಯಾದ ಜೋಡಣೆ ತಲುಪುವವರೆಗೂ ನಿಧಾನವಾಗಿ

ಮತ್ತೆ ಪ್ರಾರಂಭಿಸುತ್ತಿದ್ದರು. ಬ್ಲಾಕ್‌ಗಳನ್ನು ಗುಂಪಾಗಿ ವಿಂಗಡಿಸುವಾಗ ಅವರು ಅವುಗಳನ್ನು ವಿವಿಧ ಮಾದರಿಗಳಲ್ಲಿ ಜೋಡಿಸಿದರು. ಹಾಗೆ- 5 + 5 (ಪ್ರತಿ ಸಾಲಿನಲ್ಲಿ 5 ಬ್ಲಾಕ್‌ಗಳು), 3+3+3+1, ಇತ್ಯಾದಿ.

ಇದು ನನ್ನ ಯೋಜನೆಯಾಗಿರಲಿಲ್ಲ. ಆದರೆ ಅವರ ಸಮಸ್ಯೆ ಪರಿಹರಿಸುವ ಕೌಶಲವು ನನ್ನ ಬೋಧನೆಗೆ ಮತ್ತೊಂದು ಆಯಾಮವನ್ನು ಸೇರಿಸಿತು. ಇದು ಎಣಿಕೆಗಾಗಿ ವಸ್ತುಗಳನ್ನು ಉಪವಿಭಾಗ (subitizing) ಮಾಡುವುದಕ್ಕೆ ಸಂಬಂಧಿಸಿದೆ. **ಉಪವಿಭಾಗ** ಎನ್ನುವುದು ಒಂದು ಸಣ್ಣ ಗುಂಪಿನ ವಸ್ತುಗಳನ್ನು ನೋಡಿದ ಕೂಡಲೇ ಆ ಗುಂಪಿನಲ್ಲಿ ಎಷ್ಟು ವಸ್ತುಗಳು ಇವೆ ಎಂದು ಹೇಳುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಉದಾಹರಣೆಗೆ, ಆಟದ ಸಮಯದಲ್ಲಿ ದಾಳಗಳನ್ನು ಎಸೆಯುವಾಗ, ನಾವು ಪ್ರತಿ ಬಾರಿಯೂ ಅಂಕಗಳನ್ನು ಎಣಿಸುವ ಅಗತ್ಯವಿಲ್ಲ. ಚುಕ್ಕೆಗಳ ನಿರ್ದಿಷ್ಟ ವ್ಯವಸ್ಥೆಯು ನಮ್ಮ ಮನಸ್ಸಿನಲ್ಲಿ ಒಂದು ಪ್ರಭಾವವನ್ನು ಉಳಿಸಿರುತ್ತದೆ ಮತ್ತು ಆ ಮಾದರಿಯಲ್ಲಿ ಜೋಡಿಸಲಾದ ವಸ್ತುಗಳನ್ನು ನೋಡಿದಾಗ, ನಾವು ತಕ್ಷಣ ಅರ್ಥ ಮಾಡಿಕೊಳ್ಳುತ್ತೇವೆ ಮತ್ತು ಆ ಸಂಖ್ಯೆಯನ್ನು ಎಣಿಸುತ್ತೇವೆ. ಇದು ತರಗತಿಯಲ್ಲಿ ತೋರಿಸಿರುವ ಸಂಖ್ಯಾ ರೇಖೆಗೆ ಸಂಬಂಧಿಸಿದೆ. ಅದರ ಮೇಲೆ ವಿದ್ಯಾರ್ಥಿಗಳು ಸಂಖ್ಯೆಗಳನ್ನು ವಸ್ತುಗಳು, ಚಿಹ್ನೆಗಳು ಮತ್ತು ವಿಶೇಷವಾಗಿ ಜೋಡಿಸಲಾದ ಮಾದರಿಗಳನ್ನು ನೋಡುತ್ತಾರೆ.

ಮುಂದುವರಿದು, ಈಗ ನಾನು ಒಬ್ಬ ಹುಡುಗಿಯನ್ನು ಭೋಲಾನಂತೆ ನಟಿಸಲು ಮತ್ತು ತರಗತಿಯ ನೆಲದ ಮೇಲಿರುವ ಮರದ ಬ್ಲಾಕ್‌ಗಳನ್ನು ಸಂಗ್ರಹಿಸಲು ಹೇಳಿದೆ. ನಂತರ ಆಕೆ 10ರ ಕಟ್ಟುಗಳನ್ನು ಮಾಡಿ ಮುಂದಿನದನ್ನು ಎಣಿಸಬೇಕಿತ್ತು., ಮರದ ಬ್ಲಾಕ್‌ಗಳು ಹತ್ತು ತುಂಬುತ್ತಾ ಬಂತು. ಇದೀಗ ಅದರ ಕಟ್ಟು ಮಾಡಬೇಕು ಎಂದು ಚಿಕ್ಕ ಹುಡುಗಿಗೆ ಹೇಳಲು ಎಲ್ಲರೂ ಉತ್ಸುಕರಾಗಿದ್ದರಿಂದ ಇದು ಮಕ್ಕಳಿಗೆ ಮೋಜಿನ ಚಟುವಟಿಕೆಯಾಗಿತ್ತು. ಇದರ ನಂತರ, ಮಕ್ಕಳೊಂದಿಗೆ ಮಾಡಿದ ಚಟುವಟಿಕೆಯಲ್ಲಿ, ಅವರಿಗೆ 11, 13 ಮತ್ತು 14 ಬಿಡಿ ಕಡ್ಡಿಗಳನ್ನು ಒಟ್ಟೊಟ್ಟಿಗೆ ನೀಡಲಾಯಿತು ಮತ್ತು 10ರ ಕಟ್ಟುಗಳನ್ನು ಮಾಡಲು ಕೇಳಲಾಯಿತು. ಮಕ್ಕಳಿಗೆ ಈ ಆಟ ತುಂಬಾ ಕುತೂಹಲಕಾರಿಯಾಗಿ ಕಂಡು ಬಂತು. ನಾನು ಹೇಳುವುದಕ್ಕೂ ಮುಂಚೆಯೇ ಅವರು ಪರಸ್ಪರರ ಕಡ್ಡಿಯ ಕಟ್ಟುಗಳನ್ನು ಮತ್ತು ಸಡಿಲವಾದ ಕಡ್ಡಿಗಳನ್ನು ಎಣಿಸತೊಡಗಿದ್ದರು.



ಚಿತ್ರ 3: ಮಕ್ಕಳು ಕಟ್ಟುಗಳನ್ನು ಬಳಸಿ ಘನ ರೂಪದಲ್ಲಿ, ಸಂಖ್ಯೆಗಳನ್ನು ಚಿತ್ರರೂಪದಲ್ಲಿ ಬರೆಯುತ್ತಿದ್ದಾರೆ.

ಮುಂದೆ, ನಾನು ಕಟ್ಟುಗಳ ಸೂತ್ರೀಕರಣದ ಬಗ್ಗೆ ಯೋಚಿಸಿದೆ, ಏಕೆಂದರೆ ಆರಂಭದಲ್ಲಿ ಮಕ್ಕಳಿಗೆ ಮೊದಲು ಕಟ್ಟುಗಳನ್ನು ಮಾಡಲು ಮತ್ತು ನಂತರ ಅವುಗಳನ್ನು ಎಣಿಸಲು ಹೇಳಲಾಗಿತ್ತು. ನಂತರ, ನಾನು ಬಂಡಲ್‌ಅನ್ನು ಅವರ ಎಡಭಾಗದಲ್ಲಿ ಮತ್ತು ಬಿಡಿ ಕಡ್ಡಿಗಳನ್ನು ಅವರ ಬಲಭಾಗದಲ್ಲಿ ಇರಿಸಲು ಹೇಳಿದೆ. ಇದರಿಂದ ಅದು ಅಮೂರ್ತ ನಿರೂಪಣೆಗೆ (abstract representation) ಅಂದರೆ ಸಂಖ್ಯೆಗಳಿಗೆ ಹೊಂದಿಕೆಯಾಗುತ್ತದೆ. ಇದು ದಶಕ ಮತ್ತು ಬಿಡಿಯ (ಘಟಕಗಳಲ್ಲಿ ಅಂದರೆ) ಸಂಖ್ಯೆಗಳ ಪರಿಕಲ್ಪನೆಯನ್ನು ಪ್ರತಿನಿಧಿಸುವಲ್ಲಿನ ಗೊಂದಲವನ್ನು ತಪ್ಪಿಸಲು ಸಹಾಯ ಮಾಡುತ್ತದೆ.

ಮಕ್ಕಳು ವಸ್ತುಗಳ ಕಟ್ಟುಗಳನ್ನು (ಗುಂಪುಗಳನ್ನು) ಮಾಡುವ ಮೂಲಕ ಎಣಿಸಲು ಸಮರ್ಥರಾಗುವವರೆಗೆ ಮತ್ತು ಪಾರಂಗತರಾಗುವವರೆಗೆ ಅಂತಹ ಎಣಿಕೆ ಮತ್ತು ಬಂಡಲಿಂಗ್ ಚಟುವಟಿಕೆಗಳನ್ನು ನಡೆಸಲಾಯಿತು. ಇದು ಸುಮಾರು ಒಂದು ವಾರ ತೆಗೆದುಕೊಂಡಿತು. ಮುಂದೆ, ನಾನು ಅವರನ್ನು, "ನೀವು ಎಣಿಸಿದ ಕೋಲುಗಳ ಸಂಖ್ಯೆಯನ್ನು ಬರೆಯಬಹುದೇ?" ಎಂದು ಕೇಳಿದೆ. "ನಾವು ಇದನ್ನು ಹೇಗೆ ಬರೆಯಬಹುದು?" ಅವರು ಕೇಳಿದರು, ನಾನು, "ಬನ್ನಿ, ಅದನ್ನು ಚಿತ್ರಿಸಲು ಪ್ರಯತ್ನಿಸೋಣ" ಎಂದು ಉತ್ತರಿಸಿದೆ. ನಾನು ಅವರಿಗೆ ಗುರುತುಗಳನ್ನು ನೀಡಿ ಬರೆಯಲು ಹೇಳಿದೆ. ಅವರು ಸಚಿತ್ರವಾಗಿ ಸಂಖ್ಯೆಗಳನ್ನು ಪ್ರತಿನಿಧಿಸಿದರು (ಚಿತ್ರ 4). ಅವರಲ್ಲಿ ಕೆಲವರು ಈಗಾಗಲೇ ಸಂಖ್ಯೆಗಳನ್ನು ತಿಳಿದಿದ್ದರು, ಮತ್ತು ಅವರು ಸಹ ಕುತೂಹಲದಿಂದ ಸಂಖ್ಯೆಗಳನ್ನು ಚಿತ್ರಾತ್ಮಕವಾಗಿ ಬರೆದರು.

ನನ್ನ ಹಿಂದಿನ ಅನುಭವಗಳನ್ನು ನೆನಪಿಸಿಕೊಳ್ಳುತ್ತಾ, ಈ ಸಮಯದಲ್ಲಿ ನಾನು ವಿದ್ಯಾರ್ಥಿಗಳನ್ನು ಬೋರ್ಡ್‌ನಲ್ಲಿ 11 ಕಡ್ಡಿಗಳನ್ನು ಪ್ರತಿನಿಧಿಸಲು ಕೇಳಿದರೆ, ಅವರು 101 ಎಂದು ಬರೆಯುತ್ತಾರೆ ಎಂದು ಯೋಚಿಸುತ್ತಿದ್ದೆ, ಆದರೆ ಅವರು 11ಅನ್ನು ಚಿತ್ರಾತ್ಮಕವಾಗಿ ಪ್ರತಿನಿಧಿಸಿದ್ದು ಅದು ಸಾಕಷ್ಟು ಸ್ಪಷ್ಟವಾಗಿತ್ತು. ಅವರು ಹತ್ತರ ಬಂಡಲ್ ಮತ್ತು 1 ಬಿಡಿ ಬೆಂಕಿಕಡ್ಡಿಯನ್ನು ತೋರಿಸಿದರು. ಎಣಿಕೆಯ ನಮೂನೆಗಳನ್ನು ಈಗಾಗಲೇ ತಿಳಿದಿರುವ ಮತ್ತು 50ರವರೆಗಿನ ಸಂಖ್ಯೆಗಳನ್ನು ಸುಲಭವಾಗಿ ಬರೆಯಬಲ್ಲ ವಿದ್ಯಾರ್ಥಿಗಳು ಮತ್ತು 100ರವರೆಗೆ ಬರೆಯಬಲ್ಲ ಇತರರು ಸಂಖ್ಯೆಗಳನ್ನು ಬರೆಯಲು ಇತರ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದರು. ಆದರೆ ಈಗ ಈ ವಿದ್ಯಾರ್ಥಿಗಳು ಸಂಖ್ಯೆಗಳ ಪ್ರಾತಿನಿಧ್ಯವನ್ನು ಸಹ ಅರ್ಥ ಮಾಡಿಕೊಳ್ಳುತ್ತಿದ್ದರು. ಇಲ್ಲಿ ನಾನು ಬಂಡಲ್ ಬದಲಿಗೆ 1 ಎಂದು ಬರೆಯುತ್ತೇವೆ, ಏಕೆಂದರೆ ಅದು ಬಂಡಲ್ ಎಂದು ಹೇಳಲು ನನಗೆ ಸುಲಭವಾಯಿತು. ನಂತರ ನಾವು ತೆರೆದ ಕಡ್ಡಿಗಳ ಸಂಖ್ಯೆಯನ್ನು ಬರೆಯುತ್ತೇವೆ. ಈ ರೀತಿಯಾಗಿ, ನನ್ನ ತರಗತಿಯಲ್ಲಿ 20 ವಿದ್ಯಾರ್ಥಿಗಳು 10ಕ್ಕಿಂತ ಮೀರಿದ ಸಂಖ್ಯೆಯನ್ನು ಎಣಿಸುವ ಅನುಭವವನ್ನು ಪಡೆದರು ಮತ್ತು ಅವರಲ್ಲಿ 12 ಜನರು ಗುಂಪುಗಳಲ್ಲಿ ಎಣಿಸಲು ಸಮರ್ಥರಾಗಿದ್ದಾರೆ. ಅವುಗಳನ್ನು ಚಿತ್ರಾತ್ಮಕವಾಗಿ ಮತ್ತು ಬರವಣಿಗೆಯಲ್ಲಿ ಪ್ರತಿನಿಧಿಸುತ್ತಾರೆ ಮತ್ತು ಅಮೂರ್ತ ರೂಪದಲ್ಲಿ ಸಂಖ್ಯೆಗಳನ್ನು ಓದಬಲ್ಲವರಾಗಿದ್ದಾರೆ.

ಕಥೆಗಳು, ಮ್ಯಾನಿಪ್ಯುಲೇಟಿವ್‌ಗಳು, ಪ್ರತಿಕ್ರಿಯಾತ್ಮಕ ಆಟ, ಚಿತ್ರ ಬರೆಯುವುದು, ಮತ್ತು ಆಟಗಳನ್ನು ಒಂದಿಗೂಡಿಸುವುದರಿಂದ ವಿದ್ಯಾರ್ಥಿಗಳು ಸಂಖ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು, ತಮ್ಮ ಕಲಿಕೆಯನ್ನು ಆನಂದಿಸಬಹುದು.

ಈ ರೀತಿಯ ಬಹು-ಸಂವೇದನಾ ವಿಧಾನವು ಬೇರೆ ಬೇರೆ ಶೈಲಿಗಳಲ್ಲಿ ಕಲಿಯುವವರಿಗೆ ನೆರವಾಗುವುದಲ್ಲದೆ, ಗಣಿತ ಪರಿಕಲ್ಪನೆಗಳ ಕಲಿಕೆಯನ್ನು ಸುಲಭಗೊಳಿಸುತ್ತದೆ.


ಮುಂದಿನ ದಾರಿ: ನನ್ನ ವಿದ್ಯಾರ್ಥಿಗಳು ಬಂಡಲ್ ಮತ್ತು ಓಪನ್ ಪರಿಕಲ್ಪನೆಯನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಂಡಿದ್ದಾರೆ. ಮುಂದೆ ಈ ಪರಿಕಲ್ಪನೆಯನ್ನು ಅವರು ಅಳವಡಿಸಿಕೊಳ್ಳಬಹುದು. ಈ ಪರಿಕಲ್ಪನೆಯೊಂದಿಗೆ ಮುಂದುವರಿಯುವ ಮಾರ್ಗವೆಂದರೆ ಸಂಖ್ಯೆ ಹೋಲಿಕೆ, ಸಂಕಲನ ಮತ್ತು ವ್ಯವಕಲನದ ಪರಿಕಲ್ಪನೆಯನ್ನು ಬೆಳೆಸುವುದು.

> **ಕಥೆಗಳು ವಿದ್ಯಾರ್ಥಿಗಳ ಕಲ್ಪನೆಯನ್ನು ಉತ್ತೇಜಿಸಿ, ವಿವಿಧ ವಿಷಯಗಳ ಜೊತೆಗೆ ಜೋಡಿಸಲು ಅನುವು ಮಾಡಿಕೊಡುತ್ತದೆ**

ಸವಾಲು: ಸಾಂಕೇತಿಕ ಪ್ರಾತಿನಿಧ್ಯದ ಮಟ್ಟವನ್ನು ತಲುಪದ ಕಾರಣ ನನ್ನ ತರಗತಿಯ ಎಂಟು ವಿದ್ಯಾರ್ಥಿಗಳು ಇನ್ನೂ ಕಲಿಕೆಯ ಪ್ರಕ್ರಿಯೆಯಲ್ಲಿದ್ದಾರೆ. ಆದಾಗ್ಯೂ ಅವರು ಮಾದರಿ ಮತ್ತು ವ್ಯವಸ್ಥೆಗಳನ್ನು ಅನುಸರಿಸುವ ಮೂಲಕ ಮತ್ತು ಸಂಖ್ಯೆಗಳನ್ನು ರೂಪಿಸಲು ಬಂಡಲ್ ಗಳನ್ನು ಮಾಡಬಲ್ಲರು. ಅವರಿಗೆ ಸಹಾಯ ಮಾಡಲು, ಅವರು ಪರಿಕಲ್ಪನೆಯೊಂದಿಗೆ ಪರಿಚಿತರಾಗುವವರೆಗೆ ಮತ್ತು ಅದನ್ನು ಅರ್ಥ ಮಾಡಿಕೊಳ್ಳುವವರೆಗೆ ನಿಯಮಿತವಾಗಿ ಸಂಖ್ಯೆಗಳೊಂದಿಗೆ ಆಟವಾಡಲು ನಾನು ಅವರಿಗೆ ಅವಕಾಶ ನೀಡುತ್ತೇನೆ.

## ಕೊನೆಯ ಮಾತು

8 ವರ್ಷ ವಯಸ್ಸಿನ ಹೊತ್ತಿಗೆ, ಮಗುವಿನ ಮೆದುಳು ಸುಮಾರು 80 ಪ್ರತಿಶತದಷ್ಟು ಅಭಿವೃದ್ಧಿಗೊಳ್ಳುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು, ಶಿಕ್ಷಕಿಯಾಗಿ ನಾನು ಹೊಸ ಆಲೋಚನೆಗಳು, ಪರಿಕಲ್ಪನೆಗಳು ಮತ್ತು ಅನುಭವಗಳನ್ನು ಅವರಿಗೆ ಪರಿಚಯಿಸಲು ಪ್ರಯತ್ನಿಸುತ್ತೇನೆ. ಅದು ಕಾರಣ ಮತ್ತು ಪರಿಣಾಮದ ಸಂಬಂಧಗಳು, ಸಮಸ್ಯೆ ಪರಿಹಾರ ತಂತ್ರಗಳು ಇತ್ಯಾದಿಗಳ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಈ ವಿಧಾನವು ವಿದ್ಯಾರ್ಥಿಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ, ಆದರೆ ಅವರ ವಯಸ್ಸಿನಲ್ಲಿ ಪರಿಕಲ್ಪನೆಗಳನ್ನು ರೂಪಿಸಲು ಅಂತಹ ಆಲೋಚನೆಗಳನ್ನು ಒದಗಿಸುವಾಗ ಒಬ್ಬರು ಜಾಗರೂಕರಾಗಿರಬೇಕು. ಏಕೆಂದರೆ ಇವುಗಳು ಅವರ ಮುಂದಿನ ಕಲಿಕೆಯ ಆಧಾರವಾಗಿದೆ. ಹೆಚ್ಚುವರಿಯಾಗಿ, ಕಥೆ, ನಟನೆ ಮತ್ತು ಚಟುವಟಿಕೆಗಳನ್ನು ತನ್ನಷ್ಟಕ್ಕೆ ಕಲಿಕೆಯೊಂದಿಗೆ ಸಂಯೋಜಿಸುವುದು. (ಉದಾ. ಬಂಡಲಿಂಗ್); ಈ ಹಂತದಲ್ಲಿ ಗಣಿತವನ್ನು ಅಮೂರ್ತ ರೂಪದಲ್ಲಿ ಕಲಿಯಲು ಸಾಧ್ಯವಿಲ್ಲದ ಕಾರಣ ಚಿತ್ರಾತ್ಮಕ ಮತ್ತು ಸರಳ ನಿರೂಪಣೆಗಳು ವಿದ್ಯಾರ್ಥಿಗಳಿಗೆ ಸಮಗ್ರ ಅನುಭವವನ್ನು ನೀಡುತ್ತವೆ.



ಚಿತ್ರ 4: ಮಕ್ಕಳು ಚಿತ್ರಾತ್ಮಕ ನಿರೂಪಣೆಗಳನ್ನು ಬಳಸಿಕೊಂಡು ಅಮೂರ್ತ ಸಂಖ್ಯೆಗಳನ್ನು ಕಲಿಯುತ್ತಿದ್ದಾರೆ.

*[1] ಸಂಖ್ಯೆಯ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಗಣಿತದಲ್ಲಿ ಸಂಖ್ಯೆ ಬಂಧಗಳನ್ನು ಬಳಸಲಾಗುತ್ತದೆ. ಎರಡು ಸಂಖ್ಯೆಗಳನ್ನು ಸೇರಿಸುವ ಮೂಲಕ ಹೊಸ ಸಂಖ್ಯೆಯನ್ನು ರಚಿಸಬಹುದು ಎಂದು ಮಕ್ಕಳಿಗೆ ಕಲಿಯಲು ಇದು ಒಂದು ಮಾರ್ಗವಾಗಿದೆ.*



**ಸೋನಿಯಾ ಕುಂದು** 2021ರಿಂದ ಉತ್ತರಕಾಶಿಯ ಮಾತಾಲಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ತರಗತಿಗಳ ಬೋಧನೆಯಲ್ಲಿ ಅವರ ಪರಿಣತಿ ಇದೆ. ಚಿಕ್ಕ ಮಕ್ಕಳ ಕಲಿಕೆಯ ಪ್ರಕ್ರಿಯೆಯನ್ನು ಉತ್ತೇಜಿಸಲು ಉತ್ಕೃಷ್ಟ ಮತ್ತು ಸ್ಫೂರ್ತಿದಾಯಕ ವಾತಾವರಣವನ್ನು ಒದಗಿಸುವಲ್ಲಿ ಅವರು ಸಕ್ರಿಯರಾಗಿದ್ದಾರೆ.

**ಸಂಪರ್ಕ:** sonia.kundu@azimpremjifoundation.org

ಅನುವಾದ: ಕಿರಣ್ ಮಂಜುನಾಥ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಆರಂಭಿಕ ವರ್ಷಗಳಲ್ಲಿ ಪೋಷಕರ ಪಾತ್ರ

**ಅಮೃತಾ ಮುರಳಿ**

**ಅಂಗನವಾಡಿ ಶಿಕ್ಷಕರು ಸಾಮಾನ್ಯವಾಗಿ ಕುಟುಂಬಗಳ ಮೊದಲ ಸಂಪರ್ಕ ಬಿಂದು ಆಗಿರುತ್ತಾರೆ. ಪೋಷಕರ ತಿಳಿವಳಿಕೆ ಮತ್ತು ಮಕ್ಕಳ ಆರಂಭಿಕ ಬೆಳವಣಿಗೆಯ ಅಗತ್ಯಗಳ ನಡುವಿನ ಅಂತರವನ್ನು ಕಡಿಮೆ ಮಾಡುವಲ್ಲಿ ಅವರ ಪಾತ್ರ ಮುಖ್ಯವಾದದ್ದು. ಈ ಲೇಖನದಲ್ಲಿ, ಲೇಖಕರು, 'ಮಕ್ಕಳ ಜಾಗೃತಿ' ಸಂಸ್ಥೆಯ, ಸುಲಭವಾಗಿ ಅನುಸರಿಸಬಹುದಾದ ಯಶಸ್ವಿ ಪ್ರಯತ್ನಗಳನ್ನು ಹಂಚಿಕೊಂಡಿದ್ದಾರೆ. ಪೋಷಕರು ತಮ್ಮ ಮಕ್ಕಳಿಗೆ ಒಳ್ಳೆಯ ವಾತಾವರಣ ಒದಗಿಸಲು ಪ್ರಯತ್ನಿಸುವಂತೆ ಮಾಡುವುದೇ ಈ ವಿಧಾನಗಳ ಉದ್ದೇಶ.**



ಚಿತ್ರ 1: ಪೋಷಕರೊಂದಿಗೆ ಪರಿಣಾಮಕಾರಿ ಸಭೆಗಳನ್ನು ನಡೆಸಲು ಅಂಗನವಾಡಿ ಶಿಕ್ಷಕರಿಗೆ ಸಹಾಯ ಮಾಡಲಾಗುತ್ತಿದೆ.

ಮಗುವಿನ ಜೀವನದ ಪ್ರತಿಯೊಂದು ಹಂತದಲ್ಲೂ ಪೋಷಕರು ಪ್ರಮುಖ ಪಾತ್ರ ವಹಿಸುತ್ತಾರೆ, ಆದರೆ ಅವರ ಪ್ರಭಾವವು ಆರಂಭಿಕ ವರ್ಷಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಆರಂಭಿಕ ವರ್ಷಗಳಲ್ಲಿ ಅಂದರೆ ಹುಟ್ಟಿನಿಂದ ಆರು ವರ್ಷಗಳವರೆಗೆ, ಮಗುವಿನ ಅರಿವಿನ, ಭಾವನಾತ್ಮಕ ಮತ್ತು ಸಾಮಾಜಿಕ ಬೆಳವಣಿಗೆಗೆ ಅಡಿಪಾಯ ಹಾಕಲಾಗುತ್ತದೆ. ಇಪ್ಪತ್ತು ವರ್ಷಗಳ ಹಿಂದಿನವರೆಗೂ, ಮಕ್ಕಳು ಕೂಡು ಕುಟುಂಬಗಳಲ್ಲಿ ಬೆಳೆದರು. ಅಲ್ಲಿ ಅವರು ಬಹು ಕುಟುಂಬ ಸದಸ್ಯರ ಆರೈಕೆ ಮತ್ತು ಸಮೃದ್ಧ ಸಂಭಾಷಣೆಗಳಿಂದ ಪ್ರಯೋಜನ ಪಡೆಯುತ್ತಿದ್ದರು. ಆದರೆ ಈಗ ತಂತ್ರಜ್ಞಾನದ ಆಗಮನ ಮತ್ತು ವಿಭಕ್ತ ಕುಟುಂಬಗಳ ವ್ಯಾಪಕತೆಯೊಂದಿಗೆ, ಮಾನವ ಸಂಬಂಧಗಳಲ್ಲಿ ವ್ಯತ್ಯಾಸ ಸೃಷ್ಟಿಯಾಗಿದೆ. ಇದು ಮಕ್ಕಳ ಕಲಿಕೆ ಮತ್ತು ತಿಳುವಳಿಕೆಯ ಮೇಲೂ ಪರಿಣಾಮ ಬೀರುತ್ತಿದೆ, ಇದರಿಂದಾಗಿ ಮಕ್ಕಳು ಸ್ವಲ್ಪ ದುರ್ಬಲರಾಗಿದ್ದಾರೆ. ಉದಾಹರಣೆಗೆ, ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾದ ಒಂದು ದೃಶ್ಯವನ್ನು ಗಮನಿಸಿ- ಒಂದು ಮಗು ಕೈಯಲ್ಲಿ ರಿಮೋಟ್ ಹಿಡಿದುಕೊಂಡು ಪರದೆಯತ್ತ ದಿಟ್ಟಿಸುತ್ತಿದೆ, ಮಗುವಿನ ಆರೈಕೆ ಮಾಡುವವರು ಯಾಂತ್ರಿಕವಾಗಿ ಮಗುವಿಗೆ ಆಹಾರ ತಿನ್ನಿಸುತ್ತಿರುತ್ತಾರೆ. ಈ ದೃಶ್ಯವು ವಂಚಿತ ಸಮುದಾಯವಾಗಿರಲಿ ಹಾಗೂ ಶ್ರೀಮಂತ ಕುಟುಂಬವೇ ಇರಲಿ, ಪೋಷಕರು ಮತ್ತು ಮಗುವಿನ ನಡುವೆ ಇದ್ದ ಸುಂದರ ಆತ್ಮೀಯತೆಯ ಭಾವನೆ ಕಡಿಮೆಯಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ.

'ಮಕ್ಕಳ ಜಾಗೃತಿ[1] ಯಲ್ಲಿ, ಅಂಗನವಾಡಿಗಳು ಒದಗಿಸುವ ಆರಂಭಿಕ ಬಾಲ್ಯ ಶಿಕ್ಷಣ ಮತ್ತು ಆರೈಕೆಯ ಗುಣಮಟ್ಟವನ್ನು ಹೆಚ್ಚಿಸಲು ನಾವು ಕೆಲಸ ಮಾಡುತ್ತೇವೆ. ಇದಕ್ಕಾಗಿ ನಾವು ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ (Integrated Child Development Services -ICDS) ಕಾರ್ಯಕರ್ತರು, ಶಿಕ್ಷಕರು, ಸಹಾಯಕ ಸಿಬ್ಬಂದಿ ಮತ್ತು ಮುಖ್ಯವಾಗಿ ಪೋಷಕರ ಸಹಯೋಗದೊಂದಿಗೆ ಮಕ್ಕಳಿಗೆ ಸಮಗ್ರ ಬೆಂಬಲವನ್ನು ಒದಗಿಸುತ್ತೇವೆ. ಮಕ್ಕಳು ಮತ್ತು ಪೋಷಕರ ನಡುವೆ ಮರೆಯಾಗುತ್ತಿರುವ ವಾತ್ಸಲ್ಯವನ್ನು ಉಳಿಸುವುದು ಇದರ ಉದ್ದೇಶಗಳಲ್ಲಿ ಒಂದಾಗಿದೆ.

## ಅಂಗನವಾಡಿಯ ಪಾತ್ರ

ಅಂಗನವಾಡಿಗಳಿಗೆ ಹಾಜರಾಗುವ ಮಕ್ಕಳು ಹೆಚ್ಚಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯಿಂದ ಬಂದಿರುತ್ತಾರೆ. ಅವರ ಪೋಷಕರು ಸಾಮಾನ್ಯವಾಗಿ ಕಡಿಮೆ ಅಥವಾ ಯಾವುದೇ ಔಪಚಾರಿಕ ಶಿಕ್ಷಣವನ್ನು ಪಡೆದಿರುವುದಿಲ್ಲ. ಅವರ ಸಂಪೂರ್ಣ ಗಮನವು

ಕುಟುಂಬವನ್ನು ಪೋಷಿಸಲು ಹಣ ಸಂಪಾದಿಸುವುದರ ಮೇಲೆಯೇ ಕೇಂದ್ರೀಕೃತವಾಗಿರುತ್ತದೆ, ಆದ್ದರಿಂದ ಅವರ ಮಕ್ಕಳ ಆರೈಕೆ ಮತ್ತು ಬೆಳವಣಿಗೆಯ ಅಗತ್ಯಗಳು ಹೆಚ್ಚಾಗಿ ಹಿಂದುಳಿದಿರುತ್ತವೆ. ಮಗುವಿನ ಕಲಿಕೆಯ ಪ್ರಯಾಣವನ್ನು ಬಲಪಡಿಸುವಲ್ಲಿ ಆರಂಭಿಕ ವರ್ಷಗಳು ಎಷ್ಟು ಮುಖ್ಯ ಎಂಬುದು ಅನೇಕ ಪೋಷಕರಿಗೆ ತಿಳಿದಿರುವುದಿಲ್ಲ. ಮಗು ಶಾಲೆಗೆ ಹೋಗಲು ಪ್ರಾರಂಭಿಸಿದಾಗ ಮಾತ್ರ ಕಲಿಕೆ ಪ್ರಾರಂಭವಾಗುತ್ತದೆ ಎಂಬ ತಪ್ಪು ಕಲ್ಪನೆ ಅವರಲ್ಲಿರುತ್ತದೆ. ಪರಿಣಾಮವಾಗಿ ಅವರು ಆರಂಭಿಕ ಅನುಭವಗಳ ಮೂಲಭೂತ ಪಾತ್ರವನ್ನು ಕಡೆಗಣಿಸುತ್ತಾರೆ. ಆದ್ದರಿಂದ, ಸುರಕ್ಷಿತ, ಪೋಷಣೆ ಮತ್ತು ಸೂಕ್ಷ್ಮ ವಾತಾವರಣವನ್ನು ಒದಗಿಸುವಲ್ಲಿ ಅವರ ಪಾತ್ರ ಬಹಳ ಮುಖ್ಯ ಎಂದು ಪೋಷಕರಲ್ಲಿ ಅರಿವು ಮೂಡಿಸುವುದು ಮುಖ್ಯ, ಏಕೆಂದರೆ ಅಂತಹ ವಾತಾವರಣವು ಮಗುವಿನ ಒಟ್ಟಾರೆ ಬೆಳವಣಿಗೆಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ.

ಪೋಷಕರಲ್ಲಿ ಈ ಅರಿವು ಮೂಡಿಸುವ ಜವಾಬ್ದಾರಿ ಅಂಗನವಾಡಿ ಶಿಕ್ಷಕಿಯರ ಮೇಲಿದೆ. ಪೋಷಕರೊಂದಿಗೆ ಪರಿಣಾಮಕಾರಿಯಾಗಿ ಮಾತುಕತೆ ನಡೆಸಲು ಅಂಗನವಾಡಿ ಶಿಕ್ಷಕಿಯರ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಮಕ್ಕಳ ಆರಂಭಿಕ ಬೆಳವಣಿಗೆಯಲ್ಲಿ ಪೋಷಕರ ಪಾಲ್ಗೊಳ್ಳುವಿಕೆಯನ್ನು ಎತ್ತಿ ತೋರಿಸುವ ಅರ್ಥಪೂರ್ಣ ಸಭೆಗಳನ್ನು ನಡೆಸುವುದು ಮುಖ್ಯವಾಗಿದೆ. ಅಂಗನವಾಡಿ ಶಿಕ್ಷಕಿಯರು ಹೆಚ್ಚಾಗಿ ಕುಟುಂಬಗಳೊಂದಿಗೆ ಸಂಪರ್ಕದಲ್ಲಿರುವುದರಿಂದ ಆರಂಭಿಕ ವರ್ಷಗಳಲ್ಲಿ ಪೋಷಕರ ತಿಳುವಳಿಕೆ ಮತ್ತು ಮಕ್ಕಳ ಬೆಳವಣಿಗೆಯ ಅಗತ್ಯಗಳ ನಡುವಿನ ಅಂತರವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

## ಕೆಲವು ಕಾರ್ಯತಂತ್ರಗಳು

### ಪೋಷಕರನ್ನು ತೊಡಗಿಸಿಕೊಳ್ಳುವುದು

ಅಂಗನವಾಡಿ ಶಿಕ್ಷಕರಿಗೆ ನಾವು ನಿರಂತರವಾಗಿ ತರಬೇತಿ ನೀಡುತ್ತೇವೆ. ಈ ತರಬೇತಿಗಳು ಅವರು ಪೋಷಕರೊಡನೆ ಸಭೆಗಳನ್ನು ನಡೆಸಲು ಅವಶ್ಯವಿರುವ ಜ್ಞಾನ, ಕೌಶಲ್ಯ ಮತ್ತು ಆತ್ಮವಿಶ್ವಾಸಗಳನ್ನು ಹೆಚ್ಚಿಸುತ್ತವೆ.

ಮೆದುಳಿನ ಬೆಳವಣಿಗೆ, ಆಟದ ಪ್ರಾಮುಖ್ಯತೆ ಮತ್ತು ಬಾಲ್ಯ ಶಿಕ್ಷಣದ ಕ್ಷೇತ್ರಗಳಂತಹ ವಿಷಯಗಳನ್ನು ಚರ್ಚಿಸಲು ನಾವು ಅವರನ್ನು ಸಿದ್ಧಪಡಿಸುತ್ತೇವೆ. ಈ ಅವಧಿಗಳನ್ನು ನಿಜ ಜೀವನದ ಉದಾಹರಣೆಗಳು ಮತ್ತು ಪ್ರಾಯೋಗಿಕ ತಂತ್ರಗಳನ್ನು ಆಧರಿಸಿ, ಶಿಕ್ಷಕರು ಅಮೂರ್ತ ಪರಿಕಲ್ಪನೆಗಳನ್ನು ಪೋಷಕರಿಗೆ ಸಂಬಂಧಿತ ಮತ್ತು ಕಾರ್ಯಗತಗೊಳಿಸಬಹುದಾದ ವಿಚಾರಗಳಾಗಿ ಪರಿವರ್ತಿಸುತ್ತಾರೆ.

### ಆಟದ ಮಹತ್ವ: ಒಂದು ಚಟುವಟಿಕೆ

ಆರಂಭಿಕ ಮೆದುಳಿನ ಬೆಳವಣಿಗೆಯಲ್ಲಿ (Brain development) ಆಟದ ಮಹತ್ವ ಮತ್ತು ಸಕಾರಾತ್ಮಕ ಅನುಭವಗಳನ್ನು ಪ್ರದರ್ಶಿಸಲು ಪೋಷಕರ ಸಭೆಗಳಲ್ಲಿ ಸರಳ ಮತ್ತು ಸಂವಾದಾತ್ಮಕ ಚಟುವಟಿಕೆಯನ್ನು ನಡೆಸಲಾಗುತ್ತದೆ. ಪೋಷಕರನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಅವುಗಳಲ್ಲಿ ಪ್ರತಿಯೊಂದಕ್ಕೂ ಚುಕ್ಕೆಗಳು ಹರಡಿರುವ ಮೆದುಳಿನ ರೇಖಾಚಿತ್ರವನ್ನು ನೀಡಲಾಗುತ್ತದೆ. ಅಂಗನವಾಡಿ ಶಿಕ್ಷಕಿ/ಸುಗಮಕಾರರು ಎರಡು ವ್ಯತಿರಿಕ್ತ ಕಥೆಗಳನ್ನು ಹೇಳುತ್ತಾರೆ ಮತ್ತು ಪೋಷಕರು ಚಟುವಟಿಕೆಯನ್ನು ನಿರ್ವಹಿಸಲು ಅನುವು ಮಾಡಿಕೊಡಲು ಕೆಲವು ಪ್ರಮುಖ ಸ್ಥಳಗಳಲ್ಲಿ ನಿಲ್ಲುತ್ತಾರೆ.

### ಗುಂಪು 1: ಪೋಷಿಸುವಂತಹ ಪರಿಸರ

ಈ ಸಂದರ್ಭದಲ್ಲಿ ಮಗು ಈ ಕೆಳಗಿನವುಗಳನ್ನು ಅನುಭವಿಸುತ್ತದೆ:

- ಸ್ಪಂದಿಸುವ ಆರೈಕೆ: ಮಗು ಅಳುವಾಗ ಪೋಷಕರು ಅದನ್ನು ಸಮಾಧಾನಪಡಿಸುತ್ತಾರೆ. ಮಗುವಿನ ಅಗತ್ಯಗಳಿಗೆ ಅನುಗುಣವಾಗಿ ಅದಕ್ಕೆ ಸಾಕಷ್ಟು ಆರೈಕೆ ನೀಡಲಾಗುತ್ತದೆ.
- ಆಟಕ್ಕೆ ಉತ್ತಮ ಸಮಯ: ಪೋಷಕರು ಕಣ್ಣಾಮುಚ್ಚಾಲೆ ಆಟಗಳನ್ನು ಆಡುತ್ತಾರೆ ಮತ್ತು ಪ್ರಾಸ ಪದಗಳನ್ನು ಹಾಡುತ್ತಾರೆ. ಮಗುವಿಗೆ ಆಟಿಕೆಗಳು ಮತ್ತು ಆಟದ ಸಾಮಗ್ರಿಗಳೊಂದಿಗೆ ತೊಡಗಿಸಿಕೊಳ್ಳಲು ಸ್ವಾತಂತ್ರ್ಯವಿದೆ.
- ಭಾಷಾ ಸಮೃದ್ಧ ಸಂಭಾಷಣೆಗಳು: ಪೋಷಕರು ಮತ್ತು ಮಕ್ಕಳ ಆರೈಕೆದಾರರು, ಅವರು ಅಂಗನವಾಡಿ ಕಾರ್ಯಕರ್ತೆಯರಾಗಿರಲಿ ಅಥವಾ ಇತರ ಕುಟುಂಬ ಸದಸ್ಯರಾಗಿರಲಿ, ಮಗುವಿನೊಂದಿಗೆ ಮಾತನಾಡುತ್ತಾರೆ, ದೈನಂದಿನ ಚಟುವಟಿಕೆಗಳನ್ನು ಚರ್ಚಿಸುತ್ತಾರೆ ಅಥವಾ ಸರಳ ಕಥೆಗಳನ್ನು ಓದುತ್ತಾರೆ.
- ಸುರಕ್ಷಿತ ವಾತಾವರಣ : ಮಗುವಿಗೆ ಮುಕ್ತವಾಗಿ ಅನ್ವೇಷಿಸಲು ಸ್ವಚ್ಛ ಮತ್ತು ಸುರಕ್ಷಿತ ಸ್ಥಳವಿದೆ.

ಪ್ರತಿ ಬಾರಿ ಸಕಾರಾತ್ಮಕ ಅನುಭವವನ್ನು ವಿವರಿಸಿದಾಗ, ಗುಂಪು ನಿರ್ದಿಷ್ಟ ಮೆದುಳಿನ ರೇಖಾಚಿತ್ರದಲ್ಲಿ ಎರಡು ಚುಕ್ಕೆಗಳನ್ನು ಸಂಪರ್ಕಿಸುತ್ತದೆ. ಕಥೆಯ ಅಂತ್ಯದ ವೇಳೆಗೆ, ಅವರ ಮೆದುಳಿನ ರೇಖಾಚಿತ್ರವು ಬಲವಾದ ನರಮಂಡಲವನ್ನು ಪ್ರತಿನಿಧಿಸುವ ಬಹು ಪರಸ್ಪರ ಸಂಪರ್ಕಿತ ಮಾರ್ಗಗಳನ್ನು ಒಳಗೊಂಡಿರುತ್ತದೆ.

### ಗುಂಪು 2: ನಿರ್ಲಕ್ಷಿಸುವ ಪರಿಸರ

ಇದರಲ್ಲಿ ಮಗು ಈ ಕೆಳಗಿನ ವಿಷಯಗಳನ್ನು ಎದುರಿಸುತ್ತದೆ:

- ಸಂವಹನದ ಕೊರತೆ: ಪೋಷಕರು ತುಂಬಾ ಕಾರ್ಯನಿರತರಾಗಿರುತ್ತಾರೆ ಅಥವಾ ಅವರು ಇಲ್ಲದಿರುವುದರಿಂದ ಮಾತುಕತೆ ತುಂಬಾ ಕಡಿಮೆ ಇರುತ್ತದೆ.
- ಅಸಮಂಜಸ ಪ್ರತಿಕ್ರಿಯೆಗಳು : ಪೋಷಕರು ತಮ್ಮ ನಿಯಮಗಳು ಮತ್ತು ನಿರೀಕ್ಷೆಗಳಿಗೆ ಅನುಗುಣವಾಗಿ ವರ್ತಿಸುವುದಿಲ್ಲ - ಕೆಲವೊಮ್ಮೆ ಏನನ್ನಾದರೂ ಒಪ್ಪುತ್ತಾರೆ ಮತ್ತು ಕೆಲವೊಮ್ಮೆ ಅದೇ ವಿಷಯವನ್ನು ತಿರಸ್ಕರಿಸುತ್ತಾರೆ.
- ಆಟದ ಕೊರತೆ: ಮಗುವನ್ನು ಉತ್ತೇಜಿಸಲು ಯಾವುದೇ ಆಟಿಕೆಗಳು ಅಥವಾ ಸಂವಾದಾತ್ಮಕ ಚಟುವಟಿಕೆಗಳಿಲ್ಲ.
- ಒತ್ತಡದ ವಾತಾವರಣ: ಮನೆಯಲ್ಲಿ ಅವ್ಯವಸ್ಥೆ ಇರುತ್ತದೆ, ಮತ್ತು ಮಗುವಿಗೆ ಬೈಯುವುದು ಅಥವಾ ನಿರ್ಲಕ್ಷಿಸುವುದು. ಹಲವು ಬಾರಿ, ಮಗುವು ತನ್ನ ಕಿರಿಯ ಸಹೋದರ ಸಹೋದರಿಯರನ್ನು ಸಹ ನೋಡಿಕೊಳ್ಳಬೇಕಾಗುತ್ತದೆ.
- ಸೀಮಿತ ಭಾಷಾ ಸಂಪರ್ಕ: ಸಂವಾದಗಳು ತುಂಬಾ ಕಡಿಮೆ, ಸಾಮಾನ್ಯವಾಗಿ ಸೂಚನೆಗಳು ಅಥವಾ ಬೈಗುಳಗಳಿಗೆ ಸೀಮಿತವಾಗಿರುತ್ತದೆ.

ಹಲವು ಬಾರಿ ಪೋಷಕರು 'ನೀರು ಕುಡಿಯಿರಿ', 'ಆಹಾರ ತಿನ್ನಿರಿ', 'ನೀನು ನಿನ್ನ ಕೆಲಸವನ್ನು ಏಕೆ ಮಾಡಲಿಲ್ಲ', 'ನೀನು ಯಾಕೆ ಕಿಡಿಗೇಡಿತನ ಮಾಡಿದೆ' ಮುಂತಾದ ಸಣ್ಣ ಸೂಚನೆಗಳನ್ನು ನೀಡುತ್ತಾರೆ. ಆದರೆ ಈ ಸಣ್ಣ ಸೂಚನೆಗಳು ಒಟ್ಟಾಗಿ ಯಾವುದೇ ಅರ್ಥವನ್ನು ನೀಡುವುದಿಲ್ಲ. ಆದ್ದರಿಂದ, ಅಂತಹ ಮುರಿದ ಸಂಭಾಷಣೆಗಳು ಮಗುವಿನ ಪಾತ್ರಕ್ಕೆ ಹೆಚ್ಚಿನದನ್ನು ಸೇರಿಸುವುದಿಲ್ಲ.

ಕಥೆಗಳ ನಂತರ, ಸುಗಮಕಾರರು ಎರಡು ಮೆದುಳುಗಳನ್ನು ಹೋಲಿಸುತ್ತಾರೆ, ಸಕಾರಾತ್ಮಕ ಅನುಭವಗಳು ಬಲವಾದ ಮತ್ತು ಆರೋಗ್ಯಕರ ಮೆದುಳಿನ ಬೆಳವಣಿಗೆಗೆ ಹೇಗೆ ಕೊಡುಗೆ ನೀಡುತ್ತವೆ ಎಂಬುದನ್ನು ಒತ್ತಿಹೇಳುತ್ತಾರೆ.



ಚಿತ್ರ 2: ಚಟುವಟಿಕೆಯಲ್ಲಿ ತೊಡಗಿರುವ ಪೋಷಕರು.



ಚಿತ್ರ 3: ಪೋಷಕರು ಮಗುವಿಗೆ ವಿವಿಧ ತರಕಾರಿಗಳನ್ನು ಗುರುತಿಸಲು ಮತ್ತು ವಿವರಿಸಲು ಸಹಾಯ ಮಾಡುತ್ತಿದ್ದಾರೆ.

ಚಟುವಟಿಕೆಯ ಕೊನೆಯಲ್ಲಿ, ಮಗುವನ್ನು ಪೋಷಿಸುವ ಪರಿಸರದಲ್ಲಿ ಪ್ರತಿನಿಧಿಸುವ ಮೆದುಳು ಇನ್ನೊಂದಕ್ಕಿಂತ ಸ್ಪಷ್ಟವಾಗಿ ಹೆಚ್ಚು ಸಂಪರ್ಕ ಹೊಂದಿದಂತೆ ಕಂಡುಬಂದಿತು ಮತ್ತು ಎರಡು ಮೆದುಳಿನ ಚಿತ್ರಗಳನ್ನು ಅಕ್ಕಪಕ್ಕದಲ್ಲಿ ಇರಿಸಿದಾಗ ಅಸಮತೆ ಗೋಚರಿಸಿತು. ಇದು ಹೆಚ್ಚಾಗಿ ಪೋಷಕರನ್ನು ಅಸಮತೋಲಿತ ವಾತಾವರಣವು ಮಗುವಿನ ಮೇಲೆ ಎಷ್ಟು ಕೆಟ್ಟ ಪರಿಣಾಮ ಬೀರುತ್ತದೆ ಎಂದು ಆಶ್ಚರ್ಯ ಪಡುವಂತೆ ಮಾಡುತ್ತದೆ. ಈ ಚಟುವಟಿಕೆ ಬಹಳ ಪರಿಣಾಮಕಾರಿ ಎಂದು ಸಾಬೀತಾಗಿದೆ. ಈ ಸಮಯದಲ್ಲಿ ಅನೇಕ ಪೋಷಕರು ಭಾವುಕರಾಗುತ್ತಾರೆ ಮತ್ತು ತಮ್ಮ ನಡವಳಿಕೆಯನ್ನು ಬದಲಾಯಿಸಲು ಬಹಿರಂಗವಾಗಿ ನಿರ್ಧರಿಸುತ್ತಾರೆ. ಇದರೊಂದಿಗೆ, ಅವರು ತಮ್ಮ ಮಗುವಿನ ಬೆಳವಣಿಗೆಯ ಬಗ್ಗೆ ಹೆಚ್ಚು ಗಮನ ಮತ್ತು ಗೌರವದಿಂದ ಇರುವುದಾಗಿ ಭರವಸೆ ನೀಡುತ್ತಾರೆ. ಅಂತಹ ಶಕ್ತಿಯುತ ನಿರೂಪಣೆಯನ್ನು ನೋಡುವುದರಿಂದ ಪೋಷಕರು ಜವಾಬ್ದಾರಿಯುತ ಆರೈಕೆ ಮತ್ತು ಸಕಾರಾತ್ಮಕ ಸಂವಾದಗಳು ಮಗುವಿನ ಮೆದುಳಿನ ಬೆಳವಣಿಗೆಯ ಮೇಲೆ ಬೀರುವ ಆಳವಾದ ಪರಿಣಾಮವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಸುರಕ್ಷಿತ, ಸಮೃದ್ಧ ಮತ್ತು ಪ್ರೀತಿಯ ವಾತಾವರಣವನ್ನು ಉತ್ತೇಜಿಸುವ ಮೂಲಕ ತಮ್ಮ ಮಗುವಿನ ಭವಿಷ್ಯವನ್ನು ರೂಪಿಸುವಲ್ಲಿ ತಮ್ಮ ಪಾತ್ರ ಮಹತ್ವದ್ದಾಗಿದೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ.

## ಕಲಿಕೆಯ ಬಗ್ಗೆ ಗ್ರಹಿಕೆಗಳನ್ನು ಬದಲಾಯಿಸುವುದು

'ಕಲಿಕೆ ಶಾಲೆಯಿಂದ ಪ್ರಾರಂಭವಾಗುತ್ತದೆ' ಎಂಬ ಕಲ್ಪನೆಯು ಅಂಗನವಾಡಿ ಶಿಕ್ಷಕರು ಎದುರಿಸುತ್ತಿರುವ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. ಇದಕ್ಕಾಗಿ ಅವರು ಕಲಿಕೆಯ ಬಗ್ಗೆ ಪೋಷಕರ ಗ್ರಹಿಕೆಯನ್ನು ಬದಲಾಯಿಸಬೇಕು. ಈ ತಪ್ಪು ಕಲ್ಪನೆಯನ್ನು ಎದುರಿಸಲು, ನಾವು ಶಿಕ್ಷಕರಿಗೆ ತರಬೇತಿ ನೀಡುತ್ತೇವೆ, ಇದರಲ್ಲಿ ನಾವು ಹುಟ್ಟಿನಿಂದ ಆರು ವರ್ಷಗಳವರೆಗಿನ ಬೆಳವಣಿಗೆಯ ಅವಧಿಯ ಮಹತ್ವವನ್ನು ಒತ್ತಿ ಹೇಳುತ್ತೇವೆ. ಮಗುವಿನ ಕಲಿಕೆ ಮತ್ತು ಅಭಿವೃದ್ಧಿಯನ್ನು ಹೆಚ್ಚಿಸುವಲ್ಲಿ ದೈನಂದಿನ ಸಂಭಾಷಣೆಗಳು, ಜವಾಬ್ದಾರಿಯುತ ಆರೈಕೆ ಮತ್ತು ಆಟ ಹೇಗೆ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಪ್ರದರ್ಶಿಸಲು ಶಿಕ್ಷಕರಿಗೆ ಸಾಧನಗಳು ಮತ್ತು ಸರಳ ಸಂಪನ್ಮೂಲಗಳನ್ನು ಒದಗಿಸಲಾಗುತ್ತದೆ.

ಶಿಕ್ಷಕರು ಪೋಷಕರಿಗೆ ತಮ್ಮ ಮಕ್ಕಳಿಗೆ ಸಹಾಯ ಮಾಡುವ ಸಾಮರ್ಥ್ಯದ ಬಗ್ಗೆ ಇರುವ ಸಂದೇಹಗಳನ್ನು ಹೋಗಲಾಡಿಸಲು ಸಹಾಯ ಮಾಡುತ್ತಾರೆ. ಮಕ್ಕಳೊಂದಿಗೆ ಅರ್ಥಪೂರ್ಣ ತೊಡಗಿಸಿಕೊಳ್ಳುವಿಕೆಗೆ ಶೈಕ್ಷಣಿಕ ಜ್ಞಾನದ ಅಗತ್ಯವಿಲ್ಲ, ಬದಲಿಗೆ ಆಟ ಮತ್ತು ಸಂಭಾಷಣೆಯ ಮೂಲಕ ಸಂಪರ್ಕ ಸಾಧಿಸುವ ಇಚ್ಛಾಶಕ್ತಿಯ ಅಗತ್ಯವಿದೆ ಎಂದು ಅವರಿಗೆ ಭರವಸೆ ನೀಡುತ್ತಾರೆ. ಪೋಷಕರು ತಮ್ಮ ಮಗುವಿನ ಬೆಳವಣಿಗೆಯನ್ನು ಉತ್ತೇಜಿಸುವ ಸರಳ, ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ. ಉದಾಹರಣೆಗೆ, ಅವನು ಅಥವಾ ಅವಳು ಕವಿತೆಗಳನ್ನು ಪಠಿಸಬಹುದು, ಅಡುಗೆ ಮಾಡುವಾಗ ಅಥವಾ ಮನೆ ಸ್ವಚ್ಛಗೊಳಿಸುವಾಗ ದೈನಂದಿನ ಚಟುವಟಿಕೆಗಳ ಬಗ್ಗೆ ಮಾತನಾಡಬಹುದು ಅಥವಾ ನಡೆಯುವಾಗ ಬಣ್ಣಗಳು, ಆಕಾರಗಳು ಮತ್ತು ವಸ್ತುಗಳನ್ನು ತೋರಿಸಬಹುದು. ಕಣ್ಣಾ ಮುಚ್ಚಾಲೆ ಅಥವಾ ಐ ಸ್ಪೈನಂತಹ ಸರಳ ಆಟಗಳನ್ನು ಆಡುವುದರಿಂದ ಪರಸ್ಪರ ಕ್ರಿಯೆಯನ್ನು ಉತ್ತೇಜಿಸುತ್ತದೆ ಮತ್ತು ಭಾಷೆ ಮತ್ತು ಸಾಮಾಜಿಕ ಕೌಶಲಗಳನ್ನು ನಿರ್ಮಿಸುತ್ತದೆ. ಕಥೆಗಳನ್ನು ಹೇಳುವುದು ಅಥವಾ ಚಿತ್ರ ಪುಸ್ತಕಗಳನ್ನು ಒಟ್ಟಿಗೆ ನೋಡುವುದರಿಂದ ಕಲ್ಪನಾಶಕ್ತಿ ಮತ್ತು ಶಬ್ದಕೋಶ ವೃದ್ಧಿಯಾಗುತ್ತದೆ.

ಪೋಷಕರೊಂದಿಗಿನ ಸಂಭಾಷಣೆಗಳ ಮೂಲಕ, ಶಿಕ್ಷಕರು ತಮ್ಮ ಹೊರೆಯನ್ನು ಕಡಿಮೆ ಮಾಡುವ, ಮಕ್ಕಳ ಬೆಳವಣಿಗೆಯನ್ನು ಉತ್ತೇಜಿಸುವ ಮತ್ತು ಪೋಷಕರು-ಮಕ್ಕಳ ಸಂಬಂಧವನ್ನು ಬಲಪಡಿಸುವ ಕೆಲವು ಸರಳ, ಪ್ರಾಯೋಗಿಕ ವಿಚಾರಗಳನ್ನು ಹಂಚಿಕೊಳ್ಳಬಹುದು. ಉದಾಹರಣೆಗೆ, ಪೋಷಕರ ಸಭೆಗಳು ಅಥವಾ ಮನೆ ಭೇಟಿಗಳ ಸಮಯದಲ್ಲಿ, ಅಂಗನವಾಡಿ ಶಿಕ್ಷಕರು ನಿಯಮಿತ ಮನೆಕೆಲಸಗಳು ಮಕ್ಕಳನ್ನು ಹೇಗೆ ಸೃಜನಾತ್ಮಕವಾಗಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ ಎಂಬುದನ್ನು ವಿವರಿಸಬಹುದು. ಉದಾಹರಣೆಗೆ, ಅವರು ಮಾರುಕಟ್ಟೆಯಿಂದ ತರಕಾರಿಗಳನ್ನು ತಂದಾಗ, ಮಕ್ಕಳಿಗೆ ತರಕಾರಿಗಳನ್ನು ಬೇರೆಬೇರೆ ರಾಶಿಗಳಲ್ಲಿ ಹಾಕಲು ಹೇಳಬಹುದು. ಈ ಚಟುವಟಿಕೆ ಸರಳವಾಗಿದೆ, ಮಕ್ಕಳನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತದೆ ಮತ್ತು ವಿಂಗಡಿಸುವುದು ಮತ್ತು ವರ್ಗೀಕರಿಸುವಂತಹ ಪ್ರಮುಖ ಅರಿವಿನ ಕೌಶಲಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

ಮಕ್ಕಳು ಊಟಕ್ಕೆ ತಟ್ಟೆಗಳನ್ನು ಇಡುವುದು ಅಥವಾ ಒಗೆದ ಬಟ್ಟೆಯನ್ನು ಮಡಚುವುದು ಮುಂತಾದ ಸಣ್ಣ ಕೆಲಸಗಳಿಗೆ ಸಹಾಯ ಮಾಡುವುದನ್ನು ಪ್ರೋತ್ಸಾಹಿಸುವುದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲು ಮತ್ತು ಉತ್ತಮವಾದ ಮೋಟಾರ್ ಕೌಶಲಗಳನ್ನು ಬೆಳೆಸಲು ಸಹಾಯ ಮಾಡುತ್ತದೆ. ಈ ಚಟುವಟಿಕೆಗಳನ್ನು ದೈನಂದಿನ ದಿನಚರಿಯಲ್ಲಿ ಸೇರಿಸಿಕೊಳ್ಳುವುದು ಸುಲಭ, ಮತ್ತು ಅವು ಪೋಷಕರಿಗೆ ತಮ್ಮ ಮಗುವಿನ ಬೆಳವಣಿಗೆಯನ್ನು ಬೆಂಬಲಿಸುವ ಪೋಷಣೆ ಮತ್ತು ಪ್ರೋತ್ಸಾಹದಾಯಕ ವಾತಾವರಣವನ್ನು ಸೃಷ್ಟಿಸಲು ಸಹಾಯ ಮಾಡುತ್ತವೆ. ಈ ಚಟುವಟಿಕೆಗಳು ಮಕ್ಕಳನ್ನು ಸೃಜನಶೀಲ ರೀತಿಯಲ್ಲಿ ಕಾರ್ಯನಿರತವಾಗಿರಿಸುತ್ತದೆ ಮತ್ತು ಅವರಿಗೆ ಪೋಷಕರಿಂದ ಯಾವುದೇ ಹೆಚ್ಚುವರಿ ಸಮಯ ಬೇಕಾಗಿಲ್ಲ. ಇಷ್ಟೇ ಅಲ್ಲ, ಇವು ಪೋಷಕರು ಮತ್ತು ಮಕ್ಕಳ ನಡುವಿನ ಸಂಬಂಧವನ್ನು ಬಲಪಡಿಸುತ್ತವೆ.

ಅಧಿವೇಶನದ ಸಮಯದಲ್ಲಿ ಶಿಕ್ಷಕರು ಪೋಷಕರನ್ನು ಇದೇ ರೀತಿಯ ಚಟುವಟಿಕೆಗಳನ್ನು ಮಾಡಲು ಆಹ್ವಾನಿಸಬಹುದು ಅಥವಾ ತಮ್ಮದೇ ಆದ ಸೃಜನಶೀಲ ವಿಚಾರಗಳನ್ನು ಹಂಚಿಕೊಳ್ಳಬಹುದು. ಇದು ಆತ್ಮವಿಶ್ವಾಸವನ್ನು ಬೆಳೆಸುತ್ತದೆ ಮತ್ತು ಪೋಷಕರು ತಮ್ಮ ಮಗುವಿನ ಶಿಕ್ಷಣದಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತದೆ.

> ಒಂದು ಹುಡುಗನ ತಾಯಿ (ರೋಹನ್) ರಾಚಮ್ಮ, ಮಾಸಿಕ ಸಭೆಗಳಿಗೆ ಹಾಜರಾಗುವುದರಿಂದ ಮನೆಯಲ್ಲಿ ತನ್ನ ಮಗ ರೋಹನ್ ಜೊತೆ ಉತ್ತಮ ಸಂಪರ್ಕ ಸಾಧಿಸಲು ತನಗೆ ಸಾಧ್ಯವಾಗಿದೆ ಎಂದು ಹೇಳಿದರು. ಅಂಗನವಾಡಿಯಲ್ಲಿನ ಆಟ ಆಧಾರಿತ ಚಟುವಟಿಕೆಗಳಿಂದ ಪ್ರೇರಿತನಾಗಿ, ರೋಹನ್ ಆಗಾಗ್ಗೆ ತಾನು ಚಟುವಟಿಕೆಗಳಿಂದ ಕಲಿತದ್ದನ್ನು ಮನೆಯಲ್ಲಿ ಕೂಡ ಮಾಡುತ್ತಾನೆ, ಬೆಳವಣಿಗೆ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಿದ ಆಟಗಳು ಮತ್ತು ಚಟುವಟಿಕೆಗಳನ್ನು ಪ್ರದರ್ಶಿಸುತ್ತಾನೆ ಮತ್ತು ಅವರನ್ನು ಆಟಕ್ಕೆ ಸೇರಲು ಆಹ್ವಾನಿಸುತ್ತಾನೆ. ಈ ಹಂಚಿಕೊಂಡ ಕ್ಷಣಗಳು ಅವರ ಬಾಂಧವ್ಯವನ್ನು ಬಲಪಡಿಸಿದ್ದಲ್ಲದೆ, ರೋಹನ್ ಬೆಳೆಯಲು ಸಹಾಯ ಮಾಡುವ ರಾಚಮ್ಮನ ಆತ್ಮವಿಶ್ವಾಸವನ್ನು ಹೆಚ್ಚಿಸಿವೆ.

ಪೋಷಕರ ಸಭೆಗಳಿಂದ ರಾಚಮ್ಮ ಬಹಳಷ್ಟು ಮಾಹಿತಿಯನ್ನು ಪಡೆದರು. ರೋಹನ್ ಜೊತೆ ಸರಳವಾದ, ಆನಂದದಾಯಕ ಚಟುವಟಿಕೆಗಳನ್ನು ರಚಿಸಲು ಆಕೆ ಬಳಸಬಹುದಾದ ಹಲವು ಪ್ರಾಯೋಗಿಕ ವಿಚಾರಗಳನ್ನು ಕಂಡುಕೊಂಡರು. ಉದಾಹರಣೆಗೆ ಕಥೆಗಳನ್ನು ಹೇಳುವುದು, ಹಾಡುಗಳನ್ನು ಹಾಡುವುದು ಅಥವಾ ಅವನ ಮೋಟಾರ್ ಕೌಶಲ ಮತ್ತು ಅರಿವಿನ ಬೆಳವಣಿಗೆಯನ್ನು ಉತ್ತೇಜಿಸುವ ಆಟಗಳನ್ನು ಆಡುವುದು. ಆಕೆ ಕೂಡ ಈ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಇದರಿಂದಾಗಿ ರೋಹನ್‌ನ ಕಲಿಕಾ ಪ್ರಯಾಣದಲ್ಲಿ ಅವನೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ ಎಂದು ಆಕೆ ಭಾವಿಸುತ್ತಾರೆ ಮತ್ತು ಅವನ ಪ್ರಗತಿಯನ್ನು

ನೋಡಿದಾಗ ಆಕೆ ಹೆಮ್ಮೆಪಡುತ್ತಾರೆ. ಈ ಪ್ರಾಯೋಗಿಕ ಒಳಗೊಳ್ಳುವಿಕೆಯ ಪರಿಣಾಮವಾಗಿ, ರೋಹನ್ ನ ಬೆಳವಣಿಗೆಯನ್ನು ನಿರ್ಧರಿಸುವಲ್ಲಿ ಎಷ್ಟು ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಸಂವಹನ ಎಷ್ಟು ಮುಖ್ಯವಾಗಿವೆ ಎಂಬುದರ ಬಗ್ಗೆ ಅವರಿಗೆ ಈಗ ಉತ್ತಮ ತಿಳುವಳಿಕೆ ಇದೆ.

## ಆಟಿಕೆ ವಸ್ತು ಸಂಗ್ರಹಾಲಯ ಸ್ಥಾಪನೆ

ಮನೆ ಭೇಟಿಗಳ ಸಮಯದಲ್ಲಿ, ಅಂಗನವಾಡಿಯಿಂದ ಹಿಂದಿರುಗಿದ ನಂತರ, ಮಕ್ಕಳು ಪರದೆಗಳ ಮುಂದೆ (ಟಿವಿ ಅಥವಾ ಮೊಬೈಲ್) ಹೆಚ್ಚಿನ ಸಮಯವನ್ನು ಕಳೆಯುವುದನ್ನು ಸಾಮಾನ್ಯವಾಗಿ ಗಮನಿಸಬಹುದು. ಈ ಸಮಸ್ಯೆಯನ್ನು ಪರಿಹರಿಸಲು, ಆಟಿಕೆ ವಸ್ತು ಸಂಗ್ರಹಾಲಯಗಳನ್ನು ಪ್ರಾರಂಭಿಸಬಹುದು ಮತ್ತು ಅಂಗನವಾಡಿ ಶಿಕ್ಷಕಿಯರನ್ನು ಈ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಲು ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಜ್ಞಾನ ಮತ್ತು ವಿಧಾನಗಳೊಂದಿಗೆ ಸಜ್ಜುಗೊಳಿಸಬಹುದು. ಶಿಕ್ಷಕರು ಸ್ಥಳೀಯ ಸಮುದಾಯದಿಂದ ಸಹಾಯವನ್ನು ಪಡೆಯುತ್ತಾರೆ, ದಾನ ಮಾಡಿದ ಆಟಿಕೆಗಳು ಮತ್ತು ಸಂಪನ್ಮೂಲಗಳನ್ನು ಸಂಗ್ರಹಿಸುತ್ತಾರೆ ಮತ್ತು ಪೋಷಕರು ತಮ್ಮ ಮಕ್ಕಳ ಮನೆ ಬಳಕೆಗೆ ಅಭಿವೃದ್ಧಿಗೆ ಸೂಕ್ತವಾದ ಆಟದ ಸಾಮಗ್ರಿಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ರಚಿಸುತ್ತಾರೆ.

ಪೋಷಕರು ಆಟಿಕೆ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿ ತಮ್ಮ ಮಕ್ಕಳಿಗಾಗಿ ಆಟಿಕೆಗಳನ್ನು ತೆಗೆದುಕೊಳ್ಳಬಹುದು. ಅವರು ಈ ಆಟಿಕೆಗಳನ್ನು ಮನೆಯಲ್ಲಿ ಒಂದು ವಾರ ಇಟ್ಟು ಬಳಸಬಹುದು. ಈ ಉಪಕ್ರಮವು ಮಕ್ಕಳಿಗೆ ವಿವಿಧ ಆಟಿಕೆಗಳನ್ನು ಒದಗಿಸುವುದಲ್ಲದೆ, ಅಂಗನವಾಡಿ ಕೇಂದ್ರಗಳಲ್ಲಿ ಅವರು ಕಲಿಯುವ ವಿಷಯಗಳನ್ನು ಬಲಪಡಿಸುತ್ತದೆ ಮತ್ತು ವಿಸ್ತರಿಸುತ್ತದೆ. ಇದು ಅವರು ಮನೆಯಲ್ಲಿಯೂ ಸಹ ತಮ್ಮ ಬೆಳವಣಿಗೆಯನ್ನು ಮುಂದುವರಿಸಲು ಅನುವು ಮಾಡಿಕೊಡುತ್ತದೆ. ಅಂಗನವಾಡಿ ಶಿಕ್ಷಕರು ಮನೆಗಳಿಗೆ ನೀಡಲಾಗುವ ಆಟಿಕೆಗಳ ವಿವರವಾದ ದಾಖಲೆಗಳನ್ನು ನಿರ್ವಹಿಸುತ್ತಾರೆ ಮತ್ತು ಅವುಗಳನ್ನು ಉತ್ತಮವಾಗಿ ನಿರ್ವಹಿಸಲಾಗಿದೆಯೇ ಮತ್ತು ಸಮಯಕ್ಕೆ ಸರಿಯಾಗಿ ಹಿಂದಿರುಗಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಈ ವ್ಯವಸ್ಥೆಯು ಮಕ್ಕಳಲ್ಲಿ ಜವಾಬ್ದಾರಿಯ ಪ್ರಜ್ಞೆಯನ್ನು ಹುಟ್ಟುಹಾಕುತ್ತದೆ ಮತ್ತು ನೀಡಲಾದಸಂಪನ್ಮೂಲಗಳ ಆರೈಕೆಯ ಮಹತ್ವವನ್ನು ಅವರಿಗೆ ಕಲಿಸುತ್ತದೆ.

ಪೋಷಕರ ಸಭೆಗಳ ಸಮಯದಲ್ಲಿ, ಅಂಗನವಾಡಿ ಶಿಕ್ಷಕರು ಮಕ್ಕಳಿಗೆ ಆಟದ ಮೂಲಕ ಸಮಸ್ಯೆಗಳನ್ನು ಪರಿಹರಿಸಲು, ಸೃಜನಶೀಲತೆಯನ್ನು ಬೆಳೆಸಿಕೊಳ್ಳಲು ಮತ್ತು ಅವರನ್ನು ನೋಡಿಕೊಳ್ಳುವ ಜನರೊಂದಿಗೆ ತಮ್ಮ ಸಂಬಂಧವನ್ನು ಬಲಪಡಿಸಲು ಕಲಿಯುತ್ತಾರೆ ಎಂದು ವಿವರಿಸಬಹುದು. ಉದಾಹರಣೆಗೆ, ಆಟಿಕೆ ವಸ್ತುಸಂಗ್ರಹಾಲಯವು ಒಗಟುಗಳು, ಬ್ಲಾಕ್‌ಗಳು, ಪೆಗ್ ಬೋರ್ಡ್‌ಗಳು, ಮಣಿಗಳು, ಪೇರಿಸುವ ಕಪ್‌ಗಳು ಇತ್ಯಾದಿಗಳನ್ನು ಹೊಂದಿರುತ್ತದೆ. ಬ್ಲಾಕ್‌ಗಳು ಅಥವಾ ಕಾರ್ಡ್ ಬೋರ್ಡ್‌ನಂತಹ ಆಟಿಕೆಗಳೊಂದಿಗೆ ಆಟವಾಡುವುದರಿಂದ ಮಕ್ಕಳು ಸಮಸ್ಯೆ ಪರಿಹರಿಸುವ ಮತ್ತು ಸ್ವತಂತ್ರ ಕೌಶಲಗಳನ್ನು ಪಡೆಯಲು ಹೇಗೆ ಸಹಾಯ ಮಾಡುತ್ತದೆ; ಮತ್ತು ಬಣ್ಣ ವಿಂಗಡಣೆ ಮತ್ತು ಎಣಿಕೆಯಂತಹ ಚಟುವಟಿಕೆಗಳಿಗೆ ಮಣಿಗಳನ್ನು ಬಳಸುವುದು ಉತ್ತಮ ಮೋಟಾರ್ ಕೌಶಲ ಮತ್ತು ಆರಂಭಿಕ ಅಂಕಗಣಿತದ ಪರಿಕಲ್ಪನೆಗಳನ್ನು ಅಭಿವೃದ್ಧಿಪಡಿಸಲು ಹೇಗೆ ಸಹಾಯ ಮಾಡುತ್ತದೆ ಎಂದು ಶಿಕ್ಷಕರು ಪೋಷಕರಿಗೆ ಹೇಳುತ್ತಾರೆ.

## ಅಂಗನವಾಡಿ ಹಬ್ಬ

ಅಂಗನವಾಡಿಗಳ ಪಾತ್ರವನ್ನು ಮರು ವ್ಯಾಖ್ಯಾನಿಸಲು ನಾವು ನಿರಂತರವಾಗಿ ಶ್ರಮಿಸುತ್ತೇವೆ. ಅಂಗನವಾಡಿಗಳ ಬಗ್ಗೆ ಪೋಷಕರ ಗ್ರಹಿಕೆಗಳನ್ನು ಬೆಳೆಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ನಾವು ನಂಬುತ್ತೇವೆ. ನಾವು ಆರಂಭಿಸಿರುವ ಪ್ರಮುಖ ಉಪಕ್ರಮಗಳಲ್ಲಿ ಒಂದು ಅಂಗನವಾಡಿ ಹಬ್ಬ.

> **ಶಿಕ್ಷಕರು, ಭಾಷಾಭಿವೃದ್ಧಿಯ ಅಭ್ಯಾಸಗಳು, ಸೃಜನಾತ್ಮಕ ಕಲೆಗಳು, ಶಾರೀರಿಕ ಆಟ ಮತ್ತು ಅರಿವಿನ ಆಟಗಳಂತಹ ವಿವಿಧ ಬೆಳವಣಿಗೆ ಚಟುವಟಿಕೆಗಳನ್ನು ನಡೆಸುವ ಅವಕಾಶಗಳನ್ನು ಮುಂದಿಡುತ್ತಾರೆ. ಪೋಷಕರು ಈ ಚಟುವಟಿಕೆಗಳನ್ನು ಪ್ರತ್ಯಕ್ಷದರ್ಶಿಯಾಗಿರುತ್ತಾರೆ ಮತ್ತು ಅಂಗನವಾಡಿಯ ಸಂದರ್ಭದಲ್ಲಿ ಕಲಿಯುವ ಕ್ಷಮತೆಯ ಬಗ್ಗೆ ಎಚ್ಚರದಿಂದಿರುತ್ತಾರೆ.**

ಇದು ಅಂಗನವಾಡಿಗಳನ್ನು ಕೇವಲ ಆರೈಕೆಯ ಸ್ಥಳಗಳಿಂದ ಸಕ್ರಿಯ ಕಲಿಕೆಯ ಕೇಂದ್ರಗಳಾಗಿ ಪರಿವರ್ತಿಸುವ ಗುರಿಯನ್ನು ಹೊಂದಿರುವ ಆಚರಣೆಯಾಗಿದೆ. ಈ ಕಾರ್ಯಕ್ರಮವು ಈ ಕೇಂದ್ರಗಳಲ್ಲಿ ಕಲಿಕೆ ಮತ್ತು ಅಭಿವೃದ್ಧಿಯ ಸಾಧ್ಯತೆಗಳನ್ನು ಪ್ರದರ್ಶಿಸುತ್ತದೆ ಮತ್ತು ಬಾಲ್ಯ ಶಿಕ್ಷಣದ ಮಹತ್ವವನ್ನು ಒತ್ತಿಹೇಳುತ್ತದೆ.


ಭಾಷಾ ಅಭಿವೃದ್ಧಿ ವ್ಯಾಯಾಮಗಳು, ಸೃಜನಶೀಲ ಕಲೆಗಳು, ದೈಹಿಕ ಆಟಗಳು ಮತ್ತು ಅರಿವಿನ ಆಟಗಳಂತಹ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರದರ್ಶಿಸಲು ಶಿಕ್ಷಕರು ಸ್ಥಳಗಳನ್ನು ಒದಗಿಸುತ್ತಾರೆ. ಪೋಷಕರು ಈ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸುತ್ತಾರೆ, ಮತ್ತು ಅವರಿಗೆ ಅಂಗನವಾಡಿಯಲ್ಲಿನ ಕಲಿಕೆಯ ಸಾಮರ್ಥ್ಯದ ಬಗ್ಗೆ ಅರಿವಿರುತ್ತದೆ.

ಪೋಷಕರು ತಮ್ಮ ಮಗುವಿನ ಬೆಳವಣಿಗೆಯನ್ನು ಬೆಂಬಲಿಸಲು ಆಟ ಆಧಾರಿತ ಕಲಿಕೆ, ಸಕಾರಾತ್ಮಕ ಶಿಸ್ತು ಮತ್ತು ಕಥೆ ಹೇಳುವಿಕೆಯಂತಹ ಸರಳ ದೈನಂದಿನ ಚಟುವಟಿಕೆಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳುತ್ತಾರೆ. ಈ ಕಾರ್ಯಕ್ರಮವು ಪೋಷಕರು, ಶಿಕ್ಷಕರು ಮತ್ತು ಸಮುದಾಯದ ನಡುವಿನ ಸಹಯೋಗವನ್ನು ಉತ್ತೇಜಿಸುತ್ತದೆ ಮತ್ತು ತಮ್ಮ ಮಗುವಿನ ಶಿಕ್ಷಣಕ್ಕೆ ಸಕ್ರಿಯವಾಗಿ ಕೊಡುಗೆ ನೀಡಲು ಮತ್ತು ಬಲವಾದ ಬೆಂಬಲ ಸಂಕೀರ್ಣ ವ್ಯವಸ್ಥೆಯನ್ನು ನಿರ್ಮಿಸಲು ಕುಟುಂಬಗಳಿಗೆ ಅಧಿಕಾರ ನೀಡುತ್ತದೆ.

## ಮುಂದಿನ ದಾರಿ

ಆರಂಭಿಕ ವರ್ಷಗಳಲ್ಲಿ ಪೋಷಕರ ಪಾತ್ರವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಜಾಗೃತಿ ಮೂಡಿಸುವ ಮೂಲಕ ಮತ್ತು ಪ್ರಾಯೋಗಿಕ ತೊಡಗಿಸಿಕೊಳ್ಳುವಿಕೆ ವಿಚಾರಗಳನ್ನು ಒದಗಿಸುವ ಮೂಲಕ, ನಾವು ಪೋಷಕರು ತಮ್ಮ ಮಗುವಿನ ಬೆಳವಣಿಗೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಸಬಲೀಕರಣಗೊಳಿಸಬಹುದು. ಮಕ್ಕಳು ತಮ್ಮ ಪೂರ್ಣ ಸಾಮರ್ಥ್ಯವನ್ನು ತಲುಪಲು ಅನುವು ಮಾಡಿಕೊಡುವ ಪೋಷಣೆಯ ವಾತಾವರಣವನ್ನು ನಾವು ಒಟ್ಟಾಗಿ ರಚಿಸಬಹುದು.

[1] ಮಕ್ಕಳ ಜಾಗೃತಿ, ಬೆಂಗಳೂರು ಮೂಲದ ಸರ್ಕಾರೇತರ ಸಂಸ್ಥೆಯಾಗಿದ್ದು, ಸುಸ್ಥಿರ ಮತ್ತು ಸಮಾನ ಸಮಾಜವನ್ನು ನಿರ್ಮಿಸಲು ಮಕ್ಕಳ ಮತ್ತು ವೈವಿಧ್ಯಮಯ ಗುಂಪುಗಳ ಸಮಗ್ರ ಅಭಿವೃದ್ಧಿಯತ್ತ ಕೆಲಸ ಮಾಡುತ್ತಿದೆ.



**ಅಮೃತಾ ಮುರಳಿ** ಅವರು ಮಕ್ಕಳ ಜಾಗೃತಿಯಲ್ಲಿ ಆರಂಭಿಕ ಶಿಕ್ಷಣದ ಪ್ರಯತ್ನಗಳ ನೇತೃತ್ವ ವಹಿಸಿದ್ದಾರೆ. ಇಲ್ಲಿ ಅವರು ಅಂಗನವಾಡಿಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಜೊತೆಗೆ ಅಮೃತಾ ಅವರು ಟೀಚ್ ಫಾರ್ ಇಂಡಿಯಾದಲ್ಲಿ ಫೆಲೋ ಆಗಿದ್ದಾರೆ ಮತ್ತು ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಮತ್ತು ಶಿಕ್ಷಕರೊಂದಿಗೆ 10 ವರ್ಷಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

**ಸಂಪರ್ಕ:** amrutha@makkalajagriti.org

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಎಲ್ಲ ಮಕ್ಕಳಿಗೂ ಕಲಿಯಲು ಸಮಾನ ಅವಕಾಶವಿರಬೇಕು

ಛೋಟೆ ಲಾಲ್ ತನ್ವರ್

**ಮಕ್ಕಳ ಕಲಿಯುವ ಸಾಮರ್ಥ್ಯಕ್ಕೆ ಮಿತಿಯೇ ಇಲ್ಲ. ಆದರೆ, ಶಾಲೆಯನ್ನು ಶಿಕ್ಷಿಸುವ ಒಂದು ಸ್ಥಳವನ್ನಾಗಿ ಭಾವಿಸಿ ಅವರು ಶಾಲೆ ಬರಲು ಭಯಪಡಬಹುದು. ಇಂತಹ ಸಂದರ್ಭಗಳಲ್ಲಿ, ಶಿಕ್ಷಕರು ಮಧ್ಯಪ್ರವೇಶಿಸಿ, ಮಕ್ಕಳಲ್ಲಿ ಮಾಲೀಕತ್ವ ಮತ್ತು ಸ್ವಾಭಿಮಾನದ ಭಾವನೆಯನ್ನು ಬೆಳೆಸಬಹುದು. ಮಕ್ಕಳ ಕಲಿಕೆಯ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು, ಅವರ ಜೊತೆ ಪ್ರೀತಿ ವಾತ್ಸಲ್ಯದಿಂದ ವ್ಯವಹರಿಸಿ, ಮತ್ತು ವೈವಿಧ್ಯತೆಯನ್ನು ಗೌರವಿಸಿ ಶಿಕ್ಷಕರು ಮಕ್ಕಳ ಮನಸ್ಸನ್ನು ಬದಲಾಯಿಸಬಹುದು. ಇದು ಸವಾಲಿನ ಕೆಲಸವೇ, ಆದರೆ ಶಿಕ್ಷಕರ ಮಾನವೀಯ ಮತ್ತು ವೃತ್ತಿಪರ ಪ್ರಯತ್ನಗಳಿಂದ ಇದು ಖಂಡಿತ ಸಾಧ್ಯವಾಗುತ್ತವೆ.**



ಚಿತ್ರ 1 : ವೃತ್ತಾಕಾರದಲ್ಲಿ ಕುಳಿತುಕೊಳ್ಳುವುದರಿಂದ ಶಿಕ್ಷಕರಿಗೆ, ಮಕ್ಕಳನ್ನು ಗಮನಿಸಲು, ಕಲಿಕೆಯಲ್ಲಿ ಎಲ್ಲರನ್ನೂ ಒಳಗೊಳ್ಳುವಂತೆ ಮಾಡಲು ಮತ್ತು ಪ್ರತಿ ವಿದ್ಯಾರ್ಥಿಗೂ ಅವಕಾಶ ಕೊಡಲು ಸಾಧ್ಯವಾಗುತ್ತದೆ.

ನಾವು ಶಾಲೆಯನ್ನು ಪ್ರಾರಂಭಿಸಿದಾಗ, ಯಾವ ಮಕ್ಕಳಿಗೆ ಪ್ರವೇಶಕ್ಕೆ ಆದ್ಯತೆ ನೀಡಬೇಕೆಂದು ಸ್ಪಷ್ಟಪಡಿಸುವ ಪ್ರಯತ್ನವನ್ನು ಮಾಡಲಾಯಿತು. ಪರಸ್ಪರ ಚರ್ಚೆಗಳ ನಂತರ, ಶಾಲೆಗೆ ಹೋಗದ ಅಥವಾ ನಿರೀಕ್ಷೆಯಂತೆ ಕಲಿಯಲು ಸಾಧ್ಯವಾಗದ ಅವಕಾಶ ವಂಚಿತ ಮಕ್ಕಳನ್ನು ಆರಂಭದಲ್ಲಿ ಶಾಲೆಗೆ ಸೇರಿಸಿಕೊಳ್ಳಬೇಕೆಂದು ನಿರ್ಧರಿಸಲಾಯಿತು. ಈ ಸಂಬಂಧವಾಗಿ, ನಾವು ಬಾಮೋರ್ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಗೆ ಹೋಗಿದ್ದೆವು. ಏಕೆಂದರೆ ಅಲ್ಲಿನ ಶಿಕ್ಷಕರಿಗೆ ಹಳ್ಳಿಯಲ್ಲಿ ಶಾಲೆ ಬಿಟ್ಟ ಮಕ್ಕಳ ಬಗ್ಗೆ ತಿಳಿದಿತ್ತು. ಅವರು ಶಾಲೆ ಬಿಟ್ಟವರ ಪಟ್ಟಿಯನ್ನು ಮತ್ತು 4 ಮತ್ತು 5ನೇ ತರಗತಿಗಳನ್ನು ತಲುಪಿದ ನಂತರವೂ ಸರಿಯಾಗಿ ಓದುವ ಮತ್ತು ಬರೆಯುವ ಕೌಶಲವನ್ನು ಗಳಿಸದೆ ಶಾಲೆಗೆ ದಾಖಲಾಗಿದ್ದವರ ಹೆಸರುಗಳನ್ನು ನಮಗೆ ನೀಡಿದರು.

ನಾವು ಈ ಮಕ್ಕಳನ್ನು ಅವರ ವಯಸ್ಸಿನ ಆಧಾರದ ಮೇಲೆ 1ರಿಂದ 5ನೇ ತರಗತಿಗಳಿಗೆ ದಾಖಲಿಸಿದ್ದೇವೆ. 5ನೇ ತರಗತಿಗೆ 14 ಮಕ್ಕಳು ದಾಖಲಾಗಿದ್ದರು. ಈ ಮಕ್ಕಳಲ್ಲಿ, ಶೇಕಡಾ 70-80ರಷ್ಟು ಮಕ್ಕಳಿಗೆ ಅಕ್ಷರಗಳು ಮತ್ತು ಸ್ವರಗಳು ಅರ್ಥವಾಗುತ್ತಿರಲಿಲ್ಲ, ಅಥವಾ ಅರ್ಥಪೂರ್ಣ ಪದಗಳನ್ನು ರೂಪಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಮಕ್ಕಳಲ್ಲಿ, ಶಾಲೆಯ ಹೆಸರು ಕೇಳಿದರೆ ಹೆದರುತ್ತಿದ್ದ ಒಬ್ಬ ವಿದ್ಯಾರ್ಥಿನಿ ಇದ್ದಳು. ಶಾಲೆಯಲ್ಲಿ ಇತರ ಮಕ್ಕಳನ್ನು ಹೊಡೆಯುವುದನ್ನು ಅವಳು ನೋಡಿದ್ದರಿಂದ ಮತ್ತು ಶಿಕ್ಷಕರಿಂದ ಸ್ವತಃ ತಾನೇ ಶಿಕ್ಷೆಗೆ ಗುರಿಯಾಗಿದ್ದರಿಂದ ಶಾಲೆಯ ಬಗ್ಗೆ ಅವಳ ಕಲ್ಪನೆಯು ಹೊಡೆತ ಮತ್ತು ಚಿತ್ರಹಿಂಸೆಯ ಸ್ಥಳವಾಗಿ ರೂಪುಗೊಂಡಿತು. ನಾವು ಆ ವಿದ್ಯಾರ್ಥಿನಿಯನ್ನು ಹಳ್ಳಿಯಲ್ಲಿ ಭೇಟಿಯಾಗಲು ಪ್ರಯತ್ನಿಸಿದಾಗಲೆಲ್ಲಾ, ಶಾಲಾ ಅಧಿಕಾರಿಗಳ ಹೆಸರು ಕೇಳಿದ ಕೂಡಲೇ ಅವಳು ಓಡಿಹೋಗುತ್ತಿದ್ದಳು. ಅವಳ ಹೆತ್ತವರು, “ಏನು ಮಾಡಬೇಕು? ನಾವು ಶಾಲೆಗೆ ಹೋಗು ಎಂದು ಯಾವಾಗಲೂ ಹೇಳುತ್ತೇವೆ, ಆದರೆ ಅವಳು ಹೋಗುವುದೇ ಇಲ್ಲ” ಎಂದು ಹೇಳಿದರು. ಹಲವು ದಿನಗಳವರೆಗೆ ಆ ವಿದ್ಯಾರ್ಥಿನಿ ನಮ್ಮನ್ನು ಭೇಟಿಯಾಗಲು ಧೈರ್ಯ ಮಾಡಲಿಲ್ಲ; ಅವಳಿಗೆ ಶಾಲೆಯೆಂದರೆ ಭಯ.

ಹೀಗೆ, ಶಾಲೆಯು ವಿವಿಧ ವಯಸ್ಸಿನ, ವಿಭಿನ್ನ ಶೈಕ್ಷಣಿಕ ಮಟ್ಟಗಳ ಮತ್ತು ವಿಭಿನ್ನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯ ಶಾಲೆ ಬಿಟ್ಟ ಮಕ್ಕಳನ್ನು ಒಳಗೊಂಡಂತೆ 85 ಮಕ್ಕಳೊಂದಿಗೆ ಪ್ರಾರಂಭವಾಯಿತು. ನಮ್ಮ ಮುಂದಿದ್ದ ಸವಾಲು ಕೇವಲ ಬೋಧನೆ ಮತ್ತು ಕಲಿಕೆಯಲ್ಲ, ಬದಲಾಗಿ ಈ ಎಲ್ಲಾ

ಹಿನ್ನೆಲೆಗಳ ಮಕ್ಕಳನ್ನು ಸೇರಿಸಿಕೊಳ್ಳುವ ಮೂಲಕ 'ನಾವು' ಎಂಬ ಭಾವನೆಯನ್ನು ಜಾಗೃತಗೊಳಿಸುವುದು ಮತ್ತು ಪೋಷಿಸುವುದು ಕೂಡ ಆಗಿತ್ತು. ಶಾಲೆಗಳು ಸಾಮಾನ್ಯವಾಗಿ ದಾಖಲಾತಿ ಸಮಯದಲ್ಲಿ ವಿವಿಧ ಹಿನ್ನೆಲೆಗಳಿಂದ ಬಂದ ಮಕ್ಕಳ ದಾಖಲಾತಿಯನ್ನು ಸಮನ್ವಯ ಎಂದು ಪರಿಗಣಿಸುತ್ತವೆ. ಆದರೆ ಸಮನ್ವಯ ಕೇವಲ ದಾಖಲಾತಿಯ ಮೂಲಕ ಸಂಭವಿಸುವುದಿಲ್ಲ. ಅವರಿಗೆ, ತರಗತಿಯ ಮತ್ತು ಶಾಲಾ ಪ್ರಕ್ರಿಯೆಗಳು ಹೆಚ್ಚು ಮುಖ್ಯವಾಗಿವೆ.

ಶಾಲೆಯಲ್ಲಿ ಸಮನ್ವಯತೆಯ ವಾತಾವರಣವನ್ನು ಸೃಷ್ಟಿಸಲು ನಾವು ಕೆಲವು ಪರಿಣಾಮಕಾರಿ ಪ್ರಯತ್ನಗಳನ್ನು ಮಾಡಿದ್ದೇವೆ. ಪ್ರವೇಶ ಪ್ರಕ್ರಿಯೆಯ ಸಮಯದಲ್ಲಿ ನಾವು ಮಕ್ಕಳೊಂದಿಗೆ ಕ್ರೀಡಾ ಚಟುವಟಿಕೆಗಳನ್ನು ನಡೆಸಿದ್ದೇವೆ. ಈ ಚಟುವಟಿಕೆಗಳ ಮೂಲಕ ಪರಿಚಯ ಮತ್ತು ಪರಸ್ಪರ ಸೌಹಾರ್ದದ ವಾತಾವರಣವು ಬೆಳೆಯಲು ಪ್ರಾರಂಭಿಸಿತು. ಮಕ್ಕಳು ನಮ್ಮೊಂದಿಗೆ ಬೆರೆಯಲು ಪ್ರಾರಂಭಿಸಿದರು. ಇದರ ಪರಿಣಾಮವಾಗಿ ಶಾಲೆಯಲ್ಲಿ ದಾಖಲಾತಿ ಹೆಚ್ಚಾಯಿತು ಮಾತ್ರವಲ್ಲದೆ, ಶಾಲೆಯೆಂದರೆ ಹೆದರುತ್ತಿದ್ದ ವಿದ್ಯಾರ್ಥಿಗಳು ಸಹ ಶಾಲೆಗೆ ಬರಲು ಸಿದ್ಧರಾದರು. ಇದೇ ರೀತಿಯ ಶಾಲೆಯ ಭಯದಿಂದ ತುಂಬಿದ್ದ ಇತರ ಮಕ್ಕಳು ಸಹ ಶಾಲೆಗೆ ಬರಲು ಪ್ರಾರಂಭಿಸಿದರು.

ಪ್ರತಿಯೊಂದು ಮಗುವೂ ಅಪಾರ ಕಲಿಕೆಯ ಸಾಮರ್ಥ್ಯವನ್ನು ಹೊಂದಿರುತ್ತದೆ ಮತ್ತು ಈ ಎಲ್ಲಾ ಮಕ್ಕಳು ಕಲಿಯಬಹುದು ಎಂಬ ನಂಬಿಕೆಯೊಂದಿಗೆ ನಾವು ಈ ಮಕ್ಕಳೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿದೆವು. ಮಕ್ಕಳಿಗೆ ಸುರಕ್ಷಿತ, ಮೌಲ್ಯಯುತವಾದ, ವಾತ್ಸಲ್ಯ ಸಿಕ್ಕಾಗ ಮತ್ತು ತಮ್ಮಲ್ಲೇ ಭರವಸೆಯನ್ನು ಹೊಂದಿದಾಗ ಅವರು ಉತ್ತಮವಾಗಿ ಕಲಿಯುತ್ತಾರೆ ಎಂಬುದು ನಮಗೆ ಸ್ಪಷ್ಟವಾಗಿತ್ತು. ಈ ತಿಳುವಳಿಕೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಮಕ್ಕಳೊಂದಿಗೆ ಕಾರ್ಯತತ್ಪರರಾದೆವು. ಸಮನ್ವಯ ಶಿಕ್ಷಣಕ್ಕೆ ಹಲವು ಆಯಾಮಗಳಿದ್ದು, ಅವುಗಳ ಬಗ್ಗೆ ಯೋಚಿಸಿ ಕೆಲಸ ಮಾಡಬೇಕಾಗುತ್ತದೆ. ಉದಾಹರಣೆಗೆ, ಮಕ್ಕಳು ಯಾವ ಸಾಮಾಜಿಕ, ಭಾಷಾ ಮತ್ತು ಆರ್ಥಿಕ ಹಿನ್ನೆಲೆಯಿಂದ ಬಂದಿದ್ದಾರೆ ಮತ್ತು ಶಾಲೆಯು ಈ ಮಕ್ಕಳೊಂದಿಗೆ ಹೇಗೆ ವ್ಯವಹರಿಸುತ್ತದೆ ಇತ್ಯಾದಿ. ನಾವು ಊಹಿಸುವುದಕ್ಕೆ ವಿರುದ್ಧವಾಗಿ, ಮಕ್ಕಳು ಪರಿಸರವನ್ನು ಗಮನಿಸುವ, ಅನುಭವಿಸುವ ಮತ್ತು ಗ್ರಹಿಸುವ ತೀಕ್ಷ್ಣ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಹಿರಿಯರ ಹಾವಭಾವಗಳಿಂದಲೇ ಅವರು ತಮ್ಮ ಬಗ್ಗೆ ಹಿರಿಯರು ಯಾವ ರೀತಿಯ ಅಭಿಪ್ರಾಯವನ್ನು ಹೊಂದಿದ್ದಾರೆಂದು ಬಹಳ ಬೇಗನೆ ಊಹಿಸಿಬಿಡುತ್ತಾರೆ.

ಶಿಕ್ಷಕರ ಗುಂಪಿನಲ್ಲಿ ಎಲ್ಲ ಮಕ್ಕಳೂ ಸಮಾನರು ಎಂದು ಭಾವಿಸಬೇಕು ಮತ್ತು ಅವರ ಮನಸ್ಸಿನಲ್ಲಿ ಯಾವುದೇ ತಾರತಮ್ಯದ ಭಯ ಇರಬಾರದು ಎಂಬ ಸ್ಪಷ್ಟತೆ ಇತ್ತು. ಸಾಮಾನ್ಯವಾಗಿ ಮಕ್ಕಳಿಗೆ ಎಲ್ಲೆಡೆ ಸೂಚನೆಗಳನ್ನು ಮಾತ್ರ ನೀಡಲಾಗುವುದು, ಹೀಗಾಗಿ ಎಲ್ಲಾ ಮಕ್ಕಳನ್ನು ಶಾಲಾ ಪ್ರಕ್ರಿಯೆಗಳಲ್ಲಿ ಹೇಗೆ ತೊಡಗಿಸಿಕೊಳ್ಳಬೇಕೆಂದು ನಾವು ಕಂಡುಹಿಡಿಯಲು ಪ್ರಯತ್ನಿಸಿದೆವು. 8-10 ವರ್ಷದ ಮಗು ತನ್ನ ಸ್ವಂತ ವಿವೇಚನೆಯಿಂದ ಏನನ್ನೂ ಕೂಡ ಮಾಡಬಹುದು ಎಂದು ಹಿರಿಯರು ನಂಬುವುದಿಲ್ಲ. ಎರಡನೆಯ ಅಂಶವೆಂದರೆ ಶಾಲಾ ವ್ಯವಸ್ಥೆಯಲ್ಲಿ ಮಗುವಿನ ಪರಿಸರದ ತಿಳುವಳಿಕೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗುತ್ತದೆ. 6 ವರ್ಷದ ಮಗುವಿನ ಕಲಿಕೆಯನ್ನು ಭಾಷೆ ಮತ್ತು ಪರಿಸರದ ಬಗ್ಗೆ ಅವನ ತಿಳುವಳಿಕೆಗೆ ಅನುಗುಣವಾಗಿ ಯೋಜಿಸಿದರೆ, ಫಲಿತಾಂಶಗಳು ವಿಭಿನ್ನವಾಗಿರುತ್ತವೆ. ಮಕ್ಕಳೊಂದಿಗೆ ಸಂವಹನ ಸಾಧಿಸಲು, ನಾವು ಅವರ ಸ್ಥಳೀಯ ಭಾಷೆ, ಅವರ ಜಾನಪದ ಹಾಡುಗಳು ಮತ್ತು ಜಾನಪದ ಕಥೆಗಳನ್ನು ಸಂಯೋಜಿಸಲು ಪ್ರಯತ್ನಿಸಿದೆವು. ಮಕ್ಕಳಿಗೆ ಕೆಲವು ಮಕ್ಕಳ ಹಾಡುಗಳ ಅನುಭವವನ್ನು ನೀಡಲಾಯಿತು, ಅದು ಒಂದಲ್ಲ ಒಂದು ರೀತಿಯಲ್ಲಿ ಅವರ ಪರಿಸರದ ಅನುಭವಗಳಿಗೆ ಸಂಬಂಧಿಸಿದೆ. "ಹೇ ಮೋಡಗಳೇ, ಕಪ್ಪು ಮೋಡಗಳೇ, ಸ್ವಲ್ಪ ಕುಣಿಯಲು ಬನ್ನಿ, ತಂಪಾದ ಗಾಳಿಯನ್ನು ನಿಮ್ಮೊಂದಿಗೆ ತನ್ನಿ, ಸ್ವಲ್ಪ ಕುಣಿಯಲು ಬನ್ನಿ," "ಅಲೆಮಾರಿ ತನ್ನ ಒಂಟೆ ಬಂಡಿಯಲ್ಲಿ ಉಪ್ಪನ್ನು ತಂದ," ಇತ್ಯಾದಿ. ಇವು ಆ ಮಕ್ಕಳ ಜೀವನಕ್ಕೆ ಆಳವಾಗಿ ಸಂಬಂಧಿಸಿರುವ ಮಕ್ಕಳ ಹಾಡುಗಳು ಮತ್ತು ಅವರ ಜೀವನವು ಒಂದು ರೀತಿಯಲ್ಲಿ ಈ ಹಾಡುಗಳಲ್ಲಿರುವ ನುಡಿಗಟ್ಟುಗಳಿಂದ ಪ್ರಭಾವಿತವಾಗಿರುವಂತೆ ತೋರುತ್ತದೆ.

ಇದರ ಪರಿಣಾಮವಾಗಿ, ತಾವು ಓದಲು ಮತ್ತು ಬರೆಯಲು ಕಲಿಯುವುದಿಲ್ಲವೆಂದು ತಿಳಿದಿದ್ದ ಎಲ್ಲಾ ಮಕ್ಕಳು, ತಾವು ಕೇಳಿದ ಕಥೆಗಳು ಮತ್ತು ಕವಿತೆಗಳನ್ನು ಕ್ರಮೇಣ ಆನಂದಿಸಲು ಪ್ರಾರಂಭಿಸಿದರು. ಆರಂಭದಲ್ಲಿ, ಈ ಮಕ್ಕಳು ಗುಂಪುಗಳಲ್ಲಿ ಕವಿತೆಗಳನ್ನು ಪಠಿಸುತ್ತಿದ್ದರು. ತಮ್ಮ ಪ್ರದರ್ಶನವನ್ನು ನೋಡಿ ಯಾರೂ ನಗುವುದಿಲ್ಲ ಎಂಬ ಭಯದಿಂದ ಹೊರಬಂದಾಗ ಮತ್ತು ನಾವು ಹರ್ಷೋದ್ಗಾರಗೊಂಡಾಗ, ಮಕ್ಕಳು ಪ್ರೋತ್ಸಾಹಿತರಾದರು. ನಂತರ ಈ ಮಕ್ಕಳು ಬೆಳಗಿನ ಸಭೆಯಲ್ಲಿ ಏಕಾಂಗಿಯಾಗಿ ಸಣ್ಣ ಕಥೆಗಳು ಮತ್ತು ಕವಿತೆಗಳನ್ನು ಪ್ರಸ್ತುತಪಡಿಸಲು ಪ್ರಾರಂಭಿಸಿದರು. ಇದು ದೊಡ್ಡ ಮತ್ತು ಸಣ್ಣ ವಯಸ್ಸಿನ ಮತ್ತು ಅಧ್ಯಯನದಲ್ಲಿ ಹಿಂದುಳಿದ ಪ್ರತಿಯೊಬ್ಬರಿಗೂ ಆರಾಮದಾಯಕವೆನಿಸುವಂತೆ ಮಾಡಿತು.

ದಾಖಲಾತಿಯ ನಂತರ ಸಮನ್ವಯವು ಕೇವಲ ಬೋಧನಾ ಪ್ರಕ್ರಿಯೆಗಳನ್ನು ಸಮಗ್ರ ಮತ್ತು ಸುಗಮವಾಗಿಸುವ ಮೂಲಕ ಮಾತ್ರ ಸಂಭವಿಸುವುದಿಲ್ಲ, ಜೊತೆಗೆ ಶಾಲೆಯ ಇತರ ಪ್ರಕ್ರಿಯೆಗಳು ಸಹ ಸಮಗ್ರವಾಗಿರಬೇಕು. ಶಾಲಾ ತಂಡವು ತಮ್ಮದೇ ಆದ ತಿಳುವಳಿಕೆ ಮತ್ತು ಗ್ರಹಿಕೆಗಳ ಮೇಲೆ ನಿರಂತರವಾಗಿ ಕೆಲಸ ಮಾಡುವ ಅಗತ್ಯವನ್ನು ಮನಗಂಡಿತು. ಶಾಲಾ ಪ್ರಕ್ರಿಯೆಗಳನ್ನು ಸಮಗ್ರವಾಗಿಸಲು, ಶಾಲಾ ನಿರ್ವಹಣೆಯಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ವಿವಿಧ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳಲ್ಲಿ ಕೆಲವು – ಮಧ್ಯಾಹ್ನದ ಬಿಸಿಯೂಟ ಸಮಿತಿ, ಭದ್ರತಾ ಸಮಿತಿ, ಕ್ರೀಡಾ ಸಮಿತಿ, ಗ್ರಂಥಾಲಯ ಸಮಿತಿ, ಅಸೆಂಬ್ಲಿ ಸಮಿತಿ, ಇತ್ಯಾದಿ. ಇವು ಎಲ್ಲಾ ಮಕ್ಕಳಿಗೆ ಭಾಗವಹಿಸಲು ಅವಕಾಶಗಳನ್ನು ಒದಗಿಸಿದವು ಮತ್ತು ಎಲ್ಲಾ ವರ್ಗದ, ವಯಸ್ಸಿನ ಮತ್ತು ಹಿನ್ನೆಲೆಗಳ ಮಕ್ಕಳನ್ನು ಒಳಗೊಂಡಿತ್ತು. ಮಕ್ಕಳ ಜೊತೆಗೆ, ಶಿಕ್ಷಕರು ಸಹ ಎಲ್ಲಾ ಸಮಿತಿಗಳಲ್ಲಿ ಸೇರುವುದು ಅಗತ್ಯವಾಗಿತ್ತು. ಮಕ್ಕಳು ಜವಾಬ್ದಾರಿಗಳನ್ನು ಪೂರೈಸುವುದರ ಜೊತೆಗೆ ತಮ್ಮದೇ ಆದ ಪ್ರಾಮುಖ್ಯತೆಯನ್ನು ಅರಿತುಕೊಳ್ಳಲು ಪ್ರಾರಂಭಿಸಿದಾಗ, ಅವರು ವಸ್ತುಗಳು ಮತ್ತು ಪ್ರಕ್ರಿಯೆಗಳ ಕಡೆಗೆ ಮಾಲೀಕತ್ವದ ಭಾವನೆಯನ್ನು ಅನುಭವಿಸಲು ಪ್ರಾರಂಭಿಸಿದರು. ಅವರು ಹೆಚ್ಚು ಆತ್ಮವಿಶ್ವಾಸದಿಂದ ತಮ್ಮ ಪಾತ್ರವನ್ನು ನಿರ್ವಹಿಸಲು ಪ್ರಾರಂಭಿಸಿದರು. ಅವರ ಈ ಆತ್ಮವಿಶ್ವಾಸ ತರಗತಿಯಲ್ಲೂ ಪ್ರತಿಫಲಿಸಲಾರಂಭಿಸಿತು. ಈ ರೀತಿಯ ಒಳಗೊಳ್ಳುವಿಕೆ ಮಕ್ಕಳಲ್ಲಿ 'ನಾವು' ಎಂಬ ಭಾವನೆಯನ್ನು ಮೂಡಿಸಿತು ಮತ್ತು ಕೆಲಸಗಳನ್ನು ಹೇಗೆ ಅಚ್ಚುಕಟ್ಟಾಗಿ ಮಾಡಲಾಗುತ್ತದೆ ಎಂಬುದರ ಕಲ್ಪನೆಯನ್ನು ಸಹ ಅವರಿಗೆ ನೀಡಿತು.

ಇವೆಲ್ಲವುಗಳೊಂದಿಗೆ ಮಕ್ಕಳು ತಮಗೆ ತಾವೇ ಸೃಜನಾತ್ಮಕವಾದ ರೀತಿಯಲ್ಲಿ ವ್ಯಕ್ತಪಡಿಸಿಕೊಳ್ಳಬಹುದಾದಂಥ ಮಕ್ಕಳ ಆಸಕ್ತಿಯ ಬೇರೆ ಯಾವ ಯಾವ ಕ್ಷೇತ್ರಗಳಿವೆ ಎಂಬುದನ್ನೂ ತಿಳಿದುಕೊಳ್ಳುವ ಪ್ರಯತ್ನವನ್ನೂ ಮಾಡಿದೆವು. ಕೆಲ ಮಕ್ಕಳು ಮಾತನಾಡುವುದರ ಮೂಲಕ ತಮ್ಮ ಅನುಭವವನ್ನು ವ್ಯಕ್ತಪಡಿಸಲು ಬಯಸಿದರೆ, ಇನ್ನು ಕೆಲವು ಮಕ್ಕಳು ಚಿತ್ರಗಳ ಮಾಧ್ಯಮದ ಮೂಲಕ ತಾವು ಹೇಳಬೇಕಾದ್ದನ್ನು ಹೇಳಬಯಸುತ್ತಾರೆ. ಇವುಗಳಲ್ಲಿ ಶಿಶುಗೀತೆಗಳನ್ನು ಹಾಡುವುದು, ಹಾವಭಾವಗಳೊಂದಿಗೆ ಅವುಗಳನ್ನು ಪ್ರಸ್ತುತಪಡಿಸುವುದು, ಮತ್ತು ಚಿತ್ರಗಳ ಮೂಲಕ ಅಭಿವ್ಯಕ್ತಿಸುವುದು ಇವುಗಳು ಪ್ರಮುಖವಾದವು. ಚಿತ್ರಗಳ ಮೂಲಕ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವ ಅನುಭವವನ್ನು ಕಲಾ ಶಿಕ್ಷಕರ ನೆರವಿನಿಂದ ನೆರವೇರಿಸಲಾಯಿತು. ಇವುಗಳಲ್ಲಿ ಮಕ್ಕಳು ಕೇಳಿದ ಅಥವಾ ಓದಿದ ಕವಿತೆ-ಕಥೆಗಳನ್ನು ಚಿತ್ರಾತ್ಮಕವಾದ ಮಾಧ್ಯಮಗಳ ಮೂಲಕ ಹೇಳುವ ಪ್ರಯತ್ನ ಮಾಡಿದೆವು. ಇದು ಮಕ್ಕಳಿಗೆ ಸಾಕಷ್ಟು ಆಕರ್ಷಕವಾಗಿ ಕಂಡಿತು. ಮಕ್ಕಳಿಗೆ ತಮ್ಮ ಲೋಕದ ಅನುಭವಗಳನ್ನು ವ್ಯಕ್ತಪಡಿಸುವಂಥ ಸ್ವಾತಂತ್ರ್ಯ ದೊರಕಿದ್ದೇ ಆದರೆ ಈ ವಿಧಾನದೊಂದಿಗೆ ಪ್ರತಿಯೊಬ್ಬ ಬಾಲಕನೂ ಜೊತೆಗೂಡಲಿಚ್ಛಿಸುತ್ತಾನೆ. ಶಿಕ್ಷಕರು ತಮ್ಮ ವಿಷಯಗಳ ಪರಿಧಿಯೊಳಗಿನಿಂದ ಹೊರಬಂದು ಕಲಿಸುವ ಎಲ್ಲ ವಿಷಯಗಳ ಕ್ಷೇತ್ರಗಳ ನಡುವೆ ಸಂಬಂಧವನ್ನು ಕಾಣಬಲ್ಲರಾದರೆ ಮಾತ್ರ ಇದು ಸಾಧ್ಯವಾಗುತ್ತದೆ. ಹೀಗೆ ಮಾಡುತ್ತ ಶಿಕ್ಷಕನು ಮಕ್ಕಳ ಕಲಿಕೆಯ ಸಾಧ್ಯತೆಗಳ ದಾರಿಯನ್ನು ತೆರೆಯುತ್ತಾ ಹೋಗುತ್ತಾನೆ. ಅದರಿಂದ ಕಲಿಕೆಯ ಪ್ರಕ್ರಿಯೆ ಸುಲಭ ಮತ್ತು ಜೀವಂತಿಕೆಯುಳ್ಳದ್ದಾಗಿಬಿಡುತ್ತದೆ. ಹೀಗೆ ಶೈಕ್ಷಣಿಕ ಚಟುವಟಿಕೆಗಳು ಎಲ್ಲ ಮಕ್ಕಳಿಗೂ ಪಾಲ್ಗೊಳ್ಳಲು ಅವಕಾಶ ನೀಡುವುದರ ಜೊತೆ ಜೊತೆಗೆ ಶಿಕ್ಷಕರಿಗೆ



ಚಿತ್ರ 2 : ವಿದ್ಯಾರ್ಥಿಗಳು ಚಿತ್ರ ಬಿಡಿಸಲು ಬಣ್ಣಗಳೊಂದಿಗೆ ತಯಾರಾಗಿರುವುದು.

ಅವರ ವೈಯಕ್ತಿಕ ಪ್ರತಿಭೆಗಳನ್ನು ಗುರುತಿಸುವ ಮತ್ತು ಸಿದ್ಧಗೊಳಿಸುವ ಅವಕಾಶವನ್ನು ಒದಗಿಸುತ್ತದೆ. ಉದಾಹರಣೆಗೆ, ಒಬ್ಬ ಬಾಲಕ ದೀಪಾವಳಿಯಲ್ಲಿ ತನ್ನ ಸುತ್ತುಮುತ್ತಲ ದೃಶ್ಯಗಳನ್ನು ಚಿತ್ರಿಸುತ್ತ ತಾನು ಅವುಗಳನ್ನು ನೋಡಿದ ರೀತಿಯಲ್ಲೇ ಮತ್ತು ಅನುಭವಕ್ಕೆ ತಂದುಕೊಂಡ ರೀತಿಯಲ್ಲೇ ವರ್ಣಿಸಿದ್ದಾನೆ. ಶಿಕ್ಷಕರು ಮಕ್ಕಳಿಗೆ ಅವರ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಅವರ ಅಭಿರುಚಿಗೆ ತಕ್ಕಂತೆ ವ್ಯಕ್ತಪಡಿಸುವ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿದಾಗ, ಚಿತ್ರ ಬಿಡಿಸುವುದು, ಬಿಡಿಸಿದ ಚಿತ್ರಗಳ ಬಗ್ಗೆ ಮಾತನಾಡುವುದು, ಮತ್ತು ಆ ಮಾತನ್ನು ಭಾಷಿಕ ಚಿಹ್ನೆಗಳ ಮೂಲಕ ವ್ಯಕ್ತಪಡಿಸುವುದೇ ಮೊದಲಾದಂಥ ಅದೇ ಬಗೆಯ ಆನಂದದ ಧಾರೆಯಾಗಿಬಿಡುತ್ತಾರೆ.

ಈ ಉದಾಹರಣೆಗಳು ಪ್ರತಿಯೊಂದು ಮಗುವೂ ವಿಶಿಷ್ಟವಾದದ್ದು ಮತ್ತು ಕಲಿಕೆಯು ತನ್ನದೇ ಆದ ಸನ್ನಿವೇಶದಲ್ಲಿರುವ ವಿಷಯಗಳೊಂದಿಗೆ ಸೇರಿಸುವ ಮೂಲಕ ಕಲಿಸಿದಾಗ ಅದು ಪರಿಣಾಮಕಾರಿಯಾಗುತ್ತದೆ ಎಂಬುದನ್ನು ಬಲಪಡಿಸುತ್ತದೆ. ಪ್ರತಿ ಮಗುವಿನ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಕರಿಗೆ ಅವಕಾಶ ಸಿಗುತ್ತದೆ. ಈ ಇಡೀ ಪ್ರಕ್ರಿಯೆಯ ಮೂಲ ತತ್ವವೆಂದರೆ ಒಂದು ಮಗುವನ್ನು ಇನ್ನೊಂದು ಮಗುವಿನೊಂದಿಗೆ ಹೋಲಿಸಬಾರದು. ಪ್ರತಿಯೊಂದು ಮಗುವೂ ವಿಭಿನ್ನವಾದ ಕಲಿಕೆಯ ವಿಧಾನವನ್ನು ಹೊಂದಿರುತ್ತದೆ, ಹಾಗಾದರೆ ನಾವು ಮಕ್ಕಳನ್ನು ಪ್ರತಿದಿನ ಹೋಲಿಕೆಯ ಗಿರಣಿಯ ಮೂಲಕ ನಿರ್ದಯವಾಗಿ ಏಕೆ ಪುಡಿಮಾಡುತ್ತೇವೆ? ಹಾಗೆ ಮಾಡುವುದರಿಂದ ಅವರಲ್ಲಿ ಅಸಮರ್ಪಕತೆಯ ಭಾವನೆಯನ್ನು ಏಕೆ ಸೃಷ್ಟಿಸುತ್ತೇವೆ! ಹೀಗೆ ಮಾಡುವುದರಿಂದ ಅವರು ಕಲಿಕೆಯಲ್ಲಿ ಆತ್ಮವಿಶ್ವಾಸ ಕಳೆದುಕೊಳ್ಳುತ್ತಾರೆ ಮತ್ತು ಕೆಲವು ಅಧ್ಯಯನ ಕ್ಷೇತ್ರಗಳಲ್ಲಿ ದುರ್ಬಲರಾಗಿರುವ ಮಕ್ಕಳು ಓದಿನಿಂದ ದೂರ ಸರಿಯಲು ಪ್ರಾರಂಭಿಸುತ್ತಾರೆ. ಹೆಚ್ಚುವರಿಯಾಗಿ, ತರಗತಿಯಲ್ಲಿ ಅನುಭವಗಳಿಗೆ ಅವಕಾಶ ಸಿಗದ ಮಕ್ಕಳು ಸಹ ತಮ್ಮನ್ನು ಹೊರಗಿಡಲಾಗಿದೆ ಎಂದು ಭಾವಿಸಲು ಪ್ರಾರಂಭಿಸುತ್ತಾರೆ.

ಈ ಕಲಿಕೆ ಮತ್ತು ಬೋಧನೆಯ ಪ್ರಯಾಣವು ಮಕ್ಕಳು ಮತ್ತು ಶಿಕ್ಷಕರಿಗೆ ರೋಮಾಂಚನಕಾರಿ ಹಾಗು ಮೋಜಿನದಾಗಿತ್ತು. ಮಕ್ಕಳು ಶಾಲೆಗೆ ಸಂತೋಷದಿಂದ ಬರುತ್ತಿದ್ದರು ಮತ್ತು ಅವರು ಕಲಿಯುತ್ತಿದ್ದರು. ಸುಮಾರು 4-5 ತಿಂಗಳ ಅವಧಿಯಲ್ಲಿ ಸಂಯೋಜಿತ ಪ್ರಯತ್ನಗಳ ಮೂಲಕ, ಶಾಲೆಯ ಬಗ್ಗೆ ಭಯಪಡುತ್ತಿದ್ದ ಮತ್ತು ಶಾಲೆಯ ನಿರೀಕ್ಷೆಗಳಿಗಿಂತ ಕಡಿಮೆ ಕಲಿಯುತ್ತಿದ್ದ 8-10 ಮಕ್ಕಳು ಕಥೆಗಳು ಮತ್ತು ಕವಿತೆಗಳನ್ನು ಓದಲು, ಓದಿದ ಪಠ್ಯಗಳ ಬಗ್ಗೆ ಮಾತನಾಡಲು ಮತ್ತು ವಿವಿಧ ಮಾಧ್ಯಮಗಳ ಮೂಲಕ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು ಪ್ರಾರಂಭಿಸಿದರು. ಈಗ ಈ ಮಕ್ಕಳಿಗೆ ಎಲ್ಲಾ ಭಾಷಾ ಕೌಶಲಗಳಲ್ಲಿ ಸಮಾನ ರೀತಿಯಲ್ಲಿ ಕೆಲಸ ಮಾಡುವ ಅವಕಾಶ ಸಿಗುತ್ತಿದೆ. ವಿಭಿನ್ನ ವಯೋಮಾನದವರ ನಡುವೆ ಯಾವುದೇ ಪ್ರತ್ಯೇಕತೆಯಿಲ್ಲ, ಮತ್ತು ವಿಭಿನ್ನ ಹಂತದ ಕಲಿಕೆಯಲ್ಲಿರುವ ಮಕ್ಕಳಲ್ಲಿಯೂ ಸಹ, ಪ್ರತ್ಯೇಕತೆಯ ಬದಲು ನಿರಾಳತೆಯ ಭಾವನೆ ಇತ್ತು. ಇದು ವಾತಾವರಣವನ್ನು ಹೆಚ್ಚು ಆರಾಮದಾಯಕವಾಗಿಸಿತು. ಮತ್ತು ಈಗ, ಕನಿಷ್ಠ ಶಾಲೆಯ ಗೋಡೆಗಳ ಒಳಗೆ, ಮಕ್ಕಳಲ್ಲಿ ಮುಂದೆ-ಹಿಂದೆ ಮತ್ತು ಮೇಲು-ಕೀಳು ಎಂಬ ಭಾವನೆಗಳು ಕಂಡುಬರುತ್ತಿಲ್ಲ. ಮಕ್ಕಳಿಗೆ ಇದು ಒಂದು ದೊಡ್ಡ ಸಾಧನೆಯ ಅನುಭವವಾಗಿತ್ತು, ಮತ್ತು ಸರಿಯಾದ ಪರಿಸರ ಮತ್ತು ಪ್ರಕ್ರಿಯೆಯನ್ನು ನೀಡಿದರೆ, ಮಕ್ಕಳು ಚೆನ್ನಾಗಿ ಓದಲು ಮತ್ತು ಬರೆಯಲು ಕಲಿಯಬಹುದು ಮತ್ತು ಉತ್ತಮ ಮಾನವೀಯ ಮೌಲ್ಯಗಳತ್ತ ಸಾಗಬಹುದು ಎಂಬ ಸ್ಫೂರ್ತಿದಾಯಕ ಭಾವನೆ ನಮಗಿತ್ತು.

> **ಪ್ರತಿ ಮಗುವೂ ತನ್ನ ಮಟ್ಟಿಗೆ ವಿಶಿಷ್ಟವಾಗಿರುತ್ತದೆ. ಆ ಮಗುವಿಗೆ ಅದರ ಸಂದರ್ಭಗಳಿಗೆ ತಕ್ಕ ವಸ್ತುವಿಚಾರಗಳೊಂದಿಗೆ ಜೋಡಿಸಿ ಕಲಿಸಿದಾಗ ಅದರ ಕಲಿಕೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ**

ಮೇಲೆ ತಿಳಿಸಲಾದ ಕೆಲವು ಕಾರ್ಯವಿಧಾನಗಳಿಂದ, ಮಕ್ಕಳ ಭಾಷೆ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳನ್ನು ಅವರ ಕಲಿಕೆಯಲ್ಲಿ ಸೇರಿಸುವುದರಿಂದ ತರಗತಿಯು ಸಂಪನ್ಮೂಲ-ಸಮೃದ್ಧವಾಗಬಹುದು ಎಂದು ನಾವು ಕಲಿತಿದ್ದೇವೆ. ಅದನ್ನು ಒಂದು ದೊಡ್ಡ ಅವಕಾಶವನ್ನಾಗಿ ಪರಿವರ್ತಿಸಬಹುದು. ನಿರ್ದಿಷ್ಟ ಪರಿಸರದಿಂದ ಬರುವ ಮಕ್ಕಳೊಂದಿಗೆ ಕೆಲಸ ಮಾಡುವ ಶಿಕ್ಷಕರ ಗುಂಪು ಈ ಅಂಶಗಳನ್ನು ಹೇಗೆ ನಿಭಾಯಿಸುತ್ತದೆ ಎಂಬುದರ ಮೇಲೆ ಅದು ಅವಲಂಬಿತವಾಗಿರುತ್ತದೆ. ಮಕ್ಕಳ ವೈವಿಧ್ಯತೆಯ ಬಗ್ಗೆ ಶಿಕ್ಷಕ ಗುಂಪಿನ ಮನೋಭಾವ ಮತ್ತು ಅವರ ನಡವಳಿಕೆ ಮತ್ತು ತರಗತಿ ಪ್ರಕ್ರಿಯೆಗಳಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡುವ ಸಾಮರ್ಥ್ಯವು ಅವರು ಅದನ್ನು ಸಂಪನ್ಮೂಲವಾಗಿ ನೋಡುತ್ತಾರೋ ಅಥವಾ ಅಡಚಣೆಯಾಗಿ ನೋಡುತ್ತಾರೋ ಎಂಬುದನ್ನು ನಿರ್ಧರಿಸುತ್ತದೆ. ಈ ವೈವಿಧ್ಯತೆಯನ್ನು ಒಂದು ಅಡಚಣೆಯಾಗಿ ನೋಡದಿದ್ದರೆ, ಅದು ಒಂದು ಸಂಪನ್ಮೂಲವಾಗುತ್ತದೆ ಮತ್ತು ಮಕ್ಕಳು ಶಾಲೆಯಿಂದ ನಿರೀಕ್ಷಿಸುವ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗುತ್ತದೆ. ಶಿಕ್ಷಕರಿಗೆ ಈ ದೃಷ್ಟಿಕೋನವಿದ್ದರೆ ಅವರು ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ ಎಂಬುದು ಖಂಡಿತವಾಗಿಯೂ ನಿಜ ಹಾಗು ದೃಷ್ಟಿಕೋನವಿಲ್ಲದಿದ್ದರೆ ಸಂಪನ್ಮೂಲಗಳು ಸಹ ಒಂದು ಅಡಚಣೆಯಂತೆ ಕಾಣಿಸಬಹುದು.



**ಛೋಟೆ ಲಾಲ್ ತನ್ವರ್** ಅವರು ರಾಜಸ್ಥಾನದ ಲೋಕ್ ಜಂಬಿಶ್ ಯೋಜನೆಯಲ್ಲಿ 3 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅಲ್ಲದೆ ಅವರು ಬೋಧ ಶಿಕ್ಷಾ ಸಮಿತಿಯಲ್ಲಿ 12 ವರ್ಷಗಳ ಕಾಲ ಶಿಕ್ಷಕರಿಗೆ ಶೈಕ್ಷಣಿಕ ಬೆಂಬಲವನ್ನು ನೀಡಿದ್ದಾರೆ. ಪ್ರಸ್ತುತ ಜೈಪುರ ಜಿಲ್ಲೆಯ ಚಕ್ಸು ಬ್ಲಾಕ್‌ನ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಬ್ಲಾಕ್ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಸಂಪರ್ಕ:** chhote.lal@azimpremjifoundation.org

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಸರಿತಾ ಈಗ ಕಲಿಯುತ್ತಿದ್ದಾಳೆ



**ಜೈ ಶೇಖರ್**

ನಾನು ಉತ್ತರಪ್ರದೇಶದ ಬಲರಾಂಪುರ ಜಿಲ್ಲೆಯ ಗ್ರಾಮೀಣ ಪ್ರದೇಶದ ಶಾಲೆಯೊಂದರಲ್ಲಿ ಶಿಕ್ಷಕನಾಗಿದ್ದೇನೆ. ಗ್ರಂಥಾಲಯ ಮತ್ತು ಅದಕ್ಕೆ ಸಂಬಂಧಿಸಿದ ಶೈಕ್ಷಣಿಕ ಚಟುವಟಿಕೆಗಳಲ್ಲಿ ನನಗೆ ಹೆಚ್ಚಿನ ಆಸಕ್ತಿ. ಶಾಲಾ ಗ್ರಂಥಾಲಯವನ್ನು ಸಕ್ರಿಯ ಮತ್ತು ಉತ್ಸಾಹಭರಿತವಾಗಿಸಲು ಸದಾ ಪ್ರಯತ್ನಗಳನ್ನು ನಡೆಸುತ್ತಾ ಬಂದಿದ್ದೇನೆ. ಸಂವಾದದ ಮೂಲಕ, ನಾನು ಮಕ್ಕಳನ್ನು ಸ್ವತಂತ್ರವಾದ ಮತ್ತು ಮೌಲಿಕವಾದ ಲೇಖನಗಳನ್ನು ಬರೆಯಲು ಪ್ರೋತ್ಸಾಹಿಸುತ್ತಲೇ ಇರುತ್ತೇನೆ. ಹೀಗಾಗಿ ನಾವು ಮಕ್ಕಳ ಬರಹಗಳಿಂದ ತುಂಬಿದ ಬಹಳಷ್ಟು ಭಿತ್ತಿಪತ್ರಿಕೆಗಳನ್ನು ರಚಿಸಿದ್ದೇವೆ. ಮಕ್ಕಳು ಬರೆದ ಕಥೆಗಳು ಪ್ಲುಟೊ, ಚಕ್ಮಕ್ ಮತ್ತು ಸೈಕಲ್‌ನಂತಹ ಮಕ್ಕಳ ನಿಯತಕಾಲಿಕೆಗಳಲ್ಲಿಯೂ ಪ್ರಕಟವಾಗಿವೆ.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ತರಗತಿಯ ಹೆಚ್ಚಿನ ಮಕ್ಕಳ ಶೈಕ್ಷಣಿಕ ಮಟ್ಟವು ಸವಾಲಿನದ್ದಾಗಿತ್ತು. ಅವರಲ್ಲಿ ಹೆಚ್ಚಿನವರು ಇನ್ನೂ ವರ್ಣಮಾಲೆ ಮತ್ತು ಅಕ್ಷರ ಗುರುತಿಸುವಿಕೆಯ ಮಟ್ಟದಲ್ಲಿದ್ದರು. ಮಕ್ಕಳಲ್ಲಿ ಯಾರೂ ಸ್ವತಂತ್ರವಾಗಿ ಓದುವ ಮತ್ತು ಬರೆಯುವ ಮಟ್ಟದಲ್ಲಿ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಗ್ರಂಥಾಲಯಕ್ಕೆ ಹೋಗುವುದು, ವಿಶೇಷವಾಗಿ ಓದು ಮತ್ತು ಬರವಣಿಗೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಾಡುವುದು ನನಗೆ ತುಂಬಾ ಕಷ್ಟಕರವಾಗಿತ್ತು. ಇಂದು ಮಕ್ಕಳನ್ನು ಗ್ರಂಥಾಲಯಗಳಲ್ಲಿ ಓದುವಂತೆ ಅಭ್ಯಾಸ ಮಾಡಿಸುವುದು ಸವಾಲಿನ ಸಂಗತಿಯಾಗಿದ್ದರೂ, ಮುಂಬರುವ ದಿನಗಳಲ್ಲಿ ಅವರ ತಿಳುವಳಿಕೆಯು ಓದುವ ಸಂಸ್ಕೃತಿಯನ್ನು ಖಂಡಿತವಾಗಿಯೂ ಉತ್ತೇಜಿಸುತ್ತದೆ ಎಂದು ನಾನು ನಂಬಿದ್ದೇನೆ.

ಈ ಅವಧಿಯಲ್ಲಿ, ಬಡ ಕುಟುಂಬದ 8 ವರ್ಷದ ಸರಿತಾ ಎಂಬ ಬಾಲಕಿಯನ್ನು ನನ್ನ ತರಗತಿಗೆ ಸೇರಿಸಲಾಯಿತು. ಅವಳು ಶಾಲೆಯಿಂದ 60 ಕಿಲೋಮೀಟರ್ ದೂರದಲ್ಲಿರುವ ಹಳ್ಳಿಯಲ್ಲಿ ವಾಸಿಸುತ್ತಿದ್ದಳು. ಆ ಹಳ್ಳಿಯಲ್ಲಿ ಯಾವುದೇ ಶಾಲೆಗಳು ಇರಲಿಲ್ಲ. ಹಾಗಾಗಿ ಆಕೆ ತನ್ನ ಚಿಕ್ಕಪ್ಪನ ಜೊತೆ ವಾಸಿಸಲು ಇಲ್ಲಿಗೆ ಬಂದಳು. ಸರಿತಾಗೆ ಪುಸ್ತಕ ಮತ್ತು ಪೆನ್ಸಿಲ್ ಅನ್ನು ಸರಿಯಾಗಿ ಹಿಡಿಯುವುದು ಹೇಗೆಂಬುದೇ ತಿಳಿದಿರಲಿಲ್ಲ. ಬರೆಯಲು ಪ್ರಾರಂಭಿಸಿ ಅಕ್ಷರಗಳನ್ನು ಸರಿಯಾಗಿ ರೂಪಿಸಲು ಅವಳಿಗೆ ಬಹಳ ಸಮಯ ಹಿಡಿಯಿತು. ಆದರೂ ಆಕೆಯಲ್ಲಿ ಅಗಾಧ ಕಲಿಯುವ ಉತ್ಸಾಹವಿತ್ತು.

ಮಕ್ಕಳ ಓದಿಗೆ ನೆರವಾಗಲು ಈ ಮುಂದಿನಂತೆ ಕೆಲವು ತಂತ್ರಗಳನ್ನು ನಾನು ರೂಢಿಸಿಕೊಂಡೆ. ಹಾಡುಗಳು ಮತ್ತು ಕವಿತೆಗಳನ್ನು ಕಲಿಸಲು ಆರಂಭಿಸಿದೆ. ಮಕ್ಕಳೇ ರಚಿಸಿದ ಹಾಡುಗಳು ಮತ್ತು ಕಥೆಗಳ ಹಲವು ಭಿತ್ತಿಪತ್ರಿಕೆಗಳನ್ನು ತಯಾರಿಸಿದೆವು ಮತ್ತು ಅವನ್ನು ಮಕ್ಕಳಿಗೆ ತಲುಪುವಂತೆ ಗೋಡೆಗಳನ್ನು ಅಂಟಿಸಲಾಯಿತು. ಆ ಮೂಲಕ ಮುದ್ರಿತ ಮತ್ತು ಭಾಷಾ ಸಮೃದ್ಧ (print- and language-rich) ತರಗತಿ ರೂಪುಗೊಂಡಿತು. ಇಂತಹ ಓದುವ ಸಾಮಗ್ರಿಗಳ ಚಟುವಟಿಕೆಗಳು ಮಕ್ಕಳಿಗೆ ಓದುವ ಕಲಿಕೆಗೆ ನೆರವಾದವು.

### ಕಥೆಗಳ ಪಾತ್ರಾಭಿನಯ

ನಾನು ಮಕ್ಕಳಿಗೆ ಹೇಳಿದ ಕತೆಗಳನ್ನು ಆಧರಿಸಿ ಪಾತ್ರಾಭಿನಯಗಳನ್ನು ಮಾಡಿಸಲು ಪ್ರಾರಂಭಿಸಿದೆ. ಪ್ರಭಾತ್ ಅವರ 'ಅಚ್ಛಾ ಮೌಸೀ ಅಲ್ವಿದಾ' ಕಥೆಯಲ್ಲಿ ಮೂರು ಪಾತ್ರಗಳಿದ್ದವು - ಹಕ್ಕಿ, ಬೆಕ್ಕು ಹಾಗು ಎಮ್ಮೆ. ಕಥೆಯನ್ನು ಗಟ್ಟಿಯಾಗಿ ಓದಿದ ನಂತರ, ಮಕ್ಕಳು ತಮ್ಮದೇ ಆದ ಭಾಷೆಯಲ್ಲಿ ಸಂಭಾಷಣೆಗಳನ್ನು ಹೇಳುವ ಮೂಲಕ ಇಡೀ ಕಥೆಯನ್ನು ಅದೇ ಶೈಲಿಯಲ್ಲಿ ಪ್ರಸ್ತುತಪಡಿಸಿದರು. ಸರಿತಾ ಕೂಡ ತನ್ನ ಪಾತ್ರವನ್ನು ಪೂರ್ಣ ಹಾವಭಾವಗಳೊಂದಿಗೆ ನಿರ್ವಹಿಸಿದಳು.

ಒಂದು ದಿನ ನಾನು ಶ್ವೇತಾ ನಂಬಿಯಾರ್ ಅವರ 'ಫಸ್ಟ್ ಟೈಮ್' ಕಥೆಯನ್ನು ಓದಿ ಹೇಳಿದೆ. ಅದರಲ್ಲಿ ಶಿಕ್ಷಕರ ಪಾತ್ರ ಮುಖ್ಯವಾಗಿತ್ತು. ಪಾತ್ರಗಳ ಸಂಭಾಷಣೆ ಬಹಳ ಉದ್ದವಾಗಿದ್ದವು. ಸರಿತಾ ಈ ಸವಾಲನ್ನು ಸ್ವೀಕರಿಸಿದಳು. ಸ್ವಲ್ಪ ಸಹಾಯದಿಂದ, ಅವಳು ತನ್ನ ಪಾತ್ರವನ್ನು ಉತ್ತಮವಾಗಿ ನಿರ್ವಹಿಸಿದಳು ಕೂಡ.

### ಆಟಗಳು ಮತ್ತು ಚಿತ್ರಕಲೆ ಅವಧಿಗಳು

ಸರಿತಾಗೆ ಅನೇಕ ಹಳ್ಳಿ ಆಟಗಳು ತಿಳಿದಿದ್ದವು. ಈ ಆಟಗಳು ತರಗತಿಯ ಉಳಿದ ಮಕ್ಕಳಿಗೆ ಹೊಸದಾಗಿದ್ದವು ಮತ್ತು ಆಸಕ್ತಿದಾಯಕವಾಗಿದ್ದವು. ನಾನು ಕೂಡ ಈ ಆಟಗಳಲ್ಲಿ ಭಾಗವಹಿಸುತ್ತಿದ್ದೆ. ಸರಿತಾಳೇ ನಿಯಮಗಳನ್ನು ಎಲ್ಲರಿಗೂ ವಿವರಿಸುತ್ತಿದ್ದಳು ಹಾಗೂ ಎಲ್ಲರನ್ನೂ ಒಟ್ಟಿಗೆ ಆಟವಾಡುವಂತೆ ಮಾಡುತ್ತಿದ್ದಳು. ಅದೇ ರೀತಿ, ಕಥೆಯ ಮೇಲೆ ಚಿತ್ರಗಳನ್ನು ಬಿಡಿಸುವ ಚಟುವಟಿಕೆಯೂ ಇತ್ತು. ಎಲ್ಲ ಮಕ್ಕಳೂ ಅದನ್ನು ಪ್ರಯತ್ನಿಸಿದರು. ಆದರೆ ಸರಿತಾ ಮಾತ್ರ ಅದನ್ನು ಬಹಳ ತಲ್ಲೀನತೆಯಿಂದ ಮಾಡುತ್ತಿದ್ದಳು. ನಾವು ಮಕ್ಕಳ ಕಲ್ಪನೆಯ ಆಧಾರದ ಮೇಲೆ ಚಿತ್ರಗಳನ್ನು ಬಿಡಿಸಿ ಬಣ್ಣ ಹಚ್ಚಲು ಪ್ರೋತ್ಸಾಹಿಸಿದೆವು.

### ಪ್ರಕೃತಿಯಿಂದ ರಂಗೋಲಿ

ಮಕ್ಕಳು ಮರಗಳಿಂದ ಬಿದ್ದ ಎಲೆಗಳನ್ನು ಸಂಗ್ರಹಿಸಿದರು. ಅವುಗಳ ಗಾತ್ರ ಮತ್ತು ಬಣ್ಣಗಳಲ್ಲಿ ವೈವಿಧ್ಯತೆ ಇತ್ತು. ಮಕ್ಕಳು ಕಂದು, ಹಳದಿ, ಹಸಿರು ಮತ್ತು ಕೆಂಪು ಎಲೆಗಳನ್ನು ಸಂಯೋಜಿಸುವ ಮೂಲಕ ದುಂಡಾದ, ಚೌಕಾಕಾರದ ಮತ್ತು ತ್ರಿಕೋನ ಆಕಾರಗಳಲ್ಲಿ ಸುಂದರವಾದ ಸಂಯೋಜನೆಗಳನ್ನು ಮಾಡಿದರು. ಇವುಗಳಲ್ಲಿ ಅವರಿಗೆ ತಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಲು ಅವಕಾಶಗಳು ಸಿಕ್ಕವು.

ಗ್ರಂಥಾಲಯದ ಪುಸ್ತಕಗಳೊಂದಿಗೆ ಮತ್ತು ಭಾಷಾ ಸಮೃದ್ಧ ತರಗತಿಯಲ್ಲಿನ ಈ ಎಲ್ಲಾ ಪ್ರಯತ್ನಗಳ ಫಲಿತಾಂಶವೆಂದರೆ, ಹೆದರಿದ, ಮುಜುಗರದ ಹಾಗು ಜಗಳವಾಡುವ ಹುಡುಗಿಯಾಗಿದ್ದ ಸರಿತಾ ಈಗ ತರಗತಿಯ ನಾಯಕಿಯಾದಳು. ಸರಿತಾ ಶ್ರದ್ಧೆಯಿಂದ ಶೀಘ್ರದಲ್ಲೇ ಹಲವು ಹಾಡುಗಳನ್ನು ಕಲಿತದ್ದು ಇದಕ್ಕೆ

ಒಂದು ಕಾರಣ. ಮತ್ತು ಬೆಳಗ್ಗಿನ ಪ್ರಾರ್ಥನಾ ಸಭೆಯಲ್ಲಿ ನೂರಾರು ಮಕ್ಕಳು ಮತ್ತು ಶಿಕ್ಷಕರ ಮುಂದೆ ಅವಳು ಹಾಡುವಾಗಲೆಲ್ಲಾ ಸಿಗುತ್ತಿದ್ದ ಜೋರಾದ ಚಪ್ಪಾಳೆ ಅವಳ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸುತ್ತಿತ್ತು. ಎಲ್ಲರೂ ಅವಳಿಗೆ 'ಜುಗ್ನು ಭಾಯಿ' ಎಂಬ ಕವಿತೆಯ ಶೀರ್ಷಿಕೆಯ ಹೆಸರಾದ ಜುಗ್ನು ಎಂದು ಹೆಸರಿಟ್ಟರು.

ಯಾವುದೇ ಅತಿಥಿ ಅಥವಾ ಅಧಿಕಾರಿ ಶಾಲೆಗೆ ಬಂದಾಗಲೆಲ್ಲಾ, ಬಹುತೇಕ ಮಕ್ಕಳು ಹೆದರುತ್ತಿದ್ದರು ಅಥವಾ ಹಿಂಜರಿಯುತ್ತಿದ್ದರು. ಆದರೆ ಜುಗ್ನು ತನ್ನ ಹಾಡುಗಳನ್ನು ಸುಲಲಿತವಾಗಿ ಪ್ರಸ್ತುತಪಡಿಸುತ್ತಿದ್ದಳು. ಆಕೆಯಲ್ಲಿ ಹೆಚ್ಚುತ್ತಿದ್ದ ಆತ್ಮವಿಶ್ವಾಸವು ಅವಳಲ್ಲಿ ನಾಯಕತ್ವದ ಕೌಶಲ್ಯಗಳನ್ನು ಬೆಳೆಸಿತು.

ಒಂದು ದಿನ ಮಧ್ಯಾಹ್ನದ ಊಟದ ಸಮಯದಲ್ಲಿ, ಸರಿತಾ, ಎರಡನೇ ಬಾರಿ ಡಬ್ಬಿಯಲ್ಲಿ ಊಟವನ್ನು ತುಂಬಿಸಿಕೊಂಡು ಯಾರಿಗೂ ತಿಳಿಯದಂತೆ ತನ್ನ ಬ್ಯಾಗಿನಲ್ಲಿ ಇಟ್ಟುಕೊಂಡಳು. ಇದನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಯಿತು. ಬಹುಶಃ ಅವಳ ಚಿಕ್ಕಮ್ಮ ಸಾಕಷ್ಟು ಊಟ ನೀಡದೇ ಹಸಿವಿನಿಂದ ಬಳಲುತ್ತಿರಬೇಕು ಎಂದು ನಾನು ಯೋಚಿಸಿದೆ. ಅವಳು ಹಸಿವಿನಿಂದ ಕದಿಯಲು ಆರಂಭಿಸುತ್ತಿದ್ದಾಳೋ ಎಂದು ಯೋಚಿಸಿ ನನಗೆ ಚಿಂತೆಯಾಯಿತು. ನಂತರ ನಾನು ಪ್ರಭಾತ್ ಅವರ 'ಕೈಸಾ ಕೈಸಾ ಖಾನಾ' ಎಂಬ ಪುಸ್ತಕವನ್ನು ಗ್ರಂಥಾಲಯದಿಂದ ಹುಡುಕಿ ತಂದೆ. ಈ ಕಥೆಯನ್ನು ತರಗತಿಯಲ್ಲಿ ಗಟ್ಟಿಯಾಗಿ ಓದಿದೆ. ಪುಸ್ತಕ ಓದುತ್ತಾ ಮತ್ತು ಅದರ ಚಿತ್ರಗಳನ್ನು ತೋರಿಸುತ್ತಾ ನಾನು ಮಕ್ಕಳೊಂದಿಗೆ ಆಹಾರದ ಬಗ್ಗೆ ಮಾತನಾಡುತ್ತಿದ್ದೆ.

ಆಗ ಸರಿತಾ ಇವತ್ತು ತಾನು ಡಬ್ಬಿಯಲ್ಲಿ ಊಟ ಇಟ್ಟಿದ್ದೇನೆ ಅಂತ ಹೇಳಿದಳು. ಅವಳ ಸಹಪಾಠಿಗಳಿಗೆ ಇದು ತಿಳಿದಿತ್ತು. ಹಾಗಾಗಿ ಯಾರೂ ಇದರಿಂದ ಆಶ್ಚರ್ಯಪಡಲಿಲ್ಲ. ಆದರೆ ನನ್ನ ಮನಸ್ಸಿನಲ್ಲಿ ಕುತೂಹಲವಿತ್ತು. ನಾನು ಸುತ್ತು ಬಳಸಿ ಅದರ ಬಗ್ಗೆ ವಿಚಾರಿಸಿದೆ. ಇಂದು ತನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪ ಹಳ್ಳಿಗೆ ಹೋದರು ಹಾಗು ತನ್ನನ್ನೂ ಜೊತೆಗೆ ಬರುವಂತೆ ತುಂಬಾ ಒತ್ತಾಯಿಸಿದರು. ಆದರೆ ತಾನು ಓದುವುದನ್ನು ತಪ್ಪಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿ ಹಳ್ಳಿಗೆ ಹೋಗಲು ನಿರಾಕರಿಸಿದೆ ಎಂದು ಸರಿತಾ ಹೇಳಿದಳು. ಶಾಲೆ ಬಿಟ್ಟು ಹಳ್ಳಿಯಲ್ಲಿರುವ ತನ್ನ ಹತ್ತಿರದ ಬಳಿಗೆ ಹೋಗಲು ಬಯಸುವುದಿಲ್ಲ ಎಂದು ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದಳು. ಚಿಕ್ಕಪ್ಪ ಯಾವಾಗ ಹಿಂತಿರುಗುತ್ತಾರೆ ಮತ್ತು ಅಲ್ಲಿಯವರೆಗೆ ಆಕೆ ಎಲ್ಲಿರುತ್ತಾಳೆ ಎಂದು ನಾನು ತಿಳಿದುಕೊಳ್ಳಲು ಬಯಸಿದ್ದೆ. ಅದಕ್ಕೆ ಆಕೆ ಅವರು ಬರುವವರೆಗೆ ಕಾಯುತ್ತಾ ತಾನು ಮನೆಯ ಹೊರಗೆ ಕುಳಿತುಕೊಳ್ಳುವುದಾಗಿ ಹೇಳಿದಳು.

ಈ ಹುಡುಗಿಗೆ ಮನೆಯ ಹೊರಗೆ ಒಂಟಿಯಾಗಿ ಕುಳಿತರೆ ಭಯವಾಗುವುದಿಲ್ಲವೇ ಎಂದು ನಾನು ಯೋಚಿಸುತ್ತಲೇ ಇದ್ದೆ. ವಾಸ್ತವವಾಗಿ, ಶಿಕ್ಷಣದ ಹಂಬಲವು ಯಾವುದೇ ಕಠಿಣ ಪರಿಸ್ಥಿತಿಯನ್ನು ಎದುರಿಸಲು ನಮಗೆ ಕಲಿಸುತ್ತದೆ.

ಜೈ ಶೇಖರ್, ಶಿಕ್ಷಕರು, ಕಾಂಪೊಸಿಟ್ ಶಾಲೆ ಧುಸಾ, ಬಲರಾಂಪುರ, ಉತ್ತರ ಪ್ರದೇಶ

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಅವಕಾಶವಂಚಿತ ಸಮುದಾಯಗಳ ಮಕ್ಕಳು ಶಾಲೆಗೆ ಸೇರಿದಾಗ: ಒಂದು ಅನುಭವ ಕಥನ



ಮೀನಾಕ್ಷಿ ಗೌರ್

ಕೋವಿಡ್ ಅವಧಿಯ ನಂತರ, ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗಲು ಶುರುವಾಗಿತ್ತು. ನಮ್ಮ ಶಾಲೆಯಲ್ಲೂ ಸಹ ದಾಖಲಾತಿಯ ಸಮಸ್ಯೆ ಉಂಟಾಗಲಾರಂಭಿಸಿತ್ತು. ಶಾಲೆಗೆ ಸೇರಲು ಸಾಧ್ಯವಾಗದ ಮಕ್ಕಳನ್ನು ಹುಡುಕಲು ನಾನು ಶಾಲೆಯ ಸುತ್ತಲೂ ಕಣ್ಣಾಡಿಸಿ ನೋಡಿದೆ.

ಶಾಲೆಯಿಂದ ಒಂದು ಕಿಲೋಮೀಟರ್ ದೂರದಲ್ಲಿ ಕೆಲವು ಕಾಲ್ ಬೇಲಿಯಾ ಕುಟುಂಬಗಳು ತಾತ್ಕಾಲಿಕ ಡೇರೆ ಕಟ್ಟಿಕೊಂಡು ವಾಸಿಸುತ್ತಿದ್ದರು. ಅವರ ಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ. ಅವರು ಇಡೀ ದಿನ ಎಲ್ಲೆಂದರಲ್ಲಿ ಅಲೆದಾಡುವುದು, ಕಸ ತೆಗೆಯುವುದು ಮತ್ತು ಗಾಳಿಪಟ ಹಾರಿಸುವುದು ಇಂತಹವುಗಳಲ್ಲೇ ತೊಡಗಿಕೊಂಡಿರುತ್ತಿದ್ದರು. ನಾನು ಅವರ ಬಳಿ ಹೋದೆ ಮತ್ತು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುವಂತೆ ಆ ಕುಟುಂಬಗಳನ್ನು ಮನವೊಲಿಸಲು ಪ್ರಯತ್ನಿಸಿದೆ. ಆ ನಂತರ ಶಾಲೆಗೆ ಹೋಗಲು ಅರ್ಹರಾಗಿರುವ ಮಕ್ಕಳಿಗೆ ಶಾಲೆಯಲ್ಲಿ ದಾಖಲಾತಿಯನ್ನೂ ಮಾಡಿಸಲಾಯಿತು. ಶಾಲಾ ಪ್ರವೇಶಕ್ಕೆ ಅಗತ್ಯವಾದ ದಾಖಲೆಗಳು, ಆಧಾರ್ ಕಾರ್ಡ್ ಇತ್ಯಾದಿಗಳನ್ನು ಪಡೆಯಲು ಅವರಿಗೆ ಸಹಾಯ ಮಾಡಿದೆ. ಹಾಗೆ ಮಕ್ಕಳು ಶಾಲೆಗೆ ಸೇರಿದ್ದರೂ ಸಹ ಶಾಲೆಯ ಬಗ್ಗೆ ಅವರಲ್ಲಿ ಆಸ್ಥೆ ಮೂಡಿರಲಿಲ್ಲ. ಅವರು ಒಂದು ದಿನ ಶಾಲೆಗೆ ಬಂದರೆ, ನಂತರ ಒಂದು ವಾರದವರೆಗೆ ಕಣ್ಮರೆಯಾಗುತ್ತಿದ್ದರು. ನಾವು ಪ್ರಯತ್ನಿಸಿದಲ್ಲಿ ಒಂದಲ್ಲ ಒಂದು ದಿನ ಈ ಎಲ್ಲಾ ಮಕ್ಕಳು ನಿಯಮಿತವಾಗಿ ಶಾಲೆಗೆ ಬರುತ್ತಾರೆ ಎನ್ನುವ ಯೋಚನೆ ಬರುತ್ತಿತ್ತು. ಅವರನ್ನು ಶಾಲೆಗೆ ಕರೆತರಲು ನಾನು ಅವರ ಮನೆಗಳಿಗೆ ಹೋದಾಗ, ಮನೆಯವರು ನನ್ನ ಜೊತೆಗೆ ಕೆಟ್ಟದಾಗಿ ನಡೆದುಕೊಂಡರು. ಕೆಲವೊಮ್ಮೆ ಬೈಗಳೂ ಸಿಗುತ್ತಿದ್ದವು. ತಮ್ಮ ಕೆಲಸದಲ್ಲಿ ಸಹಾಯ ಮಾಡುವ ಓರ್ವ ಸದಸ್ಯನನ್ನು ನಾನು ಕಸಿದುಕೊಳ್ಳುತ್ತಿದ್ದೇನೆ ಎನ್ನುವುದು ಅವರ ಭಾವನೆಯಾಗಿತ್ತು. ಆದರೆ ವ್ಯಾಸಂಗದ ನಂತರ, ಅವರು ಉತ್ತಮ ಮನುಷ್ಯ, ಉತ್ತಮ ಪ್ರಜೆಯಾಗುತ್ತಾರೆ ಮತ್ತು ಉತ್ತಮ ಉದ್ಯೋಗವನ್ನು ಪಡೆಯುತ್ತಾರೆ ಎಂದು ನನಗೆ ಅನಿಸುತ್ತಿತ್ತು. ವಿದ್ಯಾವಂತರಾಗುವ ಮೂಲಕ ಅವರು ತಮ್ಮ ಮತ್ತು ತಮ್ಮ ಇಡೀ ಕುಟುಂಬವನ್ನು ಕಾಳಜಿಯಿಂದ ಚೆನ್ನಾಗಿ ನೋಡಿಕೊಳ್ಳಬಹುದು. ಇದಕ್ಕಾಗಿಯೇ ಸರ್ಕಾರ ಹಾಗೂ ಇನ್ನಿತರ ಹಲವಾರು ಜನರು ಎಲ್ಲರಿಗೂ ಶಿಕ್ಷಣ ನೀಡುವ ಪ್ರಯತ್ನದಲ್ಲಿ ತೊಡಗಿಕೊಂಡಿದ್ದಾರೆ. ಹಾಗಾಗಿ ನಿಮ್ಮ ಮಕ್ಕಳನ್ನೂ ಸಹ ಶಾಲೆಗೆ ಕಳುಹಿಸುವುದು ಉತ್ತಮ ಎಂದು ತಿಳಿಹೇಳುತ್ತಿದ್ದೆ.

ಸಮುದಾಯದ ಪುರುಷರಿಗೆ ವಿದ್ಯಾಭ್ಯಾಸದ ಕುರಿತು ಯಾವುದೇ ಅರಿವು ಇರಲಿಲ್ಲ. ನಾನು ಅವರ ನಿಂದನೆಗಳಿಂದ ಕುಗ್ಗುವ ಬದಲು, -"ಈ ಬೈಗುಳಗಳಿಂದ ನನಗೇನು ಮಹಾ ! ನಾಲ್ಕಾರು ಮಕ್ಕಳಾದರೂ ಶಾಲೆಗೆ ಸೇರಿದರೆ, ಆಗ ಅದರ ಮುಂದೆ ಈ ನಿಂದನೆಗಳು ಏನೇನೂ ಅಲ್ಲ" ಎಂದು ಯೋಚಿಸುತ್ತಿದ್ದೆ. ಮಕ್ಕಳಿಗೆ ಶಾಲೆಯಿಂದ ಸಿಗುವ ಸೌಲಭ್ಯಗಳನ್ನು ಒದಗಿಸಲಾಯಿತು. ಸಾಧ್ಯವಿರುವ ಎಲ್ಲ ರೀತಿಯಲ್ಲಿ ನಾವು ಅವರಿಗೆ ಸಹಾಯ ಮಾಡುತ್ತಿದ್ದೆವು. ತಾಯಂದಿರು ಮಕ್ಕಳು ಶಾಲೆಗೆ ಹೋಗುವುದನ್ನು ಇಷ್ಟಪಟ್ಟರು. ಆದರೆ ಮನೆಯ ಪುರುಷರಿಗೆ ಮಕ್ಕಳು ಶಾಲೆಗೆ ಹೋಗುವುದು ಇಷ್ಟವಿರಲಿಲ್ಲ, ವಿದ್ಯಾವಂತರಾಗಿ ಇವರು ಮಾಡುವುದೇನು ಎಂದು ಭಾವಿಸುತ್ತಿದ್ದರು. ತಾಯಂದಿರು ಕೂಲಿ ಮಾಡಲು ಹೋಗುತ್ತಿದ್ದರು. ಹಾಗಾಗಿ ಅವರಿಗೆ ಮಕ್ಕಳನ್ನು ಸಮಯಕ್ಕೆ ಸರಿಯಾಗಿ ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಮಕ್ಕಳ ಈ ಅನಿಯಮಿತತೆಯಿಂದ ನಾನು ಮತ್ತು ನನ್ನ ಸಹಶಿಕ್ಷಕರು ಸಾಕಷ್ಟು ಚಿಂತಿತರಾದೆವು. ಇದಕ್ಕಾಗಿ, ನಾವುಗಳೆಲ್ಲ ಸರದಿಯಲ್ಲಿ ಅವರುಗಳ ಮನೆಗಳಿಗೆ ಭೇಟಿ ನೀಡುವುದೆಂದು ನಿರ್ಧರಿಸಿದೆವು ಮತ್ತು ಅವರನ್ನು ಶಾಲೆಗೆ ಕರೆತರಲು ಬಹಳಷ್ಟು ಪ್ರಯತ್ನಗಳನ್ನು ಮಾಡಿದೆವು.

ಆದರೆ ನಮ್ಮ ಪ್ರಯತ್ನಗಳು ಸಾಕಾಗದೇ ಹೋಯಿತು.

ಮಕ್ಕಳು ಶಾಲೆಗೆ ಪದೇಪದೇ ಗೈರಾಗುತ್ತಿರುವ ಬಗ್ಗೆ 'ದಸ್ತಕ್' ಎಂಬ ಗುಂಪಿನಲ್ಲಿ ನಾನು ಚರ್ಚಿಸಿದೆ. ಈ ಚರ್ಚೆಗಳಿಂದ ನನಗೆ ಅರ್ಥಪೂರ್ಣ ಸಲಹೆಗಳು ಸಿಕ್ಕವು. ದಸ್ತಕ್ ಎಂಬುದು ಅಂತರ್ಜಾಲದಲ್ಲಿರುವ ಶಿಕ್ಷಕರ ಒಂದು ಗುಂಪಾಗಿದ್ದು, ಇದರಲ್ಲಿ ನಾವು ಪ್ರತಿದಿನ ಶಿಕ್ಷಣ, ಸಾಹಿತ್ಯ ಮತ್ತು ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ ಜ್ಞಾನವರ್ಧನೆಯ ಸಾಮಗ್ರಿಗಳನ್ನು ಓದುತ್ತೇವೆ. ಎಷ್ಟು ಮಕ್ಕಳು ಶಾಲೆಗೆ ಬರುತ್ತಾರೋ ಅವರಿಗಾಗಿ ಉತ್ತಮ ಬೋಧನಾ ಕೆಲಸಗಳನ್ನು ಮಾಡಿ, ಅವರಿಗೆ ಪ್ರೀತಿ ವಾತ್ಸಲ್ಯ ನೀಡಿ ಹಾಗೂ ನಿರಂತರವಾಗಿ ಅವರ ಸಮುದಾಯದೊಂದಿಗೆ ಸಂಪರ್ಕವಿಟ್ಟುಕೊಂಡಿರಿ ಎಂದು ಈ ಗುಂಪಿನಲ್ಲಿ ಸಲಹೆ ನೀಡಿದರು. ಮಕ್ಕಳ ಪೋಷಕರನ್ನು ಆಗಾಗ್ಗೆ ಶಾಲೆಗೆ ಆಹ್ವಾನಿಸಿ. ಇದರಿಂದ ಪೋಷಕರು ಶಾಲೆಯನ್ನು ನೋಡುವ ಮತ್ತು ಅವರ ಮಕ್ಕಳು ಒಳ್ಳೆಯದು ಮಾಡುವುದನ್ನು ನೋಡುವ ಅವಕಾಶ ಸಿಗುತ್ತದೆ. ಅದರಂತೆಯೇ ನಾವು ಕಾರ್ಯಪ್ರವೃತ್ತರಾದೆವು.

ದಸ್ತಕ್ ಗುಂಪಿನ ಸಲಹೆಯ ಮೇರೆಗೆ, ಶಾಲೆಯನ್ನು ಒಂದು 'ಪರಿಸರ ಸ್ನೇಹಿ ಕ್ಯಾಂಪಸ್' ಶಾಲೆಯ ಸ್ವರೂಪದಲ್ಲಿ ಅಭಿವೃದ್ಧಿ ಪಡಿಸಲಾಯಿತು. ತರಗತಿಯಲ್ಲಿನ ಕೊಠಡಿಯ ಗೋಡೆಗಳನ್ನು ಸುಂದರ ಚಿತ್ರಗಳು ಮತ್ತು ಓದಲು ಪ್ರೇರೇಪಿಸುವ ಪಠ್ಯಗಳಿಂದ ತುಂಬಿಸುವ ಪ್ರಯತ್ನಗಳನ್ನು ಮಾಡಲಾಯಿತು. ನನ್ನ ಮಗಳೂ ಸಹ ಇದರಲ್ಲಿ ಸಾಕಷ್ಟು ಸಹಾಯ ಮಾಡಿದಳು. ಗೋಡೆಗಳ ಮೇಲೆ ಪ್ರಾಣಿ - ಪಕ್ಷಿಗಳು ಮತ್ತು ವನ್ಯಜೀವಿಗಳ ಚಿತ್ರಗಳನ್ನು ಬರೆಯಲಾಯಿತು. ಕವನಗಳು, ಚಿತ್ರಗಳು ಮತ್ತು ಕಥಾಚಿತ್ರಗಳ ಪೋಸ್ಟರ್‌ಗಳನ್ನು ಬರೆದು ಗೋಡೆಯ ಮೇಲೆ ನೇತುಹಾಕಲಾಯಿತು. ಶಿಶು ಸಾಹಿತ್ಯದ ಬಳಕೆಯು ಮಕ್ಕಳಲ್ಲಿ ಶಾಲೆಯ ಕುರಿತಾಗಿ ಆಸಕ್ತಿಯನ್ನು ಹುಟ್ಟುಹಾಕುತ್ತಿತ್ತು.

ಈ ಎಲ್ಲ ಪ್ರಯತ್ನಗಳ ಸಾರ್ಥಕ ಫಲಿತಾಂಶವು, ನಿರ್ಮಲಾ ಎಂಬ 10 ವರ್ಷದ ಬಾಲಕಿಯನ್ನು ಶಾಲೆಗೆ ಸೇರಿಸಿದಾಗ ಅನಾವರಣಗೊಂಡಿತು. ಅವಳು ಮನೆಯಲ್ಲಿಯೇ ಇರುತ್ತಿದ್ದಳು ಮತ್ತು ಎರಡು ತಿಂಗಳು ಶಾಲೆಗೆ ಬಂದಿರಲಿಲ್ಲ. ಇಬ್ಬರು ಕಿರಿಯ ಸಹೋದರರನ್ನು ನೋಡಿಕೊಳ್ಳಲು ಅವಳು ಮನೆಯಲ್ಲಿಯೇ ಇರುತ್ತಾಳೆ ಎಂಬ ಕಾರಣವೂ ಸಿಕ್ಕಿತು. ಓದುವುದು ಮತ್ತು ಬರೆಯುವುದು ನಮ್ಮಂತಹ ಜನರು ಮಾಡುವ ಕೆಲಸವಲ್ಲ ಎಂಬುದನ್ನು ನಿರ್ಮಲಾಳ ಮನಸ್ಸಿನಲ್ಲಿ ಮೂಡಿಸಲಾಗಿತ್ತು. ಇದನ್ನು ಆಕೆಯ ಮನಸ್ಸಿನಿಂದ ಹೊರತೆಗೆಯಲು ಸಾಕಷ್ಟು ಶ್ರಮ ಬೇಕಾಯಿತು. ನಾವು ಆಕೆಯ ಕುಟುಂಬದೊಂದಿಗೆ ನಿರಂತರವಾಗಿ ಮಾತನಾಡುತ್ತ, ಅವರನ್ನು ಪ್ರೇರೇಪಿಸುತ್ತಲೇ ಇದ್ದೆವು. ವಿದ್ಯಾಭ್ಯಾಸದ ಪ್ರಯೋಜನಗಳನ್ನು ತಿಳಿಸಿದೆವು. ಇಷ್ಟೆಲ್ಲ ಪ್ರಯತ್ನಗಳ ಬಳಿಕ ನಿರ್ಮಲಾಳನ್ನು ಶಾಲೆಗೆ ನಿಯಮಿತವಾಗಿ ಬರುವಂತೆ ಮಾಡಲು ಸಾಧ್ಯವಾಯಿತು. ಕೆಲವು ದಿನಗಳ ನಂತರ "ನೀನು ನಿನ್ನ ತಮ್ಮಂದಿರನ್ನೂ ಕೂಡ ಶಾಲೆಗೆ ಕರೆ ತಾ" ಎಂದು ನಿರ್ಮಲಾಗೆ ಹೇಳಿದೆ. ತನ್ನ ಇಬ್ಬರು ಕಿರಿಯ ಸಹೋದರರ ಜೊತೆಗೆ ಅವರ ಮನೆಯ ವಠಾರದಲ್ಲಿದ್ದ ಇತರ ಕೆಲವು ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರಲು ಆರಂಭಿಸಿದಳು. ಈಗ, ವಿದ್ಯಾಭ್ಯಾಸದ ಕುರಿತಾಗಿನ ಅವಳ ಉತ್ಸಾಹವನ್ನು ನೋಡಿದಾಗ, ಸಾರ್ಥಕವಾದ ಕೆಲಸ ಮಾಡುತ್ತಿದ್ದೇವೆ ಎಂಬ ತೃಪ್ತ ಭಾವನೆ ನಮ್ಮಲ್ಲಿ ಮೂಡಿತ್ತು. ಅವಳು ತಾನೂ ಕಲಿಯುತ್ತಿದ್ದಾಳೆ ಮತ್ತು ಬೇರೆ ಮಕ್ಕಳಿಗೂ ಪ್ರೇರಣೆ ನೀಡುತ್ತಿದ್ದಾಳೆ. ನಿರ್ಮಲಾ ಮಾರುಕಟ್ಟೆಯಿಂದ ಸಾಮಾನು ತರುವ ಕೆಲಸ ಮಾಡುತ್ತಿದ್ದ ಕಾರಣ ಗಣಿತದ ಪ್ರಾಯೋಗಿಕ ಪ್ರಶ್ನೆಗಳನ್ನು ಬಹಳ ಬೇಗನೆ ಬಿಡಿಸುತ್ತಿದ್ದಳು. ಅಲ್ಲದೆ ಅವಳಿಗೆ ಇಂಗ್ಲಿಷ್ ನಲ್ಲೂ ಆಸಕ್ತಿ ಇದೆ. ಅವಳು ತನ್ನ ವಿದ್ಯಾಭ್ಯಾಸವನ್ನು ಈಗ ಗಂಭೀರವಾಗಿ ತೆಗೆದುಕೊಂಡಿದ್ದಷ್ಟೇ ಅಲ್ಲದೆ, ಇತರ ಮಕ್ಕಳ ಶಿಕ್ಷಣವನ್ನೂ ತನ್ನ ಜವಾಬ್ದಾರಿ ಎಂದು ಭಾವಿಸುತ್ತಾಳೆ.

ಈ ಮುನ್ನ ಮಕ್ಕಳು ಕೊಳಕು ಗಲೀಜಾದ ಬಟ್ಟೆಗಳಲ್ಲೇ ಶಾಲೆಗೆ ಬರುತ್ತಿದ್ದರು, ಆದರೆ ಈಗ ಸ್ವಲ್ಪ ಅಚ್ಚುಕಟ್ಟಾಗಿ ಶಾಲೆಗೆ ಬರಲು ಪ್ರಾರಂಭಿಸಿದ್ದಾರೆ. ಶುಚಿತ್ವದಿಂದಾಗಿ ಅವರ ಚರ್ಮ ಸಂಬಂಧಿ ಕಾಯಿಲೆಯೂ ಕಡಿಮೆ ಆಗಿದೆ. ಅವರಲ್ಲಿ ತಮ್ಮ ದೇಹದ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಅರಿವು ಹೆಚ್ಚಾಗಿದೆ. ಈ ಮಕ್ಕಳಲ್ಲಿ ಹೆಚ್ಚಿನವರು ತಂಬಾಕು ಅಥವಾ ಗುಟ್ಕಾವನ್ನು ಸೇವಿಸುತ್ತಿದ್ದರು. ಅವರಿಗೆ ವಿವಿಧ ಚಿತ್ರಗಳನ್ನು ತೋರಿಸಿ, ಅದರ ಕೆಟ್ಟ ಪರಿಣಾಮಗಳು ಮತ್ತು ಅದರಿಂದ ಉಂಟಾಗುವ ಗುಣಪಡಿಸಲಾಗದ ರೋಗಗಳು ಹರಡುವ ಬಗ್ಗೆ ತಿಳಿಹೇಳಲಾಯಿತು. ಎಲ್ಲೆಂದರಲ್ಲಿ ಎಸೆಯಲಾದ ಪ್ಲಾಸ್ಟಿಕ್ ಪ್ಯಾಕೆಟ್‌ಗಳಿಂದ ಆಗುವ ಗಲೀಜು ಮತ್ತು ಅದರಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಪರಿಚಯ ಮಾಡಿಸಲಾಯಿತು. ಇದರಿಂದ ಒಳ್ಳೆಯ ಪರಿಣಾಮವೊಂದು ಅವರಲ್ಲಿ ಉಂಟಾಗುತ್ತಿದೆ ಎಂದು ತೋರಿತು. ಈಗ, ದುಷ್ಪರಿಣಾಮಗಳ ಬಗ್ಗೆ ಅರಿವು ಹೊಂದಿರುವ ಮಕ್ಕಳು ಈ ವ್ಯಸನಗಳಿಂದ ದೂರವಿರಲು ಆರಂಭಿಸಿದ್ದಾರೆ. ಆದರೂ, ಈ ಸುಖದಾಯಕ ಸಂತಸದ ಫಲಿತಾಂಶಗಳು ಇನ್ನೂ ಸಾಕಷ್ಟು ಆಗದಿದ್ದರೂ, ವಿಫಲತೆಗಿಂತ ತುಸು ವಾಸಿಯಾಗಿದೆ. ಶಿಕ್ಷಕರು ಮತ್ತು ದಸ್ತಕ್ ಗುಂಪಿನ ಸಂಗಾತಿಗಳ ಬೆಂಬಲದೊಂದಿಗೆ, ಯಶಸ್ಸಿನ ಭರವಸೆಯಲ್ಲಿ ಇದ್ದೇವೆ.

ಮೀನಾಕ್ಷಿ ಗೌರ್, ಸರ್ಕಾರಿ ಪ್ರಾಥಮಿಕ ಶಾಲೆ, ಅಡ್ವಾಣಿ ಕಿ ಢಾಣಿ, ಸಾಂಗಾನೇರ್ ಗ್ರಾಮೀಣ, ಜೈಪುರ, ರಾಜಾಸ್ಥಾನ

ಅನುವಾದ: ಆಶಾ ಸಿಂಗ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ.



# ಪ್ರೋತ್ಸಾಹದಿಂದ ಮಕ್ಕಳ ಆತ್ಮಸ್ಥೈರ್ಯ ಹೆಚ್ಚುತ್ತದೆ

**ನಂದಿನಿ ಕುಮಾರಿ**

ನಾನು ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದೇನೆ. ಹತ್ತು ವರ್ಷಗಳ ಅನುಭವದಲ್ಲಿ, ನಾನು ಮಕ್ಕಳಿಗೆ ಕಲಿಸಿದ್ದಕ್ಕಿಂತ ಹೆಚ್ಚಿನದನ್ನು ಅವರಿಂದ ಕಲಿತಿದ್ದೇನೆ. ನಮ್ಮ ಸರ್ಕಾರಿ ಶಾಲೆಗಳಿಗೆ ಬರುವ ಬಹುತೇಕ ಮಕ್ಕಳಲ್ಲಿ, ಮೊದಲ ತಲೆಮಾರಿನ ವಿದ್ಯಾರ್ಥಿಗಳು ಹೆಚ್ಚಿರುತ್ತಾರೆ ಎಂಬುದು ಸಾಮಾನ್ಯವಾಗಿ ಕಂಡುಬರುವ ವಿಷಯವಾಗಿದೆ. ಅವರಲ್ಲಿ ಹೆಚ್ಚಿನವರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಹಿನ್ನೆಲೆಯಿಂದ ಬಂದವರು. ಇಂತಹ ಪರಿಸ್ಥಿತಿಯಲ್ಲಿ, ಎಲ್ಲ ಮಕ್ಕಳಿಗೆ ಒಂದೇ ರೀತಿಯಲ್ಲಿ ಶಿಕ್ಷಣ ನೀಡುವುದು ಕಷ್ಟ. ಕೆಲವರಿಗೆ ಪುಸ್ತಕವನ್ನು ಓದಲು ಬರುವುದಿಲ್ಲ, ಮತ್ತೆ ಕೆಲವರಿಗೆ ಬರೆಯಲು ಬರುವುದಿಲ್ಲ, ಮತ್ತು ಇನ್ನಷ್ಟು ಮಕ್ಕಳಿಗೆ ಮಾತನಾಡುವುದಕ್ಕೆ ಹಿಂಜರಿಕೆ ಇರುತ್ತದೆ. ಕೆಲವರು ಪ್ರತಿಭಾವಂತರಾಗಿರುತ್ತಾರೆ ನಿಜ, ಆದರೆ ಅವರು ಕೆಲವು ಸಂದರ್ಭಗಳಿಂದಾಗಿ ಸರಿಯಾದ ದಿಕ್ಕನ್ನು ಆರಿಸಲಾಗದೆ ದಾರಿ ತಪ್ಪಿದಂತಾಗಿರುತ್ತಾರೆ. ಪ್ರತಿಯೊಬ್ಬರಲ್ಲಿಯೂ ಅವರದೇ ಆದ ಗುಣವಿಶೇಷಗಳು ಇರುತ್ತವೆ, ವಿಭಿನ್ನ ಕೌಶಲ್ಯಗಳು ಇರುತ್ತವೆ. ಕೆಲವರು ಚೆನ್ನಾಗಿ ಹಾಡುವವರಾಗಿದ್ದರೆ, ಇನ್ನು ಕೆಲವರು ಏನನ್ನಾದರೂ ರಚಿಸುವಲ್ಲಿ, ಹಾಗೆಯೇ ಇನ್ನು ಕೆಲವರು ಆಟದಲ್ಲಿ ಅವರದೇ ಆದ ಸಾಮರ್ಥ್ಯವನ್ನು ಹೊಂದಿದ್ದಾರೆ.

ನನ್ನ ಒಬ್ಬ ವಿದ್ಯಾರ್ಥಿಯ ಇಂತಹ ಪ್ರತಿಭೆಯನ್ನು ನನ್ನದೇ ಆದ ರೀತಿಯಲ್ಲಿ ತಿದ್ದಿ ಮೆರುಗುಗೊಳಿಸಲು ಪ್ರಯತ್ನಿಸಿದೆ. ಅದರ ಫಲವಾಗಿ ಇಂದು ಆ ವಿದ್ಯಾರ್ಥಿನಿ ಕಲೆಯ ಕ್ಷೇತ್ರದಲ್ಲಿ ಗುರುತಿಸಲ್ಪಟ್ಟಿದ್ದಾಳೆ. ಈ ಸದ್ಯದ ಎರಡು ಅವಧಿಗಿಂತ ಹಿಂದಿನ ವಿಷಯವಿದು: 8ನೇ ತರಗತಿಯಲ್ಲಿ ಒಬ್ಬ ವಿದ್ಯಾರ್ಥಿನಿ ಇದ್ದಳು, ಹೆಸರು ಸುಗಂಧಾ. ಜೊತೆಯಲ್ಲಿ ಆಕೆಯ ಸಹೋದರಿ ಕೂಡ ಓದುತ್ತಿದ್ದಳು. ಅವಳ ಹೆಸರು ಸುನಂದಾ. ಓದುವುದರಲ್ಲಿ ಇಬ್ಬರೂ ಚೆನ್ನಾಗಿದ್ದರು. ಸುಗಂಧಾ ಬಹಳ ಚೆನ್ನಾಗಿ

ಹಾಡುತ್ತಿದ್ದಳು. ಆಕೆಯ ಧ್ವನಿಯೂ ಬಹಳ ಮಧುರವಾಗಿತ್ತು. ಆದರೆ ಅವಳಲ್ಲಿ ಹಿಂಜರಿಕೆ ಬಹಳವೇ ಇತ್ತು. ಗ್ರಾಮೀಣ ಪರಿಸರದ ಹಿನ್ನೆಲೆ ಹೊಂದಿದ್ದರಿಂದಾಗಿ, ಅಲ್ಲಿ ಹಾಡು, ನೃತ್ಯ, ಸಂಗೀತ ಇವುಗಳನ್ನು ಅಸಭ್ಯ ಎನ್ನುವುದು ಆಕೆಯಲ್ಲಿನ ಹಿಂಜರಿಕೆಗೆ ಒಂದು ಕಾರಣವಾದರೆ, ಮತ್ತೊಂದು, ಇವುಗಳನ್ನು ಸಭ್ಯವೆಂದು ಪರಿಗಣಿಸದಿದ್ದಾಗ, ಈ ಕಲೆಗಳ ಪ್ರದರ್ಶನಕ್ಕೆ ಸೂಕ್ತ ವೇದಿಕೆ ಅಥವಾ ರಂಗಪ್ರವೇಶಕ್ಕೆ ಅಲ್ಲಿ ಯಾವುದೇ ಅವಕಾಶ ಸಿಗುವುದಿಲ್ಲ ಎಂಬುದೂ ಕಾರಣವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಸುಗಂಧಾಳ ಪ್ರತಿಭೆಯನ್ನು ಪೋಷಿಸಲು ಆಕೆಯ ಮನವೊಲಿಸುವುದು ಕಷ್ಟದ ಕೆಲಸವಾಗಿತ್ತು. ಮೊದಲ ಅಡಚಣೆ ಅವಳ ಸಂಕೋಚ ಮತ್ತು ಅತಿ-ನಾಚಿಕೆ ಸ್ವಭಾವ. ಇದರ ಜೊತೆಗೆ -ಹುಡುಗಿಯರು ನೃತ್ಯ ಮಾಡುವ, ಹಾಡುವ, ವಾದ್ಯ ನುಡಿಸುವ, ಕಡೆಗೆ ಕ್ರೀಡೆಗಳಲ್ಲಿ ಭಾಗವಹಿಸುವುದನ್ನೂ ನಾಚಿಕೆಗೇಡಿನ ವಿಷಯವೆಂದು ಪರಿಗಣಿಸುವಂತಹ ಸಾಮಾಜಿಕ ಪರಿಸ್ಥಿತಿ ಸಹ ಅಡಚಣೆಯಾಗಿತ್ತು. ಈ ಸಮಾಜವನ್ನು ಲಿಂಗ ತಾರತಮ್ಯ ಹೊಂದಿದ ಸಮಾಜ ಎಂದು ಹೇಳಬಹುದು. ನನಗೆ ಇಂತಹ ಸನ್ನಿವೇಶಗಳ ನಡುವೆ ಸುಗಂಧಾಳೊಂದಿಗೆ ಕೆಲಸ ಮಾಡಬೇಕಿತ್ತು. ಆದರೆ ಹೇಗೆ? ಇದು ಸಮಸ್ಯೆಯಾಗಿತ್ತು. ನಾನು ಅವರ ಮನೆಗೆ ಹೋಗಿ ಅವಳ ತಂದೆ ತಾಯಿಯೊಂದಿಗೆ ಮಾತನಾಡಿದೆ. ಆರಂಭದಲ್ಲಿ ಅವರೂ ಸಹ ಊರ ಜನ ಇಂಥವರ ಮಗಳು ವೇದಿಕೆಮೇಲೆ ನಿಂತು ಹಾಡುತ್ತಾಳೆ ಎಂದು ಕೊಂಕು ಮಾತನಾಡಿಕೊಳ್ಳುತ್ತಾರೇನೋ ಎಂದು ಹಿಂಜರಿಯುತ್ತಿದ್ದರು. ಆಗ ನಾನವರಿಗೆ ಕೆಲವು ಮಹಿಳಾ ಗಾಯಕಿಯರ ಉದಾಹರಣೆಗಳನ್ನು ಹೇಳಿದೆ. ನಮ್ಮ ಪ್ರದೇಶದಲ್ಲಿ ಭೋಜಪುರಿ ಭಾಷೆ ಮಾತನಾಡುವುದರಿಂದ ನಾನು ಶಾರದಾ ಸಿನ್ಹಾ ಅವರ ಬಗ್ಗೆ ತಿಳಿಸಿದೆ. ಅವರು ಪ್ರೊಫೆಸರ್ ಆಗಿದ್ದರು ಮತ್ತು ಅಂತರರಾಷ್ಟ್ರೀಯ ಮಟ್ಟದ ಪ್ರಸಿದ್ಧ ಗಾಯಕಿ ಸಹ ಆಗಿದ್ದರು ಎಂದು ಹೇಳಿದೆ. ಜಾನಪದ ಗಾಯನದಲ್ಲಿ ದೇಶದ ಅಪ್ರತಿಮ ಗಾಯಕರಲ್ಲಿ ಒಬ್ಬರಾದ ಮಾಲಿನಿ ಅವಸ್ಥಿಯವರ ಕುರಿತು ಮತ್ತೊಂದು ಉದಾಹರಣೆ ನೀಡಿದೆ. ನಾಲ್ಕಾರು ಭೇಟಿಗಳ ನಂತರ ಶತಪ್ರಯತ್ನದಿಂದ ಅವರ ಮನವೊಲಿಸಿದೆನು. ಅವರು ನನ್ನ ಮಾತುಗಳ ಮೇಲೆ ವಿಶ್ವಾಸವಿಟ್ಟರು. ಈ ಪ್ರಕ್ರಿಯೆಯಲ್ಲಿ ನಾನು ಶಿಕ್ಷಕಿಯಾಗಿದ್ದುದರ ಪಾತ್ರ ದೊಡ್ಡದಿತ್ತು. ನಾನು ಶಿಕ್ಷಕಿಯಾಗಿದ್ದುದರಿಂದ ಅವರ ಮಗಳ ಬಗ್ಗೆ ಒಳ್ಳೆಯದನ್ನೇ ಯೋಚಿಸಿರಬಹುದು ಎಂಬುದು ಅವರ ಭಾವನೆಯಾಗಿತ್ತು.

ಈಗ ಸುಗಂಧಾಳ ಸರದಿ. ಮೊದಲಿಗೆ ಅವಳ ಹಿಂಜರಿಕೆಯನ್ನು ನಿವಾರಿಸುವುದು ಜರೂರಾಗಿತ್ತು. ನಾನು ಸ್ವತಃ ಆಕೆಯೊಂದಿಗೆ ಇಷ್ಟಿಷ್ಟೇ ಹಾಡಲು ಶುರು ಮಾಡಿದೆ, ಅದೂ ಏಕಾಂತದಲ್ಲಿ. ನಂತರ ಕ್ರಮೇಣವಾಗಿ ಅವಳನ್ನು ಜೊತೆಯಲ್ಲಿಟ್ಟುಕೊಂಡು ತರಗತಿಯಲ್ಲಿ ಮಕ್ಕಳೊಂದಿಗೆ ಹಾಡಲು ಪ್ರಾರಂಭಿಸಿದೆನು. ಉಳಿದ ಇತರ ಮಕ್ಕಳಿಗೂ ಕೂಡ ಹಾಡು ಹೇಳಲು, ಕವಿತೆ ಇತ್ಯಾದಿಗಳನ್ನು ಹಾಡಲು ಪ್ರೋತ್ಸಾಹ ನೀಡುತ್ತಿದ್ದೆ. ಅವಕಾಶ ಸಿಕ್ಕಾಗಲೆಲ್ಲಾ ಯಾವುದೇ ಆಗಲಿ ಹಾಡು ಹೇಳಲು ಆಕೆಗೆ ಹೇಳುತ್ತಿದ್ದೆ. ನಾಚಿಕೆ ಮತ್ತು ಹಿಂಜರಿಕೆಯಿಂದಾಗಿ ತರಗತಿಯಲ್ಲಿ ನಿಂತುಕೊಂಡು ಹಾಡು ಹೇಳಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಅವಳ ಕಾಲುಗಳು ನಡುಗುತ್ತಿದ್ದವು, ಆಗೆಲ್ಲಾ ಬೆವರಿನಲ್ಲಿ ತೊಯ್ದುಹೋಗುತ್ತಿದ್ದಳು. ಆಕೆಯೊಂದಿಗೆ ದೀರ್ಘಕಾಲ ಕೆಲಸ ಮಾಡುತ್ತಾ ಜೊತೆ ನೀಡಬೇಕಾಯಿತು. ನಂತರ ಸರಿಯೆಂದು ಕುಳಿತುಕೊಂಡೇ ಹಾಡಲು ಹೇಳಿದೆ. ಅದರಲ್ಲೂ ಕಷ್ಟದಿಂದ ನಾಲ್ಕಾರು ಸಾಲುಗಳನ್ನು ಮಾತ್ರ ಹಾಡುತ್ತಿದ್ದಳು, ಮತ್ತೆ ಒಮ್ಮೆಲೆ ಮೌನ. ತರಗತಿಯಲ್ಲಿ ಕೆಲವು ಹಾಡುಗಳು, ಕವನಗಳನ್ನು ಈಕೆಯಿಂದಲೇ ಹಾಡಿಸುತ್ತಿದ್ದೆ. ಉಳಿದ ಮಕ್ಕಳೂ ಹಾಡುತ್ತಿದ್ದರು. ನಂತರ ಶಾಲೆಯಲ್ಲಿ ಆಗಸ್ಟ 15ರಂದು, ಜನವರಿ 26ರಂದು ಮತ್ತು ಇತರ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದೆ. ಆಕೆಯ ಜೊತೆಗೂಡಿ ಹಾಡಿನ ತಯಾರಿ ನಡೆಸುತ್ತಿದ್ದೆ. ನಾನೂ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದೆ ಮತ್ತು ಸಹಶಿಕ್ಷಕರೂ ಸಹ ಪ್ರಶಂಸಿಸುತ್ತಿದ್ದರು. ಏಕೆಂದರೆ ಅವಳ ಪ್ರತಿಭೆ ಮೆಚ್ಚುಗೆಗೆ ಅರ್ಹವಾಗಿತ್ತು. ಶಾಲೆಯಲ್ಲಿ ಸಾಂಸ್ಕೃತಿಕ ವಾತಾವರಣವನ್ನು ಸೃಷ್ಟಿಸುವಲ್ಲಿ ಸಹಶಿಕ್ಷಕರ ಬೆಂಬಲವು ಮಹತ್ವದ ಪಾತ್ರ ವಹಿಸಿದೆ. ಅವಕಾಶ ಸಿಕ್ಕಾಗಲೆಲ್ಲಾ ಅವರು ಸುಗಂಧಾಳಿಗೆ ಮಾತ್ರವಲ್ಲದೆ ಸಾಹಿತ್ಯ, ಸಂಗೀತ ಅಥವಾ ಕ್ರೀಡಾ ಕ್ಷೇತ್ರದಲ್ಲಿ ಪಾಲ್ಗೊಳ್ಳುವ ಇತರ ಮಕ್ಕಳಿಗೂ ಅವಕಾಶಗಳನ್ನು ನೀಡುತ್ತಿದ್ದರು, ಅಲ್ಲದೆ ಅವರನ್ನು ಪ್ರಶಂಸಿಸುತ್ತಲೂ ಇದ್ದರು.

ಒಂದೆರಡು ಬಾರಿ ಏನಾಯಿತೆಂದರೆ, ನಾವು ಎಂದಾದರೊಂದು ದಿನ ಸುಗಂಧಾಳ ಕಾರ್ಯಕ್ರಮವನ್ನು ಏರ್ಪಡಿಸಿದಾಗ, ಅವಳು ಭಯ ಮತ್ತು ಹಿಂಜರಿಕೆಯಿಂದ ಶಾಲೆಗೇ ಬರುತ್ತಿರಲಿಲ್ಲ. ಆದರೆ ನಾನು ಪ್ರಯತ್ನ ಮಾಡುತ್ತಲೇ ಇದ್ದೆ. ಸ್ವಲ್ಪ ಸಮಯ ಕಳೆದ ನಂತರ ಅವಳು ವೇದಿಕೆಯ ಮೇಲೆ ಹೆದರದೆ ನಿಲ್ಲಲು, ವೇದಿಕೆಯನ್ನು ಎದುರಿಸಲು ಕಲಿತಳು. ನಂತರ ಒಂದು ದಿನ ಮಾಧ್ಯಮದ ಕೆಲವರು ಶಾಲೆಗೆ ಬಂದರು. ಅವರು ನನ್ನ ಫೇಸ್ ಬುಕ್ ಪ್ರೊಫೈಲ್ ನಲ್ಲಿ ಸುಗಂಧಾ ಹಾಡುವುದನ್ನು ಕೇಳಿದ್ದರು. ಅವರು ಆಕೆಯ ಬಗ್ಗೆ ಒಂದು ಉತ್ತಮ ವರದಿ ಮಾಡಿ ಪ್ರಕಟಿಸಿದರು. ನಂತರ, ಸುಗಂಧಾಳಿಗೆ ಜಿಲ್ಲಾ ಕೇಂದ್ರದಲ್ಲಿ ವೇದಿಕೆಯಲ್ಲಿ ಪ್ರದರ್ಶನ ನೀಡುವ ಅವಕಾಶ ಸಿಕ್ಕಿತು. ಈಗ ಅವಳು ತನ್ನದೇ ಆದ ಆಲ್ಬಂ ಅನ್ನು ಬಿಡುಗಡೆ ಮಾಡಿದ್ದಾಳೆ. ಈಗ ಅವಳ ಮುಂದೆ ಕನಸುಗಳ ಆಕಾಶವಿದೆ, ಅದರಲ್ಲಿ ಅವಳು ತನಗೆ ಬೇಕಾದಂತೆ ಹಾರಾಡಬಹುದು.

ಇಲ್ಲಿಂದ ಪಡೆದ ಆತ್ಮವಿಶ್ವಾಸದಿಂದ, ಅವಳು ತನ್ನ ವ್ಯಾಸಂಗದಲ್ಲಿಯೂ ಇನ್ನಷ್ಟು ಉತ್ತಮ ಬೆಳವಣಿಗೆ ತೋರಿದಳು. ಕೆಲವು ಮಕ್ಕಳು ಪ್ರೋತ್ಸಾಹವಿಲ್ಲದೆ ಹಿಂದೆ ಉಳಿದಿರುತ್ತಾರೆ. ಅವರಿಗೆ ಪ್ರೋತ್ಸಾಹ ಸಿಕ್ಕಲ್ಲಿ ಕಲಿಯುತ್ತಾರೆ ಮತ್ತು ತಮ್ಮ ಆಯ್ಕೆಯ ಕ್ಷೇತ್ರದಲ್ಲಿ ಉತ್ತಮವಾದುದನ್ನು ಸಾಧಿಸುತ್ತಾರೆ. ನೀವು ಅವರೊಂದಿಗೆ ತಾಳ್ಮೆಯಿಂದ ಇದ್ದು ಸಾಥ್ ನೀಡಬೇಕಿರುತ್ತದೆ ಅಷ್ಟೆ.

ಸುಗಂಧಾಳ ಯಶಸ್ಸು ಶಾಲೆಗೆ ಪ್ರಸಿದ್ಧಿ ತಂದಿತು ಮತ್ತು ಘನತೆಯನ್ನು ಹೆಚ್ಚಿಸಿತು. ಶಾಲೆಯಲ್ಲಿದ್ದ ಸಾಂಸ್ಕೃತಿಕ - ಸಾಹಿತ್ಯಿಕ ವಾತಾವರಣವು ಮತ್ತಷ್ಟು ಉತ್ತಮಗೊಂಡಿತು. ಅಲ್ಲಿಂದೀಚೆಗೆ ಈ ರೀತಿಯ ಚಟುವಟಿಕೆಗಳಿಗೆ ಗಂಭೀರವಾದ ಮಾನ್ಯತೆ ಸಿಗಲು ಶುರುವಾಯಿತು. ತರುವಾಯ, ಬಹಳಷ್ಟು ಮಕ್ಕಳಿಗೆ ಮನೆಯಿಂದ ಪ್ರೋತ್ಸಾಹ ಸಿಕ್ಕಿತು. ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಪೋಷಕರಲ್ಲೂ ಸಹ ಸಕಾರಾತ್ಮಕ ಮನೋಭಾವ ಮೂಡಿತು. ಇವೆಲ್ಲವನ್ನು ಓದುವ ಮತ್ತು ಬರೆಯುವ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಪಠ್ಯೇತರ ಚಟುವಟಿಕೆಗಳೆಂದು ಪರಿಗಣಿಸಲಾಯಿತು.

ನಂದಿನಿ ಕುಮಾರಿ, ಸರ್ಕಾರಿ ಮಾಧ್ಯಮಿಕ ಶಾಲೆ, ಭೇಡಿಯಾ ಸುಅರಾ, ವಿಕಾಸ್ ಖಂಡ್ ದೆಹರಿ, ರೋಹತಾಸ್ ಜಿಲ್ಲೆ, ಬಿಹಾರ.

ಅನುವಾದ: ಆಶಾ ಸಿಂಗ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ



# ಮಕ್ಕಳು ಇಂಗ್ಲಿಷ್‌ನಲ್ಲಿ ರಚಿಸಿದ ಕವನಗಳು

**ಉಪಮಾ ರಾಣಿ**

ಒಂದು ದಿನ ನಾನು, ಎನ್.ಸಿ.ಇ.ಆರ್.ಟಿ ಯು ಎರಡನೇ ತರಗತಿಗೆ ಪ್ರಕಟಿಸಿದ 'ಮೃದಂಗ್' ಎಂಬ ಹೊಸ ಇಂಗ್ಲಿಷ್ ಪುಸ್ತಕದ ಪುಟಗಳನ್ನು ತಿರುವಿ ಹಾಕುತ್ತಿದ್ದಾಗ, ಅದರ ಹೊಳೆಯುತ್ತಿದ್ದ ಬಣ್ಣಗಳಿಂದ ಆಕರ್ಷಿತಳಾದೆ. ನಾನು ಮೊದಲ ಬಾರಿಗೆ ಈ ಪುಸ್ತಕದಲ್ಲಿನ ಪಠ್ಯವನ್ನು ಪಾಠ ಮಾಡುತ್ತಿದ್ದೆ. ನಾನು ಅದರ ಪುಟಗಳನ್ನು ಸರಸರನೆ ನೋಡುತ್ತಾ ತಿರುವಿ ಹಾಕುತ್ತಿರುವಾಗ ಒಂದು ಕವನ ಕಣ್ಣಿಗೆ ಬಿತ್ತು. ಅದರ ಶೀರ್ಷಿಕೆ Everybody stop, everybody stand ಎಂದಿತ್ತು. ಕವನವನ್ನು ಓದಿದ ನಂತರ, ನನಗೆ ಇದನ್ನಿಟ್ಟುಕೊಂಡು ಏನಾದರೂ ಹೊಸದನ್ನು ಮತ್ತು ಸೃಜನಶೀಲವಾದದ್ದನ್ನು ಮಾಡಬಹುದು ಎಂಬ ಆಲೋಚನೆ ನನ್ನ ಮನಸ್ಸಿಗೆ ಬಂದಿತು. ಈ ಶೀರ್ಷಿಕೆಯು- ಶಿಕ್ಷಕರು ಸಾಮಾನ್ಯವಾಗಿ ತರಗತಿಯಲ್ಲಿ "ಎಲ್ಲರೂ ಎದ್ದು ನಿಲ್ಲಿರಿ" ಅಥವಾ "ಎಲ್ಲರೂ ಕುಳಿತುಕೊಳ್ಳಿ"

ಎಂಬಂತಹ ಸೂಚನೆಗಳನ್ನು ನೀಡುತ್ತಾರೆ, ಕವನವೂ ಅದೇ ರೀತಿ ಇದೆಯಲ್ಲ ಎಂದು ಯೋಚಿಸಲು ನನ್ನನ್ನು ಪ್ರೋತ್ಸಾಹಿಸಿತು. ಆದ್ದರಿಂದ ನಾವು ಗೊತ್ತಿರುವ ಈ ಪರಿಚಿತ ಸೂಚನೆಗಳನ್ನು ಒಂದು ಹೊಸ ಕವನ ಬರೆಯಲು ಸ್ಫೂರ್ತಿಯಾಗಿ ಬಳಸಬಹುದು ಎಂದು ನನಗನ್ನಿಸಿತು.

ಐದನೇ ತರಗತಿ ವಿದ್ಯಾರ್ಥಿಗಳೊಂದಿಗೆ ಈ ಚಟುವಟಿಕೆಯನ್ನು ಮಾಡಲು ನಾನು ನಿರ್ಧರಿಸಿದೆ. ಒಂದು ದಿನ ತರಗತಿಯ ಮಕ್ಕಳಿಗೆ ನಾವೆಲ್ಲರೂ ಒಟ್ಟಿಗೆ ಕವನ ಬರೆಯೋಣ ಎಂದು ಹೇಳಿದೆ. ಇದನ್ನು ಕೇಳಿದ ವಿದ್ಯಾರ್ಥಿಗಳು ತಮ್ಮ ಪಠ್ಯಪುಸ್ತಕದಿಂದಲೇ ಒಂದು ಕವಿತೆಯನ್ನು ನಕಲು ಮಾಡಲು ಹೇಳುತ್ತಿದ್ದಾರೆ ಎಂದು ಅಂದುಕೊಂಡರು. ಅವರೆಲ್ಲ ತಮ್ಮದೇ ಆದ ಸ್ವಯಂರಚಿತ ಕವನಗಳನ್ನು ಇಂಗ್ಲಿಷ್‌ನಲ್ಲಿ ಬರೆಯಬೇಕು ಎಂದು ನಾನು ಅವರಿಗೆ ಹೇಳಿದಾಗ, ಅವರ ಮುಖದಲ್ಲಿ ಆತಂಕದ ನೋಟ ಕಂಡಿತು. ಈ ಚಟುವಟಿಕೆಯು ವಿನೋದಮಯವಾಗಿ ಮೋಜಿನದಾಗಿರುತ್ತದೆ ಎಂದು ನಾನು ಅವರಿಗೆ ಭರವಸೆ ನೀಡಿದೆ ಮತ್ತು ಆ ಕುರಿತು ಪ್ರಯತ್ನ ಮಾಡಲು ಅವರನ್ನು ಪ್ರೋತ್ಸಾಹಿಸಿದೆ. ಮೊದಲಿಗೆ ನಾನು ಈ ಚಟುವಟಿಕೆಯನ್ನು ಮಾದರಿಯಾಗಿ ಮಾಡಿ ತೋರಿಸಿದೆ. ನಾನು ಕರಿಹಲಗೆಯ ಮೇಲೆ ಒಂದು ಸಣ್ಣ ಕವನವನ್ನು ಬರೆದೆ ಮತ್ತು ಅದನ್ನು ಎರಡು-ಮೂರು ಬಾರಿ ಗಟ್ಟಿಯಾಗಿ ಓದಿದೆ.

Everybody stop (ಎಲ್ಲರೂ ನಿಲ್ಲಿಸಿ)

Everybody stand (ಎಲ್ಲರೂ ನಿಲ್ಲಿರಿ)

Everybody sit (ಎಲ್ಲರೂ ಕೂತುಕೊಳ್ಳಿ)

And raise your hand (ಮತ್ತು ನಿಮ್ಮ ಕೈ ಎತ್ತಿ)

ವಿದ್ಯಾರ್ಥಿಗಳು ನನ್ನ ಜೊತೆಯಲ್ಲಿಯೇ ಇದನ್ನು ಅನುಸರಿಸಿದರು. ಪದ್ಯದಲ್ಲಿರುವ ಕ್ರಿಯಾಪದಗಳನ್ನು ಬದಲಾಯಿಸುವುದರ ಮೂಲಕ ಪ್ರಾರಂಭಿಸೋಣ ಎಂದು ಹೇಳಿ ಕೆಳಗಿನ ಸರಳ ನಿಯಮಗಳನ್ನು ಹಾಕಿದೆ:

1. ಅವರು ಕೇವಲ ಮೂರು ಕ್ರಿಯಾ ಪದಗಳನ್ನು ಮಾತ್ರ ಬಳಸಬಹುದು.
2. ಆ ಕ್ರಿಯಾಪದಗಳು ಪರಸ್ಪರ ಸಂಬಂಧ ಹೊಂದಿರಬೇಕು.
3. ಮೂರನೆಯ ಸಾಲಿನಲ್ಲಿ, ಅವರು ಕ್ರಿಯಾ ಪದಗಳಿಗೆ ಸಂಬಂಧಿಸಿದ ಒಂದು ಪ್ರಶ್ನೆಯನ್ನು ರಚಿಸಬೇಕಾಗಿತ್ತು. ಉದಾಹರಣೆಗೆ: ಕ್ರಿಯಾಪದಗಳು "ತಿನ್ನಿರಿ, ಕುಡಿಯಿರಿ, ಆಟವಾಡಿ" ಎಂದಾದರೆ, ಆಗ ಪ್ರಶ್ನೆಯು: ನೀವು ಏಕೆ ತಿನ್ನುತ್ತೀರಿ - ಕುಡಿಯುತ್ತೀರಿ? ಎಂಬುದಾಗಿರಬಹುದು.
4. ನಾಲ್ಕನೇ ಸಾಲಿನಲ್ಲಿ ಈ ಪ್ರಶ್ನೆಗೆ ಉತ್ತರಿಸಬೇಕು: ಆರೋಗ್ಯವಾಗಿರಲು...

ವಿದ್ಯಾರ್ಥಿಗಳು ' 'Drink', 'Jump' ಮತ್ತು 'Hop'ನಂತಹ ವಿಭಿನ್ನ ಕ್ರಿಯಾ ಪದಗಳ ಬಗ್ಗೆ ಯೋಚಿಸಲು ಪ್ರಾರಂಭಿಸಿದರು. ನಾನು ತರಗತಿಯಲ್ಲಿ ಸುತ್ತಾಡುತ್ತಾ ಅವರ ಕೆಲಸವನ್ನು ಗಮನಿಸಿದೆ ಮತ್ತು ಅವರು ನಿಯಮಗಳನ್ನು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಂಡೆ. ಕೆಲವು ಹುಡುಗಿಯರಿಗೆ ಇಂಗ್ಲಿಷ್ ಕ್ರಿಯಾ ಪದಗಳ ಬಗ್ಗೆ ಯೋಚಿಸಲು ತೊಂದರೆ ಆಗುತ್ತಿತ್ತು. ಆದರೆ ಅವರು ಹಿಂದಿಯಲ್ಲಿ ಹೆಚ್ಚು ಸಲೀಸಾಗಿದ್ದರು ಮತ್ತು ಚಿತ್ರ ಬಿಡಿಸುವುದರಲ್ಲಿ ಅವರಿಗೆ ಮುದವೆನಿಸಿ ಅದನ್ನು ಆನಂದಿಸಿದರು. "ನೀವು ಚಿತ್ರಗಳನ್ನು ಏಕೆ ಬಿಡಿಸುತ್ತೀರಿ ಮತ್ತು ಅವುಗಳಿಗೆ ಬಣ್ಣವನ್ನು ಏಕೆ ತುಂಬುತ್ತೀರಿ?" ಎಂದು ನಾನು ಅವರಲ್ಲಿ ಕೇಳಿದೆ. "ಏಕೆಂದರೆ ನಮಗೆ ಇದು ಇಷ್ಟ" ಎಂದು ಅವರು ಉತ್ತರಿಸಿದರು. 'ಓಹ್ ವಾಟರ್ ಫನ್' ಎಂಬ ಕವಿತೆಯ ಉದಾಹರಣೆ ನೀಡುತ್ತಾ, ಇದನ್ನು ತಮ್ಮ ಕವನದಲ್ಲಿ ಸೇರಿಸಿಕೊಳ್ಳಬಹುದು ಎಂದು ಸಲಹೆ ನೀಡಿದೆ.

ಒಬ್ಬ ವಿದ್ಯಾರ್ಥಿನಿಯು 'Hop', 'Jump' ಮತ್ತು 'Go' ಎಂದು ಬರೆದಳು. ಆಗ ನಾನು ಆಕೆಗೆ 'Go' ಎಂಬ ಉಚ್ಚಾರಣೆಯಿರುವ ಪ್ರಾಸದ ಪದಗಳನ್ನು ಹುಡುಕಲು ಹೇಳಿದೆ. ಆಗ ಆಕೆ "Bow, Bow" ಎಂದು ಹೇಳಿದಳು. ಆಗ ನಾನು ಆಕೆಯ ಉತ್ತರವನ್ನು ತಪ್ಪಿದ್ದರೂ ಒಪ್ಪಿಕೊಂಡೆ. ಏಕೆಂದರೆ ವಿದ್ಯಾರ್ಥಿಗಳಿಗೆ ಸರಿಯಾದದ್ದನ್ನು ಹೇಳುವುದಕ್ಕಿಂತ ಮುಖ್ಯವಾಗಿ, ಅವರು ಆ ದಿಕ್ಕಿನಲ್ಲಿ ಯೋಚಿಸುವ ಪ್ರಯತ್ನ ಮಾಡುವುದು, ಹುಡುಕುವುದು ಮತ್ತು ಸೃಜನಶೀಲವಾಗಿರುವುದೇ ಹೆಚ್ಚು ಮಹತ್ವಪೂರ್ಣವಾದುದು. ಎಲ್ಲಾ ವಿದ್ಯಾರ್ಥಿಗಳು ಈ ಚಟುವಟಿಕೆಯನ್ನು ಆನಂದಿಸುತ್ತಿರುವುದನ್ನು ನೋಡುವುದು ಸಂತಸದ ಅನುಭವವಾಗಿತ್ತು.

ಒಬ್ಬ ಶಿಕ್ಷಕಿಯಾಗಿ ನನ್ನ ಪಾತ್ರವು, ಮಕ್ಕಳಿಗೆ ಮಾರ್ಗದರ್ಶನ ಮಾಡುವುದು ಮತ್ತು ಅವರೊಳಗಿರುವ ಸೃಜನಶೀಲತೆಯನ್ನು ಅವರೇ ಕಂಡುಕೊಳ್ಳಲು ಅವಕಾಶ ನೀಡುವುದಾಗಿತ್ತು. ಅವರ ತಪ್ಪು ಕಂಡುಹಿಡಿದು ಸರಿಪಡಿಸದಂತೆ ನನ್ನನ್ನು ನಾನು ತಡೆಹಿಡಿದುಕೊಂಡೆ, ಏಕೆಂದರೆ ಇಂತಹದರಿಂದ ಅವರು ನಿರುತ್ಸಾಹಗೊಳ್ಳುವುದಾಗಲೀ ಅಥವಾ ಸೋತುಹೋದೆವು ಎಂದು ಕುಗ್ಗುವುದಾಗಲೀ ನನಗೆ ಇಷ್ಟವಿರಲಿಲ್ಲ. ಒಂದು ಸಮಯಾವಧಿಯಲ್ಲಿ, ನಾವು ಸಣ್ಣ ಕವನಗಳ ಅದ್ಭುತ ಸಂಗ್ರಹವನ್ನು ಸಿದ್ಧಪಡಿಸಿಕೊಂಡಿದ್ದೇವೆ. ಕೊನೆಯಲ್ಲಿ, ಪ್ರತಿ ವಿದ್ಯಾರ್ಥಿಗೂ ಒಂದೊಂದು ಚಾರ್ಟ್ ಪೇಪರ್ ನೀಡಿದೆ ಮತ್ತು ತಮ್ಮ ಕವನಗಳನ್ನು ಅಚ್ಚುಕಟ್ಟಾಗಿ ಬರೆಯಲು ಮತ್ತು ಅವನ್ನು ಅಲಂಕರಿಸಲು ಹೇಳಿದೆನು. ಈ ಕವನಗಳನ್ನು ತರಗತಿಯ ಗೋಡೆಯ ಮೇಲೆ ಅಂಟಿಸಿ ಪ್ರದರ್ಶಿಸಲಾಯಿತು. ಅವುಗಳಲ್ಲಿ ಒಂದು ಕವಿತೆ ಹೀಗಿತ್ತು:

Everybody come (ಎಲ್ಲರೂ ಬನ್ನಿ)

Everybody go (ಎಲ್ಲರೂ ಹೋಗಿ)

Everybody walk (ಎಲ್ಲರೂ ನಡೆಯಿರಿ)

On your tip-toe (ನಿಮ್ಮ ತುದಿಗಾಲಿನ ಮೇಲೆ)

ತಮ್ಮ ಕೃತಿಗಳು ಪ್ರದರ್ಶನವಾಗಿರುವುದನ್ನು ನೋಡಿದ ವಿದ್ಯಾರ್ಥಿಗಳ ಮುಖದಲ್ಲಿ, ಕಂಡ ಹೆಮ್ಮೆ ಮತ್ತು ಸಂತೋಷದ ಭಾವನೆಗಳು ಬೆಲೆಕಟ್ಟಲಾಗದಂತಹದು. ಮತ್ತು ಇದನ್ನು ನೋಡಿದ ನನ್ನಲ್ಲಿ, ಅವರು ಹೊಸದನ್ನು ಮತ್ತು ಅರ್ಥಪೂರ್ಣವಾದದ್ದನ್ನು ರಚಿಸಿದ್ದಾರೆಂದು ಅನಿಸಿ, ಸಂತೋಷ ಮತ್ತು ತೃಪ್ತಿಯ ಭಾವನೆ ಮೂಡಿತು.

ಉಪಮಾ ರಾಣಿ, ಶಿಕ್ಷಕಿ, ಜಿ.ಯು.ಪಿ.ಎಸ್. ಮಾಜರಿ ಗ್ರಾಂಟ್ 1, ಡೋಯಿವಾಲಾ, ಡೆಹರಾಡೂನ್, ಉತ್ತರಾಖಂಡ್

ಅನುವಾದ: ಆಶಾ ಸಿಂಗ್ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ.

# ಶಿಕ್ಷಕರು ಕಲಿಸುವುದನ್ನು ಆನಂದಿಸಿದರೆ, ಮಕ್ಕಳು ಕಲಿಕೆಯನ್ನು ಆನಂದಿಸುತ್ತಾರೆ: ವಿಶ್ವನಾಥ್ ಗುಂಡಿಗೆರೆ

**ರಾಘವೇಂದ್ರ ಹೇರ್ಳೆ**

ವಿಶ್ವನಾಥ್ ಜಿ.ಎಸ್. ಅವರು ಬೆಂಗಳೂರು ದಕ್ಷಿಣ ಜಿಲ್ಲೆಯ ಸಿಂಧಿ, ನಗರ್ತಪೇಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕರು ಮತ್ತು ಪ್ರಭಾರ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ತರಗತಿಯಲ್ಲಿ ಅವರು ಅಳವಡಿಕೊಳ್ಳುತ್ತಿರುವ ಬೋಧನಾ ವಿಧಾನಗಳಿಂದ ಶಿಕ್ಷಕ ಸಮುದಾಯದಲ್ಲಿ ಪ್ರಸಿದ್ಧರಾಗಿದ್ದಾರೆ. ಬೇರೆಬೇರೆ ಭಾಷೆ ಮತ್ತು ಸಂಸ್ಕೃತಿಗಳ ಹಿನ್ನೆಲೆಯಿಂದ ಬಂದ ಮಕ್ಕಳಿಗೆ ಅವರು ತಮ್ಮ ತರಗತಿಯಲ್ಲಿ ಗೌರವಯುತ ಸ್ಥಾನವನ್ನು ಒದಗಿಸಿದ್ದಲ್ಲದೆ, ಮುಕ್ತವಾಗಿ ತಮ್ಮ ಮಾತೃಭಾಷೆಯನ್ನು ಬಳಸುವುದಕ್ಕೆ ಮತ್ತು ಅವರಿಗೆ ಹೊಸ ಭಾಷೆಯಾಗಿರುವ ಕನ್ನಡವನ್ನು ಕಲಿಯುವುದಕ್ಕೆ ಅವಶ್ಯಕವಾದ ಆತ್ಮವಿಶ್ವಾಸವನ್ನೂ ತುಂಬಿದ್ದಾರೆ. ಇದಕ್ಕಾಗಿ, ಅವರು ಶಾಲಾ ಗ್ರಂಥಾಲಯವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ.

ವಿಶ್ವನಾಥ್ ಜಿ.ಎಸ್. ಅವರು ನಾಲ್ಕು ಪುಸ್ತಕಗಳ ಲೇಖಕರೂ ಆಗಿದ್ದಾರೆ. ಇವುಗಳಲ್ಲಿ `ಚೌಕಭಾರ' ಮತ್ತು `ಎದೆಯ ದನಿಗೆ ಕಿವಿಯಾಗೋಣ' ಎಂಬ ಎರಡು ಕವನ ಸಂಕಲನಗಳು, `ಮುಖವಾಡಗಳು ಮತ್ತು ಇತರ ಕತೆಗಳು' ಎಂಬ ಸಣ್ಣಕತೆಗಳ ಸಂಗ್ರಹ ಹಾಗೂ `ಸಾಮಾನ್ಯ ಜ್ಞಾನ' ಎಂಬ ಶೀರ್ಷಿಕೆಯ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕವೂ ಸೇರಿವೆ. ಅವರು `ಜನಪದ ಐಸಿರಿ' ಮತ್ತು ಡಾ. ಆರ್. ಲಕ್ಷ್ಮೀನಾರಾಯಣ ಅವರ ಸ್ಮರಣ ಸಂಚಿಕೆಯಾದ `ಸಂಪ್ರೀತಿ' ಎಂಬ ಎರಡು ಕೃತಿಗಳನ್ನು ಸಂಪಾದಿಸಿದ್ದಾರೆ. 2014ರಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಉತ್ತಮ ಶಿಕ್ಷಕ ಪ್ರಶಸ್ತಿ ಹಾಗೂ 2016ರಲ್ಲಿ ಕರ್ನಾಟಕ ರಾಜ್ಯ ನೌಕರರ ಸಂಘದಿಂದ ಸಾಹಿತ್ಯ ರತ್ನ ಪ್ರಶಸ್ತಿಗೆ ಭಾಜನರಾಗಿರುವ ವಿಶ್ವನಾಥ್ ಗುಂಡಿಗೆರೆ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ಘಟಕದ ಗೌರವ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಈ ಅಂಕಣಕ್ಕಾಗಿ ರಾಘವೇಂದ್ರ ಹೇರ್ಳೆ ಅವರು ವಿಶ್ವನಾಥ್ ಜಿ.ಎಸ್. ಜೊತೆಗೆ ತರಗತಿಯ ಪ್ರಕ್ರಿಯೆಗಳಲ್ಲಿ ಅವರು ತರುತ್ತಿರುವ ನವೀನ ವಿಧಾನಗಳ (creative methodology) ಕುರಿತಂತೆ ಸಂವಾದ ನಡೆಸಿದ್ದಾರೆ. ಈ ಮಾತುಕತೆಯ ಕೆಲವು ಆಯ್ದ ಭಾಗಗಳು ಇಲ್ಲಿವೆ:



ಚಿತ್ರ 1: ವಿಶ್ವನಾಥ್ ಜಿ ಎಸ್ ಅವರೊಂದಿಗೆ ಸಂಭಾಷಣೆಯಲ್ಲಿ ಲೇಖಕರು (ಬಲಗಡೆ).

> **ಶಿಕ್ಷಣದ ಯಾವುದೇ ಪ್ರಕ್ರಿಯೆಯು ಸುಲಭದಿಂದ ಕಠಿಣತೆಯೆಡೆಗೆ ಸಾಗಿದಾಗ ಮಕ್ಕಳಲ್ಲಿ ಕಲಿಯುವ ಆಸಕ್ತಿ ಹೆಚ್ಚಾಗುತ್ತದೆ. ಮಗುವಿನ ಆಂತರಿಕ ಜಗತ್ತು ಮತ್ತು ಹೊರ ಜಗತ್ತಿನ ನಡುವೆ ಸೇತು ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಭಾಷೆ ಮತ್ತು ಸಾಹಿತ್ಯವು ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ.**

**ರಾಘವೇಂದ್ರ: ಒಬ್ಬ ಶಿಕ್ಷಕನಾಗಿ, ನೀವು ನಿಮ್ಮ ತರಗತಿಯಲ್ಲಿ ಯಾವ ಹೊಸ ಉಪಕ್ರಮಗಳನ್ನು ಅನುಷ್ಠಾನಕ್ಕೆ ತಂದಿರುವಿರಿ?**

**ವಿಶ್ವನಾಥ್ ಗುಂಡಿಗೆರೆ :** ನಾನು ಪ್ರತಿದಿನ ತರಗತಿಯನ್ನು ಸಾಧ್ಯವಾದಷ್ಟು ಉತ್ಸಾಹಭರಿತ ಹಾಗೂ ಜೀವಂತಿಕೆಯಿಂದ ತುಂಬಿರುವಂತೆ ಮಾಡಲು ಪ್ರಯತ್ನಿಸುತ್ತಿರುತ್ತೇನೆ. ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸುವ ಚಟುವಟಿಕೆಗಳನ್ನು ಯೋಜಿಸುತ್ತೇನೆ. ಉದಾಹರಣೆಗೆ, ಪಠ್ಯದ ಸ್ವರೂಪಕ್ಕೆ ತಕ್ಕಂತೆ ಸ್ವರದ ಏರಿಳಿತಗಳನ್ನು ತರಲು ವೈವಿಧ್ಯಮಯ ಹಾಡುಗಳನ್ನು ಬಳಸುವುದು ಮತ್ತು ವಿದ್ಯಾರ್ಥಿಗಳನ್ನು 'ಪಂಜರಶಾಲೆ' ಮತ್ತು 'ಬಿಲ್ಲಹಬ್ಬ' ಮುಂತಾದ ನಾಟಕಗಳಲ್ಲಿ ನಟಿಸುವಂತೆ ಮಾಡುವುದು ಇತ್ಯಾದಿ.ಇವೆಲ್ಲದಕ್ಕೂ ಶಿಕ್ಷಕನು ಬೋಧನೆ-ಕಲಿಕೆಯ ಏಕತಾನತೆಯನ್ನು ಮುರಿಯಲು ಅವಶ್ಯವಾಗಿರುವ ಸೃಜನಶೀಲ ಚಿಂತನೆಯ ಪ್ರಕ್ರಿಯೆಯನ್ನು ಹೊಂದಿರಬೇಕು. 'ಹಚ್ಚೇವು ಕನ್ನಡದ ದೀಪ', 'ಹುತ್ತರಿ ಹಾಡು' ಮುಂತಾದ ಹಾಡುಗಳನ್ನು ಕಲಿಸುವಾಗ ನಾನು ಹಾಡುಗಳ ವಾಚನ ಮತ್ತು ಹಾಡಲು ಬೇರೆಬೇರೆ ವಿಧಾನಗಳನ್ನು ಬಳಸುತ್ತೇನೆ. ನಂತರ ನಾನು ಹಾಡುಗಳನ್ನು ಬೇರೆಬೇರೆ ರೀತಿಯಲ್ಲಿ ವಾಚನ ಮಾಡಲು ಮತ್ತು ಹಾಡಲು ಮಕ್ಕಳನ್ನು ಪ್ರೋತ್ಸಾಹಿಸುತ್ತೇನೆ. ಗದ್ಯವಾಗಲೀ ಅಥವಾ ಪದ್ಯವಾಗಲೀ, ಹೆಚ್ಚಾಗಿ ನಾನು ಅಭಿನಯದ ತಂತ್ರವನ್ನು ಬಳಸಲು ಯತ್ನಿಸುತ್ತೇನೆ. ಯಾಕೆಂದರೆ ಅದು ಮಕ್ಕಳನ್ನು ಸುಲಭವಾಗಿ ತಲುಪುತ್ತದೆ. ಏಕವ್ಯಕ್ತಿ ಅಭಿನಯವಾಗಿರಬಹುದು ಅಥವಾ ಅನೇಕ ಮಕ್ಕಳು ಪಠ್ಯದ ಅಭಿನಯ ಮಾಡುವುದಾಗಿರಬಹುದು. ಪಠ್ಯದ ಅವಶ್ಯಕತೆಗಳಿಗೆ

ಅನುಗುಣವಾಗಿ ಸಾಮಾನ್ಯ ಜ್ಞಾನ, ಗ್ರಹಿಕೆ, ಸಂದರ್ಭೋಚಿತ ಅಥವಾ ವಿವರಣಾತ್ಮಕ ಮತ್ತು ಆನ್ವಯಿಕ ಪ್ರಶ್ನೆಗಳನ್ನು ಬಳಸಲಾಗುತ್ತದೆ. ಮುಖ್ಯವಾಗಿ, ಪದ್ಯ ಅಥವಾ ಗದ್ಯವನ್ನು ಕಲಿಸುವುದರಲ್ಲಿ ಶಿಕ್ಷಕರಿಗೆ ಮತ್ತು ಕಲಿಯುವುದರಲ್ಲಿ ಮಕ್ಕಳಿಗೆ ಆನಂದ ಸಿಗಬೇಕು ಎಂಬುದರ ಕಡೆಗೆ ನಮ್ಮ ಗಮನವಿರುತ್ತದೆ. ಶಿಕ್ಷಕರಿಗೆ ಬೋಧನೆಯಲ್ಲಿ ಆ ಖುಷಿ ಸಿಗದಿದ್ದರೆ, ಮಕ್ಕಳೂ ಕೂಡಾ ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ.

ವ್ಯಾಕರಣವನ್ನು ಕಲಿಸುವ ಸಂದರ್ಭದಲ್ಲಿ, ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳ ಮೇಲೆ ಒಂದೇ ಸಲ ಹೇರದಂತೆ ನಾವು ಕಾಳಜಿ ವಹಿಸುತ್ತೇವೆ. ಬದಲಿಗೆ ಪ್ರತಿ ಪರಿಕಲ್ಪನೆಗೆ ಅವರು ಸಾಕಷ್ಟು ಸಮಯವನ್ನು ಪಡೆಯುವಂತಾಗಬೇಕು. ಇದರಿಂದ ಅವರು ಪರಿಕಲ್ಪನೆಗಳನ್ನು ವ್ಯವಸ್ಥಿತವಾಗಿ ಅರಿಯಲು ಸಾಧ್ಯವಾಗಬಹುದು. ವ್ಯಾಕರಣದ ಕುರಿತಾದ ನನ್ನ ಜ್ಞಾನವನ್ನು ಹಂಚಿಕೊಳ್ಳುವ ಬದಲು, ಸ್ವತಂತ್ರವಾಗಿ ಪ್ರಾಯೋಗಿಕ ಉದಾಹರಣೆಗಳನ್ನು ಕಂಡುಹಿಡಿಯಲು ವಿದ್ಯಾರ್ಥಿಗಳನ್ನು ಸಶಕ್ತರನ್ನಾಗಿಸುತ್ತೇನೆ. ನಾಟಕವನ್ನು ಕಲಿಸುವಾಗ, ನಾನು ಒಳನೋಟ (ನಟನಿಂದ ಪಾತ್ರದ ಪರಕಾರ ಪ್ರವೇಶ), ಉಚ್ಚಾರಣೆ ಮತ್ತು ಧ್ವನಿಯ ಏರಿಳಿತಗಳಿಗೆ ಒತ್ತು ನೀಡುತ್ತೇನೆ.

**ರಾಘವೇಂದ್ರ: ಮಕ್ಕಳ ಕಲಿಕೆಯನ್ನು ಸುಧಾರಿಸಲು ಭಾಷೆ ಮತ್ತು ಸಾಹಿತ್ಯದ ಬೋಧನೆಯ ಮೂಲಕ ಯಾವ ವಿಧಾನಗಳು ಮತ್ತು ತಂತ್ರಗಳನ್ನು ಅಳವಡಿಸಿಕೊಳ್ಳಬಹುದು?**

**ವಿಶ್ವನಾಥ್ ಗುಂಡಿಗೆರೆ:** ಶಿಕ್ಷಣದ ಯಾವುದೇ ಪ್ರಕ್ರಿಯೆಯು ಸುಲಭದಿಂದ ಕಠಿಣತೆಯೆಡೆಗೆ ಸಾಗಿದಾಗ ಮಕ್ಕಳಲ್ಲಿ ಕಲಿಯುವ ಆಸಕ್ತಿ ಹೆಚ್ಚಾಗುತ್ತದೆ. ಮಗುವಿನ ಆಂತರಿಕ ಜಗತ್ತು ಮತ್ತು ಹೊರ ಜಗತ್ತಿನ ನಡುವೆ ಸೇತು ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಭಾಷೆ ಮತ್ತು ಸಾಹಿತ್ಯವು ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ. ನಾನು ಶಾಲಾ ಗ್ರಂಥಾಲಯದ ಸದ್ಬಳಕೆ ಮಾಡಿಕೊಂಡಿದ್ದೇನೆ. ನಮ್ಮ ಶಾಲೆಯ ಗ್ರಂಥಾಲಯದಲ್ಲಿ 5000ಕ್ಕೂ ಹೆಚ್ಚು ಪುಸ್ತಕಗಳಿವೆ. ಆದರೆ ಇಲ್ಲಿ ಪುಸ್ತಕಗಳ ಸಂಖ್ಯೆಯ ಕಡೆಗೆ, ಇಲ್ಲವೇ ಗ್ರಂಥಾಲಯದ ಸುವ್ಯವಸ್ಥೆಯ ಕಡೆಗೆ ಗಮನ ನೀಡುವ ಬದಲು, ಈ ಪುಸ್ತಕಗಳಲ್ಲಿ ಎಷ್ಟು ಬಳಕೆಯಾಗುತ್ತಿದೆ ಹಾಗೂ ಗ್ರಂಥಾಲಯವನ್ನು ಮಕ್ಕಳ ಕಲಿಕೆಯ ಸಂಪನ್ಮೂಲವಾಗಿ ಯಾವ ರೀತಿಯಲ್ಲಿ ಬಳಸಲಾಗುತ್ತಿದೆ ಎಂಬುದರ ಕಡೆಗೆ ಗಮನ ಹರಿಸಬೇಕಾಗುತ್ತದೆ. ನಾವು ಗ್ರಂಥಾಲಯವನ್ನು ಮಕ್ಕಳ ಒಂದು ಕಲಿಕಾ ಸಂಪನ್ಮೂಲವಾಗಿ ರೂಪಾಂತರಗೊಳಿಸಬೇಕು. ಗ್ರಂಥಾಲಯದದಲ್ಲಿರುವ ಪುಸ್ತಕಗಳು ಮಕ್ಕಳಿಗೆ ತಮ್ಮ ಮಿತ್ರರಂತೆ ಕಾಣಿಸುವಂತಾಗಬೇಕು ಹಾಗೂ ಅವರು ಅವುಗಳನ್ನು ಓದಲು ಸದಾ ಉತ್ಸುಕರಾಗುವಂತಾಗಬೇಕು ಎಂಬುದನ್ನು ಸಾಕಾರಗೊಳಿಸಲು ನಾನು ಪ್ರಯತ್ನಿಸುತ್ತೇನೆ. ಪೂರಕ ಕಲಿಕೆಗಾಗಿ ನಾನು ನನ್ನ ತರಗತಿಯ ಓದುವ ಮೂಲೆಯನ್ನು (Reading Corner) ವ್ಯವಸ್ಥಿತವಾಗಿ ಉಪಯೋಗಿಸುತ್ತೇನೆ. ವಿದ್ಯಾರ್ಥಿಗಳು ತಾವು ಇಷ್ಟಪಡುವ ಪುಸ್ತಕಗಳನ್ನು ಓದಲು ಮತ್ತು ಅವನ್ನು ಒಂದು ಪುಸ್ತಕದಲ್ಲಿ ದಾಖಲಿಸಲು ಉತ್ತೇಜಿಸುತ್ತೇನೆ. ಮುಂದುವರಿದು ಅವರನ್ನು ತಾವು ಓದಿದ ಕವಿತೆಗಳು, ಕಥೆಗಳು ಅಥವಾ ಪ್ರಬಂಧಗಳ ಕುರಿತಾಗಿ ಮಾತನಾಡಲು ಪ್ರೇರೇಪಿಸುತ್ತೇನೆ ಹಾಗೂ ತಮ್ಮ ಭಾವನೆಗಳು ಮತ್ತು ಅನುಭವಗಳನ್ನು ಬರೆಯಲು ಅವರನ್ನು ಪ್ರೋತ್ಸಾಹಿಸುತ್ತೇನೆ. ಗ್ರಂಥಾಲಯದಿಂದ ವಿದ್ಯಾರ್ಥಿಗಳಿಗೆ ಸೂಕ್ತವಾದ ಗಂಭೀರ ಸಾಹಿತ್ಯ ಮತ್ತು ಪುಸ್ತಕ ವಿಮರ್ಶೆಗಳನ್ನು ಪಡೆದುಕೊಂಡು ವಿದ್ಯಾರ್ಥಿಗಳಿಗೆ ಕಾಣುವಂತೆ ಪ್ರದರ್ಶನಕ್ಕಿಡುತ್ತೇನೆ. ಬಳಿಕ ಸಾಹಿತಿಗಳು ಮತ್ತು ಅವರ ಬರಹಗಳ ಕುರಿತಾದ ವಿವರಗಳು ಹಾಗೂ ಉಕ್ತಿಗಳನ್ನು ಸಂಗ್ರಹಿಸಲು ಮತ್ತು ನಂತರ ಈ ಸಂಗ್ರಹಗಳನ್ನು ಕೈಯಿಂದ ತಯಾರಿಸಿದ ಕಡತ ಅಥವಾ ಪುಸ್ತಕವನ್ನಾಗಿಸಲು ಸೂಚಿಸುತ್ತೇನೆ. ಇದು ಸಾಮಗ್ರಿಗಳನ್ನು, ಜೊತೆಗೆ ಮಾಹಿತಿಯನ್ನು ಸಂಗ್ರಹಿಸುವ ಕೌಶಲವನ್ನು ಅವರಲ್ಲಿ ಅಭಿವೃದ್ಧಿಪಡಿಸುವುದಲ್ಲದೆ, ಅದರ ಮಹತ್ವವನ್ನು ಮನದಟ್ಟು ಮಾಡುತ್ತದೆ. ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಮಕ್ಕಳ ದಿನಾಚರಣೆ, ಶಿಕ್ಷಕರ ದಿನಾಚರಣೆ, ಕ್ರೀಡಾ ದಿನಾಚರಣೆ ಮತ್ತು ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುವ ಹೊಣೆಯನ್ನು ನಾನು ಮಕ್ಕಳಿಗೇ ವಹಿಸಿಕೊಡುತ್ತೇನೆ ಹಾಗೂ ಅವರು ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸುವುದನ್ನು ಖಾತರಿಪಡಿಸಿಕೊಳ್ಳುತ್ತೇನೆ. ಇದಲ್ಲದೆ, ವಾರ್ಷಿಕ ಮತ್ತು ಮಧ್ಯಾವಧಿಯ ರಜಾದಿನಗಳಲ್ಲಿ ದಿನಚರಿಯನ್ನು ಬರೆಯಲು, ಶಾಲೆಗೆ ಮರಳಿದ ಬಳಿಕ ಅದನ್ನು ತರಗತಿಯಲ್ಲಿ ಓದುವಂತೆ ವಿದ್ಯಾರ್ಥಿಗಳನ್ನು ಉತ್ತೇಜಿಸುತ್ತೇನೆ. ಮಕ್ಕಳ ಗ್ರಹಿಕೆ, ಅಭಿವ್ಯಕ್ತಿ ಮತ್ತು ಸೃಜನಶೀಲತೆಯನ್ನು ಬೆಳೆಸುವಲ್ಲಿ ಭಾಷೆ ಮತ್ತು ಸಾಹಿತ್ಯದ ಬೋಧನೆ ಪರಿಣಾಮಕಾರಿ ಪಾತ್ರ ವಹಿಸುತ್ತದೆ.

**ರಾಘವೇಂದ್ರ: ತರಗತಿಯ ಒಳಗೆ ಹಾಗೂ ಹೊರಗೆ ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸಲು ನೀವು ಯಾವ ಪದ್ಧತಿ ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳುತ್ತೀರಿ? ಅಂತಹ ಸಾಹಿತ್ಯಿಕ ಅಭಿರುಚಿಗಳು ಸಮಗ್ರವಾಗಿ ಕಲಿಯಲು ಮತ್ತು ಶಾಲಾ ಚಟುವಟಿಕೆಗಳನ್ನು ನಿರ್ವಹಿಸಲು ಅವರಿಗೆ ನೆರವಾಗುತ್ತದೆ ಎಂದು ನಿಮಗೆ ಅನ್ನಿಸುತ್ತದೆಯೇ?**

**ವಿಶ್ವನಾಥ ಗುಂಡಿಗೆರೆ :** ತರಗತಿಗೆಂದೇ ವಿನ್ಯಾಸಗೊಳಿಸಲಾದ ಚಟುವಟಿಕೆಗಳನ್ನು ಈಗಾಗಲೇ ನಾನು ಉಲ್ಲೇಖಿಸಿದ್ದೇನೆ. ಹೊರಾಂಗಣ ಚಟುವಟಿಕೆಗಳಿಗಾಗಿ ನಾನು ನನ್ನ ವಿದ್ಯಾರ್ಥಿಗಳನ್ನು 'ಸಂಗೊಳ್ಳಿ ರಾಯಣ್ಣ' ನಾಟಕವನ್ನು ಪ್ರದರ್ಶಿಸಲು ಫ್ರೀಡಂ ಪಾರ್ಕ್‌ಗೆ ಕರೆದೊಯ್ದಿದ್ದೇನೆ. ಪ್ರತಿ ವರ್ಷ ಶಾಲೆಯ ವಾರ್ಷಿಕೋತ್ಸವ ಆಚರಣೆ ಸಂದರ್ಭದಲ್ಲಿ ಅವರಿಗಾಗಿ ನನ್ನ ನಿರ್ದೇಶನದಲ್ಲಿ ನಾಟಕ ಆಡಿಸುತ್ತೇನೆ. ಅಲ್ಲದೆ, ಪ್ರತಿಭಾ ಕಾರಂಜಿಯ ಗಾಯನ ಸ್ಪರ್ಧೆಗಳಲ್ಲಿ ಭಾಗವಹಿಸಲು ನಾನು ಅವರಿಗೆ ಮಾರ್ಗದರ್ಶನ ಮಾಡುತ್ತೇನೆ. ನಾನು ಮಕ್ಕಳಿಗೆಂದೇ 'ಪುಟಾಣಿ ಪಿಕ್ನಿಕ್' (Children's Picnic) ಎಂಬ ನಾಟಕವನ್ನು ರಚಿಸಿದ್ದೇನೆ ಹಾಗೂ ಈ ವರ್ಷದ ಶಾಲಾ ವಾರ್ಷಿಕೋತ್ಸವದಂದು ಅವರಿಂದ ಅದನ್ನು ಪ್ರದರ್ಶಿಸುತ್ತಿದ್ದೇನೆ. ಇಂಥ ಪ್ರಯೋಗಗಳು ಮತ್ತು ಚಟುವಟಿಕೆಗಳು ವಿದ್ಯಾರ್ಥಿಗಳ ಸಾಹಿತ್ಯಿಕ ಅಭಿರುಚಿಗಳ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತವೆ ಎಂದು ನಾನು ನಂಬಿದ್ದೇನೆ. ನನ್ನ ಪ್ರೌಢಶಾಲಾ ದಿನಗಳಲ್ಲಿ ನನ್ನ ಮೇಲೆ ತುಂಬ ಪ್ರಭಾವ ಬೀರಿದ ನನ್ನ ಗುರುಗಳೂ, ಕನ್ನಡ ಶಿಕ್ಷಕರೂ ಆಗಿದ್ದ ಮಹಾಲಿಂಗಯ್ಯ ಅವರನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ನನ್ನ ವಿದ್ಯಾರ್ಥಿಗಳು ಕೂಡ ಇಂಥ ಚಟುವಟಿಕೆಗಳಿಂದ ಪ್ರಯೋಜನ ಪಡೆಯುತ್ತಿರುವುದನ್ನು ನಾನು ನೋಡಿದ್ದೇನೆ.

**ರಾಘವೇಂದ್ರ: ಸರಕಾರಿ ಶಾಲಾ ಮಕ್ಕಳ ಪರಿಸ್ಥಿತಿಯನ್ನು, ಅದರಲ್ಲೂ ಬಹುಭಾಷಾ ಪರಿಸರದಲ್ಲಿ ಪರಿಗಣಿಸಿದಾಗ, ಅವರ ಭಾಷಾ ಕಲಿಕೆಯ ಸಮಸ್ಯೆಗಳು ಮತ್ತು ಅಡೆತಡೆಗಳನ್ನು ನಾವು ಹೇಗೆ ಪರಿಹರಿಸಬಹುದಾಗಿದೆ?**

**ವಿಶ್ವನಾಥ್ ಗುಂಡಿಗೆರೆ:** ನಮ್ಮ ಶಾಲೆಯ ಪ್ರತಿ ತರಗತಿಯಲ್ಲೂ, ಬಿಹಾರ, ನೇಪಾಳ ಮತ್ತು ಹಿಂದಿ ಮಾತನಾಡುವ ಅನ್ಯ ಪ್ರದೇಶಗಳಿಂದ ಬಂದ ಹಿಂದಿ ಭಾಷಿಕ ಪ್ರದೇಶಗಳ ಪೋಷಕರನ್ನು ಹೊಂದಿರುವ ಮಕ್ಕಳನ್ನು ಕಾಣಬಹುದಾಗಿದೆ. ಈ ಮಕ್ಕಳು ಭಾಷೆಯನ್ನು ಕಲಿಯಲು ಕಷ್ಟಪಡುತ್ತಾರೆ. ಏಕೆಂದರೆ, ಅವರು ಕನ್ನಡವನ್ನು ಕಲಿಯಬೇಕಾಗುತ್ತದೆ. ಆರಂಭದಲ್ಲಿ, ನಾನು ಈ ಮಕ್ಕಳನ್ನು ಮೂಲ ಕನ್ನಡ ಭಾಷಿಕ ಸಹಪಾಠಿಗಳ ಜೊತೆಗೆ ಸಂವಹನ ನಡೆಸಲು

ಪ್ರೋತ್ಸಾಹಿಸುತ್ತೇನೆ. ಅವರು ಸಂವಹನ ನಡೆಸಲು ಬಯಸುವ ಯಾವುದೇ ಭಾಷೆಯಲ್ಲಿ ಅವರ ಮೌಖಿಕ ಅಭಿವ್ಯಕ್ತಿಗಳಿಗೆ ನಾವು ಅವಕಾಶ ನೀಡಬೇಕಾಗಿರುವುದು ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ವಿಷಯವಾಗಿರುತ್ತದೆ. ಇದು ದೈಹಿಕ ಭಾಷೆಯ ಜೊತೆಗೆ ಸನ್ನೆಗಳ ಬಳಕೆಯನ್ನೂ ಕೂಡ ಹೊಂದಿರುತ್ತದೆ. ಮುಂದೆ, ಅವರು ಕನ್ನಡದಲ್ಲಿ ಮಾತನಾಡಲು ಪ್ರಯತ್ನಿಸಿದಾಗ ಅವರ ಉಚ್ಚಾರಣೆಯ ಕಡೆಗೆ ನಾನು ಗಮನ ಹರಿಸುತ್ತೇನೆ. ಅವರು ಕನ್ನಡವನ್ನು ಸುಗಮವಾಗಿ ಹಾಗೂ ಸರಳವಾಗಿ ಕಲಿತು ಅದನ್ನು ತಮ್ಮದಾಗಿಸುವಂತೆ ಪೂರಕವಾದ ಉತ್ತಮ ಭಾಷಾ ವಾತಾವರಣವನ್ನು ಸೃಷ್ಟಿಸಲು ನಾನು ಪ್ರಯತ್ನಿಸುತ್ತೇನೆ. ನೇಪಾಳದ ವಿಶಾಲ್ ಕುಮಾರ್ ಎಂಬ ಬಾಲಕನೊಬ್ಬ ನನ್ನ ತರಗತಿಯಲ್ಲಿ ಬಹಳ ಚೆನ್ನಾಗಿ ಕನ್ನಡವನ್ನು ಕಲಿತಿದ್ದು ನನಗಿನ್ನೂ ನೆನಪಿದೆ. ಆತ ಈಗಲೂ ನನಗೆ ಕರೆ ಮಾಡುತ್ತಾನೆ ಮತ್ತು ನನ್ನೊಂದಿಗೆ ಕನ್ನಡದಲ್ಲಿ ಮಾತನಾಡುತ್ತಾನೆ. ಆತ ಎಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದಾರೆ. ಇತರ ಭಾಷಾ ಹಿನ್ನೆಲೆಯ ಅಂತಹ ವಿದ್ಯಾರ್ಥಿಗಳು ಸಹ ನಮಗೆ ಪಾಲ್ಗೊಳ್ಳುವಿಕೆಯ ಬೆಂಬಲವನ್ನು ಒದಗಿಸುವುದು ನಮ್ಮ ಪ್ರಯತ್ನಗಳಿಗಿಂತ ಹೆಚ್ಚು ಮುಖ್ಯವಾಗಿದೆ. ವೈವಿಧ್ಯಮಯ ಭಾಷಾ ಹಿನ್ನೆಲೆಯ ವಿದ್ಯಾರ್ಥಿಗಳ ಸಹಭಾಗಿತ್ವವು ಒಂದು ದೊಡ್ಡ ಭರವಸೆಯಾಗಿದೆ. ನಮ್ಮ ಕನ್ನಡ ಮಾತನಾಡುವ ವಿದ್ಯಾರ್ಥಿಗಳು ವಿಭಿನ್ನ ಭಾಷಾ ಹಿನ್ನೆಲೆಯ ತಮ್ಮ ಗೆಳೆಯರೊಂದಿಗೆ ಗೌರವ ಮತ್ತು ಸಭ್ಯತೆಯಿಂದ ವರ್ತಿಸಿ ಸ್ನೇಹಪರ ವಾತಾವರಣವನ್ನು ಸೃಷ್ಟಿಸುವುದನ್ನು ನಾವು ಖಚಿತಪಡಿಸಿಕೊಳ್ಳುತ್ತೇವೆ.

**ರಾಘವೇಂದ್ರ: ಇತ್ತೀಚಿನ ದಿನಗಳಲ್ಲಿ ಪ್ರಾಥಮಿಕ ಹಂತದಲ್ಲಿ ಭಾಷಾ ಶಿಕ್ಷಕರು ಎದುರಿಸುತ್ತಿರುವ ಸವಾಲುಗಳು ಯಾವುವು? ಅಂತಹ ಸವಾಲುಗಳನ್ನು ಅವರು ಹೇಗೆ ಮೀರಬಹುದು?**

**ವಿಶ್ವನಾಥ್ ಗುಂಡಿಗೆರೆ:** ಪ್ರಾಥಮಿಕ ಹಂತದಲ್ಲಿ ಬಹುಭಾಷಾ ಪರಿಸರವೇ ಅತಿದೊಡ್ಡ ಸವಾಲಾಗಿರುತ್ತದೆ. ಶಿಕ್ಷಕರು ಕಲಿಸುವಾಗ ಈ ಸತ್ಯವನ್ನು ಸ್ವೀಕರಿಸಲೇಬೇಕಾಗುತ್ತದೆ. ಅದೇ ವೇಳೆ, ಬಹುಭಾಷಾ ಪರಿಸರವು ಅವರ ಬೋಧನೆಗೆ ಅಡ್ಡಿಯಾಗುವ ಬದಲಿಗೆ, ತರಗತಿಯಲ್ಲಿ ಉಪಯುಕ್ತ ಸಂಪನ್ಮೂಲವಾಗುವುದನ್ನು ಅವರು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಯಾವುದೇ ಭಾಷೆಯನ್ನು ಕರಗತ ಮಾಡಿಕೊಳ್ಳಲು, ಅದನ್ನು ತುಂಬ ಓದುವುದು ಅವಶ್ಯಕ. ಶಿಕ್ಷಕರು ವೈಯಕ್ತಿಕವಾಗಿ ಮತ್ತು ವೃತ್ತಿಪರವಾಗಿ ಸೃಜನಶೀಲ ಅನ್ವೇಷಣೆಯಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಅವರು ಸಾಂಪ್ರದಾಯಿಕ ಚಿಂತನೆಯಿಂದ ಮುಕ್ತರಾಗಬೇಕಿದೆ ಹಾಗೂ ಸ್ಥಾಪಿತ ಮಾದರಿಗಳನ್ನು ಮೀರಿ ನಾವೀನ್ಯತೆಯತೆಯೆಡೆಗೆ ಸಾಗುವ ಅವಶ್ಯಕತೆ ಬಹಳವಿದೆ. ಇದರ ಜೊತೆಗೆ, ಜ್ಞಾನದ ಸಮೃದ್ಧಿ ಮತ್ತು ಪುನರ್‌ನಿರ್ಮಾಣದ ಮೂಲಕ ಪಾಠಗಳನ್ನು ಪ್ರಶಂಸಿಸುವುದು ಅತ್ಯಗತ್ಯ.

**ರಾಘವೇಂದ್ರ: ಪ್ರಾಥಮಿಕ ಹಂತದಲ್ಲಿ ಬೋಧನಾ ಮಾಧ್ಯಮವು ಮಾತೃಭಾಷೆಯಾಗಿರಬೇಕು ಎಂದು ನಮ್ಮ ನೀತಿ ದಾಖಲೆಗಳು ಹೇಳುತ್ತವೆ. ಈ ಕುರಿತು ನಿಮ್ಮ ಅಭಿಪ್ರಾಯವೇನು? ತಳಮಟ್ಟದಲ್ಲಿ ವಿವಿಧ ಶಿಕ್ಷಕರ ತರಬೇತಿ ಕಾರ್ಯಕ್ರಮಗಳು, ಕಾರ್ಯಾಗಾರಗಳು ಮತ್ತು ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀವು ಹೇಗೆ ನೋಡುತ್ತೀರಿ? ಅವುಗಳ ಅನುಷ್ಠಾನ ಮತ್ತು ಉತ್ತರದಾಯಿತ್ವದ ಪ್ರಾಯೋಗಿಕ ಸಾಮರ್ಥ್ಯ ಮತ್ತು ಪರಿಣಾಮಕಾರಿತ್ವದ ಕುರಿತು ನೀವು ಏನು ಹೇಳುವಿರಿ?**

**ವಿಶ್ವನಾಥ್ ಗುಂಡಿಗೆರೆ:** ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯೇ ಬೋಧನಾ ಮಾಧ್ಯಮವಾಗಬೇಕು ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಮಕ್ಕಳು ಈ ಭಾಷೆಯ ಜೊತೆಗೆ ಆತ್ಮೀಯ ಸಂಬಂಧವನ್ನು ಹೊಂದಿರುತ್ತಾರೆ. ನಾವು ಯಾವುದೇ ಭಾಷೆಯನ್ನಾದರೂ ಮಾತನಾಡಬಹುದು. ಆದರೆ ನಮ್ಮ ಗ್ರಹಿಸುವಿಕೆಯು ಮುಖ್ಯವಾಗಿ ನಮ್ಮ ಮಾತೃಭಾಷೆಯಿಂದಲೇ ಪ್ರಭಾವಿತವಾಗಿರುತ್ತದೆ. ಅದಕ್ಕೆ ಒಡ್ಡಿಕೊಳ್ಳುವುದು ನಮ್ಮ ಶಬ್ದಕೋಶದ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ನಮ್ಮ ಭಾಷಾ ಕೌಶಲ್ಯಗಳನ್ನು ಹೆಚ್ಚಿಸುತ್ತದೆ. ಇದು ನಮ್ಮ ದಿನನಿತ್ಯದ ಚಟುವಟಿಕೆಗಳನ್ನು ನಡೆಸುವ ಪ್ರಮುಖ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ.

ಶಿಕ್ಷಕರ ತರಬೇತಿ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ ಪ್ರಸ್ತುತ ಹಲವಾರು ವಿಷಯಾಧಾರಿತ-ನಿರ್ದಿಷ್ಟ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಕಾಲಾಂತರದಲ್ಲಿ ಈ ಕಾರ್ಯಕ್ರಮಗಳನ್ನು ಶಾಲಾ ವ್ಯವಸ್ಥೆಯಲ್ಲಿ ಅಂತರ್ಗತಗೊಳಿಸಲಾಗುತ್ತಿದ್ದು, ಅದರ ಫಲಿತಗಳು ಕೂಡಾ ಬದಲಾಗುತ್ತಿರುತ್ತವೆ. ಈಗಾಗಲೇ ಅಸ್ತಿತ್ವದಲ್ಲಿರುವ ಕಾರ್ಯಕ್ರಮಗಳ ಯಶಸ್ಸಿನ ಮೌಲ್ಯಮಾಪನದ ನಂತರವೇ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು ಹೆಚ್ಚು ಸೂಕ್ತವಾಗಿದೆ. ಈ ಕಾರ್ಯಕ್ರಮಗಳ ಪರಿಣಾಮ ಮತ್ತು ಕೊರತೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಕಾರ್ಯಕ್ರಮಗಳಲ್ಲಿ ಸುಧಾರಣೆಯನ್ನು ತರಬೇಕು. ಏಕಕಾಲದಲ್ಲಿ ಅನೇಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರೆ, ಅದು ಶಿಕ್ಷಕರಲ್ಲಿ ಗೊಂದಲಕ್ಕೆ ಕಾರಣವಾಗುತ್ತದೆ. ತರಬೇತಿ ಕಾರ್ಯಕ್ರಮಗಳು ತರಗತಿಯ ವಾಸ್ತವಿಕ ಅವಶ್ಯಕತೆಗಳಿಗೆ ಪೂರಕವಾಗಿದ್ದರೆ ಒಳ್ಳೆಯದು. ಅವು ಕೇವಲ ಸೈದ್ಧಾಂತಿಕವಾಗಿರದೆ ಪ್ರಾಯೋಗಿಕವಾಗಿದ್ದರೆ ಹೆಚ್ಚು ಪರಿಣಾಮಕಾರಿಯಾಗುತ್ತವೆ. ಈ ಕಾರ್ಯಕ್ರಮಗಳು ಬೋಧನಾ ಸಾಧನಗಳ ತಯಾರಿಕೆ ಮತ್ತು ಶಿಕ್ಷಕರ ತರಗತಿಯ ಅನುಭವಗಳನ್ನು ಹಂಚಿಕೊಳ್ಳುವಿಕೆಯನ್ನು ಕೂಡ ಒಳಗೊಂಡಿದ್ದರೆ, ಶಿಕ್ಷಕರು ಇವುಗಳಲ್ಲಿ ಇನ್ನಷ್ಟು ಹೆಚ್ಚು ತೊಡಗಿಸಿಕೊಳ್ಳುತ್ತಾರೆ. ಉನ್ನತ ಜ್ಞಾನದ ಅನ್ವೇಷಣೆಗಿಂತ ತಳಮಟ್ಟದ ಪ್ರತಿಕ್ರಿಯೆಗಳಿಗೆ ಒತ್ತು ನೀಡಬೇಕು. ಹಲವು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದಕ್ಕಿಂತ, ಅತ್ಯುತ್ತಮ ಗುಣಮಟ್ಟದ ಒಂದೆರಡು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಉತ್ತಮ. ತರಬೇತಿ ಕಾರ್ಯಕ್ರಮದಲ್ಲಿ ಶಿಕ್ಷಕರು ಕಲಿತ ವಿಷಯಗಳನ್ನು ತರಗತಿಯ ಮಟ್ಟದಲ್ಲಿ ಪರೀಕ್ಷಿಸುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ.

**ರಾಘವೇಂದ್ರ: ಮಕ್ಕಳ ಕಲಿಕೆಯ ಪ್ರಕ್ರಿಯೆಗೆ ಶಾಲಾ ಆಡಳಿತವು ಯಾವ ರೀತಿಯ ಕೊಡುಗೆ ನೀಡುತ್ತದೆ? ಈ ಕುರಿತಂತೆ ನೀವು ಸಾಮಾನ್ಯಕ್ಕಿಂತ ಭಿನ್ನವಾದ ಯಾವ ಕ್ರಮಗಳನ್ನು ತೆಗೆದುಕೊಂಡಿರುವಿರಿ?**

**ವಿಶ್ವನಾಥ್ ಗುಂಡಿಗೆರೆ:** ನಾನು ಪ್ರಾಂಶುಪಾಲನಾಗಿದ್ದ ಅವಧಿಯಲ್ಲಿ ಪಠ್ಯಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಅನುಭವವನ್ನು ಹೆಚ್ಚಿಸಲು ಹಲವಾರು ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿದ್ದೆ. ಶಾಲೆಯ ದೈನಂದಿನ ಕಾರ್ಯನಿರ್ವಹಣೆಯು ವಾರ್ಷಿಕ ಶೈಕ್ಷಣಿಕ ಯೋಜನೆಯಷ್ಟೇ ಮುಖ್ಯ ಎಂದು ನಾನು ನಂಬುತ್ತೇನೆ ಮತ್ತು ನಾನು ಎರಡಕ್ಕೂ ಸಮಾನ ಪ್ರಾಮುಖ್ಯತೆ ನೀಡಿದ್ದೇನೆ. ಪರಿಣಾಮಕಾರಿ ದಿನನಿತ್ಯದ ಚಟುವಟಿಕೆಗಳು ವಾರ್ಷಿಕ ಯೋಜನೆಯ ಗುಣಮಟ್ಟಕ್ಕೆ ಕೊಡುಗೆ ನೀಡುತ್ತವೆ. ಶಾಲೆಗೆ ಕಂಪ್ಯೂಟರ್ ಮತ್ತಿತರ ಮೂಲಸೌಕರ್ಯ ಸಾಮಗ್ರಿಗಳನ್ನು ಖರೀದಿಸಲು ನಾವು ದಾನಿಗಳ ಸಹಾಯವನ್ನೂ ಕೂಡ ಪಡೆದುಕೊಂಡಿದ್ದೇವೆ.



**ರಾಘವೇಂದ್ರ ಹೇರ್ಳೆ** ಅವರು ಪ್ರಸ್ತುತ ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಅನುವಾದ ತಂಡದ ಸದಸ್ಯರಾಗಿದ್ದಾರೆ. ಜೊತೆಗೆ ಕನ್ನಡ ಉಪಕ್ರಮ ತಂಡ ಮತ್ತು ಪಾಠಶಾಲೆಯ ಸಂಪಾದಕೀಯ ತಂಡದ ಸದಸ್ಯರೂ ಆಗಿದ್ದಾರೆ.

**ಸಂಪರ್ಕ:** Raghavendra.herle@azimpremjifoundation.org

ಅನುವಾದ: ರಾಕೇಶ್ ಪೂಂಜ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ




# ಗಾಂವ್ ಕಾ ಬಚ್ಚಾ

**ವಿಮರ್ಶೆ: ಅನಿತಾ ಧ್ಯಾನಿ**

‘ಗಾಂವ್ ಕಾ ಬಚ್ಚಾ’ ಎಂಬ ಶೀರ್ಷಿಕೆಯನ್ನು ಓದಿದ ತಕ್ಷಣ, ಈ ಕಥೆಯನ್ನು ಹಳ್ಳಿಯ ಮಕ್ಕಳ ಮುಗ್ಧತೆ ಮತ್ತು ಅಲ್ಲಿನ ಜನರು ಎದುರಿಸುತ್ತಿರುವ ಕಠಿಣ ಪರಿಶ್ರಮ ಮತ್ತು ಕಷ್ಟಗಳೊಂದಿಗೆ ಹೆಣಗುತ್ತಿರುವ ಜನರನ್ನು ಗಮನದಲ್ಲಿಟ್ಟುಕೊಂಡು ಬರೆಯಲಾಗಿರಬಹುದೇನೋ ಎನಿಸುತ್ತದೆ. ಕಥೆಯು ಸ್ವಲ್ಪ ಈ ರೀತಿಯೇ ಅಂದರೆ, "ಸೂರ್ಯ ನಿಧಾನವಾಗಿ ಆಕಾಶದಲ್ಲಿ ಉದಯಿಸುತ್ತಿದ್ದ, ಆದರೆ ಹಳ್ಳಿಯ ಅಷ್ಟೊತ್ತಿಗಾಗಲೇ ಜನರು ಎಚ್ಚರಗೊಂಡಿದ್ದರು" ಎಂದೇ ಪ್ರಾರಂಭವಾಗುತ್ತದೆ. ಇದನ್ನು ಓದಿದ ನಂತರ ಊಹೆ ಸರಿಯಾಗಿದೆ ಎಂದು ಅನಿಸಿತು. ಕಥೆ ಹಳ್ಳಿಯ ಕಷ್ಟಕರ ಜೀವನದ ಕಡೆಗೆ ಸಾಗುತ್ತದೆ. ಇಲ್ಲಿನ ಜನರು ಎಷ್ಟು ಬೇಗ ಏಳಬೇಕು? ಕಥೆಯಲ್ಲಿ ಹಳ್ಳಿಯ ಮಗುವನ್ನು ಎಂತಹ ಕಠಿಣ ಪರಿಸ್ಥಿತಿಯಲ್ಲಿ ತೋರಿಸಲಾಗುತ್ತಿತ್ತೋ ಯಾರಿಗೆ ಗೊತ್ತು.

"ಯೆಮಿ, ಇಂದು ಮಾರುಕಟ್ಟೆಯಲ್ಲಿ ನೀನು ನಿನ್ನ ಚಿಕ್ಕ ತಮ್ಮನನ್ನು ನೋಡಿಕೊ. ನಾನು ಮಾವಿನಹಣ್ಣು ಮಾರಾಟದಲ್ಲೇ ಮುಳುಗಿರುತ್ತೇನೆ.” ಎಂದು ತಾಯಿ ಹೇಳಿದಳು. ನಂತರ ಆ ಊಹೆ ಮತ್ತಷ್ಟು ಖಚಿತವಾಯಿತು. ಕಥೆ ಹಳ್ಳಿಯ ಕಷ್ಟಕರ ಜೀವನದ ಕಡೆಗೆ ಸಾಗುತ್ತಿರುವಂತೆ ತೋರುತ್ತದೆ. ಯೆಮಿ, “ಇಲ್ಲಿ ಬಾ ಕೋಕು, ಇವತ್ತು ನಾನು ನಿನ್ನನ್ನು ಒಬ್ಬಳೇ ನೋಡಿಕೊಳ್ಳುತ್ತೇನೆ!” ಎಂದಳು. "ನೀನು ಒಬ್ಬಳೇ?" ತಾಯಿ ಯೆಮಿಯನ್ನು ನೋಡಿ ನಗುತ್ತಾ ಹೇಳಿದಳು. ತಾಯಿಗೆ ಎಲ್ಲವೂ ತಿಳಿದಿತ್ತು.

"ಅಮ್ಮನಿಗೆ ಎಲ್ಲವೂ ತಿಳಿದಿತ್ತು." ಈ ವಾಕ್ಯವು ಇದ್ದಕ್ಕಿದ್ದಂತೆ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳನ್ನು ಮತ್ತು ಕುತೂಹಲಗಳನ್ನು ಹುಟ್ಟುಹಾಕುತ್ತದೆ. ತಾಯಿಗೆ ಏನು ಗೊತ್ತಿತ್ತು; ಯೆಮಿ ಹೇಳಿದ್ದನ್ನು ಕೇಳಿ ತಾಯಿ ಏಕೆ ನಗುತ್ತಿದ್ದಳು; ಯೆಮಿಗೆ ತಿಳಿದಿಲ್ಲದ, ಆದರೆ ಅವಳ ತಾಯಿಗೆ ಮಾತ್ರ ತಿಳಿದಿರುವ ವಿಷಯ ಯಾವುದು?




ಲೇಖಕ: ಜೇನ್ ಕೋವೆನ್-ಫ್ಲೇಚರ್

ಅನುವಾದ : ಅರುಂಧತಿ ದೇವಸ್ಥಲೆ

ವಿನ್ಯಾಸ : ಎಡ್ರೀನ್ ಸೇ ಸೈಫ಼ುಟ್

ವಯಸ್ಸಿನ ವರ್ಗ : 4-6+

ಪುಟ ಸಂಖ್ಯೆ : 34

ಭಾಷೆ : ಇಂಗ್ಲಿಷ್/ ಹಿಂದಿ

ಪ್ರಕಾಶಕರು : ಸ್ಕಾಲಾಸ್ಟಿಕ್ ಇಂಕ್

ಸಂಪರ್ಕ : ಏಕಲವ್ಯ

ಬೆಲೆ : ₹40

ಕಥೆಯ ಪ್ರತಿಯೊಂದು ಸಾಲು ನಿಗೂಢತೆಯಿಂದ ತುಂಬಿದೆ. ತನ್ನ ತಾಯಿಯೊಂದಿಗೆ ಮನೆಯಿಂದ ಹೊರಡುವಾಗ, ಯೆಮಿಗೆ ತಾನು ದೊಡ್ಡವಳಾದಂತೆ ಭಾಸವಾಗುತ್ತದೆ.

ಈ ಕಥೆಯು ಹಳ್ಳಿಯ ಪರಸ್ಪರ ಸಹೋದರತ್ವ ಮತ್ತು ಸಾಮರಸ್ಯದ ಒಂದು ನೋಟವನ್ನು ನೀಡುತ್ತದೆ. "ಅವರು ಕೂಡ ಗುಂಪಿಗೆ ಸೇರಿದರು." ಈ ವಾಕ್ಯವು ಹಳ್ಳಿಯ ಜನರು ಗುಂಪಿನಲ್ಲಿ ಒಟ್ಟಾಗಿ ಕೆಲಸ ಮಾಡುವ ಮನೋಭಾವವನ್ನು ತೋರಿಸುತ್ತದೆ. ‘ಗಾಂವ್ ಕಾ ಬಚ್ಚಾ’ ಹಳ್ಳಿಯ ಪ್ರೀತಿ, ಸಹೋದರತ್ವ ಮತ್ತು ಆತ್ಮೀಯತೆಯ ವಿಶಿಷ್ಟ ಕಥೆಯಾಗಿದೆ.

ಹಣ್ಣು ಮಾರುವ ಮಹಿಳೆಯರಲ್ಲಿ ಒಬ್ಬರು ತಾಯಿಯ ಬಳಿ, “ಯೆಮಿ ಈಗ ದೊಡ್ಡವಳಾಗಿದ್ದಾಳೆ. ಅವಳು ನಿಮಗೆ ಎಷ್ಟೊಂದು ಸಹಾಯ ಮಾಡುತ್ತಾಳೆ! ” ಎಂದು ಹೇಳಿದಳು. ಅದಕ್ಕೆ ತಾಯಿ "ಹೌದು," ಎಂದಳು. ಜೊತೆಗೆ "ಅವಳು ಇವತ್ತು ಕೋಕುವನ್ನು ನೋಡಿಕೊಳ್ಳುತ್ತಾಳೆ." ಎಂದು ಕೂಡಾ ಹೇಳಿದಳು. ಅದಕ್ಕೆ, "ನಾನು ಒಬ್ಬಳೇ!" ಯೆಮಿ ಸೇರಿಸಿದಳು. ಇದನ್ನು ನೋಡಿ ಹಣ್ಣು ಮಾರುವ ಮಹಿಳೆ ನಗುತ್ತಾಳೆ. ಏಕೆಂದರೆ ಹಳ್ಳಿಯ ಮಕ್ಕಳು 10-12 ವರ್ಷ ವಯಸ್ಸಿನಲ್ಲಿ ದೊಡ್ಡವರಾಗುತ್ತಾರೆ ಎಂದು ಅವಳಿಗೆ ತಿಳಿದಿದೆ. ಅವರು ಕುಟುಂಬದ ಕಡೆಗೆ ತಮ್ಮ ಜವಾಬ್ದಾರಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತಾರೆ. ಯೆಮಿಗೆ ಹಳ್ಳಿಯ ಜನರ ನಡವಳಿಕೆ ಇನ್ನೂ ಸಂಪೂರ್ಣವಾಗಿ ತಿಳಿದಿಲ್ಲ. ಆದ್ದರಿಂದ ಅವಳು ಕೋಕುವನ್ನು ತಾನು ಒಬ್ಬಂಟಿಯಾಗಿ ನೋಡಿಕೊಳ್ಳಬೇಕು ಎಂದು ಭಾವಿಸುತ್ತಾಳೆ. ಹಾಗಾಗಿಯೇ ಅವಳು "ನಾನು ಒಬ್ಬಳೇ!" ಎಂದು ಮತ್ತೆಮತ್ತೆ ಹೇಳುತ್ತಾಳೆ. ಹೀಗೆ ಹೇಳುವ ಮೂಲಕ ಅವಳಿಗೆ ವಹಿಸಲಾದ ಜವಾಬ್ದಾರಿಯ ಬಗ್ಗೆ ಅರಿವು ಮತ್ತು ಸಂತೋಷವನ್ನು ತೋರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಆ ನಂತರದ ಕಥೆಯನ್ನು ಶಬ್ದಗಳಿಗಿಂತಲೂ ಮಿಗಿಲಾಗಿ ಚಿತ್ರಗಳೇ ಹೇಳುತ್ತವೆ. ಕಥೆಯ ಪಾತ್ರಗಳು ಕಣ್ಣು ಮುಂದೆ ಚಲಿಸುವಂತೆ ಚಿತ್ರ ಕಲಾವಿದ ಅವುಗಳಲ್ಲಿ ಭಾವನೆಗಳನ್ನು ತುಂಬಿದ್ದಾರೆ.

ಯೆಮಿ ಕೋಕುನನ್ನು ಬೆನ್ನ ಮೇಲೆ ಹೊತ್ತುಕೊಂಡು ಮಾರುಕಟ್ಟೆಯ ಸುತ್ತಲೂ ಕರೆದುಕೊಂಡು ಹೋಗುತ್ತಾಳೆ. ಸ್ವಲ್ಪ ಹೊತ್ತಿನಲ್ಲೇ ಕೋಕು ಗೊಣಗಲು ಪ್ರಾರಂಭಿಸುತ್ತಾನೆ. ಮಗುವಿಗೆ ಹಸಿವಾಗಿದೆ ಎಂದು ಯೆಮಿ ಭಾವಿಸುತ್ತಾಳೆ. ಅವಳು ಕೋಕುವನ್ನು ಕೆಳಗಿಳಿಸಿ ಕಡಲೆಕಾಯಿ ಖರೀದಿಸಲು ಪ್ರಾರಂಭಿಸುತ್ತಾಳೆ. ಅಷ್ಟರಲ್ಲಿ, ಕೋಕು ಕಣ್ಮರೆಯಾಗುತ್ತಾನೆ. ಯೆಮಿ ಚಿಂತಿತಳಾಗುತ್ತಾಳೆ ಮತ್ತು ಅವನನ್ನು ಎಲ್ಲಾ ಕಡೆ ಹುಡುಕಲು ಪ್ರಾರಂಭಿಸುತ್ತಾಳೆ. ಮತ್ತು ಇಲ್ಲಿಂದ "ನಾನು ಒಬ್ಬಳೇ!" ಎಂಬುದರ ರಹಸ್ಯ ತೆರೆಯುತ್ತದೆ.

ಕೋಕು ಹಸಿದಿರಬಹುದು ಎಂದು ಯೆಮಿ ಚಿಂತಿಸುತ್ತಾಳೆ. ಆದರೆ ಅವನು ಹಸಿವಿನಲ್ಲಿರುವುದಿಲ್ಲ. ಓರ್ವ ಮಹಿಳೆ ಅವನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಊಟ ತಿನ್ನಿಸುತ್ತಿದ್ದಾಳೆ. ಕೋಕು ಬಾಯಾರಿಕೆಯಿಂದ ಬಳಲುತ್ತಿರಬೇಕು ಎಂದು ಯೆಮಿ ಭಾವಿಸುತ್ತಾಳೆ. ಆದರೆ ಒಬ್ಬ ಮಹಿಳೆ ಸಂತೋಷದಿಂದ

ಅವನಿಗೆ ನೀರು ಕೊಡುತ್ತಿದ್ದಾಳೆ. ಕೋಕು ಹೆದರುತ್ತಿರಬೇಕು ಎಂದು ಆಕೆ ಭಾವಿಸುತ್ತಾಳೆ. ಆದರೆ ಅವನು ಯಾರೋ ಒಬ್ಬರ ಪಕ್ಕದಲ್ಲಿ ಆರಾಮವಾಗಿ ಕುಳಿತಿದ್ದಾನೆ. ಯೆಮಿ ಎಲ್ಲೆಡೆ ಕೋಕುವನ್ನು ಹುಡುಕುತ್ತಾಳೆ; ಅಂಗಡಿಗಳಲ್ಲಿ, ಬುಟ್ಟಿಗಳಲ್ಲಿ, ಮಡಕೆಗಳಲ್ಲಿ, ಹಾಸಿಗೆಯ ಕೆಳಗೆ. ಅವಳು ಅಲ್ಲಿ ಇಲ್ಲಿ ಅಲೆದಾಡುತ್ತಾಳೆ. ಕೋಕುಗೆ ಸೆಕೆಯಾಗುತ್ತಿರಬೇಕು ಎಂದು ಆಕೆ ಭಾವಿಸುತ್ತಾಳೆ.. ಆದರೆ ಹಳ್ಳಿಯ ಒಬ್ಬ ಮಹಿಳೆ ಅವನಿಗೆ ನೀರು ಚಿಮ್ಮಿಸಿ ಸ್ನಾನ ಮಾಡಿಸುತ್ತಿದ್ದಾಳೆ.

ಕೋಳಿಗಳು, ಕುರಿಗಳು ಮತ್ತು ಮೇಕೆಗಳ ಮಂದೆಯ ನಡುವೆ ಯೆಮಿ ಕೋಕುವನ್ನು ಹುಡುಕುತ್ತಾಳೆ. ಯೆಮಿಗೆ ಕೋಕು ಸಿಗದೇ ಇದ್ದಾಗ, "ಕೋಕು ಕಳೆದುಹೋಗಿದ್ದಾನೆ" ಎಂದು ಜೋರಾಗಿ ಕಿರುಚುತ್ತಾಳೆ, ಆದರೆ ಚಿತ್ರಗಳು ಹೇಳುತ್ತವೆ, ಕೋಕು ಕಳೆದುಹೋಗಿಲ್ಲ ಎಂದು. ಕೋಕುವೋ ಅಲ್ಲೆ, ಯೆಮಿ ಇದ್ದ ಸ್ಥಳದಿಂದ ಮುಂದಕ್ಕೆ ಅವನು ನಿದ್ರೆಯಿಂದ ಎಚ್ಚರಗೊಳ್ಳುತ್ತಿದ್ದನು. ಚಾಪೆ ಮಾರುವವನು, "ಇವನು ನಿನ್ನ ಕೋಕುನಾ?" ಎಂದು ಕೇಳುತ್ತಾನೆ. "ಹೌದು!" ಎಂದು ಕೂಗುತ್ತಾ, ಯೆಮಿ ಕೋಕುವನ್ನು ಪ್ರೀತಿಯಿಂದ ಎತ್ತಿಕೊಳ್ಳುತ್ತಾಳೆ.

ಕೋಕುವನ್ನು ನೋಡಿಕೊಂಡ ಎಲ್ಲರಿಗೂ ಯೆಮಿ ಧನ್ಯವಾದ ಹೇಳುತ್ತಾಳೆ.

ಈ ಕಥೆಯನ್ನು ಓದುವಾಗ, ನನ್ನ ಬಾಲ್ಯ, ಹಳ್ಳಿಯ ಸಂಬಂಧಗಳು, ಚಿಕ್ಕಪ್ಪ-ಚಿಕ್ಕಮ್ಮ, ಅಜ್ಜ-ಅಜ್ಜಿ, ಚಿಕ್ಕಪ್ಪ-ಚಿಕ್ಕಮ್ಮ, ದೊಡ್ಡಪ್ಪ-ದೊಡ್ಡಮ್ಮ, ಅಣ್ಣ-ತಂಗಿಯರು ಎಲ್ಲರೂ ನೆನಪಾಗುತ್ತಾರೆ. ಈ ಸಂಬಂಧಗಳು ಎಷ್ಟು ಸರಳ ಮತ್ತು ಆತ್ಮೀಯವಾಗಿದ್ದವು!

ಒಂದು ಮಗುವನ್ನು ಬೆಳೆಸಲು ಇಡೀ ಹಳ್ಳಿಯೇ ತೊಡಗಿಕೊಳ್ಳುತ್ತದೆ ಎಂಬುದು ನಿಜ. ಪಾಲನೆಯಲ್ಲಿ ಮಾತ್ರವಲ್ಲ, ಇಡೀ ಗ್ರಾಮವು ಮದುವೆಯ ಸಿದ್ಧತೆಗಳಲ್ಲಿಯೂ ಸಹಾಯ ಮಾಡುತ್ತದೆ. ಮಗ ಅಥವಾ ಮಗಳು ಹಳ್ಳಿಯವರಾಗಿದ್ದರೆ, ಗ್ರಾಮದ ಪ್ರತಿಯೊಂದು ಕುಟುಂಬವು ಆಮಂತ್ರಣ ಪತ್ರಿಕೆಯ ಹಣವನ್ನು ನೀಡುವ ಮೂಲಕ ಕೊಡುಗೆ ನೀಡುತ್ತದೆ. ಮಗಳ ಮದುವೆಯ ಸಂದರ್ಭವಾದರೆ ಇಡೀ ಗ್ರಾಮವು ಉಡುಗೊರೆಗಳನ್ನು ಮತ್ತು ಗೃಹೋಪಯೋಗಿ ವಸ್ತುಗಳನ್ನು ನೀಡುತ್ತದೆ.

ಕಥೆಯು ಸೀಮಿತ ಪದಗಳಲ್ಲಿ ಅಪರಿಮಿತ ಭಾವನೆಗಳಿಂದ ತುಂಬಿದೆ. ಕಥೆಯಲ್ಲಿ ಕಲ್ಪಿಸಿಕೊಂಡ ಹಳ್ಳಿಯ ಸಂಪೂರ್ಣ ಚಿತ್ರಣವನ್ನು ಲೇಖಕರು ಮಾತುಗಳಲ್ಲಿ ಮತ್ತು ಚಿತ್ರಕಾರರು ಚಿತ್ರಗಳಲ್ಲಿ ಚಿತ್ರಿಸಿದ್ದಾರೆ. ಸಹೋದರತ್ವ, ಕಾಳಜಿ ಮತ್ತು ಆತ್ಮೀಯತೆಯ ಮೌಲ್ಯಗಳಲ್ಲಿ ಮುಳುಗಿರುವ ಗ್ರಾಮೀಣ ಜೀವನದ ಆತ್ಮದೊಂದಿಗೆ ನಮ್ಮನ್ನು ಮುಖಾಮುಖಿಯಾಗಿಸುವ ಹೆಣೆಯಲಾದ ಅದ್ಭುತ ಕಥೆಯಿದು.

ಈ ಕಥೆಯು ಗ್ರಾಮೀಣ ಜೀವನವನ್ನು ನಡೆಸಿದ ಮತ್ತು ಈಗ ನಗರ ಜೀವನದಲ್ಲಿ ಈ ಮೌಲ್ಯಗಳ ಸುಗಂಧವನ್ನು ಹರಡುವಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಓದುಗರ ಜೀವನಕ್ಕೂ ಸಂಬಂಧಿಸಿದೆ ಎಂದು ಭಾಸವಾಗುತ್ತದೆ.

---


**ಅನಿತಾ ಧ್ಯಾನಿ** ಅವರು ಸರ್ಕಾರಿ ಇಂಟರ್ ಕಾಲೇಜು ಲಖವಾಡಾ, ಕಾಲ್ಸೀ ಬ್ಲಾಕ್, ಡೆಹರಾಡೂನ್ ಜಿಲ್ಲೆ, ಉತ್ತರಾಖಂಡ - ಇಲ್ಲಿ ಸಹಾಯಕ ಅಧ್ಯಾಪಕರಾಗಿದ್ದಾರೆ. ಅವರು ಹಿಂದಿ ಭಾಷೆಯನ್ನು ಕಲಿಸುತ್ತಾರೆ. ಅವರಿಗೆ ಕಥೆಗಳು, ಕವಿತೆಗಳು ಮತ್ತು ಲೇಖನಗಳನ್ನು ಓದುವುದು ಮತ್ತು ಬರೆಯುವುದರಲ್ಲಿ ಆಸಕ್ತಿ ಇದೆ. ಮಕ್ಕಳಿಗಾಗಿ ಬರಹಗಳನ್ನು ಬರೆಯುವುದು, ಪ್ರಯಾಣಿಸುವುದು ಮತ್ತು ಸಂಗೀತ ಕೇಳುವುದು ಅವರ ಆಸಕ್ತಿ.

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಲರ್ನಿಂಗ್ ಥ್ರೂ ಆರ್ಟ್

## ವಿಮರ್ಶೆ: ವಿಜಯ್ ರವಿಕುಮಾರ್

ಲರ್ನಿಂಗ್ ಥ್ರೂ ಆರ್ಟ್ ಕೃತಿ ಪ್ರಾಥಮಿಕ ಶಾಲಾ ಶಿಕ್ಷಕರು ತಮ್ಮ ತರಗತಿಗಳಲ್ಲಿ ಕಲೆಯನ್ನು ಪ್ರಯೋಗಿಸಲು ಬಳಸಬಹುದಾದ ಚಟುವಟಿಕೆಗಳ ಸಂಗ್ರಹವಾಗಿದೆ. ಕೃತಿಯಲ್ಲಿ ಈ ಚಟುವಟಿಕೆಗಳನ್ನು ಸುಂದರವಾಗಿ ವಿನ್ಯಾಸಗೊಳಿಸಲಾಗಿದೆ ಮತ್ತು ಸಸ್ಯಗಳು, ಮರಗಳಂತಹ ನೈಸರ್ಗಿಕ ವಸ್ತುಗಳು, ಹಳೆಯ ವೃತ್ತಪತ್ರಿಕೆಗಳು ಮೊದಲಾದ ತ್ಯಾಜ್ಯಗಳು ಹೀಗೆ ಸುಲಭವಾಗಿ ಲಭ್ಯವಿರುವ ಸಂಪನ್ಮೂಲಗಳನ್ನೇ ಇವುಗಳಲ್ಲಿ ಬಳಸಲಾಗಿದೆ. ಇದಲ್ಲದೆ, ಈ ಚಟುವಟಿಕೆಗಳನ್ನು ಶಿಕ್ಷಕರು ಸುಲಭವಾಗಿ ನಡೆಸಬಹುದು ಮತ್ತು ಅವು ಹೆಚ್ಚು ಮನರಂಜನೆಯ ಚಟುವಟಿಕೆಗಳಾಗಿವೆ.




ಲೇಖಕರು: ಜೇನ್ ಸಾಹ

ಚಿತ್ರ ಕಲಾವಿದರು: ರೋಷನ್ ಸಾಹಿ

ಪುಟ: 172

ಭಾಷೆ: ಇಂಗ್ಲಿಷ್ ಮತ್ತು ಹಿಂದಿ

ಪ್ರಕಾಶಕರು: ಏಕಲವ್ಯ ಪಬ್ಲಿಕೇಷನ್ಸ್

ಈ ಪುಸ್ತಕವು ರೇಖಾಚಿತ್ರ, ಚಿತ್ರಕಲೆ ಮತ್ತು ಶಿಲ್ಪಕಲೆಗಳಲ್ಲದೆ ಆಟಗಳು, ಕಥೆಗಳು ಮತ್ತು ವೀಕ್ಷಣಾ ಅಭ್ಯಾಸಗಳನ್ನು ಒಳಗೊಂಡಿದ್ದು, ಕಲೆಯ ವಿಶಾಲ ವ್ಯಾಖ್ಯಾನವನ್ನು ನೀಡುತ್ತದೆ. ಪುಸ್ತಕದ ಉದ್ದಕ್ಕೂ ಪ್ರಪಂಚದ ಬಗೆಗಿನ ಮಕ್ಕಳ ಸಂವೇದನಾ ಅನುಭವಗಳ (sensory experience) ಮೇಲೆ ಒತ್ತು ನೀಡಲಾಗುತ್ತದೆ ಮತ್ತು ಕಲೆ ಮೂಲಭೂತವಾಗಿ ಈ ಅನುಭವದ ಪರಿಶೋಧನೆ ಮತ್ತು ಅಭಿವ್ಯಕ್ತಿಯಾಗಿದೆ. ವಾಸ್ತವವಾಗಿ, ನಮ್ಮ ತಕ್ಷಣದ ಇಂದ್ರಿಯ ಅನುಭವವು ನಮ್ಮ ಮತ್ತು ನಮ್ಮ ಸುತ್ತಲಿನ ಪ್ರಪಂಚ, ಅಂದರೆ ಕುಟುಂಬ, ನೆರೆಹೊರೆ ಹಾಗು ಸಮಾಜದ ನಡುವಿನ ಸೇತುವೆಯಾಗಿದೆ ಮತ್ತು ನಮ್ಮ ವೀಕ್ಷಣಾ ಕೌಶಲಗಳನ್ನು (Observational skills) ಅಭಿವೃದ್ಧಿಪಡಿಸುವ ಮೂಲಕ ನಾವು ಅದನ್ನು ಅರ್ಥಮಾಡಿಕೊಳ್ಳಬಹುದು. ಉದಾಹರಣೆಗೆ, ಆರಂಭಿಕ ಚಟುವಟಿಕೆಗಳ ಸರಣಿಯು ನಮ್ಮ ಜೀವನದಲ್ಲಿ ನೀರಿನ ಪಾತ್ರವನ್ನು ಅರ್ಥ ಮಾಡಿಕೊಳ್ಳುವುದರ ಮೇಲೆ ಕೇಂದ್ರೀಕರಿಸಿದೆ.

ಮೊದಲ ಚಟುವಟಿಕೆಯಲ್ಲಿ ಮಕ್ಕಳು ಮಳೆಯೊಂದಿಗಿನ ತಮ್ಮ ಅನುಭವಗಳನ್ನು ವಿವರಿಸಬೇಕು, ಮತ್ತು ನಂತರ ಮಳೆಗೆ ಸಂಬಂಧಿಸಿದಂತೆ ಅವರು ಯೋಚಿಸುವ ಯಾವುದೇ ವಿಷಯವನ್ನು ಚಿತ್ರಿಸಬೇಕು. ಎರಡನೇ ಚಟುವಟಿಕೆಯಲ್ಲಿ, ಅವರು ಕಥೆ ಹೇಳುವುದು

ಮತ್ತು ಚಿತ್ರ ಬಿಡಿಸುವ ಮೂಲಕ ತಮ್ಮ ಜೀವನದಲ್ಲಿ ನೀರಿನ ಮೂಲಗಳು ಮತ್ತು ಅದರ ಉಪಯೋಗಗಳನ್ನು ಅಲ್ಲದೆ ಅವನ್ನು ಹೇಗೆ ಸಂಗ್ರಹಿಸಲಾಗುತ್ತದೆ ಎಂಬುದನ್ನು ಚರ್ಚಿಸಬೇಕು.

ಮೂರನೇ ಚಟುವಟಿಕೆಯಲ್ಲಿ ಕಲೆಯನ್ನು ರಚಿಸಲು ನೀರನ್ನು ಒಂದು ಸಾಮಗ್ರಿಯ ರೂಪದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಉದಾಹರಣೆಗೆ ಇದನ್ನು ಬಣ್ಣದೊಂದಿಗೆ ಬೆರೆಸುವುದು, ವ್ಯಾಕ್ಸ್ ಕ್ರೇಯಾನ್ ರಬಿಂಗ್ ಮೇಲೆ ಹರಿಯಬಿಡುವುದು ಮೊದಲಾದವು. ನಾಲ್ಕನೆಯ ಮತ್ತು ಕೊನೆಯ ಚಟುವಟಿಕೆಯಲ್ಲಿ, ಕಲ್ಲು ಮತ್ತು ಎಲೆಗಳಂಥ ಸಾಮಗ್ರಿಗಳು ಒಂದು ಸಣ್ಣ ಜಲಾಶಯದಲ್ಲಿ ಬಿದ್ದ ಮೇಲೆ ಹೇಗಾಗುತ್ತವೆ ಎಂಬುದನ್ನು ಕಂಡುಕೊಳ್ಳಲಾಗುತ್ತದೆ. ಇದರ ನಂತರ, ಸಣ್ಣದೊಂದು ಕಲ್ಲನ್ನು ಜಲಾಶಯದಿಂದಾಚೆಗೆ ಕೊಂಡೊಯ್ಯುವಂತಹ, ಕಟ್ಟಿಗೆ ಅಥವಾ ಕಾಗದದಿಂದ ಒಂದು ದೋಣಿಯನ್ನು ಮಾಡುವ ಸವಾಲು ಇರುತ್ತದೆ.

ಪುಸ್ತಕದ ಎರಡನೇ ಘಟಕಗಳು ಗಾಳಿ, ಆಕಾಶ, ಬೆಳಕು, ಊಟ, ಆಶ್ರಯದಂಥ ಪರಿಕಲ್ಪನೆಗಳನ್ನು ಒಳಗೊಂಡಿವೆ. ಜೊತೆ ಜೊತೆಗೇ ಇದು ಅತ್ಯಂತ ಹೆಚ್ಚಿನ ರಚನಾತ್ಮಕ ವಿಧಾನಗಳಿಂದ ಹಲವು ಭೌತಿಕ ಸಾಮಗ್ರಿಗಳ ಪರಿಶೋಧನೆಯನ್ನು ಕೂಡ ಮಾಡುತ್ತದೆ.

ಕೊನೆಯ ಎರಡು ಅಧ್ಯಾಯಗಳು ಗಣಿತ ಮತ್ತು ಭಾಷಾ ಕೌಶಲಗಳಿಗೆ ನೇರವಾಗಿ ಸಂಬಂಧಿಸಿದ ಚಟುವಟಿಕೆಗಳ ಮೇಲೆ ಕೇಂದ್ರೀಕರಿಸುತ್ತವೆ. ಆದರೆ ಈ ಚಟುವಟಿಕೆಯು, ಇತರ ಚಟುವಟಿಕೆಗಳಂತೆ, ಕಲೆಯನ್ನು ಗುರಿ ಸಾಧಿಸುವ ಸಾಧನವಾಗಿ ನೋಡುವುದಿಲ್ಲ. ಬದಲಾಗಿ ಮಗುವಿನ ಆಂತರಿಕ ಜೀವನ ಮತ್ತು ಹೊರಗಿನ ಪ್ರಪಂಚದ ನಡುವಿನ ಪ್ರಮುಖ ಕೊಂಡಿಯಾಗಿ ನೋಡುತ್ತದೆ. ಉದಾಹರಣೆಗೆ, ಗಣಿತದ ಚಟುವಟಿಕೆಗಳ ಅಧ್ಯಾಯವು ಸಮರೂಪತೆ ಮತ್ತು ಮಾದರಿಗಳ ಪ್ರಜ್ಞೆಯನ್ನು ಉತ್ತೇಜಿಸಲು ಉತ್ತಮವಾಗಿದೆ, ಏಕೆಂದರೆ ಇದು ನಿಮ್ಮ ಸುತ್ತಲಿನ ಪರಿಸರದಲ್ಲಿ ಮಾದರಿಗಳನ್ನು ಪತ್ತೆಹಚ್ಚಲು ಮರ, ಕಲ್ಲುಗಳು ಮತ್ತು ಎಲೆಗಳನ್ನು ಬಳಸುವುದನ್ನು ಒತ್ತಿಹೇಳುವ ಅಭ್ಯಾಸಗಳನ್ನು ಒಳಗೊಂಡಿದೆ ಮತ್ತು ಪ್ರತಿಕ್ರಿಯೆಯಾಗಿ ನಿಮ್ಮದೇ ಆದ ಮಾದರಿಗಳನ್ನು ರಚಿಸುವುದರ ಮೇಲೆ ಒತ್ತು ನೀಡುತ್ತದೆ.

ಭಾಷೆಯ ಕುರಿತಾದ ಅಧ್ಯಾಯವು ಕಥೆ ಹೇಳುವಿಕೆಯ ಮೇಲೆ ಕೇಂದ್ರೀಕರಿಸುತ್ತದೆ. ಇಲ್ಲಿನ ಚಟುವಟಿಕೆಗಳು ವಿದ್ಯಾರ್ಥಿಗಳು ಮನೆಯಲ್ಲಿನ ಅನುಭವಗಳಿಂದ ಪ್ರಾರಂಭಿಸಿ ತಮ್ಮದೇ ಆದ ಕಥೆಗಳನ್ನು ಬರೆಯಲು ಸಹಾಯ ಮಾಡುವ ಗುರಿಯನ್ನು ಹೊಂದಿವೆ. ಹೆಚ್ಚುವರಿಯಾಗಿ, ಇತರರ ಅಂದರೆ ಸಹಪಾಠಿಗಳಿರಲಿ ಅಥವಾ ದೂರದಲ್ಲಿ ವಾಸಿಸುವ ಜನರಾಗಲಿ ಅಂಥವರ ಕಥೆಗಳಿಗೆ ಪ್ರತಿಕ್ರಿಯಿಸಲು (ಮತ್ತು ಅವರೊಂದಿಗೆ ಸಹಾನುಭೂತಿ ಹೊಂದುವ ಕುರಿತು) ಚಟುವಟಿಕೆಗಳಿವೆ. ಕೊನೆಯದಾಗಿ, ಬೊಂಬೆಗಳು ಮತ್ತು ಮುಖವಾಡಗಳನ್ನು ಬಳಸಿ ಕಥೆಗಳನ್ನು ಅಭಿನಯಿಸುವ ಚಟುವಟಿಕೆಗಳನ್ನು ಸಹ ಒದಗಿಸಲಾಗಿದೆ.

ಪುಸ್ತಕದ ಹೆಚ್ಚಿನ ಭಾಗದಲ್ಲಿ ವಿದ್ಯಾರ್ಥಿಗಳಿಗಾಗಿ ಇರುವ ಚಟುವಟಿಕೆಗಳ ವಿಸ್ತಾರವಾದ ಸಂಗ್ರಹವಿದೆಯಾದರೂ ಕೊನೆಯ ಅಧ್ಯಾಯವು ಶಿಕ್ಷಕರಿಗೆ ಚರ್ಚೆ ಆಧಾರಿತ ಚಟುವಟಿಕೆಗಳನ್ನು ಒದಗಿಸುತ್ತದೆ. ಈ ಅಧ್ಯಾಯದಲ್ಲಿಶಿಕ್ಷಣದಲ್ಲಿ ಕಲೆಯ ಉದ್ದೇಶವೇನು? ಎಲ್ಲಾ ಮಕ್ಕಳು ಕಲೆಯಲ್ಲಿ ನಿಪುಣರೇ? ಇತ್ಯಾದಿ ಕೆಲವು ಪ್ರಶ್ನೆಗಳನ್ನು ಕೇಳಲಾಗಿದೆ. ಈ ಪ್ರಶ್ನೆಗಳಿಗೆ ಸುಲಭವಾದ ಉತ್ತರಗಳು ಇಲ್ಲದಿದ್ದರೂ, ಈ ಚಟುವಟಿಕೆಗಳು ಶಿಕ್ಷಕರಿಗೆ ತಮ್ಮ ಸ್ವಂತ ಗ್ರಹಿಕೆಗಳನ್ನು ಪ್ರಶ್ನಿಸಲು ಮತ್ತು ತರಗತಿಯಲ್ಲಿ ಏನು ಸಾಧ್ಯ ಎಂಬುದರ ಕುರಿತು ತಮ್ಮ ಕಲ್ಪನೆಗಳನ್ನು ಪ್ರೇರೇಪಿಸಲು ಸಹಾಯ ಮಾಡುತ್ತವೆ.

ಪುಸ್ತಕದ ಆರಂಭದಲ್ಲಿ ಲೇಖಕರು, ಚಿಕ್ಕ ಮಕ್ಕಳು ತಮ್ಮ ಇಂದ್ರಿಯಗಳ ಮೂಲಕ ಜಗತ್ತನ್ನು ಅನ್ವೇಷಿಸುವಾಗ, ಅಂದರೆ ಮಗು ರಟ್ಟಿನ ಪೆಟ್ಟಿಗೆಗಳೊಂದಿಗೆ ಆಟವಾಡುವಾಗಲೋ, ಚಿತ್ರ ಪುಸ್ತಕವನ್ನು ಓದುವಾಗಲೋ ಅಥವಾ ತನ್ನದೇ ಆದ ಚಿತ್ರಗಳನ್ನು ಬಿಡಿಸುವಾಗ, ಅದು ಪ್ರದರ್ಶಿಸುವ ಅಸಾಧಾರಣ ಮಟ್ಟದ ಏಕಾಗ್ರತೆಯ ಬಗ್ಗೆ ಇಲ್ಲಿ ಚರ್ಚಿಸುತ್ತಾರೆ. 'ಲರ್ನಿಂಗ್ ಥ್ರೂ ಆರ್ಟ್'ನಲ್ಲಿರುವ ಚಟುವಟಿಕೆಗಳು ಈ ಏಕಾಗ್ರತೆಯ ಶಕ್ತಿಯನ್ನು ಬಳಸಿಕೊಳ್ಳಲು ಮತ್ತು ಚಿಕ್ಕ ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು (ಬಹುಶಃ) ಜ್ಞಾನವನ್ನು ಬೆಳೆಸಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ಅದನ್ನು ಬಳಸಲು ಉತ್ತಮ ಮಾರ್ಗಗಳಾಗಿವೆ. ಮಕ್ಕಳೊಂದಿಗೆ ಕೆಲಸ ಮಾಡುವ ಯಾರಿಗಾದರೂ ಈ ಪುಸ್ತಕವು ಅಮೂಲ್ಯವಾದ ಸಂಪನ್ಮೂಲವಾಗಿರುತ್ತದೆ.

---

**ವಿಜಯ್ ರವಿಕುಮಾರ್** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಗಣಿತ ಅಧ್ಯಾಪಕರಾಗಿದ್ದಾರೆ. ಅವರು ಹವ್ಯಾಸಿ ಚಿತ್ರ ಕಲಾವಿದರು ಮತ್ತು ರಂಗಭೂಮಿ ಕಲಾವಿದರಾಗಿ ಕೆಲಸ ಮಾಡಿದ್ದಾರೆ. ಕೊರೊನಾ ಸಾಂಕ್ರಾಮಿಕ ರೋಗ ಬರುವ ಮೊದಲು, ಅವರು ಚೆನ್ನೈನ ಮೀನುಗಾರಿಕಾ ಹಳ್ಳಿಯಾದ ಊರೂರ್ ಓಲ್ಕಾಟ್ ಕುಪ್ಪಂನಲ್ಲಿ ಮಕ್ಕಳಿಗೆ ಕಲಾ ತರಗತಿಗಳನ್ನು ನಡೆಸುತ್ತಿದ್ದರು.

ಅನುವಾದ: ಅನುರೂಪ ರವೀಂದ್ರ | ಪರಿಶೀಲನೆ: ಆರ್. ಲಕ್ಷ್ಮೀನಾರಾಯಣ

# ಚಟುವಟಿಕೆ ಸಮಯ

## ಒಗಟು ಬಿಡಿಸುವುದು

ಈ ಆಟದ ಚಟುವಟಿಕೆಯನ್ನು 4 ರಿಂದ 6 ನೇ ತರಗತಿಯ ಮಕ್ಕಳೊಂದಿಗೆ ಮಾಡಬಹುದು. ತರಗತಿಯಲ್ಲಿ ಇದನ್ನು ಮಾಡಿಸಲು, 4 ಅಥವಾ 5 ಗುಂಪುಗಳನ್ನು ರಚಿಸಬಹುದು. ಒಂದು ಗುಂಪಿನಲ್ಲಿ 3 ರಿಂದ 5 ಮಕ್ಕಳು ಇರಬಹುದು.



ಚಿತ್ರ: ಶಿವೇಂದ್ರ ಪಾಂಡ್ಯ

**ಹಂತ 1:** ಮಕ್ಕಳು ಮೊದಲು ತಮ್ಮ ಗುಂಪುಗಳಲ್ಲಿ ಕುಳಿತು ಪರಸ್ಪರ ಒಗಟುಗಳನ್ನು ಹಂಚಿಕೊಳ್ಳುತ್ತಾರೆ. ಪ್ರತಿ ಗುಂಪು ಕನಿಷ್ಠ ಐದು ಒಗಟುಗಳ ಬಗ್ಗೆ ಯೋಚಿಸಬೇಕು. ತಮ್ಮ ಗುಂಪಿನಿಂದ ಯಾವಾಗ ಮತ್ತು ಯಾರು ಇತರ ಗುಂಪಿನಿಂದ ಒಗಟು ಬಿಡಿಸಲು ಕೇಳುತ್ತಾರೆ ಎಂಬುದನ್ನು ಸಹ ಅವರು ತಮ್ಮಲ್ಲಿಯೇ ನಿರ್ಧರಿಸುತ್ತಾರೆ. ಇದರ ನಂತರ, ಗುಂಪು 1 ರ ಮಗುವು ಗುಂಪು 2 ರ ಮಕ್ಕಳಿಗೆ ಒಗಟು ಬಿಡಿಸಲು ಕೇಳುತ್ತದೆ. ಗುಂಪು 2 ರ ಮಗುವು 3 ರ ಮಕ್ಕಳಿಗೆ, ಗುಂಪು 3 ರ ಮಗುವು 4 ರ ಮಕ್ಕಳಿಗೆ ಮತ್ತು ಗುಂಪು 4 ರ ಮಗುವು 1 ರ ಮಕ್ಕಳಿಗೆ ಒಗಟು ಬಿಡಿಸಲು ಕೇಳುತ್ತದೆ. ಒಗಟು ಬಿಡಿಸಲು ಕೇಳಲಾದ ಗುಂಪಿನ ಯಾವುದೇ ಮಗುವು ಒಗಟು ಬಿಡಿಸಿ ಉತ್ತರಿಸಬಹುದು. ಒಗಟಿಗೆ ಸರಿಯಾದ ಉತ್ತರವನ್ನು ನೀಡಲು 1 ರಿಂದ 2 ನಿಮಿಷಗಳ ಸಮಯವನ್ನು ಮುಂಚಿತವಾಗಿ ನಿಗದಿಪಡಿಸಲಾಗುತ್ತದೆ. ಸರಿಯಾದ ಉತ್ತರವನ್ನು ಪಡೆದ ನಂತರ, ಎಲ್ಲಾ ಗುಂಪುಗಳ ಮಕ್ಕಳು ಆ ಗುಂಪಿಗೆ ಜೋರಾಗಿ ಮತ್ತು ಲಯಬದ್ಧವಾಗಿ ಮೂರು ಬಾರಿ ಚಪ್ಪಾಳೆ ತಟ್ಟುತ್ತಾರೆ... ಒಂದು-ಎರಡು, ಒಂದು-ಎರಡು-ಮೂರು.

ಗುಂಪಿನಲ್ಲಿರುವ ಯಾವುದೇ ಮಗುವೂ ಒಗಟಿಗೆ ಸರಿಯಾದ ಉತ್ತರವನ್ನು ನೀಡಲು ಸಾಧ್ಯವಾಗದಿದ್ದಾಗ, ಒಗಟನ್ನು ಕೇಳಿದ ಗುಂಪಿನ ಮಗು ಅವರಿಗೆ ಕೆಲವು ಸುಳಿವುಗಳನ್ನು ನೀಡಬಹುದು.

**ಹಂತ 2:** ಮನೆಯಲ್ಲಿ ಮತ್ತು ಮನೆಯ ಸುತ್ತಮುತ್ತಲಿನ ಮಕ್ಕಳು ಮತ್ತು ಹಿರಿಯರೊಂದಿಗೆ ಮಾತನಾಡುತ್ತಾ ಅವರಿಂದ ಹೊಸ ಒಗಟುಗಳನ್ನು ಕಲಿಯುವುದು ಮತ್ತು ಸಂಗ್ರಹಿಸುವುದು, ಸ್ವತಃ ಹೊಸ ಒಗಟುಗಳನ್ನು ಮಾಡುವುದು ಮತ್ತು ಮುಂದಿನ ಆಟದಲ್ಲಿ ಇವುಗಳನ್ನು ಬಳಸಿಕೊಳ್ಳುವುದು.

ಈ ಚಟುವಟಿಕೆಯನ್ನು ಉತ್ತರಾಖಂಡದ ಉಧಮ್ ಸಿಂಗ್ ನಗರದ ಜಿಲ್ಲೆಯ ಖತಿಮಾದ ಸರ್ಕಾರಿ ಪ್ರಾಥಮಿಕ ಶಾಲೆಯ ಪ್ರಾಂಶುಪಾಲ ಧರ್ಮಪಾಲ್ ಗಂಗ್ವಾರ್ ಹಂಚಿಕೊಂಡಿದ್ದಾರೆ. ಅವರು ತಮ್ಮ ಶಾಲೆಯಲ್ಲಿ ಈ ಪ್ರಯೋಗ ಮಾಡುತ್ತಿದ್ದಾರೆ ಮತ್ತು ಇದರಿಂದ ಬೋಧನೆ ಮತ್ತು ಕಲಿಕೆಗೆ ಸಕ್ರಿಯ ವಾತಾವರಣವನ್ನು ಸೃಷ್ಟಿಸಲು ಸಹ ಅವರಿಗೆ ಸಾಧ್ಯವಾಗಿದೆ.

## ಯಾವುದಾದರೂ ಅಡುಗೆ ಮಾಡಲು ಪ್ರಯತ್ನಿಸೋಣ



ಚಿತ್ರ: ಶಿವೇಂದ್ರ ಪಾಂಡ್ಯ

ಸರಳ ಖಾದ್ಯವನ್ನು ಬೇಯಿಸುವ ವೀಡಿಯೊವನ್ನು ವಿದ್ಯಾರ್ಥಿಗಳಿಗೆ ತೋರಿಸುವ ಮೂಲಕ ಪ್ರಾರಂಭಿಸಿ. ನಂತರ, ವಿದ್ಯಾರ್ಥಿಗಳೊಂದಿಗೆ ಇದರ ಬಗ್ಗೆ ಚರ್ಚಿಸಿ:

ಪದಾರ್ಥಗಳು ಮತ್ತು ಪ್ರಕ್ರಿಯೆ - ಕತ್ತರಿಸುವುದು, ಬೆರೆಸುವುದು, ಅಡುಗೆ, ಮಸಾಲೆ ಹಾಕುವುದು ಇತ್ಯಾದಿ. ಸರಿಯಾದ ಪ್ರಕ್ರಿಯೆಯನ್ನು ಅನುಸರಿಸದಿದ್ದರೆ ಏನಾಗಬಹುದು ಎಂಬುದನ್ನು ವಿವರಿಸಿ.

ಈಗ, ಮಕ್ಕಳ 4-5 ಗುಂಪುಗಳನ್ನು ಮಾಡಿ, ಮತ್ತು ಪ್ರತಿ ಗುಂಪಿಗೆ ಅವರ ನೆಚ್ಚಿನ ಖಾದ್ಯವನ್ನು ಆಯ್ಕೆ ಮಾಡಲು ಹೇಳಿ. ಪ್ರತಿ ಗುಂಪು ತಮ್ಮ ನೆಚ್ಚಿನ ಖಾದ್ಯವನ್ನು ಬೇಯಿಸುವ ಪ್ರಕ್ರಿಯೆಯನ್ನು ಬರೆಯಬೇಕು. ತದನಂತರ, ಪ್ರತಿ ಗುಂಪು ಈ ಕೆಳಗಿನ ಅಂಶಗಳನ್ನೊಳಗೊಂಡ ಮಾಹಿತಿಯೊಂದಿಗೆ ಪಾಕವಿಧಾನ ಕಾರ್ಡ್ ಅನ್ನು ತಯಾರಿಸಬೇಕು.

- ಪಾಕವಿಧಾನದ ಶೀರ್ಷಿಕೆ;
- ಪದಾರ್ಥಗಳು ಮತ್ತು ಅವುಗಳ ಅಳತೆಗಳು (ಕಪ್ಗಳು ಅಥವಾ ಚಮಚಗಳಲ್ಲಿ); ಮತ್ತು
- ಸರಳ ವಾಕ್ಯಗಳಲ್ಲಿ ಪದಾರ್ಥವನ್ನು ತಯಾರಿಸುವ ಹಂತ ಹಂತದ ಪ್ರಕ್ರಿಯೆ.

ಪ್ರತಿ ಗುಂಪಿಗೆ ಅವರ ಪಾಕವಿಧಾನ ಕಾರ್ಡ್ ಮಾಡಲು A4 ಗಾತ್ರದ ಹಾಳೆ ನೀಡಿ ಮತ್ತು ಅದನ್ನು ವರ್ಣರಂಜಿತ ಬರವಣಿಗೆ, ರೇಖಾಚಿತ್ರಗಳು, ಛಾಯಾಚಿತ್ರಗಳು ಇತ್ಯಾದಿಗಳಿಂದ ಅಲಂಕರಿಸಿ. ತರಗತಿಯಲ್ಲಿರುವ ಎಲ್ಲಾ ಪಾಕವಿಧಾನ ಕಾರ್ಡ್ಗಳನ್ನು ಎಲ್ಲರೂ ನೋಡುವಂತೆ ಪ್ರದರ್ಶಿಸಿ. ಈ ಚಟುವಟಿಕೆಯನ್ನು 4 ಮತ್ತು 5 ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಮಾಡಬಹುದು. ಈ ಚಟುವಟಿಕೆಯು ಮಕ್ಕಳು ಸರಿಯಾದ ಕ್ರಮದಲ್ಲಿ ಪ್ರಕ್ರಿಯೆಗಳನ್ನು ಗಮನಿಸಲು, ದಾಖಲಿಸಲು, ಪ್ರಸ್ತುತ ಪಡಿಸಲು ಮತ್ತು ಸೂಕ್ಷ್ಮ ವಿವರಗಳ ಕಡೆಗೆ ಗಮನ ಕೊಡಲು ಸಹಕರಿಸುತ್ತದೆ. ಇದು ತಂಡದ ಸದಸ್ಯರೊಂದಿಗೆ ಸಹಯೋಗ ಮತ್ತು ಸಹಕಾರವನ್ನು ಪ್ರೋತ್ಸಾಹಿಸುತ್ತದೆ.

ಈ ಚಟುವಟಿಕೆಯನ್ನು ಬೆಂಗಳೂರಿನ ಅಜೀಂ ಪ್ರೇಮ್ಜಿ ವಿಶ್ವವಿದ್ಯಾಲಯದ ಕಮ್ಯುನಿಕೇಶನ್ ತಂಡದ ಸದಸ್ಯೆ ಚಂದ್ರಿಕಾ ಮುರಳೀಧರ್ ಅವರು ಹಂಚಿಕೊಂಡಿದ್ದಾರೆ. ಅವರು ವಿಜ್ಞಾನ ಶಿಕ್ಷಣದಲ್ಲಿ ಆಸಕ್ತಿ ಹೊಂದಿರುವ ಶಿಕ್ಷಕರೂ ಹೌದು.

## ಸಂಗ್ರಹಿಸಿ ಮತ್ತು ವಿಂಗಡಿಸಿ

ಈ ಆಟದ ಚಟುವಟಿಕೆಯನ್ನು ತರಗತಿಯ ಎಲ್ಲ ಮಕ್ಕಳೂ ಒಟ್ಟಿಗೆ ಮಾಡಬಹುದು. ಇದನ್ನು ಮಕ್ಕಳ ಸಣ್ಣ ಗುಂಪುಗಳನ್ನು ರಚಿಸುವ ಮೂಲಕವೂ ಆಡಬಹುದು.

ಎಲ್ಲ ಮಕ್ಕಳನ್ನೂ ತರಗತಿಯ ಹೊರಗೆ ಹೋಗಿ 10 ರಿಂದ 15 ವಸ್ತುಗಳನ್ನು ಸಂಗ್ರಹಿಸಲು ಹೇಳಿ. ಯಾವುದೇ ಉಪಯುಕ್ತ ವಸ್ತುವನ್ನು ಎಲ್ಲಿಂದಲೋ ಎತ್ತುಕೊಂಡೋ ಅಥವಾ ಒಡೆದೋ ತರಬಾರದು ಎಂದು ಅವರಿಗೆ ಸ್ಪಷ್ಟಪಡಿಸಿ.



ಚಿತ್ರ: ಶಿವೇಂದ್ರ ಪಾಂಡ್ಯ

**ಹಂತ 1:** ಮಕ್ಕಳು ವಸ್ತುಗಳನ್ನು ತಂದಾಗ, ಅವುಗಳನ್ನು ವಿಂಗಡಿಸಲು ಹೇಳಿ. ಮೊದಲ ಹಂತದಲ್ಲಿ, ಮೂಲ ವಸ್ತುವಿನ ಆಧಾರದ ಮೇಲೆ ವಸ್ತುಗಳನ್ನು ವಿಭಿನ್ನ ಗುಂಪುಗಳಲ್ಲಿ ಇರಿಸಲು ಹೇಳಿ. ಉದಾಹರಣೆಗೆ, ಪ್ಲಾಸ್ಟಿಕ್, ಲೋಹ, ಮರ ಅಥವಾ ಜೇಡಿಮಣ್ಣಿನಿಂದ ಮಾಡಿದ ವಸ್ತುಗಳ ವಿಭಿನ್ನ ಗುಂಪುಗಳನ್ನು ಮಾಡಲು ಹೇಳಿ. ಕೆಲವೊಮ್ಮೆ ನೀವು ಆಕಾರದ ಆಧಾರದ ಮೇಲೆ ವಸ್ತುಗಳನ್ನು ಗುಂಪು ಮಾಡಲು ಅವರನ್ನು ಕೇಳಬಹುದು. ಉದಾಹರಣೆಗೆ, ಉದ್ದ, ದುಂಡಗಿನ, ಚೌಕಾಕಾರದ ಅಥವಾ ಚಪ್ಪಟೆ ವಸ್ತುಗಳ ವಿಭಿನ್ನ ಗುಂಪುಗಳನ್ನು ಮಾಡಲು. ಇನ್ನು ಕೆಲವೊಮ್ಮೆ ಬಣ್ಣ ಅಥವಾ ಕಡಿಮೆ ತೂಕದ ಆಧಾರದ ಮೇಲೆ ವಸ್ತುಗಳನ್ನು ವಿಭಿನ್ನ ಗುಂಪುಗಳಲ್ಲಿ ವಿಂಗಡಿಸಲು ಸಹ ಕೇಳಬಹುದು. ಇದನ್ನೆಲ್ಲಾ ಖಾಲಿ ನೆಲದ ಮೇಲೆ ಅಥವಾ ಹೊರಗೆ ಅಂಗಣದ ಮೇಲೆ ಮಾಡಬಹುದು.

**ಹಂತ 2:** ಮೊದಲ ಹಂತ ಮುಗಿದ ನಂತರ, ನೀವು ಎಲ್ಲ ವಸ್ತುಗಳನ್ನೂ ಒಮ್ಮೆ ಸೇರಿಸಿ. ಈಗ ಮಕ್ಕಳ ನಾಲ್ಕು-ಐದು ವಿಭಿನ್ನ ಗುಂಪುಗಳನ್ನು ಮಾಡಿ, ಮತ್ತು ಪ್ರತಿ ಗುಂಪಿಗೆ ಒಂದು ಗುಣಲಕ್ಷಣವನ್ನು ನೀಡಿ. ಉದಾಹರಣೆಗೆ, ಒಂದು ಗುಂಪಿಗೆ ನೀರಿನಲ್ಲಿ ಕರಗುವ ವಸ್ತುಗಳ ಗುಂಪನ್ನು ಮಾಡಲು ಹೇಳಿ. ಎರಡನೇ ಗುಂಪಿಗೆ ಬೆಂಕಿಯಲ್ಲಿ ಸುಲಭವಾಗಿ ಸುಡುವ ವಸ್ತುಗಳ ಗುಂಪನ್ನು ಮಾಡಲು ಹೇಳಿ. ಮೂರನೆಯ ಗುಂಪಿಗೆ ಮರಗಳ ಮೇಲೆ ಬೆಳೆಯುವ ವಸ್ತುಗಳ ಗುಂಪನ್ನು ಮಾಡಲು ಹೇಳಬಹುದು ಮತ್ತು ನಾಲ್ಕನೆಯ ಗುಂಪಿಗೆ ಮರುಬಳಕೆ ಮಾಡಬಹುದಾದ ವಸ್ತುಗಳ ಗುಂಪನ್ನು ಮಾಡಲು ಹೇಳಬಹುದು.

ಮಕ್ಕಳು ವಿಭಿನ್ನ ಗುಣಲಕ್ಷಣಗಳನ್ನು ಹೊಂದಿರುವ ವಸ್ತುಗಳನ್ನು ಗುಂಪು ಮಾಡಲು ಪ್ರಯತ್ನಿಸುತ್ತಿರುವಾಗ, ಒಂದಕ್ಕಿಂತ ಹೆಚ್ಚು ಗುಂಪುಗಳಲ್ಲಿ ಸೇರಿಸಬಹುದಾದ ವಸ್ತುಗಳ ಬಗ್ಗೆಯೂ ಅವರು ಗೊಂದಲಕ್ಕೊಳಗಾಗುತ್ತಾರೆ. ಅಂತಹ ಸಂದರ್ಭದಲ್ಲಿ, ಮಕ್ಕಳನ್ನು ಅವರಷ್ಟಕ್ಕೆ ತರ್ಕಿಸಲು ಬಿಡಿ ಹಾಗೂ ಶಿಕ್ಷಕರು ಅದನ್ನು ಪರಿಹರಿಸಲು ಅವರಿಗೆ ಸಹಾಯ ಮಾಡಲಿ.

ಈ ಚಟುವಟಿಕೆಯನ್ನು ಭೋಪಾಲ್ನ ಅನಿಲ್ ಸಿಂಗ್ ಸೂಚಿಸಿದ್ದಾರೆ. ಅವರು ಪರಾಗ್ ಅವರ ಗ್ರಂಥಾಲಯ ಶಿಕ್ಷಕ ಕೋರ್ಸ್ನಲ್ಲಿ ಅಧ್ಯಾಪಕರಾಗಿದ್ದಾರೆ. ಕಳೆದ 15 ವರ್ಷಗಳಿಂದ ಪ್ರಾಥಮಿಕ ಶಿಕ್ಷಣವೇ ಅವರ ಮುಖ್ಯ ಕಾರ್ಯಕ್ಷೇತ್ರವಾಗಿದೆ.



# ಸಂಪಾದಕರಿಗೆ ಪತ್ರ

## ಹುಡುಗಿಯರಲ್ಲಿ ಮುಟ್ಟಾಗುವಿಕೆ: ಶಿಕ್ಷಕರು, ಶಾಲೆ ಮತ್ತು ಸಮಾಜವು ಸಂವೇದನಾಶೀಲರಾಗಿರುವ ಅನಿವಾರ್ಯತೆ

ಈ ಸಂಚಿಕೆಯಲ್ಲಿ ರುಬಿನಾ ಖಾನ್ ಅವರ 'ಹುಡುಗಿಯರಲ್ಲಿ ಮುಟ್ಟು ಮತ್ತು ಕಲಿಕೆಯೊಂದಿಗಿನ ಅದರ ಸಂಬಂಧ' ಎಂಬ ಲೇಖನವನ್ನು ಓದಿದಾಗ, ಕೇವಲ ಬಹಳ ವಿಶೇಷ ಪರಿಸ್ಥಿತಿಗಳಿರುವ ಮಕ್ಕಳ ವಿಷಯದಲ್ಲಿ ಮಾತ್ರ ಸಮನ್ವಯವನ್ನು ನೋಡುತ್ತಿರುತ್ತೇವೆ. ಆದರೆ ಸಾಮಾನ್ಯವೆಂದು ಪರಿಗಣಿಸಲಾಗುವ ದೊಡ್ಡ ಸಮುದಾಯವೂ ಕೂಡ ಕೆಲವು ವಿಭಿನ್ನ ಬಗೆಯ ಸವಾಲುಗಳನ್ನು ಎದುರಿಸುತ್ತಿದೆ ಎಂಬುದು ಅರ್ಥವಾಯಿತು.

'ಮುಟ್ಟಿನ' ಸಂಕೀರ್ಣತೆ ಮತ್ತು ಅದರ ಕುರಿತಂತೆ ಸಮಾಜದ ಸಂಪ್ರದಾಯವಾದಿ ಚಿಂತನೆಯಿಂದಾಗಿ ಪ್ರತಿ ತಿಂಗಳು ಮೂರರಿಂದ ಐದು ದಿನಗಳವರೆಗೆ ಮುಟ್ಟಿನೊಂದಿಗೆ ಹೋರಾಡುವ ಹದಿಹರೆಯದ ಹುಡುಗಿಯರ ಒಂದು ದೊಡ್ಡ ಸಮೂಹವೇ ಇದೆ.

ಹುಡುಗಿಯರೊಂದಿಗಿನ ರುಬೀನಾ ಅವರ ಮಾತುಕತೆಯಲ್ಲಿ ಹೆಣ್ಣುಮಕ್ಕಳ ಉಭಯಸಂಕಟದ ಸ್ಥಿತಿ ಮತ್ತು ಈ ಸಮಸ್ಯೆಯ ಕುರಿತಂತೆ ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಯ ಅಸೂಕ್ಷ್ಮತೆಯು, ಇದಕ್ಕೆ ಸೂಕ್ತ ಪರಿಹಾರ ಹುಡುಕಿಕೊಳ್ಳದಿದ್ದರೆ ಸಮನ್ವಯದ ವಿಚಾರವು ಅಪೂರ್ಣವಾಗಿ ಉಳಿದೀತು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ.

-ಅನಿಲ್ ಸಿಂಗ್, ಫ್ಯಾಕಲ್ಟಿ, ಪರಾಗ್ ಲೈಬ್ರರಿ ಎಜುಕೇಟರ್ ಕೋರ್ಸ್, ಭೋಪಾಲ್, ಮಧ್ಯಪ್ರದೇಶ

## ಸಾಟಿಯಿಲ್ಲದ ಪ್ರಯತ್ನದ ಮೂಲಕ ನಿರ್ಮಿಸಲಾದ ಎಲ್ಲರ ಶಾಲೆ

'ಶಿಕ್ಷಕರ ದಿನಚರಿಯಿಂದ' ಅಂಕಣದಲ್ಲಿ, ಕುಸುಮ್ ಲತಾ ಶರ್ಮಾ ಅವರ 'ಶಾಲೆ ಎಲ್ಲರದ್ದೂ ಆಗಿದೆ' ಲೇಖನವು ಬೇರೆಬೇರೆ ಸಾಮಾಜಿಕ ಹಿನ್ನೆಲೆಯ ಮಕ್ಕಳನ್ನು ಒಂದೆಡೆ ಸೇರಿಸಲು ನಡೆಸಲಾದ ಅಸಾಧಾರಣ ಪ್ರಯತ್ನವನ್ನು ವಿವರಿಸುತ್ತದೆ. ಮಕ್ಕಳ ಜೊತೆಗೆ ಕುಳಿತು ತಿನ್ನುವ ಹಾಗೂ ಅವರಿಗೆ ಯಾವುದೇ ಮೌಖಿಕ ಸಂದೇಶವನ್ನು ನೀಡದೆ ಅವರನ್ನು ಒಗ್ಗೂಡಿಸುವ ಲೇಖಕರ ಪ್ರಯತ್ನವು ಶ್ಲಾಘನೀಯವಾಗಿದೆ. 'ಪಾಠಶಾಲೆ'ಯಲ್ಲಿ ಪ್ರಾರಂಭವಾದ ಈ ಹೊಸ ಅಂಕಣವು ತರಗತಿ ಮತ್ತು ಶಾಲೆಯಲ್ಲಿನ ಶಿಕ್ಷಕ-ಶಿಕ್ಷಕಿಯರ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಅನುಭವಗಳ ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ಇದೊಂದು ವಿಶಿಷ್ಟ ಪ್ರಯತ್ನವಾಗಿದೆ. ಹೊಸ ಸಂಚಿಕೆಯನ್ನು ನವೀನ ಸ್ವರೂಪದಲ್ಲಿ ಪ್ರಸ್ತುತಪಡಿಸಿದ್ದಕ್ಕಾಗಿ ಪಾಠಶಾಲಾ ತಂಡಕ್ಕೆ ಅಭಿನಂದನೆಗಳು.

-ಛಾಯಾ, ಸಹಾಯಕ ಶಿಕ್ಷಕರು, ಪ್ರಾಥಮಿಕ ಶಾಲೆ ಔರಂಗ್‌ಪುರ್, ಮೀರ್‌ಪುರ್ ಲಖಾವಟೀ, ಬುಲಂದ್‌ಶಹರ್, ಉತ್ತರ ಪ್ರದೇಶ

## 'ಪುಸ್ತಕಗಳೊಂದಿಗೆ ಸ್ನೇಹ' ಮತ್ತು 'ಶಿಕ್ಷಕರ ದಿನಚರಿಯಿಂದ' ಅಂಕಣಗಳು ಇಷ್ಟವಾದವು

2020ರ ಹೊಸ ಶಿಕ್ಷಣ ನೀತಿಯ ಬೆಳಕಿನಲ್ಲಿ ಸಮನ್ವಯ ಶಿಕ್ಷಣದ ಕುರಿತಾದ ಪಾಠಶಾಲೆಯ ವಿಶೇಷ ಸಂಚಿಕೆಯು ಓದಲು ಯೋಗ್ಯವಾಗಿ ರೂಪುಗೊಂಡಿದೆ. ಮುಖಪುಟ ಚಿತ್ರವು ಅದನ್ನು ನೋಡುತ್ತಲೇ ಇರುವಂತೆ ಮಾಡುತ್ತದೆ.

ಮಧು ಕುಶ್ವಾಹ ಅವರ ' ಕೇವಲ ದಾಖಲಾತಿ ಹಂತದಲ್ಲಿ 'ಸಮನ್ವಯ ಶಿಕ್ಷಣ'ವು ಸಾಕಾಗುವುದಿಲ್ಲ' ಎಂಬ ಲೇಖನವು ಪ್ರತಿಯೊಬ್ಬ ಶಿಕ್ಷಕನೊಂದಿಗೆ, ಪೋಷಕರು ಮಾತ್ರವಲ್ಲದೆ ಶಾಲಾ ವ್ಯವಸ್ಥಾಪಕರು ಕೂಡ ಓದುವಂತಿದೆ.

ಈ ಸಂಚಿಕೆಯಲ್ಲಿ, 'ಪುಸ್ತಕಗಳೊಂದಿಗೆ ಸ್ನೇಹ ಮತ್ತು 'ಶಿಕ್ಷಕರ ದಿನಚರಿಯಿಂದ' ಎಂಬ ಅಂಕಣಗಳು ನನಗೆ ಇಷ್ಟವಾದವು. ರುಬೀನಾ ಖಾನ್ ಅವರ 'ಹುಡುಗಿಯರಲ್ಲಿ ಮುಟ್ಟು ಮತ್ತು ಕಲಿಕೆಯೊಂದಿಗಿನ ಅದರ ಸಂಬಂಧ' ಕೂಡ ಒಂದು ಮಹತ್ವಪೂರ್ಣ ವಿಷಯದ ಕುರಿತಾದ ಪ್ರಮುಖ ಲೇಖನವಾಗಿದೆ. ಶಿಕ್ಷಕರ ಸೇವಾವಧಿಯ ತರಬೇತಿಗಳಲ್ಲಿ ಮುಟ್ಟಿನ ಬಗ್ಗೆ ಒಂದು ಸಂಪೂರ್ಣ ಅವಧಿಯನ್ನು ಸೇರ್ಪಡೆಗೊಳಿಸುವ ಅವಶ್ಯಕತೆ ಇರುವುದಾಗಿ ತೋರುತ್ತದೆ.

-ಮನೋಹರ್ ಚಮೋಲಿ 'ಮನು', ಸರ್ಕಾರಿ ಅಂತರ್ ಕಾಲೇಜು, ಕಾಲೇಶ್ವರ, ಪೌಡಿ, ಪೌಡಿ ಗಢ್‌ವಾಲ್, ಉತ್ತರಾಖಂಡ

## ಹುಡುಗಿಯರಲ್ಲಿ ಮುಟ್ಟಿನ ಬಗ್ಗೆ ಸಮನ್ವಯ ಚಿಂತನೆಯ ಅಗತ್ಯವಿದೆ

ಈ ಸಂಚಿಕೆಯಲ್ಲಿ, ರುಬಿನಾ ಖಾನ್ ಅವರ 'ಹುಡುಗಿಯರಲ್ಲಿ ಮುಟ್ಟು ಮತ್ತು ಕಲಿಕೆಯೊಂದಿಗಿನ ಅದರ ಸಂಬಂಧ' ಲೇಖನವು ಇಂದಿನ ಶಿಕ್ಷಣ ವ್ಯವಸ್ಥೆಗೆ ಬಹಳ ಮುಖ್ಯವೆಂದು ಅನ್ನಿಸಿತು. ಲೇಖಕಿ ತಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಮಾಡಿರುವ ಪ್ರಯತ್ನಗಳು ಮುಟ್ಟಿನ ವಿರಳ ಆರೋಗ್ಯ ಸೌಲಭ್ಯಗಳು, ಉತ್ಪನ್ನಗಳು, ಮಾಹಿತಿ (ಶಿಕ್ಷಣ) ಮತ್ತು ಬೆಂಬಲದ ಕೊರತೆಯು ಬಾಲಕಿಯರ ಶಾಲಾ ಹಾಜರಾತಿ, ಕಾರ್ಯಕ್ಷಮತೆ ಮತ್ತು ಶಾಲೆಯಲ್ಲಿ ಮುಂದುವರಿಯವುದರ ಮೇಲೆ ಪ್ರತಿಕೂಲ ಪರಿಣಾಮ ಬೀರುವುದನ್ನು ತೋರಿಸುತ್ತವೆ. ಒಂದು ಮಗು ಮತ್ತು ಅದರ ಶಿಕ್ಷಣದ ಮೇಲೆ ಪ್ರಭಾವ ಬೀರುವ ಕೆಲವು ಅಂಶಗಳು ಹೀಗೂ ಇವೆ ಮತ್ತು ಅವು ವ್ಯಕ್ತವಾಗದೇ ಇರಬಹುದು, ಆದರೆ ಅದರ ಬಗ್ಗೆ ಸಮಗ್ರವಾಗಿ ಚಿಂತಿಸಬೇಕಾದ ಅವಶ್ಯಕತೆ ಇದೆ ಎಂಬುದು ಗಮನವಿಟ್ಟು ನೋಡಿದಾಗ ಅರಿವಿಗೆ ಬರುತ್ತದೆ.

-ನಿಧಿ ಚೌಧರಿ, ಸಹಾಯಕ ಶಿಕ್ಷಕರು, ಪ್ರಾಥಮಿಕ ಶಾಲೆ, ಬಂಗಲಾ ಪೂಠರಿ, ಬುಲಂದ್‌ಶಹರ್, ಉತ್ತರ ಪ್ರದೇಶ

## ನನಗೆ ಹಾಡಲು ಬರಲ್ಲ, ನೃತ್ಯ ಮಾಡಲು ಬರಲ್ಲ, ನಟನೆಯೂ ಬರಲ್ಲ

ಸಮನ್ವಯ ಶಿಕ್ಷಣದ ವಿಶೇಷ ಸಂಚಿಕೆಯು ನಿಜವಾದ ಅರ್ಥದಲ್ಲಿ ಒಳಗೊಳ್ಳುವಿಕೆಯನ್ನು ಅರ್ಥ ಮಾಡಿಕೊಳ್ಳಲು ನನಗೆ ಸಹಾಯ ಮಾಡಿತು. ವಿಶೇಷ ಅವಶ್ಯಕತೆ ಇರುವ ಮಕ್ಕಳಿಗೆ ಮಾತ್ರ ಸಂಬಂಧಿಸಿದ್ದೆಂದು ಪರಿಭಾವಿಸಿ ನೋಡುವ ಸಮನ್ವಯದ ಸಂಕುಚಿತ ವ್ಯಾಖ್ಯಾನವನ್ನು ಬದಲಾಯಿಸುವಲ್ಲಿ ಸಂಚಿಕೆಯ ಲೇಖನಗಳು ನನ್ನ ನೆರವಿಗೆ ಬಂದಿವೆ.

ದೀಪಿಕಾ ಝೂಲಾ ಮತ್ತು ಮಮತಾ ಸಿಂಗ್ ಅವರ ಲೇಖನಗಳಿಂದ, ಶಿಕ್ಷಕರ ಮಮತೆಯ ನಡವಳಿಕೆಯು ಅಪೇಕ್ಷಿತ ಬದಲಾವಣೆಯನ್ನು ತರಲು ಹೇಗೆ ನೆರವಾಗುತ್ತದೆ ಎಂದು ಮನದಟ್ಟಾಯಿತು. ಮತ್ತೊಂದೆಡೆ, ದೀಪಿಕಾ ಶರ್ಮಾ ಅವರ 'ಕಲಿಕೆಯಲ್ಲಿ ಸಮನ್ವಯ ಶಿಕ್ಷಣ-ಶಿಕ್ಷಕರ ಪಾತ್ರ'ಲೇಖನವನ್ನು ಓದಿದ ನಂತರ, ಅದು ನಮ್ಮ ಅನುಭವಗಳಿಗೆ ಸಂಬಂಧಿಸಿದ ಲೇಖನ ಎಂದು ಅನ್ನಿಸಿತು. ನನಗೆ ಹಾಡಲು ಬರಲ್ಲ, ನೃತ್ಯ ಮಾಡಲು ಬರಲ್ಲ, ನಟನೆಯೂ ಬರಲ್ಲ ಎಂದು ನಾವು ಬಾಲ್ಯದಿಂದಲೂ ಯೋಚಿಸುತ್ತ ಬಂದಿದ್ದೇವೆ. ಏಕೆಂದರೆ ಈ ಕಲೆಗಳನ್ನು ಪರಿಪೂರ್ಣತೆಯ ಮಾನದಂಡದ ಜೊತೆಗೆ ಜೋಡಿಸಿಕೊಂಡು ನೋಡಲಾಗುತ್ತದೆ. ಇದರಿಂದಾಗಿ, ಅನೇಕ ಕಲೆಗಳು ನಮ್ಮ ಜೀವನದ ಭಾಗವಾಗದೇ ಉಳಿದುಕೊಳ್ಳುತ್ತವೆ. ಬಹುಶಃ ನಮಗೆಲ್ಲರಿಗೂ ನಿಜವಾದ ಅರ್ಥದಲ್ಲಿ ಸಮನ್ವಯ ಶಿಕ್ಷಣವು ಲಭ್ಯವಾಗಲಿಲ್ಲ. ಮುಂದಿನ ಪೀಳಿಗೆಗೆ ಒಳಗೊಳ್ಳುವಿಕೆಯ ತಿಳುವಳಿಕೆಯು ಉತ್ತಮ ಭರವಸೆಯೊಂದನ್ನು ಉದ್ದೀಪಿಸುತ್ತದೆ.

-ಪಾರುಲ್ ಬಾತ್ರಾ ದುಗ್ಗಲ್, ಅಜೀಂ ಪ್ರೇಮ್ ಜಿ ಫೌಂಡೇಷನ್, ಭೋಪಾಲ್, ಮಧ್ಯಪ್ರದೇಶ

## ‘ಸಮನ್ವಯ ಸಂಗೀತ ಕುರ್ಚಿಗಳ’ ಚಟುವಟಿಕೆ ಮಾಡಿಸಿದೆವು



‘ಪಾಠಶಾಲೆ’ಯ 22ನೇ ಸಂಚಿಕೆಯಲ್ಲಿ ಮಧು ಮಾಲತಿ ಅವರು ಬರೆದ ‘ಮಕ್ಕಳು ಹೇಗೆ ಕಲಿಯಲು ಬಯಸುವರೋ ಹಾಗೆ ಕಲಿಸಿ’ ಎಂಬ ಲೇಖನದೊಂದಿಗೆ ನನ್ನ ಅನುಭವಗಳು ಕೂಡ ಹೆಣೆದುಕೊಂಡಿವೆ ಅನ್ನಿಸಿತು. ಗ್ರಂಥಾಲಯದಲ್ಲಿ, ಮಕ್ಕಳಿಗೆ ಯಾವ ರೀತಿಯ ಪುಸ್ತಕಗಳು ಬೇಕು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಮತ್ತು ಅವುಗಳನ್ನು ಮಕ್ಕಳಿಗೆ ಲಭ್ಯವಾಗುವಂತೆ ಮಾಡಬೇಕು ಎಂದು ಈ ಲೇಖನದಲ್ಲಿ ಹೇಳಲಾಗಿದೆ. ನಮ್ಮ ಶಾಲೆಯಲ್ಲಿ ಈ ಸೌಲಭ್ಯವೂ ಇದೆ. ಗ್ರಂಥಾಲಯದಲ್ಲಿ ಅನೇಕ ವಿಧದ ಪುಸ್ತಕಗಳೂ ಇವೆ. ಅವುಗಳನ್ನು ಮಕ್ಕಳು ತಮ್ಮ ಅಭಿರುಚಿಗೆ ಅನುಗುಣವಾಗಿ ಓದಬಹುದು. ಅದನ್ನೇ ನಾನು ಶಾಲೆಯಲ್ಲಿ ಮಾಡುತ್ತೇನೆ. ತಮಗೆ ಇಷ್ಟವಾದ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳಲು ಮಕ್ಕಳು ಸ್ವತಂತ್ರರಾಗಿದ್ದಾರೆ. ಕೆಲವು ಮಕ್ಕಳು ಕಥಾ ಪುಸ್ತಕವನ್ನು ಆಯ್ಕೆ ಮಾಡುತ್ತಾರೆ. ಇನ್ನು ಕೆಲವು ಮಕ್ಕಳು ಹೆಚ್ಚು ಚಿತ್ರಗಳನ್ನು ಹೊಂದಿರುವ ಪುಸ್ತಕವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಕೆಲವು ಮಕ್ಕಳು ತಮ್ಮ ನೋಟ್ ಪುಸ್ತಕಗಳಲ್ಲಿ ತಮಗೆ ಇಷ್ಟವಾದ ಚಿತ್ರಗಳನ್ನು ಬಿಡಿಸುವುದನ್ನು ನಾನು ಗಮನಿಸಿದ್ದೇನೆ.

ಎಲ್ಲಾ ಮಕ್ಕಳು ಪುಸ್ತಕಗಳನ್ನು ಓದುವುದಿಲ್ಲ ನಿಜ. ಆದರೆ ಇದೆಲ್ಲವೂ ಕಲಿಕೆಯ ಪ್ರಕ್ರಿಯೆಯ ಭಾಗವಾಗಿದೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಎಲ್ಲಾ ಮಕ್ಕಳಿಗೆ ಕನಿಷ್ಠ ಒಂದು ಅವಕಾಶ ಸಿಗಲೇಬೇಕು.

ನಮ್ಮ ಶಾಲೆಯಲ್ಲಿ ’ಬನ್ನಿ, ಸ್ವತಃ ಮಾಡಿ ನೋಡೋಣ’ದಲ್ಲಿ ನೀಡಲಾದ ‘ಸಮನ್ವಯ ಸಂಗೀತ ಕುರ್ಚಿ’ ಚಟುವಟಿಕೆಯನ್ನು ಅನುಷ್ಠಾನಕ್ಕೆ ತಂದು ನೋಡಿದ್ದೇನೆ ಮತ್ತು ಮಕ್ಕಳು ಇದನ್ನು ಬಹಳ ಆನಂದಿಸುವುದನ್ನೂ ಗಮನಿಸಿದ್ದೇನೆ.

-ಸುಚಂದ್ರಾ ರುದ್ರ, ಸಹಾಯಕ ಶಿಕ್ಷಕರು, ಜಿ. ಎಂ. ಎಸ್. ಚಾದ್ರಿ ರಾಂಚಿ-1, ಜಾರ್ಖಂಡ್

## 'ಬನ್ನಿ, ಸ್ವತಃ ಮಾಡಿ ನೋಡೋಣ' ಒಂದು ಪ್ರಮುಖ ಉಪಕ್ರಮ

ಈ ನಿಯತಕಾಲಿಕವು ತನ್ನ ಹೊಸ ನೋಟದಲ್ಲಿ ಅತ್ಯುತ್ತಮವಾಗಿ ಮೂಡಿಬಂದಿದೆ ಮತ್ತು ಈ ವಿಶೇಷ ಸಂಚಿಕೆಯು ಅನೇಕ ಬಗೆಯಲ್ಲಿ ಬಹಳ ಆಸಕ್ತಿದಾಯಕ ಮತ್ತು ಅಮೂಲ್ಯವಾಗಿದೆ. ಇಷ್ಟು ಸಮಗ್ರ ಮತ್ತು ಸೂಕ್ಷ್ಮ ಪರಿಸ್ಥಿತಿಗಳಲ್ಲಿ ಶಿಕ್ಷಣದ ಸಮನ್ವಯವನ್ನು ನಮಗೆ ನೋಡಲು ಸಾಧ್ಯವಾಗಿರಲಿಲ್ಲ. ಅನುಭವಗಳು ಮತ್ತು ಉದಾಹರಣೆಗಳೊಂದಿಗೆ ಪ್ರಸ್ತುತಪಡಿಸಲಾದ ಎಲ್ಲಾ ಲೇಖನಗಳು ಓದಲು ಯೋಗ್ಯವಾಗಿವೆ. ವಿಶೇಷವಾಗಿ ಜಯನಾ ಜಗಾನಿ ಮತ್ತು ರೀಮಾ ಕೌರ್, ವಿಷ್ಣು ಗೋಪಾಲ್, ಮಮತಾ ಸಿಂಗ್ ಮತ್ತು ರುಬಿನಾ ಖಾನ್ ಅವರ ಲೇಖನಗಳು ಬಹಳ ಚೆನ್ನಾಗಿವೆ. 'ಭರವಸೆ ಮೂಡಿಸುವ ಶಿಕ್ಷಕರು', 'ಪುಸ್ತಕಗಳೊಂದಿಗೆ ಸ್ನೇಹ', 'ಶಿಕ್ಷಕರ ದಿನಚರಿಯಿಂದ' ಮುಂತಾದ ಹೊಸತಾಗಿ ಪ್ರಾರಂಭಿಸಲಾದ ಕೆಲವು ಅಂಕಣಗಳು ಅರ್ಥಪೂರ್ಣವಾಗಿದ್ದು, ಅವನ್ನು ಓದಿ ಖುಷಿಪಟ್ಟಿದ್ದೇನೆ. ಶಿಕ್ಷಣದಲ್ಲಿ ಸುಧಾರಣೆಯ ಸಾಧ್ಯತೆಗಳ ಕುರಿತ ನನ್ನ ನಂಬಿಕೆಗಳನ್ನು ಈ ಸಂಚಿಕೆಯು ಬಲಪಡಿಸಿದೆ. 'ಬನ್ನಿ, ಸ್ವತಃ ಮಾಡಿ ನೋಡೋಣ'ಎಂಬುದು ತರಗತಿಯಲ್ಲಿ ನೇರವಾಗಿ ಸಹಾಯ ಮಾಡುವ ಒಂದು ಪ್ರಮುಖ ಹೆಜ್ಜೆಯಾಗಿ ಕಾಣಿಸುತ್ತದೆ.

-ನಿಕೇತಾ ತಿವಾರಿ, ಸರ್ಕಾರಿ ಹಿರಿಯ ಮಾಧ್ಯಮಿಕ ಶಾಲೆ, ಕಿರಣ್ ಪಥ್, ಮಾನ್‌ಸರೋವರ್, ಜೈಪುರ, ರಾಜಸ್ಥಾನ

## ಹೊಸ ಸಂಚಿಕೆ : ಆಕರ್ಷಕ ಪ್ರಸ್ತುತಿ

‘ಪಾಠಶಾಲೆ’ಯ 22ನೇ ಸಂಚಿಕೆ ಬಹಳ ಚೆನ್ನಾಗಿದೆ. ಸಮನ್ವಯದ ಕುರಿತಾಗಿ ಸಮಗ್ರವಾಗಿ ಯೋಚಿಸಲು ಮತ್ತು ಅರ್ಥ ಮಾಡಿಕೊಳ್ಳಲು ಪ್ರೇರೇಪಿಸುವ ಸಂಚಿಕೆ ಇದಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, 'ಕೇವಲ ದಾಖಲಾತಿ ಹಂತದಲ್ಲಿ ‘ಸಮನ್ವಯ ಶಿಕ್ಷಣ’ವು ಸಾಕಾಗುವುದಿಲ್ಲ’ ಮತ್ತು 'ಕಲಿಯಲು ಎಲ್ಲರಿಗೂ ಸಮಾನ ಹಕ್ಕಿದೆ’ ಎಂಬ ಎರಡು ಲೇಖನಗಳು ಅರ್ಥಪೂರ್ಣವಾಗಿದ್ದವು. ಅಲ್ಲದೆ, ಸಂಚಿಕೆಯ ಖಾಯಂ ಅಂಕಣಗಳು ಮತ್ತು ಇತರೆ ಲೇಖನಗಳು ಕೂಡ ಬಹಳ ಉತ್ತಮವಾಗಿವೆ. ಇದರ ವಿನ್ಯಾಸವೂ ಆಕರ್ಷಕವಾಗಿದೆ. ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.

-ರಾಣಿ ಕುಮಾರಿ, ಮಾಧ್ಯಮಿಕ ಶಾಲೆ, ಜಗ್ರೋ ಜಮಾಲ್ಪುರ್, ದರ್ಭಂಗಾ, ಬಿಹಾರ

## ಮಕ್ಕಳ ಜಾತಿ, ಬಟ್ಟೆ, ಗುರುತು, ಎತ್ತರ ಅಸಮಾನತೆಗೆ ಕಾರಣವಾಗಬಾರದು

ಸಂಚಿಕೆ 22ರಲ್ಲಿ ಮಮತಾ ಸಿಂಗ್ ಅವರ 'ಪ್ರೀತಿ ಮತ್ತು ಸಮಾನತೆಯಿಂದ ಮಕ್ಕಳ ಕಲಿಕೆಯು ಸುಗಮಗೊಳ್ಳುತ್ತದೆ’ಎಂಬ ಲೇಖನದಲ್ಲಿ, ನಾನು ಉತ್ತರಪ್ರದೇಶದ ಶಾಲೆಯೊಂದರ ಕಥೆಯನ್ನು ಓದಿದೆ. ಅದು ನನ್ನ ಸ್ವಂತ ರಾಜ್ಯ ಛತ್ತೀಸ್‌ಗಢಕ್ಕಿಂತ ಹೆಚ್ಚು ಭಿನ್ನವಾಗಿ ಕಾಣಿಸಲಿಲ್ಲ. ಇಲ್ಲಿ ಉಲ್ಲೇಖಿಸಲಾದ ಹುಡುಗಿ ಬುಡಕಟ್ಟು ಸಮಾಜದಿಂದ ಬಂದವಳು. ಹೀಗಾಗಿ ಶಾಲೆಯಲ್ಲಿ ಇತರ ಮಕ್ಕಳೊಂದಿಗೆ ಕುಳಿತು ತಿನ್ನುವುದು ಆಕೆಗೆ ಸಹಜ ಕ್ರಿಯೆಯಾಗಿರುವುದಿಲ್ಲ. ನನ್ನ ತರಗತಿಯಲ್ಲಿ

ಮಗುವನ್ನು ಅದರ ಜಾತಿಯಿಂದ ಮಾತ್ರವಲ್ಲ, ಅದರ ಉಡುಗೆತೊಡುಗೆ, ಅಂಕಗಳು, ಸ್ಥಾನಮಾನದ ಆಧಾರದಲ್ಲೂ ತಾರತಮ್ಯ ಮಾಡಲಾಗುವುದಿಲ್ಲ ಎಂದು ನಾನು ಖಚಿತಪಡಿಸಿಕೊಳ್ಳುತ್ತೇನೆ.

ಈವರೆಗೆ ನಾನು ಸಮನ್ವಯ ಎನ್ನುವುದನ್ನು ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಶೇಷ ಸಾಮರ್ಥ್ಯವುಳ್ಳ ಮಕ್ಕಳಿಗೆ ಮಾತ್ರ ಸೀಮಿತ ಎಂದು ಅರ್ಥೈಸಿಕೊಂಡಿದ್ದೆ. ಆದರೆ ಇದು ಕೇವಲ ಅಷ್ಟಕ್ಕೆ ಸೀಮಿತವಲ್ಲ ಎನ್ನುವುದು ಅರಿವಾಯಿತು. ಈ ಸಂಚಿಕೆಯು ನನ್ನ ಹಿಂದಿನ ತಿಳುವಳಿಕೆಯ ಪರಿಧಿಯನ್ನು ವಿಸ್ತರಿಸಿದೆ.

-ಅರ್ಚನಾ ಚಂದ್ರಾಕರ್, ಸರ್ಕಾರಿ ಪ್ರಾಥಮಿಕ ಶಾಲೆ, ಚಾಗೋರ್‌ಭಾಟಾ, ಧರ್‌ಸಿವಾ (ರಾಯ್ಪುರ್ ನಗರ) ರಾಯ್ಪುರ, ಛತ್ತೀಸ್‌ಗಢ

## ಪ್ರಮುಖ ವಿಷಯಗಳನ್ನೊಳಗೊಂಡ ಸಮಗ್ರ ಸಂಚಿಕೆ

ಸಮನ್ವಯ ಶಿಕ್ಷಣದ ಕುರಿತ 'ಪಾಠಶಾಲಾ' ವಿಶೇಷ ಸಂಚಿಕೆಯು ಬಹಳ ಮುಖ್ಯವಾದ ವಿಷಯಗಳನ್ನೊಳಗೊಂಡ ಸಮಗ್ರ ಸಂಚಿಕೆಯಾಗಿದೆ. ಮಧು ಕುಶ್ವಾಹ ಅವರ ಲೇಖನ ಇಷ್ಟವಾಯಿತು. ಸುಜಾತಾ ರವಿ ಮತ್ತು ದಾಸಣ್ಣ ಮರೆಡ್ಡಿಯವರ ಲೇಖನವೂ ಅತ್ಯಂತ ಸಂವೇದನಾಶೀಲ ಮತ್ತು ಪ್ರಾಯೋಗಿಕತೆಯನ್ನು ಒಳಗೊಂಡಿರುವ ಲೇಖನವಾಗಿದೆ. ತನ್ನ ಲೇಖನದಲ್ಲಿ, ರುಬೀನಾ ಖಾನ್ ಅವರು ಸಾಮಾನ್ಯವಾಗಿ ಕಡೆಗಣಿಸಲಾಗುವ ಹುಡುಗಿಯರಲ್ಲಿನ ಮುಟ್ಟಿನ ಸಮಸ್ಯೆಯನ್ನು ಬಹಳ ಸೂಕ್ಷ್ಮತೆಯಿಂದ ಹೇಳುತ್ತಾ ಅದನ್ನು ಕಲಿಸುವ ಪ್ರಕ್ರಿಯೆಗಳೊಂದಿಗೆ ಜೋಡಿಸಿದ್ದಾರೆ. ಅವರು ಈ ವಿಷಯವನ್ನು ಅರ್ಥ ಮಾಡಿಕೊಳ್ಳಲು ಹೊಸ ದೃಷ್ಟಿಕೋನವನ್ನು ಒದಗಿಸಿದ್ದಾರೆ. 'ಶಿಕ್ಷಕರ ದಿನಚರಿಯಿಂದ' ಮತ್ತು 'ಪುಸ್ತಕಗಳೊಂದಿಗೆ ಸ್ನೇಹ' ಅಂಕಣಗಳು ಕುತೂಹಲ ಮೂಡಿಸಿದವು.

-ಅರುಣ್ ಶಂಕರ್ ರಾಯ್, ವಾರಾಣಸಿ, ಉತ್ತರ ಪ್ರದೇಶ

## ಸಮನ್ವಯ ಶಿಕ್ಷಣದ ಬಗ್ಗೆ ಅರಿಯುವ ಕುತೂಹಲ ಹೆಚ್ಚಿತು

ಸಮನ್ವಯ ಶಿಕ್ಷಣದ ಕುರಿತ 'ಪಾಠಶಾಲೆ'ಯ ವಿಶೇಷ ಸಂಚಿಕೆಯು ನನ್ನ ತಿಳುವಳಿಕೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಅಲ್ಲದೆ ಓದಿದ ಬಳಿಕ ನಾನು ಅನೇಕ ಹೊಸ ವಿಷಯಗಳನ್ನು ಕಲಿತೆ. ಇಂತಹ ವಿಷಯಗಳ ಬಗ್ಗೆ ಇಷ್ಟು ಸರಳ ಭಾಷೆಯಲ್ಲಿ ಹೆಚ್ಚು ಚರ್ಚೆಗಳು ನಡೆಯುವುದಿಲ್ಲ. ಆರ್. ಲಾಲ್‌ಮಾಚುವಾನಿ ಅವರ ಲೇಖನವನ್ನು ಓದಿದಾಗ ಈ ವಿಷಯದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಕುತೂಹಲ ಉಂಟಾಯಿತು.

-ಚೇತನಾ ಗೋಲಾ, ಕಾರ್ಯಕ್ರಮ ನಿರ್ಮಾಪಕಿ, ದೃಷ್ಟಿ ದಿವ್ಯಾಂಗರ ಸಬಲೀಕರಣದ ರಾಷ್ಟ್ರೀಯ ಸಂಸ್ಥೆ, ಡೆಹ್ರಾಡೂನ್, ಉತ್ತರಾಖಂಡ್

ಕಲೆಯ ಕುರಿತ ನಮ್ಮ ಅರಿವು ಮರುಪರಿಶೀಲಿಸುವ ಅಗತ್ಯ ಮನದಟ್ಟಾಯಿತು

'ಪಾಠಶಾಲಾ'ದ ಡಿಸೆಂಬರ್ 24 ರ ಸಂಚಿಕೆಯಲ್ಲಿ ದೀಪಿಕಾ ಶರ್ಮಾ ಅವರ 'ಕಲೆಯಲ್ಲಿ ಸಮನ್ವಯ ಶಿಕ್ಷಣ- ಶಿಕ್ಷಕರ ಪಾತ್ರ' ಲೇಖನವನ್ನು ಓದಿದ ನಂತರ, ಕಲೆಯ ಕುರಿತಾದ ನನ್ನ ಅರಿವನ್ನು ಮರುಪರಿಶೀಲಿಸುವ ಅಗತ್ಯವನ್ನು ನಾನು ಮನಗಂಡೆ. ನಮ್ಮ ತರಗತಿಗಳಲ್ಲಿ, ಚಿತ್ರಗಳನ್ನು ಬಿಡಿಸಲು ಅಥವಾ ಕೆಲ ಚಿತ್ರಗಳಿಗೆ ಬಣ್ಣ ಹಚ್ಚಲು ಮಾತ್ರ ಕಲೆಯು ಸೀಮಿತವಾಗಿದೆ ಎಂದು ನಾನು ಕಂಡುಕೊಂಡೆ. ಆದರೆ ಕಲೆಯ ಸಮನ್ವಯ ರೂಪ ಮತ್ತು ಕಲೆಯ ಗುಂಪು ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವ ವಿಧಾನಗಳು ಮತ್ತು ಸೂಕ್ಷ್ಮತೆಗಳನ್ನು ವಿಸ್ತೃತವಾಗಿ ವಿವರಿಸಲಾಗಿದೆ. ಇದು ಈ ಲೇಖನವನ್ನು ಬಹಳ ಉಪಯುಕ್ತವಾಗಿಸಿದೆ.

-ಲಕೀ ಸಿಂಗ್, ಸಹಾಯಕ ಶಿಕ್ಷಕರು, ಸಂಯೋಜಿತ ಶಾಲೆ ಜದ್ವಾಪುರ್, ಬಲರಾಂಪುರ, ಉತ್ತರ ಪ್ರದೇಶ

## ಶಿಕ್ಷಕರು ಮಕ್ಕಳ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅವರಿಗೆ ಸಹಾಯ ಮಾಡಬೇಕು

22ನೇ ಸಂಚಿಕೆಯಲ್ಲಿನ ಜಯನಾ ಜಗಾನಿ ಮತ್ತು ರೀಮಾ ಕೌರ್ ಅವರ 'ಸಮನ್ವಯದ ಅಭ್ಯಾಸಗಳ ದಿಕ್ಕಿನಲ್ಲಿ ಕೆಲವು ಸಣ್ಣ ಸಣ್ಣ ಹೆಜ್ಜೆಗಳು'ಲೇಖನದಲ್ಲಿ ಹರ್ಷಿತಾ ಮತ್ತು ಮಯೂರ್ ಅವರ ಕಥೆಯನ್ನು ಓದಿದಾಗ, ಆ ಇಬ್ಬರು ಮಕ್ಕಳ ಅವಶ್ಯಕತೆಗಳನ್ನು ಅವರ ಶಿಕ್ಷಕಿ ಬಬಿತಾ ಅವರು ಅರ್ಥ ಮಾಡಿಕೊಂಡರು ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಅವರಿಗೆ ಸಹಾಯ ಮಾಡಿದರು. ಕಲಿಕೆಯ ಈ ಅಂಶವು ನಿರ್ದಿಷ್ಟವಾಗಿ ಈ ಸಂದರ್ಭದಲ್ಲಿ ನನಗೆ ಬಹಳ ಉಪಯುಕ್ತವಾಗಿದೆ. ಯಾಕೆಂದರೆ, ನನ್ನ ತರಗತಿಯಲ್ಲೂ ಕೂಡ ಬರೆಯಲು ಮತ್ತು ಓದಲು ತೊಡಗಿಸಿಕೊಳ್ಳದ ಇಬ್ಬರು ಮಕ್ಕಳಿದ್ದಾರೆ ಮತ್ತು ಅವರು ತರಗತಿಯಲ್ಲಿ ಸುಮ್ಮನೆ ಕುಳಿತುಕೊಂಡಿರುತ್ತಾರೆ. ನಾನು ಆ ಇಬ್ಬರು ಮಕ್ಕಳ ಕುರಿತಾಗಿ ಚಿಂತಿಸುತ್ತಿರುತ್ತೇನೆ. ಈ ಮಕ್ಕಳನ್ನು ತರಗತಿಯ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಶಿಕ್ಷಕರು ಇಂತಹ ಮಕ್ಕಳ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅವರ ಅಗತ್ಯಕ್ಕೆ ಅನುಗುಣವಾಗಿ ಅವರಿಗೆ ಸಹಾಯ ಮಾಡುವುದು ಮುಖ್ಯ ಎಂಬ ಅಂಶವು ಈ ಲೇಖನವನ್ನು ಓದಿದ ನಂತರ ಅರ್ಥವಾಯಿತು.

ಸಮನ್ವಯ ಎಂಬುದು ಕೇವಲ ಬೌದ್ಧಿಕ ಮತ್ತು ದೈಹಿಕ ವಿಶೇಷ ಸಾಮರ್ಥ್ಯವುಳ್ಳ ಮಕ್ಕಳಿಗಷ್ಟೇ ಅಲ್ಲ. ಮಗುವೊಂದು ತರಗತಿಯಲ್ಲಿ ಭಾಗವಹಿಸುವುದನ್ನು ತಡೆಯುವ ಅನೇಕ ಆಯಾಮಗಳ ಬಗ್ಗೆ ಗಮನ ಹರಿಸುವ ಮತ್ತು ಅವನ್ನು ಪರಿಹರಿಸುವ ಅವಶ್ಯಕತೆಯಿದೆ.

-ಸಂಸುನ್ನೀನ್ನಿಶಾ, ಪ್ರಾಥಮಿಕ ಶಾಲೆ, ತಿಲಕ್ ನಗರ ಗುಡಿಯಾರಿ, ಧರ್‌ಸಿವಾ, ರಾಯ್ಪುರ್ (ನಗರ) ಛತ್ತೀಸ್‌ಗಢ

## ಸಮನ್ವಯ: ಭಾವನಾತ್ಮಕ ಮಟ್ಟದಲ್ಲಿ ಅರ್ಥ ಮಾಡಿಕೊಳ್ಳುವ ಯತ್ನ

ಸಮನ್ವಯ ಶಿಕ್ಷಣದ ಕುರಿತ 'ಪಾಠಶಾಲಾ' ವಿಶೇಷ ಸಂಚಿಕೆಯು ತಲುಪಿತು. ಸಾಫ್ಟ್ ಕಾಪಿಯನ್ನು ಓದಲು ನನಗೆ ಸ್ವಲ್ಪ ಕಷ್ಟವಾಯಿತು. ಆದರೆ ಸಂಚಿಕೆಯು ಎಷ್ಟೊಂದು ಪ್ರಮುಖ ವಿಷಯಗಳ ಕುರಿತಾಗಿತ್ತು ಹಾಗೂ ಎಷ್ಟೊಂದು ಸಂಯೋಜಿತವಾಗಿತ್ತು ಎಂದರೆ, ಅದನ್ನು ಓದುವುದನ್ನು ಬಿಟ್ಟು ನನಗೆ ಬೇರೆ ಆಯ್ಕೆ ಇರಲಿಲ್ಲ. ಮಮತಾ ಸಿಂಗ್, ದೀಪಿಕಾ ಝೂಲಾ, ಜಯನಾ ಜಗಾನಿ ಮತ್ತು ರೀಮಾ ಕೌರ್ ಅವರ ಲೇಖನಗಳು ನನಗೆ ಇಷ್ಟವಾದವು. ಅವುಗಳಲ್ಲಿ ಸಮನ್ವಯವನ್ನು ಭಾವನಾತ್ಮಕ ಸ್ತರದಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಇಲ್ಲದಿದ್ದರೆ ನಾವು ಇದನ್ನು ಸಾಮಾನ್ಯವಾಗಿ ಶಾರೀರಿಕ ಸ್ತರದಲ್ಲಿ ನಿಭಾಯಿಸಿ ಬಿಡುತ್ತೇವೆ. 'ಭರವಸೆ ಮೂಡಿಸುವ ಶಿಕ್ಷಕರು', 'ಶಿಕ್ಷಕರ ದಿನಚರಿಯಿಂದ' ಮತ್ತು ಚಟುವಟಿಕೆಗಳನ್ನೊಳಗೊಂಡ 'ಬನ್ನಿ, ಸ್ವತಃ ಮಾಡಿ ನೋಡೋಣ' ದಂತಹ ಅಂಕಣಗಳು ಈ ಪತ್ರಿಕೆಗೆ ಅರ್ಥಪೂರ್ಣ ಪ್ರಯತ್ನವಾಗಿ ವಿಶಿಷ್ಟ ಅನನ್ಯತೆಯನ್ನು ನೀಡುತ್ತಿವೆ.

-ಶಶಾಂಕ್ ಶೇಖರ್, ಆದರ್ಶ್ ಪ್ರೌಢ ಶಾಲೆ, ಬಡೂಪರ್, ಕೈಮೂರ್, ಬಿಹಾರ

# ಲೇಖಕರ ಗಮನಕ್ಕೆ

1. ಮುದ್ರಣದಲ್ಲಿ ಲೇಖನದ ಶಿರ್ಷಿಕೆಯ ಕೆಳಗೆ ನಿಮ್ಮ ಹೆಸರು ಹೇಗೆ ಇರಬೇಕೋ ಹಾಗೆ ನಿಮ್ಮ ಹೆಸರನ್ನು ಬರೆಯಿರಿ.
2. ನೀವು ನಿಮ್ಮ ಲೇಖನವನ್ನು ವರ್ಡ್ ಡಾಕ್ಯುಮೆಂಟ್ ರೂಪದಲ್ಲಿ ಕಳಿಸಿ. ಅದರಲ್ಲಿ ಯಾವುದೇ ರೀತಿಯ ಬಾಕ್ಸ್, ಬಾರ್ಡರ್ ಮುಂತಾದವುಗಳು ಇರಬಾರದು. ಲೇಖನವನ್ನು ಪಿಡಿಎಫ್ ರೂಪದಲ್ಲಿ ಕಳಿಸಬೇಡಿ.
3. ಲೇಖನಕ್ಕೆ ಸಂಬಂಧಿಸಿದ ಚಿತ್ರಗಳು ಉತ್ತಮ ಗುಣಮಟ್ಟದ್ದಾಗಿರಬೇಕು (ಹೈ ರೆಸಲ್ಯೂಶನ್ ಫೋಟೋಜ್‌ಗಳು). ಚಿತ್ರಗಳನ್ನು ವರ್ಡ್ ಡಾಕ್ಯುಮೆಂಟ್‌ನಲ್ಲಿ ಸೇರಿಸದೇ, ಪ್ರತ್ಯೇಕವಾಗಿ ಈಮೇಲ್‌ನಲ್ಲಿ ಲಗತ್ತಿಸಿ ಕಳಿಸಿ.
4. ಮೂರು ಅಥವಾ ನಾಲ್ಕಕ್ಕಿಂತ ಹೆಚ್ಚು ಚಿತ್ರಗಳನ್ನು ಕಳಿಸಬೇಡಿ. ಪ್ರತಿಯೊಂದು ಚಿತ್ರದ ಫೈಲ್ಗೂ ಚಿತ್ರ 1, ಚಿತ್ರ 2 - ಹೀಗೆ ಹೆಸರು ಕೊಡಿ. ಲೇಖನದಲ್ಲಿ ಯಾವ ಚಿತ್ರವು ಎಲ್ಲಿ ಬರಬೇಕೆಂದು ಸೂಚಿಸಿ ಅಲ್ಲಿ ಆ ಚಿತ್ರದ ಶೀರ್ಷಿಕೆಯನ್ನು ಕೊಡಿ. ಚಿತ್ರದ ಬಳಕೆಯ ವಿಚಾರದಲ್ಲಿ ಸಂಪಾದಕರ ನಿರ್ಧಾರವು ಅಂತಿಮವಾಗಿರುತ್ತದೆ.
5. ಚಿತ್ರದ ಕೆಳಗೆ ಚಿತ್ರದ ಆಕರವನ್ನು ತಪ್ಪದೆ ನಮೂದಿಸಿ. ಎಲ್ಲ ಚಿತ್ರಗಳೂ ಕಾಪಿರೈಟ್ ಫ್ರೀ ಆಗಿರಬೇಕು.
6. ಫೋಟೋ ಅನ್ನು ನೀವೇ ತೆಗೆದಿದ್ದರೆ, ಅದನ್ನು ನಮ್ಮ ಪ್ರಕಟಣೆಯಲ್ಲಿ ಬಳಸಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಯ (ಶಿಕ್ಷಕರು ಅಥವಾ ಶಾಲೆ) ಅನುಮತಿ ಪಡೆದಿಕೊಳ್ಳಿ.
7. ಮಕ್ಕಳ ಕ್ಲೋಸ್‌ಅಪ್ ಫೋಟೋಗಳನ್ನು ಮತ್ತು ಮಕ್ಕಳ ಮುಖಗಳು ಸ್ಪಷ್ಟವಾಗಿ ಕಾಣುವಂತಹ ಫೋಟೋಗಳನ್ನು ತೆಗೆಯುವುದನ್ನು ತಪ್ಪಿಸಿ.
8. ನಿಮ್ಮ ಲೇಖನದಲ್ಲಿ ಬೇರೆ ಪುಸ್ತಕ ಅಥವಾ ಲೇಖನದಿಂದ ಆಯ್ದ ಭಾಗವನ್ನು ಬಳಸಿದಾಗ ಅಥವಾ ವ್ಯಕ್ತಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿದಾಗ, ಅವರ ಸಂಪೂರ್ಣ ಹೆಸರುಗಳು ಮತ್ತು ಉಲ್ಲೇಖಗಳನ್ನು ಸೇರಿಸುವ ಮೂಲಕ ಇದನ್ನು ಸ್ಪಷ್ಟವಾಗಿ ನಮೂದಿಸಿ.
9. ಲೇಖನವನ್ನು ನಮಗೆ ಕಳಿಸುವ ಮೊದಲು ಎರಡು ಬಾರಿ ಓದಿ. ಹೀಗೆ ಮಾಡುವುದರಿಂದ, ಲೇಖನದಲ್ಲಿ ಕಾಗುಣಿತದ ದೋಷಗಳನ್ನು ತಿದ್ದುವುದೂ ಸೇರಿದಂತೆ ಹಲವು ಗಣನೀಯ ತಿದ್ದುಪಡಿಗಳನ್ನು ಮಾಡಬಹುದು.
10. ನಿಮ್ಮ ಲೇಖನದೊಂದಿಗೆ ನಿಮ್ಮ ಸಂಕ್ಷಿಪ್ತ ಪರಿಚಯ, ಸ್ಪಷ್ಟವಾದ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ನಿಮ್ಮ ಇಮೇಲ್ ವಿಳಾಸ, ಸಂಪೂರ್ಣ ಅಂಚೆ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸೇರಿಸಿ.
11. ನೀವು ಸಲ್ಲಿಸುತ್ತಿರುವ ಲೇಖನವು ನೀವೇ ಬರೆದಿರುವ ಲೇಖನವಾಗಿರಬೇಕು. ಸಲ್ಲಿಸುವ ಸಂದರ್ಭದಲ್ಲಿ ಅದು ಎಲ್ಲಿಯೂ ಪ್ರಕಟವಾಗಿರಬಾರದು ಮತ್ತು ಅದನ್ನು ನೀವು ಬೇರೆ ಯಾವ ಪತ್ರಿಕೆಯಲ್ಲೂ ಪ್ರಕಟಣೆಗೆ (ಪ್ರಿಂಟ್ ಅಥವಾ ಆನ್‌ಲೈನ್) ಸಲ್ಲಿಸಿರಬಾರದು ಅಥವಾ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರಬಾರದು.
12. ಲೇಖನವು ನಮ್ಮನ್ನು ತಲುಪಿದ ತಕ್ಷಣ ಅದರ ಸ್ವೀಕೃತಿಯ ಬಗ್ಗೆ ನಿಮಗೆ ತಿಳಿಸುತ್ತೇವೆ. ಲೇಖನವನ್ನು ಸ್ವೀಕರಿಸಿದ 45 ದಿನಗಳೊಳಗೆ, ಅದು ಪ್ರಕಟಣೆಗೆ ಆಯ್ಕೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸುತ್ತೇವೆ. ಆಯ್ಕೆಯಾಗಿದ್ದರೆ, ಸಂಪಾದಕೀಯ ತಂಡದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ನಾವು ನಿಮಗೆ ಕಳುಹಿಸುತ್ತೇವೆ.
13. ಪತ್ರಿಕೆಯಲ್ಲಿ 2000, 1500 ಮತ್ತು 700 ಪದಗಳ ಲೇಖನಗಳಿರುತ್ತವೆ. ಬರೆಯುವ ಮೊದಲು, ನೀವು ಎಷ್ಟು ಪದಗಳ ಲೇಖನವನ್ನು ಬರೆಯಲು ಇಚ್ಛಿಸುತ್ತೀರಿ ಎಂಬುದನ್ನು ನಮ್ಮೊಂದಿಗೆ ಚರ್ಚಿಸಿ ಮತ್ತು ಲೇಖನವು ಪದ ಮಿತಿಯ ಒಳಗೇ ಇರುವುದನ್ನು ಖಚಿತಪಡಿಸಿ.
14. ಸಂಪಾದಕೀಯ ತಂಡವು ಲೇಖನವನ್ನು ಪರಿಷ್ಕರಿಸುವ ಹಕ್ಕನ್ನು ಹೊಂದಿದೆ. ಪರಿಷ್ಕರಿಸಿದ ಲೇಖನವನ್ನು ಪ್ರಕಟಣೆಗೆ ಮೊದಲು ನಿಮಗೆ ಕಳಿಸಲಾಗುವುದು.
15. 'ಪಾಠಶಾಲೆ' ಪತ್ರಿಕೆಯು ಹಿಂದಿ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾಗುತ್ತದೆ. ನೀವು ಈ ಯಾವುದೇ ಭಾಷೆಗಳಲ್ಲಿ ನಿಮ್ಮ ಲೇಖನವನ್ನು ಕಳುಹಿಸಬಹುದು.
16. ನೀವು ಯಾವುದೇ ಭಾಷೆಯಲ್ಲಿ ಲೇಖನವನ್ನು ಸಲ್ಲಿಸಿದರೂ, ಅದನ್ನು ಅನುವಾದಿಸಿ ಮೂರೂ ಭಾಷೆಗಳಲ್ಲಿ ಪ್ರಕಟಿಸಲಾಗುವುದು

ಹೆಚ್ಚಿನ ಮಾಹಿತಿಗಾಗಿ ಇವರನ್ನು ಸಂರ್ಕಿಸಬಹುದು:

ಪ್ರತಿಭಾ (ಹಿಂದಿ): katiyar@azimpremjifoundation.org

ಶೆಫಾಲೀ (ಇಂಗ್ಲಿಷ್): shefali.mehta@apu.edu.in

ರಾಘವೇಂದ್ರ ಹೇರ್ಳೆ (ಕನ್ನಡ) : Raghavendra.herle@azimpremjifoundation.org

ಮುದ್ರಣ ಮತ್ತು ಪ್ರಕಟಣೆ: ಶರದ್ ಸುರೆ, ಕುಲಸಚಿವರು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪರವಾಗಿ,

ಮುದ್ರಣ: ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

ಪ್ರಕಟಣೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸರ್ವೇ ನಂ. 66, ಬೂರುಗುಂಟೆ ಗ್ರಾಮ, ಬಿಕ್ಕನಹಳ್ಳಿ ಮುಖ್ಯ ರಸ್ತೆ,

ಸರ್ಜಾಪುರ, ಬೆಂಗಳೂರು, ಕರ್ನಾಟಕ 562 125.


ಪ್ರಧಾನ ಸಂಪಾದಕರು: ಪ್ರತಿಭಾ ಕಟಿಯಾರ್

Postgraduate Diploma Programmes in Education

Azim Premji University

# For practicing professionals in the field of Education

*Flexible | Blended Mode*




| Early Childhood Education | Inclusive Education | Teaching Children with Learning Disabilities |
|---|---|---|

## Key Features of the Programmes:

- The programme is aligned to the credit structure as defined by the National Credit Framework (NCrF) issued by UGC in April 2023.
- Course content and pedagogy lays emphasis on relevant theories, practice and hands on skills required for building expertise in the respective areas of early childhood education, inclusive education and teaching children with learning disabilities.
- Become a member of a community of reflective practitioners through our alumni network.
- Participants have the flexibility of joining the PG Diploma Programme or taking one or more Certificate Programmes individually.

## Admission Process:

Particiants can enter into the PG Diploma Programme through any of the Certificate Programmes.

The two steps of the process are :-

**Step 1:** Online application form with Statement of Purpose.

**Step 2:** Panel Interview in online mode.

## Fees and Financial Assistance:

- Fee details are available on the website.
- The University will offer financial assistance to deserving candidates based on their income. This financial assistance will be partial waivers of the fee component and will be awarded at the sole discretion of the University. The University will ask for documentary proof as required. Admission available to participants requesting financial assistance is limited.

Scan the QR code to know more:

Azim Premji University

# Anuvada Sampada

# ಅನುವಾದ ಸಂಪದ

## ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶೈಕ್ಷಣಿಕ ಸಂಪನ್ಮೂಲಗಳ ಸಂಗ್ರಹ

ಇಂಗ್ಲಿಷ್‌ನಿಂದ ಕನ್ನಡ ಮತ್ತು ಹಿಂದಿ ಭಾಷೆಗಳಿಗೆ ಅನುವಾದಗೊಂಡಿರುವ 2000ಕ್ಕೂ ಹೆಚ್ಚು ಉನ್ನತ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳ ಮುಕ್ತ ಮತ್ತು ವಿನೂತನವಾದ ಆನ್‌ಲೈನ್ ಸಂಪದ. ವಿಜ್ಞಾನ, ಗಣಿತ, ಸಮಾಜ ವಿಜ್ಞಾನ, ಮಾನವಿಕ, ಶಿಕ್ಷಣ ಮತ್ತು ಭಾಷಾ ವಿಷಯಗಳ ಪರಿಕಲ್ಪನೆಗಳು ಮತ್ತು ಚಿಂತನೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪಾಲಿನ ಕಣಜ.






ಕನ್ನಡ ಮತ್ತು ಹಿಂದಿಯಲ್ಲಿ ಉಚಿತವಾಗಿ ಹಾಗೂ ಮುಕ್ತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಶೈಕ್ಷಣಿಕ ಸಂಪನ್ಮೂಲಗಳ ಆನ್‌ಲೈನ್ ವೆಬ್‌ಸೈಟ್.

- ಪುಸ್ತಕಗಳು ಮತ್ತು ಮಸ್ತಕದ ಅಧ್ಯಾಯಗಳು
- ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ನಿಯತಕಾಲಿಕೆಗಳು ಮತ್ತು ಲೇಖನಗಳು
- ಸಂಪಾದಿತ ವಾಚಿಕೆಗಳು ಮತ್ತು ವಿಚಾರಗೋಷ್ಠಿಗಳ ಬರಹಗಳು

**ಅನುವಾದ ಸಂಪದಕ್ಕೆ ಭೇಟಿ ಕೊಡಿ:**
**https://anuvadasampada.azimpremjiuniversity.edu.in/**

Azim Premji University

# ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಪತ್ರಿಕೆಗಳು












ಪಾಠಶಾಲಾ ಪತ್ರಿಕೆಗೆ ಉಚಿತವಾಗಿ ಚಂದಾದಾರರಾಗಲು ಸ್ಕ್ಯಾನ್ ಮಾಡಿ!




ನಮ್ಮ ಪ್ರಕಟಣೆಗಳ ಕುರಿತು ಹೆಚ್ಚಿನ ಮಾಹಿತಿಗೆ ನಮ್ಮನ್ನು ಸಂಪರ್ಕಿಸಿ. ನಮ್ಮ ಈಮೇಲ್ ವಿಳಾಸ - publications@apu.edu.in